ಪ್ರಬುದ್ಧ ಕರ್ಣಾಟಕ

ಸಂಪುಟ ೩೬—ಸಂಚಿಕೆ ೨

೧೪೦

ಜಯ ಸಂವತ್ಸರ


ಆಷಾಢ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೪

ವಿಷಯ ಸೂಚಿಕೆ



శ్రీ స్వామిజీ

ಪ್ರಬುದ್ಧ ಕರ್ಣಾಟಕ

ಜಯ ಸಂವತ್ಸರ | ೧೪೦ | ಆಷಾಢ ಸಂಚಿಕೆ

ಮಾತೆ ಮೇರಿ—ಮಗು ಯೇಸು[1]

ಭವತಾರಿಣಿ ಜಗದಂಬೆಯು ಜಗನ್ಮಾತೃಲೀಲೆ
ಭುವನಶಿಶುವನೆದೆಗೆ ಒತ್ತಿ ದೀಕ್ಷ್ಣನಿಂತವೋಲೆ
ಕ್ರಿಸ್ತಶಿಶುವನೆತ್ತಿಕೊಂಡ ತಾಯಿತನವೆ ಮೇರಿ
ನಿಂತಿಹಳದೊ ತೇರಿನಂತೆ ಕೃಪೆಯು ತವರ ತೋರಿ!

ತಳಿರ ಬೆರಳ ಮುದ್ದು ಕೈಯು ಚೆಲುವ ಕಂದ ಯೇಸು
"ತಾಯಿಯೆದೆಯುನಪ್ಪಿಕೊಳಲು ಎಲ್ಲ ಅಹುದು ಲೇಸು;
ನಂಬು; ದಿವ್ಯ ನಿರ್ಭರತೆಗೆ ನಾನೆ ಅಮರಸಾಕ್ಷಿ!"
ಎಂಬ ವೇದವೊರೆವುವವನ ಅಮೃತ ತೃಪ್ತ ಅಕ್ಷಿ.

ಹಿಂದೆ ಗೋಕುಲದಲಿ ಅಮ್ಮ ಆ ಯಶೋದೆ ಇಂತೆ
ವಕ್ಷರಕ್ಷೆಯಾದಳಲ್ತೆ ಅಳರೆ ಕಂಸ ಚಿಂತೆ?
ಜಗದ್ ರಕ್ಷಕರಿಗೆ ರಕ್ಷೆ ಮೇರಿ ಮೇಣ್ ಯಶೋದೆ
ಇರಲು ನೀನು ರಾಮ ಕೃಷ್ಣ ಬುದ್ಧ ಕ್ರಿಸ್ತನಾದೆ!

---

[1] ಒಂದು ಬಣ್ಣದ ಚಿತ್ರದಿಂದ ಪ್ರೇರಿತ.

ದಿವ್ಯಕೃಪೆಯ ಕೌಂಕುಳಲ್ಲಿ ದೀನ ಮರ್ತ್ಯಪ್ರಾರ್ಥನೆ
ಕುಳಿತು ಮುಗ್ಧಮಿರ್ಪವೊಲೀ ಬಾಲಕ್ರಿಸ್ತ ವರ್ತನೆ
ಲೋಕಲೋಕಗಳಿಗೆ ನೀಡುತಿಹುದು ಧೈರ್ಯ ಶಾಂತಿಯ,
ಒಲವು ಚೆಲುವು ಸೂಸುತಿರುವ ತನ್ನ ಕಣ್ಣ ಕಾಂತಿಯ.

"ಇಹಳು ತಾಯಿ ; ಹೊರೆವುದವಳ ಹಾಲತೊಟ್ಟಿಲೆಂದು
ನಂಬಿ ಬಾಳು ; ತುಂಬಿ ಬದುಕು ; ಅವಳು ಪ್ರೇಮಸಿಂಧು !"
ಚಿತ್ರದೊಳಿಹ ಮುದ್ದು ಕೈಯೆ ವರದ ಹಸ್ತವಾಗಿ
ಶ್ರದ್ಧೆ ಅಭಯ ತರಲಿ, ಓ ಕಿಶೋರ ಕ್ರಿಸ್ತಯೋಗಿ !

—ಕುವೆಂಪು.

ಸಿರಿಬಾಯಿ ನುಡಿ

ಮೊದಲನೆಯ ಹತ್ತು

ಹೆಚ್ಚಳವಡಗಿಸಿ ಹೆಚ್ಚುವ ಸಮ್ಮುದವಾಂತವನವನ
ಹುಚ್ಚರಿವನು ಕೆಡಿಸುತ ಸುಜ್ಞಾನವ ಕರುಣಿಸುವವನ
ಎಚ್ಚರ ಕೆಡದಿರುವಮರರಿಗಾರಧಿಪತಿಯೋ ಅವನ
ಕೊಚ್ಚುವಳಲ ಚೆನ್ನಡಿಗಳ ನೆಚ್ಚುತ, ಮನ, ಬದುಕು. ॥೧॥

ಮನದೊಳಕೊಳೆಯುಳಿವಂದದೊಳರಳುತ ಮೇಲಕೆ ಬೆಳೆವ
ಮನನಕೆ ತಾನಳವಡದಿಹ ಕರಣಕೆ ಬಾಹಿರನಾದ
ಕೊನೆಯಿಲ್ಲದ ನಲವಾಂತಿಹ ಮುಂದೂ ಇಂದೂ ಹಿಂದೂ
ತನಗೆಣೆಯಿಲ್ಲದ ಮಿಗಿಲಿಲ್ಲದನೇ ನನ್ನು ಸಿರು. ॥೨॥

ಅದು ಇರದವನಿದನುಳ್ಳವನೆನೆ ನೆನೆಯಲು ಬಾರದವ
ಇದು ನೆಲದೊಳಗಾ ಬಾನೊಳು ರೂಪನಿರೂಪಗಳವನು.
ಒದಗುತ ಹೊರಗಿನದೆಲ್ಲಕು ಹೊರತೆನಿಸೊಂದನು ಬಿಡದೆ
ಹದದಿಂ ಹರಡಿಹ ಮಾನಲನೊಬ್ಬನ ಮೊರೆಯೆಮಗೆ. ॥೩॥

ಅವನಿವನುವನವಳಿವಳುವಳಾವಳು ನಾವೂ ತಾವೂ
ಅವರಿವರುವರದುವಿದುವುದುವಾವುದು ಅಳಿವಂದದವು
ಇವು ಅವು ಉವು ಒಳ್ಳೆಯುವೆನಿಸಿಹವೊಳ್ಳೆಯುವಲ್ಲೆಂಬ
ಅವು, ಅಪ್ಪವು, ಆದವು ತಾನಾಗುತ ನಿಂದವನು. ॥೪॥

ತೆರತೆರದೊಳು ತಂತಮ್ಮರಿವರಿವಂದದೊಳವರವರು
ಎರೆಯರು ತಮಗೆಂದವರವರಡಿಗಳನಾಶ್ರಯಿಸುವರು
ಕೊರೆಯಿರದವರವರವರಾ ಎರೆಯರು ಸರ್ವೇಶ್ವರ ನಿಂ-
ತಿರುವನು ಕರ್ಮಕೆ ತಕ್ಕುದ ಪಡೆವೊಲು ಅವರವರು. ॥೫॥

ನಿಂತಿಹನಿವ ಕುಳಿತಿಹನಿವ ಮಲಗಿಹನಿವ ತಿರುಗುತಿಹ
ನಿಂತಿಲ್ಲಿವ ಕುಳಿತಿಲ್ಲಿವ ಮಲಗಿಲ್ಲಿವ ತಿರುಗನಿವ
ಸಂತತವೊಂದೇ ತೆರನಿಹನೆನೆ ನೆನೆಯಲು ಬಾರದವ
ನಿಂತಿಹನೊಬ್ಬಗೆಯೊಳಗೆಂದೂ ನಮ್ಮೀ ಸ್ಥಿರನು. ॥೬॥

ಸ್ಥಿರದಾಗಸವುರಿ ಗಾಳಿಯು ನೀರ್ನೆಲವಿವುಗಳ ಮೇಲೆ
ಹರಡಿಹ ಸತ್ವಗಳೆಲ್ಲವು ತಾನಾಗುತ ಅವುಗಳೊಳು
ಮರೆಯಾಗೊಡಲೊಳು ಉಸಿರೆನೆ ಇದ್ದೆಲ್ಲೆಡೆ ಹಸರಿಸುತ
ಹಿರಿವೆಳಗಿನ ಶ್ರುತಿಯೊಳಗಿಹನವನುಂಡೀ ಸುರನೇ. ||೭||

ಸುರರರಿಯದ ನೆಲೆಯವನಾಗಸ ಮೊದಲಹ ವಸ್ತುಗಳ
ವರನಾದಿಯು ಕಾರಣನಿವನವನುಂಡಿಹ ಪರಪರನು
ಉರಿಸುತಲಾತ್ರಿಪುರವನಮರರಿಗರಿವನು ಕರುಣಿಸುತ
ಹರನಜನೆನೆ ಜಗವಳಿಸುತ ಸೃಜಿಸುತಲೊಳಗಿಹನು. ||೮||

ಅವನಿರುತಿಹನೆನಲಿಹ ಇರವಿಲ್ಲವಗೆನಲೂ ಇಹನು
ಇವು ಆತನ ರೂಪಿನ ಬಗೆ ಮಿಕ್ಕಿವು ರೂಪಿಲಿ ಬಗೆಯು
ಇವನಿಹನಿವನಿಲ್ಲೆಂಬೀ ಗುಣಗಳನಿವ ತಳೆದುದರಿಂ
ಇವನೀಯಿಬ್ಬಗೆಯೊಳು ಬಿತ್ತರಿಸಿಹನಳಿವುಳಿದು. ||೯||

ಹರಡಿರುವಾದಿಯ ತಂಗಡಲೊಳ ಕಣದೊಳು ಹರಡಿಹನು
ಹರವಾದಂಡದೊಳೆಂತಂತಿಳಿಮುಗಿಲೊಳು ಬಿಡದೇಸಂ
ಕಿರಿಕಿರಿದೆಡೆಗಳೊಳೆಡೆಗೊಂಡೆಸೆಯುವ ಹುರುಳುಗಳೊಳಗೆ
ಮರೆಗೊಂಡೆಲ್ಲೆಡೆ ಹರಡಿಹನಿವನುಂಡೀಸ್ಥಿರನು. ||೧೦||

ತಿಳಿಬಾನೆಲರುರಿ ನೀರ್ನೆಲಮಿವುಮಿವನಾಸರೆಗೊಂಡ
ಮೊಳಗುಬಲ್ಮೆಯುರಿಮೆಯು ತಣ್ಣಿಮೆ ಪೊರುಮೆಯು ತಾನಾಗಿ
ನೆಲೆಗೊಂಡಿಹ ಪರನಡಿಮೇಲ್ಕುರುಕೂರಿನ ಶಡಗೋಪ
ಉಲಿದೊಳ್ನುಡಿ ಸಾಸಿರದೊಳು ಈ ಹತ್ತೊಪ್ಪಿದುವು. ||೧೧||

ಎರಡನೆಯ ಹತ್ತು

ದೂಡಿರಿ ಎಲ್ಲವ | ದೂಡಿ, ನಿಮ್ಮುಸಿರನು
ಬೀಡಿನ ಸ್ವಾಮಿಗೆ | ಈಡನು ಮಾಡಿ. ||೧||

ಇನಿದೆನ್ನುವುಸಿರಿನ | ತನುಗಳ ನೆಲೆ ಆ
ಕ್ಷಣಿಕೆಗು ಚಲವೆನೆ | ನೆನೆಯಿರಿ ದೊರೆಯ. ||೨||

ನೀವು ನಿಮ್ಮದೆಂಬ | ಭಾವದ ಬೇರ್ಕಡಿದು
ದೇವಗೊಲಿವಾ ತುಂಬಿ | ಗಾವೆಣೆಯುಂಟೆ. ||೩||

ಇಲ್ಲದುದು ಉಳ್ಳದುದು | ಅಲ್ಲವವನ ರೂಪು
ಎಲ್ಲೆಯಿಲ್ಲದ ನಲವು | ಎಲ್ಲವುಳಿದೊಲಿಯೈ. ||೪||

ಹರಿಯೆ ಹತ್ತಿದುದೆಲ್ಲ | ದೊರೆವುದಾತ್ಮಕೆ ಮುಕ್ತಿ
ತೊರೆದದ ನಲ್ಲುಳಿವು | ದೊರೆಯೆ ಹತ್ತವಗೆ. ||೫||

ಪತ್ತುಗೆಯುನುಳಿದೀಶ | ವೊತ್ತದೊಳು ನಿಂತಿಹನು
ಪತ್ತುಗೆಯುನಳಿದವನ | ವೊತ್ತದೊಳಡಂಗು. ||೬||

ನೆರೆ ಚೆಲುವಿನ ಸಿರಿ | ಪರಿಯು ಪರಿಕಿಸುತದು
ಎರೆಯನೊಳಡಗಿಹು | ದರಿತೊಳಗಡಗು. ||೭||

ಒಳಗು ಮಾತುಗೆಯ್ಮೆ | ಯೊಳಗರಿತು ಮೂರನು
ತಿಳಿದಂಕೆಯೊಳಗಿಟ್ಟು | ನೆಲಸಿನನೊಳು ನೀ. ||೮||

ನೆಲಸಲು ನೀನವನೊ | ಳಳಿವುವು ತಡೆಯೆಲ್ಲ
ಬಳಿಕ ವೈಯುದುರುವ | ಗಳಿಗೆಯುನೆಣಿಸು. ||೯||

ನೆನೆಯೆ ನಲವುಕ್ಕುವ | ಘನಸತ್ತ್ವನಗಣಿತ
ಗುಣ ನಿಧಿ ನಾರಾ | ಯಣನಡಿ ಸೇರು. ||೧೦||

ಕೆರೆ ತುಂಬಿ ಚೆಲುವಾದ | ಕುರುಕೂರ ಶಡಗೋಪ
ನೊರೆದ ಸಿರಿಸಾಸಿರದಿ | ಮೆರೆದುವೀ ಹತ್ತು. ||೧೧||

ಮೂರನೆಯ ಹತ್ತು

ಹತ್ತುಗೆಯ ಭಕ್ತರಿಗೆ ಸುಲಭನಿವ, ಮಿಕ್ಕರಿಗೆ ದಕ್ಕದಿರುವಚ್ಚರಿಯುವ
ಮತ್ತೆ ಹೂವಿನ ಮಗಳೆಯೊಲಿದಿರುವ ದುರ್ಲಭನು ನಾವು ಪಿಡಿದಡಿಗಳವನು
ಮತ್ತಿನಿಂದುರೆ ಕಡೆದ ಬೆಣ್ಣೆಯುನು ಕದ್ದುರದಿ ಹಗ್ಗದಿಂ ಕಟ್ಟುವಡೆದು
ಅತ್ತಿತ್ತವಲುಗದೆಯೆ ಒರಳಿನೆಡೆ ಬಿಕ್ಕಳಿಸುತಳುವುದಿದು ಯಾವ ಮೋಡಿ. ||೧||

ಮೊದಲಿರದ ಕೊನೆಯಿರದ ತುಂಬುನಲವೆಸೆವಪರಿ ನೆಲೆನಿಯಮವಿಲ್ಲದಂತೆ
ವಿಧವಿಧದ ಹುಟ್ಟುಗಳ ಪಡೆದಿರುವ ಸೌಲಭ್ಯಶೀಲನಿವ, ಮುಕ್ತಿಯೆಂಬ
ಪದದ ತಿಳಿವನು ತರುವ ಆ ನೆಲೆಯ ಪೂರ್ಣತೆಯೊಳೆಂದುವೊಂದಿರುವ ಸ್ವಾಮಿ
ಹದುಳಗೊಳಿಸುವ ಕೃಪೆಯೊಳೊಳಗಣವನೆನಸಿಹನು ಹೊರಗಣವನು. ||೨||

ಸಂಪೂರ್ಣ ಧರ್ಮವದರುನ್ನತಿಯು ಮಾರ್ಗದೊಳಗತ್ಯುನ್ನತ ಸ್ಥಾನದ
ಸಂಪನ್ನತೆಯು ಪಡೆದ ಸೃಷ್ಟಿಲಯು ವಿಲಯಗಳನಾಳ್ವ ಹೆಜ್ಜಳದ ಪದದ
ಸಂಪನ್ನ ದೇವರ್ಕಳೆಲ್ಲ ಚಿದಚಿತ್ತುಗಳು ತಾನೆಯಾಗಿರುವ ತೆರದಿ
ಸಂಪೂರ್ಣನಾಗಿರುವ ನಾರಣನ ಮಾಯೆಯನು ತಿಳಿಯಬಲ್ಲವರದಾರು? ॥೩॥

ಒಂದು ನೆಲೆಯುಳ್ಳವನು ಎಂದಾರುಮರಿಯಲರಿದೆನ್ನಿಸುವ ನನ್ನೆರೆಯನು
ಒಂದು ನೆಲೆಯುಳ್ಳವನು ಎಂದಾರುಮರಿಯಲ್ಕೆ ಬಹನೆನಿಪ ನನ್ನೆರೆಯನು
ಒಂದಲ್ಲ ಹಲವು ಸಾಸಿರನಾಮ ರೂಪಗಳನುಳ್ಳಂಥ ನನ್ನೆರೆಯನು
ಒಂದು ಹೆಸರೊಂದು ರೂಪವನೀತಕೊಂಡಿಲ್ಲ ಕೊಳದಿಲ್ಲ—ಇದುವೆ ವಾದ. ॥೪॥

ಆರುಬಗೆ ಸಮಯಗಳು ವಾದಗಳ ತೋರೆವಂತೆ ಆರೈದು ನೋಡಿಯೊರೆದ
ಬಾರವೆಣಿಕೆಗೆಯೆನಿಪ ಗುಣನಿಧಿಯು ಕಡೆಯಿಲ್ಲದಾದಿಮನ ಸೌಂದರ್ಯದ
ಸಾರ ಭಗವಂತನನು ನಮಿಸಿ ನುತಿಸುವ ಮಾರ್ಗದೊಳು ನಿಂತು, ಬೇರೆ ಬಗೆಯ
ದಾರಿಗಳ ಕಳೆಕಿತ್ತು ಅವನನೊಲಿದಾರೈದು ಅಳಿವಂತೆಯೊಣಗಿಸಿರಿ ಪಾಶಗಳನು. ॥೫॥

ಆರೈದು ಆರೈದು ಈರೈದು ದೆಸೆಯಿಡಿದ ರೂಪಿಲ್ಲದಿದರ ನೆಲೆಯು
ಆರೈದು ಅನುಭವಿಸಿಕೊಂಡರೂ ಚೇತನರೆ ನೆಲೆಯರಿಯಲರಿದೆರೆಯನ
ಆರೈದು ಆರೈದು ಕುರಿತೋದಿ ಚಿಂತಿಸುತ ಹರಿಹರಬ್ರಹ್ಮರಿವರ
ಆರೈದು ಆರೈದು ಒರೆದೊರೆದು ಬಗೆಮುಟ್ಟಿದೊಂದನೇ ಭಾವಿಸುತಿರಿ. ॥೬॥

ಒಬ್ಬನೆನೆ ಹಲವರೆನೆ ಅರಿಯಲಾಗದ ರೂಪಿನೊಳು ನಿಂತ, ಚೋದ್ಯವೆನಿಪ
ಹಬ್ಬಿರುವ ಕಳೆಯು ನಾರಾಯಣನು ನಾಲ್ಮೊಗನು ಹರನೆನ್ನುವಿವರ ಪರಿಯು
ಒಬ್ಬಗೆಯು ನಿಮ್ಮರಿವೊಳಿಟ್ಟವರನಾರೈದು ಇಬ್ಬಗೆಯ ಬಗೆಯ ತೊರೆದು
ನಿಬ್ಬರದ ಪ್ರೇಮವನು ನೀವಿರುವ ದಿನಗಳಲಿ ಅವನೊಳೇ ಇಡತಕ್ಕುದು. ॥೭॥

ಮನದೆಡೆಯ ಮಾಲಿನ್ಯವಳಿವಂತೆ ತೊಳೆದು ಸಿರಿಯೊಡೆಯನೆಮ್ಮೊಡೆಯನ
ಇನಿದಾದ ಪಾದಗಳನಾಶ್ರಯಿಸೆ ದೃಢದಿ ದಿನದಿನ ನಮ್ಮ ಹಳೆಯವಾದ
ಮೊನೆಗೊಂಡು ಕಾಡುತಿಹ ಕಡು ಕೆಟ್ಟಪಾಪಗಳು ಕೊರೆಯೊಂದುಮಿಲ್ಲವೆನ್ನೆ
ಕೊನೆಗೊಳ್ಳುವುವು, ಕೊನೆಯ ಮೈತೊರೆವವೇಳೆಗೂ ಶರಣೆಂದೆ ಮುಗಿಯೆ ಮೇಲು.
॥೮॥

ಬಲದೊಳಿರೆ ಮೂರೂರನುರಿಸಿದವ ಮೇಲೆನಿಪ ದೆಸೆಮೊಗನು ತಾನು ಪಡೆದ
ಚೆಲುವನಾಂತೀಲೋಕದೊಡಗೂಡಿ ತಾನುಮೆಡೆಗೊಂಡಿರಲು ನಾಭಿತಲದಿ

ಒಳಗಿಹನು ಕಂಗಳಿಗೆ ತೋರುವಂದದೊಳವನು ತನ್ನ ಜಗದೊಳಗೆ ತಾನೆ.
ಉಲಿಯು ಮೊದಲಿಡೆ ಪರಿಯು ತಳವುಟ್ಟಲಾಗದಿದೆ. ಇವು ಎಲ್ಲ ಅವನ ಮಾಯೆ. ||೯||

ತಲ್ಲಣಗಳಿಲ್ಲದಿಹ ಮನದಿಸಲ್ಲರಿವನುಳ್ಳಮರರೂ ಭ್ರಮಿಸುವಂತೆ
ಬಲ್ಲಿತ್ತು ಬೆರಗುಳ್ಳ ಮಾಯೆಗಳ, ಎಲ್ಲೆಯಿರದಾಗಸಕು ಹಿರಿದೆನಿಸಲು
ಬಲ್ಲ, ಮಳೆಮುಗಿಲಿನಂದದ ಕರಿಯಬಣ್ಣದೊಡಲವನ ಮಾನೆಲವನಳೆದ
ನಲ್ಲಡಿಗಳಾಶ್ರಯಿಸಿ ಮರೆವುಳಿದು ತೊದಳುವೆನು ತಬ್ಬುವೆನು ನಮನಗೈವೆ. ||೧೦||

ಸುರರು ಸೇವಿಸುತೇರುವೆಯು ಪಡೆವ ತೆರದೊಳಲೆಕಡಲಕಡೆದವನ ಕುರಿತು
ತರುಬಳಸಿ ಚೆಲುವಾದ ಕುರುಕೂರ ಶಡಗೋಪ ನುಡಿಗಳಿಂ ಸೇವೆಗೈದ
ಸರಸಾರ್ಥ ಘನವಾದ ಸಾಸಿರದೊಳೀಹತ್ತನರಿವವರು ನಿತ್ಯರೊಡನೆ
ಪರಮಪದದೊಳು ಸೇರಿ ತಮ್ಮ ಹುಟ್ಟುಗಳೆಂಬ ಬಲುಸೆರೆಯ ಕಳೆವದವರು. ||೧೧||

ನಾಲ್ಕನೆಯ ಹತ್ತು

ಚೆಲುರೆಕ್ಕೆಯ ಬಲು ಮೋಹದ ಸಾರಸವೇ, ಎಲೆ ಕರುಣೇ ನೀ ನಿನ್ನ
ಚೆಲುರೆಕ್ಕೆಯ ಕಾದಲನೊಡನಯ್ಯೋ ಎನ್ನುತ ಮರುಕವ ತಳೆದೆನಗೆ
ಬಲವಾದೆರೆಂಕೆ ಹಕ್ಕಿಯ ಗುಡಿಯುವನಿಗೆ ನಾ ಕಳುಹಿದ ದೂತಿಯೊಲು
ಬಳಿಗೆ ಸಾರಲವ ಬಿಗಿ ಸೆರೆಯೊಳಗಿಡೆ ನಿನಗಾ ಸೆರೆಗೈಯುವುದೌ. ||೧||

ನನ್ನಯ ಚೆಲುಚೆಂದಾವರೆ ಕಣ್ಣಿನ ಸ್ವಾಮಿಗೆ ನನ್ನಯ ದೂತಾಗಿ
ಚೆನ್ನೊರೆಯುಲು ಏನಹುದಿಂಗೊರಲಿನ, ಕೋಗಿಲೆ, ನೀವಲ್ಲವೆ ನೀವು.
ಮುನ್ನಗೈದ ಮಾಪಾಪದ ಕತದಿಂ ಪದಪಿಡಿದುಪಚಾರವಗೈಯೆ
ಮುನ್ನೆಳಸದ ನನಗಿನ್ನೂ ಈ ಪರಿಯುಗಲಿಕೆಯೊಳಗಿರುವುದೆ ವಿಧಿಯೋ. ||೨||

ವಿಧಿಯೊಲಿದಿರೆ ಕಾದಲೆಯೊಡಗೂಡುತ ಮೆಲುನಡೆಯಿಂದಿಹ ಹಂಸಗಳೇ
ಹದದರಿವೊಳು ವಾಮನವಟುವಾಗುತ ಜಗವನು ಬೇಡಿದ ವಂಚಕಗೆ
‘ಒದಗಿಹ ಕಡುಪಾಪಗಳಿವು ಮತಿಗೆಟ್ಟೆನ್ನವು ಕೆಡವೋ ಓ’ ಎಂದು
ಕದಡಿರಲರಿವೆಲ್ಲವು ಬಗೆಯೊಳು ಮೋಹದಿ ತೊಳಲುವಳೊರ್ವಳು ಎನ್ನಿ. ||೩||

ಎನ್ನೀ ಕೋಮಳಭಾವವ ಕಾಣುತ ಕರಗುತಲಿದು ತರವಲ್ಲೆನದ
ನನ್ನೀ ಕರಿಮುಗಿಲ್ಬಣ್ಣಗೆ ಮಾತೇನೊರೆಯುತ ಅವನಂ ನುಡಿಯಿಸಲಿ
ಎನ್ನೊಲವಿನ್ನಿರದಾತನೊಳೆನ್ನುವ ಮಾತೊಂದಾತನಿಗುಲಿಯುತ್ತ
ಚೆನ್ನೀಲದ ಕೊಂಚೆಗಳೇ ನೀವೇನಗೊಳ್ಳಿತನೆಸಗಿರೊ ಎಸಗುವಿರೊ— ||೪||

ಎಸೆವ ಮರುಕದಿಂ ತಾನೆಯೆ ಕಾಯುತಲೇಳು ಲೋಕಗಳ ಪೊರೆವವನು
ಒಸೆಗೆಯೆನಗೆ ತರಲಾಗದೊ ಮರುಗುತ? ನಾರಣನನು ನೀ ಕಂಡಾಗ
ಪೊಸೆದು ಹರಿವ ಹೊನಲಲರಿನ ಬನದೊಳು ಉಣಲರಸುವ ಚೆಲುಕರಿಕುರುಕೇ.
ಒಸರುವ ಕಂಬನಿ ಕಣ್ಣಿನವಳಿಗೆಂದೊಂದು ನುಡಿಕೊಂಡು ಕರುಣಿಸೆಲಾ. ||೫||

ಕರುಣಿಸದಿಹ ನೀವವಳುಸಿರಳಿಯುವ ಮುನ್ನವೆ ಮರುಕವ ತಾಳುತ್ತ
ಕರುಣೆ ತುಂಬಿರುವ ಗರುಡನ ನಡೆಯಿಸಿರವರ ಬೀದಿಯೊಳಗೊಂದುದಿನ
ಕರುಣದಿ ಚಕ್ರವ ತಳೆದಿರುವಯ್ಯನ ಕಂಡೊಡನೀತೆರವೊರೆಯುತ್ತ
ಕರುಣಿಸು ಗಾಲಿಯಗೆರೆಯುಳಿವಿಂಡೆ, ನಾವೆಸಗಿಹೆವಾವುದು ಪೀಡೆ. ||೬||

ಪೀಡಿಸುತಿಹುದೈ ತಂಬೆಲರೆನ್ನನು ದಾರವನೆಲುಬೊಳು ಕೋದಂತೆ
ಪೀಡೆಯನಾಗೈದುದನೇ ನೆನೆಯುತ ಕರುಣಿಸದಿಹ ಸಿರಿಯೆರೆಯನಿಗೆ
ಕೇಡನದೇನಂ ಸ್ವಾಮಿಯ ಕರುಣೆಗೆ ಮಾಡಿದಳೆಂಬೊನ್ನುಡಿನುಡಿಯಾ
ಕಾಡುವನಿತು ಚೆಲುವಾಗಿರುವೆಳೆಗಿಳಿ, ನಾ ಹೊರೆದವಳಲ್ಲವೆ ನೀನು. ||೭||

ನೀನಲ್ಲವೆ, ಕಿರಿಪೂವೈ, ನನ್ನಯ ದೂತಿಯಾಗಿ ನೆರೆಯೊಲಿವವಗೆ
ನಾನು ಪಡುವ ನೋವಿದನರುಹೆಂದರೆಯರುಹದೆ ಬಿಂಕದೊಳಿದ್ದವಳು.
ನಾನಳಿದೆನು ಕಂಗೊಳ್ಳುವ ಚೆಲುವಿನ ಮೈಬಣ್ಣವ, ಈ ಪರಿಯಾಗೆ
ನೀನರಸುತ ನಡೆ ನಿನ್ನಯ ಕೊಕ್ಕಿನೊಳನ್ನವನಿಡುವವರನು ಇನ್ನು. ||೮||

ಇನ್ನೆಲ್ಲಿಯುಮಿರದಲರ್ಗಳನರಸುತ ದಿನದಿನ ನಾರಾಯಣನವನ
ಬಣ್ಣಗುಂದದಿಹ ಮಲರಡಿಗಳ ಮೇಲಿಡಲೆಂದೇಯೊಡಲಾಂತಿರಲು
ಎನ್ನೀಯಗಲಿದ್ದೊರ್ಂಟಿಗತನದಿಂ ಸಿರಿಯುಳಿದಿರವೇಗೈಯುವುದೋ
ಎನ್ನ ತಲೊರೆಯೈ ನಡುವೋಡಾಡುವ ತಂಬೆಲರೇ-ಸೀಳೆನ್ನೊಡಲ. ||೯||

ಒಡಲೊಳು ತಿರಿಯುವ ಹುಟ್ಟಳಿವುಸಿರಿನ ಮೊದಲಾಗುತ ಮೊತ್ತವು ಮಾಗಿ
ಕಡಲಾಳದ ನೀರೊಳು ತೊಳತೊಳಗುತಲದರೊಳಗೆಯೆ ಕಣ್ ಬೆಳಸುತಿಹ
ಕೆಡುಕ ತರಿವ ಚಕ್ರವನಾಂತಯ್ಯನ ಕಂಡಕಾಲದೊಳಗಿದನೊರೆದು
ಕಡು ಮಡ ಮನವೇ ಬಿಡದಿರು ಪಾಪಿಯನವನೊಡನೊಂದಾಗುವತನಕ. ||೧೦||

ಅಳವೆಯ ಮೀರಿಹ ಸಪ್ತಜಗಂಗಳ ಚೇತನರೊಡೆಯನ ಕೃಷ್ಣನನು
ಬಳಸಿಹ ಬೆಳೆವೊಲದಂದದ ಕುರುಕೂರಿನ ಶಡಗೋಪನು ಒಲಿದೊರೆದ
ಅಳವಡುವರ್ಥದ ಕೊನೆಯಿಂ ಮೊದಲಹ ಸಾಸಿರ ಪದ್ಯದೊಳೀಹತ್ತ
ನಲಿದೊರೆಯಲು ದೊರೆಕೊಳುವುದು ಬಾನೊಳಗುನ್ನತ ಸಾಮ್ರಾಜ್ಯದ ನೆಲೆಯು. ||೧೧||

ಐದನೆಯ ಹತ್ತು

ಹೊಳಿವೇಳುಲೋಕಗಳಿಗಾದಿಕಾರಣನಾದ ಬಾನವರಿಗೆರೆಯನನು ಕಡುಪಾಪಿ, ನಾನು
ಕಳವೆದ್ದು ತೋರುವೊಲು ಬೆಣ್ಣೆಯನು ಮರೆಯೊಳಗೆ ತಿಂದ ಕಳ್ಳನೆ ಎಂಬೆ, ಮತ್ತೆಯೂ
ಇಂತು
ಬೆಳುವೊಲ್ಲೆ ಹೊಳಿವಲ್ಲ ನಪ್ಪಿನ್ನೆಗಾಗಿಯೇ ಬಲವುಳ್ಳಗೊಲರಿಗೆ ವೊದಲಿ ತಾನಾಗಿ
ಬಲಿತು ಮದಿಸಿರ್ದೇಳು ಗೂಳಿಗಳ ಮರ್ದಿಸಿದ ನನ್ನಯ್ಯ ಎಂಬೆನಾ ನೆನೆನೆನೆದು
ನವೆದು. ‖೧‖

ನೆನೆನೆನೆದು ನವೆಯುತ್ತ ಮನಕರಗಿ ಹರಿಯುತಿರೆ ಅನಿಮಿಷರು ಹಲಮಂದಿ ಮುನಿವರರು
ಮಂತೆ
ಪ್ರಣಯದೊಳು ಸುಮಮಾಲೆ ತೀರ್ಥಚಂದನಧೂಪಗಳ ಕೊಳ್ಳುತ್ತೈತಂದು
ಪ್ರಣಮಿಸಲು ನಿನ್ನ
ನೆನೆದೆಲ್ಲಸತ್ವಗಳಿಗಾದಿ ಕಾರಣನಾಗಿ ವೊದಲಬಗೆ ವಿಕೃತಿಯನು ಪಡೆಯದಂದದೊಳು
ಮನದೊಳಗೆ ಸಂಕಲ್ಪವನು ಕೊಂಡ ಹಿರಿಮೆಯಿದು ಮಾಲಿನ್ಯವಡೆಯದೋ
ಮಾಯೆ ಪಡೆದವನೇ. ‖೨‖

ಪಡೆದು ಬಗೆಬಗೆ ಹುಟ್ಟ ನಡೆವುದೆಲ್ಲವನರಿತ ಸುರರ ಹಲವರನಂತೆ ಮುನಿವರ್ಯರನ್ನು
ಬಿಡದೆಲ್ಲ ಯೋನಿಗಳ ನೀನು ಪಡೆಯೆಂದೆನುತ ತುಂಬುಬಗೆ ನಾಲ್ಮೊಗನ ತಾನು
ಪಡೆದವನು
ಹಿಡಿಯಲೆಳಸುವ ಯೆಲ್ಲರರವಿಗೂ ಹೊರತಾಗಿ ದೆಸೆಗಳೆಲ್ಲವ ತನ್ನ ಸಿರಿಯಡಿಗಳಿಂದ
ಅಡರಿ ಅಳೆದವನಾಗಿ ಎಲ್ಲ ಬಗೆಯಿರವಿಗೂ ತಾಯಾಗಿ ತಾನೊಂದೆ ರೂಪದೊಳ
ಗಿಹನೋ ? ‖೩‖

ತಾನೊಂದೆ ರೂಪಾಗಿಯೊಂದೆ ಕಾರಣನಾಗಿ ತಾನೆ ಆ ಮೂದೇವರಾದಿಯಾಗಿರುವ
ಬಾನವರು ಹಲವರೂ ಮುನಿವರರು ಮತ್ತಂತೆ ಮನುಜರೂ ಮತ್ತಿವೂ ವೊತ್ತವೂ
ತಾನೊಂದು ಹಿರಿಗಡಲ ತನ್ನೊಳೇ ತೊಳಗುವಂತೆಸಗಿಯದರೊಳು ತಾನೆ ಕಣ್ಬೆಳಸು
ತಿರುವ
ಬಾನವರ ಹಿರಿಯುವನು ಮಾಮಾಯೆಯುಳ್ಳವನು ವೈಕುಂಠನಾಯಕನೆ
ನನ್ನಿರಿವಿನೆರೆಯ. ‖೪‖

ಎರಳೆಕಂಗಳ ಚೆಲುವಿಗೆಣೆಯಾದ ಕಣ್ಣುಗಳ ಸಿರಿವೆಣ್ಣನೆದೆಯೊಳಗೆಕೊಂಡ ಮಾಧವನೇ
ಸರಿಗೈವ ತೆರದೊಳಗೆ ದುಂಡುಬಿಲ್ಲಿನಕೊಂಕ್ ಗೂನಿಗೂನನು ನೇರಗೈದ ಗೋವಿಂದ.
ಪರಮ ಪದವನೆ ಬೆಳಗುತಿರುವ ಮಣಿವರ್ಣನೇ, ಮಧುಸೂದನಾ ನೀನು, ನಿನ್ನ
ಕರೆವ ಮಕರಂದದರವಿಂದದೈಸಿರಿಯ ಸಿರಿಪಾದಗಳ ಸೇರ್ವಬಗೆಯನು ನಾ ಪಾಪಿ
ಕರುಣಿಸೆನಗೆ. ||೫||

ಎನಗೆ ಪಾಪಿಗೆ ಪಾಪತೀರುವಂದದ ಮದ್ದೆ, ಕೇಶವನೆ, ಬಾನಿನೊಳು ನೆಲಸಿಹರ ಸ್ವಾಮಿ'
ಮನೆಗೊಂಡು ಗುಡಿಸಲನು ವಸಿಪ ಗೊಲ್ಲರಕುಲದ ಮೊದಲಿಗನೆ ಮಾಮಾಯೆಯವನೆ,
ಮಾಧವನೆ,
ಕೊನರುತಿಹ ತಳಿರಿನಿಂದೆಲೆಗಳಿಂದಿಡಿದಿರ್ದ ತರುಗಳೇಳನು ತರಿದ ನೀರದಾಧರನೇ
ಇನಿತು ಹೆಸರುಳ್ಳವನು ಇಂಥವನು ಎನ್ನುತ್ತ ನೆನೆದು ನಾ ನವೆಯುತಿಹೆ
ತಮ್ಮಡಿಗಳವನು. ||೬||

ಅಡಿಯುವನು ಕಿರಿದರಿವನುಳ್ಳವನು ನಾನವನ ತನ್ನನರಿಯಲ್ಕಾರ್ಗುಮರಿದೆನಿಸುವವನ
ಇಡಿದ ಕಂಪಿನ ತಣ್ಪುತಳೆದಂದಮಾಗಿರುವ ತುಳಸಿಮಾಲೆಯಧರಿಸಿ ಮೆರೆವ ಕೃಷ್ಣನನು
ಅಡವಿಯಂತಿರುವೊಡಲ ಸೇರದೊಲು ಶರಣರನು ತಡೆದಿಟ್ಟು ಕಾಪಿಡುವ
ಸಿರಿಯೆರೆಯನನ್ನು
ಅಡಿಯೊಳು ನಾ ಕಾಣಬೇಕೆಂದೆ ಮೊರೆಯಿಡುವೆ ತಿಳಿಗೇಡಿತನವಿಹುದೆ ಇದನು
ಮಿಗಿಲಿನದು ? ||೭||

ಮಿಗುವೇಳು ಲೋಕಗಳ ನೀನುಂಡೆ ಯೀಮುನ್ನ ಆ ಬಳಿಕ ಅವನುಗುಳಿ ಮಾಯೆ
ಯಿಂದವನು
ಹೊಗುತ ಕಿರಿಮಾನವರ ಹೊಲೆವಿಡಿದ ಮೈಯೊಳಗೆ ನೆಲೆಯುಪಡೆಯುತ ಉಂಡೆ
ಕಡೆದ ಬೆಣ್ಣೆಯನು
ಅಗಿದ ಮಣ್ಣದು ಜೀರ್ಣವಾಗದಿರೆ ಮನುಜರಿಗೆ ಬಹ ಮಾಂದ್ಯ ಸ್ವಲ್ಪವೂ
ತಟ್ಟದಿರಲೆನುತ
ಬಗೆದು ನೀನಾಮಣ್ಣು ಕರಗಿಸಲು, ಮಾಯಾವಿ, ಈ ತೆರದಿ ತುಪ್ಪವನು
ಮೆಲ್ಲುವುದೆ ಮದ್ದೊ ? ||೮||

ಮದ್ದುಗಾತಿಯು ಕೆಟ್ಟಮಾತಾಳಿ ಮಾಮೋಸಗಾತಿಯಾ ರಕ್ಕಸಿಯ ನಾಶಗೈವಂತೆ
ಶುದ್ಧಬಾಲಕನಾಗಿ ವಿಷದ ಮೊಲೆಹಾಲನೇ ಅಮೃತವಾಗುವೊಲೆಸಗಿ ಕುಡಿದ
ಮಾಯಾವಿ

ಹೊದ್ದಿದಮರರಿಗೆಲ್ಲ ಒಬ್ಬನೇ ಸ್ವಾಮಿಯಿವ, ಮಲರ ಕುವರಿಯನಾಥ,
ಸಕಲ ಚೇತನಕೂ
ಮುದ್ದಿಡುವ ತಾಯಿ, ತನ್ನೊಡೆಯ, ನನ್ನೊಡೆಯ, ಅಚ್ಚರಿ ಮೂರ್ತಿ—
ಅಳಿಯೆವ್ವೈನಾವವನಸೇರಿ. ‖೯‖

ಸೇರಿದಿತ್ತೆರ ಬಲಿತಕರ್ಮದೊಡ್ಡನು ಕಡಿದು ಮೋಹಗೊಳಿಸುವ ಮುಟ್ಟುಗಳನೆಲ್ಲ ತರಿದು
ಮೀರಿದೊಲವಿಂ ಮನವು ತನ್ನೊಳೇ ಸಲಸುವೊಲು ಸಂಸ್ಕರಿಸಿ ಬೀಡಿನೊಳು
ನೆಲೆಗೊಳಿಪನಿವನು
ಸಾರವಾದರಿವಿನಿಂ ತುಂಬಿ ಹೊಗರಿಡುವವನು ಮೇಲ್ಕೆಳಗಸುತ್ತಲೂ
ಎಡಬಿಡದೆ ತುಂಬಿ
ಆರೈಯಲತಿಸೂಕ್ಷ್ಮ ಚಿದಚಿತ್ತುತಾನಾಗಿ ಅವುಗಳುಸಿರಾಗಿರುವ ನನ್ನ ನಾಥ. ‖೧೦‖

ನಾಥನೇ, ಆಶ್ಚರ್ಯ ಚರಿತನೇ, ಮಹಿಮನೇ, ಮಾ ಮಾಯೆಯುಳ್ಳವನೆ, ಎಂದೆನುತಲಿಂತು
ನಾಥನಿಗೆ ಮರುಳಾಗಿ ನಾಥಕರುಣಿಸಲವನ ಕೂಡಿರುವ ಶಡಗೋಪರೊರೆದ
ಆ ತಮಿಳರಂತೆಯೇ ಹಾಡುಗಾರರು ಭಕ್ತರಾದರಿಸುವಂತಿರುವ ಹಾಲಿನೊಲು ಸವಿಯ
ಈ ತೆರೆದ ಸಾಸಿರದೊಳಳವಟ್ಟ ಈ ಹತ್ತಬಲ್ಲವರಿಗಳಿಯುವುವು ಎಲ್ಲ ದುಃಖಗಳು. ‖೧೧‖

ಆರನೆಯ ಹತ್ತು

ಅಳಲನು ಕಳೆಯುವ ಈಶನ ಹಾಡಿ
ಒಲವೆಯ ಮನವರಳಿಸೆ ಬಯಪವರೇ
ಉಳಿದನ್ಯತೆಯನು ನಲ್ನೀರೆರೆಯುತ
ಮಲರಂ ಧೂಪವನೊಪ್ಪಿಸಿರವಗೆ. ‖೧‖

ಒಪ್ಪಿರೆ ಸವಿದಂಪಿನ ಚೆಲುತುಳಸಿ
ಮುಪ್ಪಿನ ವೇದದ ಮೊದಲವಗೇನೇ
ನೊಪ್ಪಿಸಲೇನನುಗ್ಗೈಯುಲಿ ಎನ್ನದೆ
ಒಪ್ಪಿಸುವುದು ತನ್ನೆ ಸಕವದನ್ನೇ. ‖೨‖

ಅದೆ ಬೇಕಿದು ಬೇಡೆನದೀಶನ ಬಳಿ
ಯಿದ ಬಿಡದೆನ್ನ ಸವೆನ್ನಯ ನಾಲಗೆ
ಹೊದೆದು ಹಾಡುತಿಹುದವನ ಹಾಡನೇ
ಮುದದಾವೇಶದಿ ವ್ಯೆಯಾಡುತಿದೆ. ‖೩‖

ಆಡುವುದೆನ್ನಂಗವು ಆವೇಶಕೆ
ಈಡಾದೊಲು ಮಣಿದರ್ಚಿಸುತೀಶನ.
ಬೀಡವಗುಣಸಮುದಾಯಕೆ, ಕುರಿತವ—
ನಾಡಿ ಸುರರು ಹುರುಡನು ಕೊಳುವಂಥ. ||೪||

ಕೊಳುವಿಕೆ ಕೊಳದಿರುವಿಕೆಯಿಲ್ಲದವ
ಕೆಳೆಯಿಲ್ಲದವನು ಹಗೆಯಿಲ್ಲದವ
ಸಲುವುದ ಸಲದಿರುವುದನಾರೈದು
ಒಳಗೊಂದಿದವರಿಗಿವನೊಂದಮೃತ. ||೫||

ಅಮೃತವನಮರರಿಗಿತ್ತವನೀತನು
ಅಮಿತಸತ್ವಸುರತೇಜದ ಚಕ್ರಿ
ಅಮೃತಕಿಂತ ಕಡು ಸವಿಯಾದವನಿವ
ನಿಮಿರುವ ತೆರೆಗಳ ನೀಳ್ಕಡಲವನು. ||೬||

ಕಡಲು ಬಳಸಿರುವ ಲಂಕೆಯ ದೊರೆಯ
ಕಡಿದು ಕೆಡಹಿದನು ತೋಳ್ ತಲೆಗಳನು
ಅಡಿಗಳೊಳಗೆ ತಲೆಯಿರಿಸಿ ಮಣಿಯುತ
ಕಡಲನು ಕಾಲದ ದಾಟಿ ಕಳೆಯಿರಿ. ||೭||

ಕಳೆಯಿರಿ ಚಪಲರೆ ಚಾಪಲ್ಯಗಳ
ಕಳೆಯುತಲವನನೆ ಒಲಿದು ಸೇವಿಸಿ
ಒಲಿದರ್ಚಿಸೆ ನಡುವಿಹ ಮಾ ಪಾಪಗ—
ಳಳಿಸಿ ತಹನು ಅಳಿವಿಲ್ಲದ ತೆರವ. ||೮||

ತೆರವಿಲ್ಲೀ ಫಲ ಧರ್ಮಂಗಳಿಗೆನೆ
ಪರಿಯುಹ ಸಿರಿದೇವಿಗೆ ತನ್ನಿಯಿನಿಯನು
ಹಿರಿಮೆಯ ಪಡೆದಿಹ ಸರ್ವೇಶ್ವರ ನಿ-
ತ್ತೈರವಿಹ ಕರ್ಮಂಗಳ ತರಿವವನು. ||೯||

ತರಿವನತಿಘೋರ ದುರಿತಂಗಳ ನವ
ಸರಿಯುವವಷ್ಟರೊಳು ಗಳಿಗೆಯುವಧಿಯು

ವರಗರುಡನ ಗುಡಿಯೆತ್ತಿರುವಂದದ
ಸಿರಿ ರೂಪಧರನು ಮಾಧವನವನೇ. ||೧೦||

ಕುರಿಯುತ ಮಾಧವನಂ ಶಡಗೋಪ
ಕೊರತೆಗಳೇನೊಂದಿರವೆಂದೊರೆದ
ಕೊರೆಯಿಲ್ಲದ ಸಾಸಿರದೊಳು ಹತ್ತು
ಒರೆವಂಥವರಿಗೆ ಮರುಹುಟ್ಟಿರದು. ||೧೧||

ಪು. ತಿ. ನ.

(ಸಶೇಷ)

ಗಾಥಾ ಸಪ್ತಶತಿಯಿಂದ

ಹೂವಾಡಗಿತ್ತಿಯು ನಳಿತೋಳ ಚೆಲುವನು
ತರುಣನು ನೋಡುವ ಚಪಲದೊಳು ;
ಹೂವಿನ ಬೆಲೆಯನು ಕೇಳುವ ನೆಪದೊಳು
ಮತ್ತೆ ಮತ್ತಲ್ಲಿಯೆ ಸುಳಿಯುವನು. ‖ ೧ ‖

ಊಳಿಗವೇನಿಲ್ಲದಿದ್ದರು ಹೊಲದೊಳು,
ಮನೆಯನು ಸೇರನು ಸಂಜೆಯೊಳು ;
ಮುದ್ದಿನ ಮಡದಿಯು ಸಾವಿನೊಂದಳಲನು
ಮರೆಯಲೆಂದೆಳೆಸುವ ಪಾಮರನು. ‖ ೨ ‖

ಅವಳನೆ ನೋಡುವನಾತನು, ಆ ಅವಳು
ಅವನನೆ ನೋಡುತ ಹುಚ್ಚಾದಳು.
ತಾವಿಬ್ಬರಲ್ಲದಿನ್ನು ಳಿದವರಿಳೆಯೊಳು
ಇಲ್ಲದೊಲಿಹರಿಂತು ಹರ್ಷದೊಳು. ‖ ೩ ‖

ಬದುಕೇನು ನಿಜವಲ್ಲ, ದಿನದಂತೆ ದಿನವಿಲ್ಲ,
ಹರೆಯ ಸಂದುದು ಮತ್ತೆ ಮರಳದಲ್ಲ ;
ಇಂತಿರಲೇತಕೆ ಲೋಕದ ಮನುಜರು
ಪ್ರೀತಿಯಿಂದೊಬ್ಬರನೊಬ್ಬರು ಬಾಳಿಸರು. ‖ ೪ ‖

—ಎಸ್. ವಿ. ಪರಮೇಶ್ವರಭಟ್ಟ

ಷಾಃ ಪಸೆಂದ್ ನಾಮಾ

" ನವ್ಯ ಶಕಟಿಕಾ "

" ಷಾಃ ಪಸಂದ್ !—ಷಾಃಪಸಂದ್ ! ! "

ಆಹಾ !—ಎಂತಹ ಸುರುಚಿರ—ಸುಮಧುರ—ಸುಂದರ ನಾಮಧೇಯ !

" ಓವ್ಹೋ ! ರಸಸರಂಜಕ—ಕರ್ಣಪುಲಕ—ನಾಮಾಂಕಿತ ವೈಚಿತ್ರ್ಯವೇ ಇದೋ (ದೂರದಿಂದಲೇ !) ನಿನಗೆ ನನ್ನ ಹೃತ್ಪೂರ್ವಕ ಸಹಸ್ರನಮಸ್ಕಾರಂಗಳು ! !—ಭರ್ತಿಕರ್—ಕೋ ! "

ನನಗೊಬ್ಬ ಮಿತ್ರನಿದ್ದ ; ಅವನು ಅಸಾಧ್ಯ ಖಾದಿಭಕ್ತ—ಉಜ್ವಲ ದೇಶಪ್ರೇಮಿ—ವೀರ ಸತ್ಯವ್ರತ—ಅನುಪಮ ಅಹಿಂಸಾವಾದಿ—ಅದ್ವಿತೀಯ ಪತಿತಪಾವನ—ಉಗ್ರ ಹರಿಜನೋದ್ಧಾರಕ—ಎಲ್ಲ ಆಗಿದ್ದ. ಬಹುಶಃ ಇವೆಲ್ಲ ಆಗಿದ್ದ ಕಾರಣದಿಂದಲೇ ಏನೋ—ಮೊನ್ನೆ ಮೊನ್ನೆ—ಹೊಟ್ಟೆಗಿಲ್ಲದೆ, ಪಾಷಾಣಪ್ರಾಶನಮಾಡಿ (ಅವನ ಹೆಸರು ಹರಿಹರ ಭಟ್ಟ) " ಹರ ಹರಾ "—ಎಂದೇಬಿಟ್ಟ. ಆದರೆ, ಬಹುಸಂತೋಷದಿಂದ ಪ್ರಾಣ ಪಕ್ಷಿಯನ್ನು ಬಿಟ್ಟುಕೊಟ್ಟ ಅನ್ನಿ. ಕಾರಣವೇನೆಂದರೆ, ಏನೇ ಆಗಲಿ, ತಾನು ಗಾಂಧೀ ಯುಗದಲ್ಲಿ ಹುಟ್ಟಿ—ಬದುಕಿ—ಸತ್ತೆನಲ್ಲಾ !—ಎಂಬ ಅಂತಿಮಕಾಲದ ದಿವ್ಯಾನುಭವ. ಹಾಗೆಯೇ, ಷಾಃ ಪಸಂದನ್ನು ನೆನೆಸಿಕೊಂಡರೆ, ನನಗೆ ಈಗಲೇ—ಇದನ್ನು ಬರೆಯು ತ್ತಿರುವಾಗಲೇ !—ಒಂದು ದಿವ್ಯಾನುಭವ ಬರುತ್ತಿದೆ. ಅದು, ಷಾಃಪಸಂದ್ ಯುಗದಲ್ಲಿ ಹುಟ್ಟಿ—ಬದುಕಿ—ಇನ್ನೂ ಬದುಕಿರುವೆನಲ್ಲಾ !—ಎಂಬ ಅನಿರ್ವಚನೀಯ ಆನಂದೋತ್ಕರ್ಷ.

" What's there in a name ! " (ಅಂದರೆ " ಹೆಸರಿನಲ್ಲೇನಿದೆ ! ") ಎಂದು ಆಂಗ್ಲಕವಿಸಾರ್ವಭೌಮ ಷೇಕ್ಸ್ಪಿಯರ್ ತನ್ನ ನಾಟಕ ಒಂದರಲ್ಲಿ ಒಂದು ಕಡೆ ಧೋರಣೆ ಮಾಡಿದ್ದಾನೆ—ನಿಜ, ನನಗೂ ಗೊತ್ತು. ಆದರೆ ಇದಕ್ಕೆ ಕಾರಣ—ಅವನ ಮಹಾ ಅದೃಷ್ಟ ಕಾಲದಲ್ಲೂ ಇಂಗ್ಲೆಂಡಿನಲ್ಲಿ ಷಾಃಪಸಂದ್ ಇಲ್ಲದೆ ಇದ್ದದ್ದು. ಇದ್ದಿದ್ದರೆ, ಖಂಡಿತ ಅದು ಆ ಮಹಾಕವಿಯ ಸ್ಫೂರ್ತಿಯನ್ನು ಪ್ರಚೋದಿಸದೆ ಇರುತ್ತಿರಲಿಲ್ಲ. ಅದರ ಫಲವಾಗಿ ಅವನ ನಾಟಕಗಳಲ್ಲಾಗಲಿ, ಸಾನೆಟುಗಳಲ್ಲಾಗಲಿ, ಇತರ ಕವನಗಳಲ್ಲಾಗಲಿ, ಅದು ಯಥೋಚಿತವಾಗಿ ಉಕ್ತವಾಗದೆ ಇರುತ್ತಿರಲಿಲ್ಲ. " ಹೆಸರಿನಲ್ಲೇನಿದೆ ! " ಎಂದು ಅಷ್ಟು ಲಾಘವವಾಗಿ ಧೋರಣೆ ಮಾಡಲು ಅವನಿಗೆ ಎಡೆಯೂ ಇರುತ್ತಿರಲಿಲ್ಲ.

ಆಂಗ್ಲ ಕವಿರವಿಯು ಕಾಣದೆ ಹೋದ ಹೆಸರಿನ ಮಹತ್ತ್ವವನ್ನು—ಮಾಧುರ್ಯವನ್ನು—ಭಾರತದ ರವೀಂದ್ರ ಕವಿವರ್ಯರು ಕಂಡರು. ಅವರು ಒಂದು ಲೇಖನದಲ್ಲಿ "ದ್ರೌಪದಿಯ ಹೆಸರು 'ಊರ್ವಿಳಾ' ಎಂದಿದ್ದಿದ್ದರೆ ಏನಾಗುತ್ತಿತ್ತು ?"—ಎಂದು ಪ್ರಶ್ನಿಸಿ, "ವೀರರಾದ ಪಂಚಪತಿಗಳಿಂದ ಗರ್ವಿತಳಾದ ಆ ಕ್ಷತ್ರಿಯ ರಮಣಿಯ ಉಜ್ವಲವಾದ ತೇಜಸ್ಸು, ಈ ತರುಣವೂ ಕೋಮಲವೂ ಆದ ಹೆಸರಿನಿಂದ ಪದೇ ಪದೇ ಭಂಗ ಪಡೆಯುತ್ತಿತ್ತೆಂದು ತೋರುತ್ತದೆ"—ಎಂದು ತಾವೇ ಉತ್ತರವನ್ನೂ ಹೇಳಿದ್ದಾರೆ. ನಾನೂ ಪ್ರಸಕ್ತ ಸಮಯದಲ್ಲಿ ಅದೇ ರೀತಿ ಪ್ರಶ್ನೆ ಮಾಡುತ್ತೇನೆ: ಷಾಃಪಸಂದಿನ ಹೆಸರು "ಘಢಘಢಾ" ಅಥವಾ "ಲಠಫಠಾ" ಎಂದಿದ್ದಿದ್ದರೆ ಏನಾಗುತ್ತಿತ್ತು? ನಾನೇ ಉತ್ತರವನ್ನು ಹೇಳುತ್ತೇನೆ: ವಿಸರ್ಗಾನುಸ್ವಾರಗಳಿಂದಲೂ ಮೃದುಪ್ರಾಣಾಕ್ಷರಗಳಿಂದಲೂ ಕೂಡಿ, ಅಪೂರ್ವ ನಾದಮಾಧುರ್ಯದಿಂದ ತುಂಬಿ ತುಳುಕುತ್ತ, ಸಮತೂಕಾಕೃತಿಯ ಚಿತ್ತಾಕರ್ಷಕ ಸುಂದರನನ್ನು ಸುವಾಸಿನಿಯಂತೆ—ತೀರ ಉದ್ದವೂ ಅಲ್ಲದೆ, ತೀರ ಮೋಟಕೂ ಅಲ್ಲದೆ ಶೋಭಿಸುವ ಈ ಸುಂದರತಮ ನಾಮರತ್ನದ ಸ್ನಿಗ್ಧ ಸಂಗೀತವು, ಆ ಅನಾಗರಿಕವೂ—ಅರಸಿಕವೂ—ಕರ್ಣಕಠೋರವೂ ಆದ ಕರ್ಕಶ ಹೆಸರುಗಳಿಂದ ಪದೇ ಪದೇ ಭಂಗಪಡೆಯುತ್ತಿದ್ದುದರಲ್ಲಿ ಸಂದೇಹವಿಲ್ಲ. ನೋಡಿ! (ಉಚ್ಚರಿಸಿ ನೋಡಿ!) ರಸಪುರೀಮಾವಿನ ಹಣ್ಣಿನ (ಮಾವನ ಹೆಣ್ಣಿನ—ಅಂದರೂ ತಪ್ಪಾಗಲಾರದು) ಮುದ್ದುಗಲ್ಲದಂತೆ ಬಾಯಿ ತುಂಬುವುದಕ್ಕೆ ವಿಸರ್ಗಾಲಂಕೃತವಾದ ಆ "ಷಾಃ" ಒಂದೇ ಸಾಕು! ಊರ್ಮಿಳೆಗೆ "ಮಾಂಡವಿ" ಅಥವಾ "ಶ್ರುತಕೀರ್ತಿ" ಎಂದು ನಾಮಕರಣ ಮಾಡದೆ "ಊ—ರ್ಮಿ—ಳಾ" ಎಂದು ಹೆಸರಿಟ್ಟದ್ದು ಅಪೂರ್ವ ಸೌಭಾಗ್ಯವೆಂದೂ, ಅದಕ್ಕಾಗಿ ತಾವು ಆದಿಕವಿ ವಾಲ್ಮೀಕಿಗೆ ಕೃತಜ್ಞರಾಗಿರುವುದಾಗಿಯೂ ರವೀಂದ್ರರು ಅಪ್ಪಣೆ ಕೊಡಿಸಿದ್ದಾರೆ. ಇಲ್ಲಿಯೂ ನಾನು ರವೀಂದ್ರರ ಹೆಜ್ಜೆಯನ್ನೇ ಅನುಸರಿಸುತ್ತೇನೆ. ಅನ್ವರ್ಥವಾದರೂ "ಘಢಘಢಾ—ಲಠಫಠಾ" ಇತ್ಯಾದಿ ಶಬ್ದಾನುಕರಣೀಯ ನಾಮಕರಣಮಾಡಿ ಅನರ್ಥಮಾಡದೆ, ಷಾಃಪಸಂದಿಗೆ "ಷಾಃಪಸ—ಂದ್" ಎಂದು ಹೆಸರಿಟ್ಟದ್ದು ಇಡೀ ಈ ಮಾದರಿ ಮೈಸೂರು ಷಹರಿನ ಮಹಾ ಸೌಭಾಗ್ಯವೆಂದು ಭಾವಿಸಿ, ಇದಕ್ಕೆ ಮೂಲ ಕಾರಣರಾಗಿಹೋದ—ಗತಕಾಲದ ನಗರ ಪಿತೃದೇವತೆಗಳಿಗೆ ನನ್ನ ಕೃತಜ್ಞತಾ ಪಿಂ—ಛೆ! ಛೆ! ಅಲ್ಲ, ಹವಿಸ್ಸನ್ನು ಶ್ರದ್ಧೆಯಿಂದ ಅರ್ಪಿಸುತ್ತೇನೆ.

"ಬಾದೂಷಾ", "ಜಹಾಂಗೀರ್", "ಸೋಹನ್ ಪಪ್ಪಡಿ", "ರಸಗುಲ್ಲ" ಇವೇ ಮೊದಲಾದವುಗಳಂತೆ "ಷಾಃಪಸಂದ್" ಕೂಡ ಒಂದು ಭಕ್ಷ್ಯ ವಿಶೇಷವೆಂದು ಮೈಸೂರು ನಗರವಾಸಿಗಳಲ್ಲದವರೂ—ಮೈಸೂರನ್ನೇ ಕಾಣದವರೂ ಭಾವಿಸಿ ಮೋಸ

ಹೋದಾರು ! ಉಹುಂ ! ಅಲ್ಲ !—ನಮ್ಮ ನಾಡಿಗೆ ಬಂದು, ನಮ್ಮವರ ಜಿಹ್ವೇಂದ್ರಿಯ ಜ್ಞಾನವನ್ನು ವಿಸ್ತರಿಸಿರುವ ಔತ್ತರೇಯರ "ಭವನ"ಗಳಲ್ಲಿ, ಭಕ್ಷ್ಯವೇದಿಕೆಯ ಮೇಲೆ ರಂಗುರಂಗಾಗಿ ರಂಜಿಸುವ ಆ ರಾಜಭೋಜ್ಯವಸ್ತುಗಳ ಪಂಗಡಕ್ಕೆ ಸೇರಿದ್ದಲ್ಲ ನಮ್ಮ ಷಾಃಪಸಂದ್ ! "ಹಾಗಾದರೆ ?" ಎಂದು ಹುಬ್ಬು ಎತ್ತುತ್ತೀರೋ ?. . . ಹ್ಞಾ ! ಹ್ಞಾ ! ವಿವರಿಸುತ್ತೇನೆ—ಅವಸರಪಡಬೇಡಿ. ಅವಸರಕ್ಕೂ ಷಾಃಪಸಂದಿಗೂ "ತಿಪ್ಪಾರ್ ಹಳ್ಳೀ" ಗಿಂತ ಬಲ್ದೂರ !

ಚಿಗುರು ವೀಳೆಯದೆಲೆ—(ಅದನ್ನು ಮಾರುವ) "ಬನ್ನೀ ಬುದ್ದೀ, ಕೊನ್ನಿ (ಕೊಳ್ಳಿ) ಬುದ್ದೀ !" ಎಂದು ಕೈಯಲ್ಲಿ ಎಲೆ ಹಿಡಿದು, ತೋಳ್ಬಳ್ಳಿಗಳನ್ನು ಚಾಚಿ ಆದರದಿಂದ ಆಹ್ವಾನಿಸುವ ರಸಿಕರಮಣೀರತ್ನಗಳು—ಘಮಘಮಿಪ ಮಲ್ಲಿಗೆ ಮೊಗ್ಗು—ಈರನಗೆರೆ ಮೊಗರುಬದನೆ—ಇವು ಹೇಗೆ ನಮ್ಮ ರಾಜಧಾನಿಯ ರಸ ಪೂರ್ಣ ವೈಶಿಷ್ಟ್ಯಗಳೋ ಹಾಗೆಯೇ, ಷಾಃಪಸಂದ್ ಕೂಡ ಈ ಸುಂದರ ನಗರದ ಅಚ್ಚರಿಯ ವೈಶಿಷ್ಟ್ಯವಾಗಿದೆ. ಆದರೆ, ಮೊದಲು ತಿಳಿಸಿದ ನಾಲ್ಕು ವಿಷಯಗಳಿಗೆ ನಮ್ಮ ಮೈಸೂರು ನಗರ ಅನಾದಿಕಾಲದಿಂದ ಮಾತೃಗೃಹ. ಷಾಃಪಸಂದ್ ಆದರೋ ಅತ್ತೆಯ ಮನೆಗೆ ಆಮದಾಗಿ ಬಂದು ವಕ್ಕರಿಸಿ—ಬೇರೂರಿ ನೆಲೆಸಿದ ಅಳಿಯ ದೇವನಂತೆ ಸುಮಾರು ಇಪ್ಪತ್ತೈದು-ಮೂವತ್ತು ವರ್ಷಗಳ ಹಿಂದೆ, ನಮ್ಮೂರಿಗೆ ಆಮದಾಗಿ ಬಂದ ಒಂದು ಏಕಾಶ್ವನವ್ಯಶಕಟಿಕಾ ವಿಶೇಷ.

ಇಂದು ಲೋಕಾದ್ಯಂತ ಹೊಗೆಯಾಡುತ್ತಿರುವ ತಂಬಾಕುತರಳೆಯನ್ನು ದೂರದ ಅಮೆರಿಕದಿಂದ ಮೊಟ್ಟಮೊದಲು ಇಂಗ್ಲೆಂಡಿಗೆ ಮುತ್ತಿಟ್ಟು ಕರೆತಂದವನು, ಮೊದಲನೇ ಎಲಿಜಬೆತ್ ಕಾಲದ ಜಗದ್ವಿಖ್ಯಾತ ಸಾಹಸಿ—ಹಾಗೂ ರಸಿಕ—ಸರ್ ವಾಲ್ಟರ್‌ರ್ಯಾಲೆ—ಎಂದು ವಿಶ್ವಚರಿತ್ರೆಯಲ್ಲಿ ಶಾಶ್ವತವಾದ ಸುವರ್ಣವೇದಿಕೆಯನ್ನು ಗಳಿಸಿಬಿಟ್ಟಿದ್ದಾನೆ. ಹಾಗೆಯೇ ನಮ್ಮ (ನಿಮ್ಮದೂ ಆಗಬಹುದು—ಬಾಡಿಗೆ ಕೊಟ್ಟರೆ !) ಷಾಃಪಸಂದ್ ಶಕಟಕ್ಕೂ ಒಂದು ಸುಂದರವಾದ ಇತಿಹಾಸವಿದೆ. ಈ ಅಪೂರ್ವ ಚರಾಚರ ಸಾಮಗ್ರಿಗೂ ಒಬ್ಬ "ಸರ್ ವಾಲ್ಟರ್ ರ್ಯಾಲೆ" ಇದ್ದಾರೆ. ಆದರೆ ಇದರ ಕಥೆ ಇನ್ನೂ ಸ್ಮೃತಿ-ಶ್ರುತಿಗಳ ಅವಸ್ಥೆಯಲ್ಲಿದೆಯೇ ಹೊರತು ಗ್ರಂಥಸ್ಥ ವಾಗಿಲ್ಲ. ಮೈಸೂರಿನ ಭಾವೀ ಅಧಿಕೃತ ಚರಿತ್ರಕಾರರು, ಸಂಸ್ಕೃತಿ ಪ್ರಚಾರಾಂಗ ವಾಗಿ ತಾವು ರಚಿಸುವ ಮಹಾಸಂಪುಟಾವಳಿಯಲ್ಲಿ, ಷಾಃಪಸಂದಿನ ಘನತೆ-ಗೌರವ ಗಳಿಗೆ ತಕ್ಕಂತೆ ಒಂದು ಸಂಪುಟವನ್ನು ಮೀಸಲಾಗಿ ಕೊಟ್ಟು ಮನ್ನಣೆ ಮಾಡುವರೋ ಇಲ್ಲವೋ ಎಂಬುದು ಕಾಲಗರ್ಭಿತವಾದ ರಹಸ್ಯ.

ಪ್ರಸಕ್ತ ಸಮಯದಲ್ಲಿ ನಾವು ಇದರ—ಅಂದರೆ, ಷಾಃಪಸಂದಿನ—ಕಥೆಗೆ,

ಸ್ಮೃತಿ-ಶ್ರುತಿಗಳನ್ನೇ ಮರೆಹೊಗಬೇಕಾಗಿದೆ. ನಮ್ಮೂರಿನ ಷಾಃಪಸಂದ್‌ವಾಲಾಗಳ ವಲಯದಲ್ಲಿ "ಮಹಾರಥ"ನೆನಿಸಿಕೊಂಡಿರುವ ವಯೋವೃದ್ಧನೂ ಜ್ಞಾನವೃದ್ಧನೂ ಆದ ಜನಾಬ್ ಸಯ್ಯದ್ ಗಫೂರೇ ಇದರ ಸ್ಮೃತಿಕಾರ-ಶ್ರುತಿಕಾರ. ಅವನು ಹೇಳಿದ ಕಥೆಯನ್ನು ನಂಬುವುದಾದರೆ (ನಂಬದೆ ಇರಲು ಕಾರಣವಿಲ್ಲ; ಏಕೆಂದರೆ ಸಯ್ಯದ್ ಗಫೂರ್ ತಪ್ಪದೆ ಮಸೀದಿಗೆ ಹೋಗುತ್ತಾನೆ; ದಿನಕ್ಕೆ ಐದು ಕ್ಲಪ್ತವಾದ ವೇಳೆಗಳಲ್ಲಿ, ಎಲ್ಲೇ ಇರಲಿ—ಮಕ್ಕಾ ಕಡೆ ಮುಖ ಮಾಡಿ, ನೆಲದ ಮೇಲೆ ಮಂಡಿಯೂರಿ ನಮಾಜ್ ಮಾಡುತ್ತಾನೆ. ನಾನು ಬಲ್ಲೆ) ಈ ವಾಹನದ ತೌರುಮನೆ—ವಾಗ್ದೇವಿಯ ತೌರುಮನೆಯಾಗಿದ್ದ ದೂರದ ಕಾಶ್ಮೀರದೇಶ. ಆದಿಶಂಕರಾಚಾರ್ಯರ ದಿಗ್ವಿಜಯದ ಫಲವಾಗಿ ಸೋತ ವಾಗ್ದೇವಿ, ಆಚಾರ್ಯರ ಇಷ್ಟದಂತೆ ಅವರನ್ನು ಹಿಂಬಾಲಿಸಿ ದಕ್ಷಿಣಕ್ಕೆ ಬಂದು ಶೃಂಗೇರೀ ಕ್ಷೇತ್ರದಲ್ಲಿ ನೆಲೆಸಿದಳೆಂದು ಐತಿಹ್ಯವಿದೆ. ನಮ್ಮ ನಾಡಿಗೆ ಷಾಃಪಸಂದ್ ಆಗಮನವೂ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ಆಯಿತೆಂದು ಗಫೂರ್ ಸ್ಮೃತಿಯಿಂದ ಶ್ರುತಪಡುತ್ತದೆ. ಆಗ—ಇಪ್ಪತ್ತೈದು-ಮೂವತ್ತು ವರ್ಷಗಳ ಹಿಂದೆ, ಮೈಸೂರು ಅರಮನೆಯ ಅಧಿಕಾರಿಗಳ ವರ್ಗದಲ್ಲಿ ಷಾ—ಎಂಬ ಮಹನೀಯರು ಉನ್ನತಸ್ಥಾನದಲ್ಲಿದ್ದರಂತೆ; ಅವರು ತಮ್ಮ ಮೊಟ್ಟಮೊದಲ ಕಾಶ್ಮೀರ ಪ್ರವಾಸದಲ್ಲೇ ಈ ವಾಹನ ವಿಚಿತ್ರವನ್ನು ಕಂಡು—ಕಡು ಸಂತೋಷಗೊಂಡು—ಮುದವಾಂತು—ಮನಸೋತು (ಇಲ್ಲಿ ವಿಜಯ ಷಾಃಪಸಂದಿಗೆ—ಎನ್ನುವುದು ಗಮನಾರ್ಹ) "ಆಹಾ! ಇದಿಲ್ಲದ ಮೈಸೂರಿನ ಮಾದರಿತನ ಅಪೂರ್ಣ!" ಎಂದರಂತೆ. ಕೂಡಲೆ ಇದರ ಒಂದು ಮಾದರಿಯನ್ನು ಮೈಸೂರಿಗೆ ತಂದರಂತೆ. ಷಾ—ಮಹಾಶಯರು, ತಮ್ಮ "ದಿಲ್"ಗೆ ಅಷ್ಟು ಪಸಂದಾದ ರಥದಲ್ಲಿ ಆರೂಢರಾಗಿಯೇ ಕಾಶ್ಮೀರದಿಂದ ಮೈಸೂರಿಗೆ ಬಿಜಯಂಗೈಸಿದರೋ, ಅಥವಾ ಅದರ ರವಾನೆಗೆ ರೈಲಿನ ಏರ್ಪಾಟು ಮಾಡಿದ್ದರೋ ಎನ್ನುವುದು ಇನ್ನೂ ಪ್ರಾಕ್ತನ ಸಂಶೋಧನೆಯಿಂದ ಇತ್ಯರ್ಥವಾಗಬೇಕಾಗಿದೆ. ಏನೇ ಆಗಲಿ, ಕಾಶ್ಮೀರದಲ್ಲಿ ಷಾ—ರವರ ಮನಸ್ಸು ಈ ವಾಹನಕ್ಕೆ ಮಾರುವೋಗಲಾಗಿ, ಮೈಸೂರಲ್ಲಿ ಅದು ಚಾಲ್ತಿಗೆ ಬಂದು ಮೆರೆಯುವಂತಾಯಿತು. ಇದಿಷ್ಟು ಸಂಕ್ಷೇಪವಾಗಿ ಗಫೂರೋವಾಚ. ಇದನ್ನು ಈ ನಗರದಲ್ಲಿ ಉಪಯೋಗಕ್ಕೆ ತಂದ ಮೊದಲನೆಯ ದಿನದ ಉದ್ಘಾಟನೋತ್ಸವದ ಕೋಲಾಹಲವನ್ನು, ಅಭಿನವಬಾಣ ಸಯ್ಯದ್ ಗಫೂರ್ ತನ್ನದೇ ಆದ ಅನುಪಮ—ಅನನುಕರಣೀಯ ಶೈಲಿಯಲ್ಲಿ ಬಹು ರಸವತ್ತಾಗಿ ವರ್ಣಿಸಿದ. ಮೂವತ್ತು ವರ್ಷಗಳ ಹಿಂದೆಯೇ ಅವನ ವರ್ಣನೆಯಲ್ಲಿ ನವ್ಯತೆ ನಳನಳಿಸುತ್ತಿತ್ತು! ಪ್ರಗತಿಶೀಲತೆ ಪ್ರಜ್ವಲಿಸುತ್ತಿತ್ತು! ಅವನು ಹೇಳಿದ ವಿಷಯಗಳಿಗೆಲ್ಲ, ಪ್ರತ್ಯಕ್ಷದರ್ಶಿಯಾಗಿದ್ದ ಅವನ ಸ್ವಂತ ಅನುಭವವೇ

ಬುನಾದಿಯಾಗಿದ್ದುದರಿಂದ, "ಕೈಶ್ಯಾಮಿಗೆ" ತಂತ್ರವನ್ನು ಬಳಸಿಕೊಂಡು, ಕಾವ್ಯ ಮಟ್ಟದ ಕಾವಿನಲ್ಲಿ ಕಾದಂಬರೀ ಕಥನದ ಭಟ್ಟಿ ತಯಾರಿಸಿದರೂ ಕೇಳಲು ಬಲು ಸ್ವಾರಸ್ಯವಾಗಿತ್ತು. ಗಫೂರ್ ಹೇಳಿದ ಕಥೆಯಿಂದ ಈ ವಿಷಯವಾಗಿ ನನ್ನ ಕುತೂಹಲ ಅಸಾಧ್ಯವಾಗಿ ಕೆರಳಿತು. ಇದರ ಇತಿಹಾಸವನ್ನು ಪೂರ್ತಿ ತಿಳಿದು ಕೊಳ್ಳುವುದಕ್ಕೋಸ್ಕರ, ಮುಂದೆ ಕೆಲವು ದಿನಗಳಲ್ಲೇ, ಪುರಸಭಾ ಕಚೇರಿಯ ಕಡತ ಗಳ ತಪ್ಪಲಲ್ಲಿ ಪ್ರಾಕ್ತನ ಸಂಶೋಧನೆ ನಡೆಸಿದೆ. ಪುರಸಭೆಯ ವಿಶೇಷಾಧಿವೇಶನದಲ್ಲಿ ಇದರ ಸಂಬಂಧವಾಗಿ ಬಹು ನಾಟಕೀಯವಾಗಿ ನಡೆದ ಚರ್ಚೆ—ಗೊಂದಲ—ಕೋಲಾ ಹಲ—ಇತ್ಯಾದಿಗಳ ಪದಶಃ ವರದಿಯ ಮೂಲದಾಖಲೆಗಳ ಕಟ್ಟಿಗೆ ಕಟ್ಟೇ ನನ್ನ ಕೈಗೆ ಸಿಕ್ಕಿತು. ಅವುಗಳನ್ನೆಲ್ಲ ಯಥಾವತ್ತಾಗಿ ನಕಲು (ಲಿ?) ಮಾಡಿ ನನ್ನ ಬಳಿಯೇ ಇಟ್ಟು ಕೊಂಡಿದ್ದೇನೆ. ಈ ವರದಿ—ಎಂಬ ಅನ್ನಕ್ಕೆ ಗಫೂರನ ವರ್ಣನೆ—ಎಂಬ ಮಸಾಲೆ ಒಗ್ಗರಣೆ ಬೆರಸಿ ತಯಾರಿಸಿದ ಪಲಾವನ್ನು, ಪುರಸತ್ತಾದಾಗ ಬಡಿಸುತ್ತೇನೆ—ಇರಲಿ.

ಯಾವುದಾದರೂ ಎರಡು ಪಾತ್ರಗಳನ್ನೋ ಪದಾರ್ಥಗಳನ್ನೋ ವಿಷಯ ಗಳನ್ನೋ "ಹೋಲಿಸಿ—ವ್ಯತ್ಯಾಸವನ್ನು ವಿವರಿಸಿ" ಎನ್ನುವುದು ಶಾಲೆ, ಕಾಲೇಜುಗಳ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಸಾಮಾನ್ಯವಾಗಿ ಸೇರಿಸಲ್ಪಡುವ ಒಂದು ಪ್ರಶ್ನೆ—ಅಲ್ಲ, ಅಲ್ಲ, ಹುಕುಂ. ಅದರಂತೆಯೇ ಇಲ್ಲಿ, ಷಾಃಪಸಂದಿನಲ್ಲಿ ಮುಂದುವರಿಯುವುದಕ್ಕೆ ಪೂರ್ವಭಾವಿಯಾಗಿ, ಅದನ್ನು ಅದರ ರಕ್ತಸೋದರ ಜಟಕಾದೊಡನೆ ಹೋಲಿಸಿ, ಕಂಡು ಬರುವ ಸಾಮ್ಯ—ವ್ಯತ್ಯಾಸಗಳನ್ನು ಗ್ರಹಿಸುವುದು ಅವಶ್ಯಕ, ಅತ್ಯಾವಶ್ಯಕ! ಏಕೆಂದರೆ, ಷಾಃಪಸಂದಿನಲ್ಲಿ ನೀವು ಮುಂದುವರಿಯುವುದೂ ಬಿಡುವುದೂ ಈ ಗ್ರಹಿಕೆಯನ್ನು ಪೂರ್ಣವಾಗಿ ಅವಲಂಬಿಸಿದೆ.

ಗೋಡಾವನ್ನು ಗಾಡಿಗೆ ಹೂಡಿರುವಾಗ, ಸ್ವಲ್ಪದೂರ—ಪಕ್ಕದಲ್ಲಿ (ಕೆಲವು ವೇಳೆ ಪಕ್ಕನೋಟವೇ ಚೆನ್ನು, ಅಲ್ಲವೇ?) ನಿಂತುನೋಡಿದರೆ, ಷಾಃಪಸಂದಿನ ಸೌಂದರ್ಯ ಎದ್ದುಕಾಣುತ್ತದೆ; ಅದರ ಇಡೀ ಚಿತ್ರ ಬಲು ಚೆನ್ನಾಗಿ ಮಾಟವಾಗಿ ತೋರುತ್ತದೆ. ಇದೇ ನಿಲುವಿನ ನೋಟಕ್ಕೆ ಜಟಕ ನೀರಸ! ಏನೋ ಒಂದು ಪೆಟ್ಟಿಗೆಯನ್ನು ಎರಡು ಚಕ್ರಗಳ ಮಧ್ಯೆ ಅಚ್ಚಿನ ಮೇಲೆ ಜೋಡಿಸಿದ ಹಾಗೆ ಕಾಣುತ್ತದೆ. ಮೇಧಾವಿಯಾದ ಚಿತ್ರಶಿಲ್ಪಿಯ ಕಣ್ಣಿಗೆ ಷಾಃಪಸಂದ್ ರಥದ ಆಕೃತಿಯ ರೇಖೆಗಳ ವೈವಿಧ್ಯ ಜಟಕಾ ಗಾಡಿಯ ರೇಖೆಗಳಿಗಿಂತ ಹೆಚ್ಚು ಆಕರ್ಷಣೀಯ—ಇದರಲ್ಲಿ ಸಂಶಯವಿಲ್ಲ. ಜಟಕಾ ಗಾಡಿಯ ರಚನೆಯಲ್ಲಿ ಕಣ್ಣಿಗೆ ಬೇಸರವನ್ನುಂಟುಮಾಡುವ ನೇರವಾದ ರೇಖೆಗಳೇ ಹೆಚ್ಚಾಗಿ ಎದ್ದುಕಾಣುತ್ತವೆ. ನಯನಮನೋಹರವಾಗಿ ಬಳುಕುವ ಸಮರಸ ಸುಂದರ ವಕ್ರರೇಖೆಗಳ ಸಮುಚ್ಚಯ—ಎಂದರೆ, ನಮ್ಮ ಷಾಃಪಸಂದ್!

ಷಾಃಪಸಂದಿನ "ಟಾಪು" ಜಟಕಾದ "ಟಾಪಿ"ಗಿಂತ ಚಿಕ್ಕದು—ಹಗುರ. ಆದ್ದರಿಂದ ಈ ಗಾಡಿಯಲ್ಲಿ, ಆರೋಗ್ಯಕರವಾದ "ಸೂರ್ಯಸ್ನಾನ", ತಂಪಾದ "ವರ್ಷಸ್ನಾನ", ಹಿತವಾದ "ವಾಯುಸೇವನೆ"—ಮೊದಲಾದುವುಗಳಿಗೆ ಜಟಕಾಕ್ಕಿಂತ ಅವಕಾಶ ಹೆಚ್ಚು. ಅಲ್ಲದೆ ಇದರ ಟಾಪಿಗೂ ಒಡಲಿಗೂ ಅಂತಹ ಬಲವತ್ತರವಾದ ಬಾಂಧವ್ಯವೇನೂ ಇಲ್ಲ; ಕರಾರು ಪತ್ರದ "ಕೂಡಿಕೆ" ಮದುವೆಯಂತೆ ಸುಲಭವಾಗಿ ಕಳಚಿ ವಿಚ್ಛೇದನವಾಗುವ ಸೌಕರ್ಯವಿದೆ. ಟಾಪು ತೆಗೆದಾಗ ಈ ಶಕಟವು ಪೂರ್ವಕಾಲದ ರೋಮನ್ ವೀರರ ರಣರಥಗಳನ್ನು ಬಹುಮಟ್ಟಿಗೆ ಹೋಲುತ್ತದೆ. ಜೊತೆಗೆ, ಧರ್ಮ ಕರ್ಮ ಸಂಯೋಗದಿಂದ ಇದಕ್ಕೆ ಹೆಗಲು ಕೊಟ್ಟ ಕುದುರೆಯೂ ಲಕ್ಷಣವಾಗಿ ಮೈತುಂಬಿಕೊಂಡಿದ್ದು, (ಇದು ಸ್ವಲ್ಪ ಅಪರೂಪ ಪ್ರಸಂಗವೆಂದೇ ಹೇಳಬೇಕು—ಇರಲಿ) ಅದರ ಕಲಾಪ್ರಿಯ ಸಾರಥಿ ಖಲಂದರೋ ಸುಲೇಮಾನೋ ತನ್ನ ಬಿರಿಯಾನೀ ದಾತದ ಕೊರಳಿಗೆ, ಕರೀಬಾಮಣಿ ಮಾಲೆ—ಕವಡೆಸರ—ಗೆಜ್ಜೆಗೊಂಚಲು ಮುಂತಾದುವುಗಳನ್ನು ಕಟ್ಟಿ, ಅದರ ಕಿವಿಗಳ ಮಧ್ಯೆ, ನೆತ್ತಿಯ ಮೇಲೆ, ಕೋಳೀ ಪುಕ್ಕಗಳ ಪಂಚರಂಗಿನ ತುರಾಯಿಯನ್ನು ಸಿಕ್ಕಿಸಿದ್ದರೆ ಎಂತಹ ಕಲಿವಿರಾಟರಾಯನ ವೀರಪುತ್ರನಿಗೂ ಸುರುಸುರುಬತ್ತಿ, ಬೆಳ್ಳುಳ್ಳಿಪಟಾಸು, ದೀಪಾವಳಿ ಪಿಸ್ತೂಲು—ಗಳನ್ನು ಹಿಡಿದು, ರಥಾರೋಹಣಮಾಡಿ "ಹಕಾಲೋ!"—ಎಂದು ಹುಕುಂ ಕೊಟ್ಟು, ಕಡೇ ಪಕ್ಷ, ಪುರಸಭೆಯವರ ಔದಾರ್ಯ ಆಶೀರ್ವಾದಗಳಿಂದ ನಗರದ ಬೀದಿಬೀದಿಗಳಲ್ಲಿ ಸ್ವೇಚ್ಛೆಯಾಗಿ ವಿಹರಿಸುವ ಮಹಿಷ—ಗಾರ್ಧಭಗೋಗ್ರಹಣ ಮಾಡೋಣವೆನ್ನಿಸೀತು! ಗ್ರಾಮಸಿಂಹ, ಗೃಹಶಾರ್ದೂಲಾದಿ ದುಷ್ಟಮೃಗಗಳನ್ನು ಬೇಟೆಯಾಡಲೂ ಇದರಲ್ಲಿ ಅವಕಾಶವಿರುತ್ತದೆ.

ಜಟಕಾದ ಟಾಪು ಗಾಡಿ ಉದ್ದಕ್ಕೂ ಮುಸುಕಿ, ಸುರಂಗದಂತೆ ಇರುತ್ತದೆ. ಆದ್ದರಿಂದ ಇದರಲ್ಲಿ, ಹಿಂದೆ, ತುದಿಯಲ್ಲಿ ಕುಳಿತಿರುವವರ ಹೊರತು, ಅಂತರಾಳದಲ್ಲಿ ಕುಳಿತವರ ದರ್ಶನಲಾಭ ದುರ್ಲಭ! ಗಾಡಿಯತ ಕುಳಿತವರೆಲ್ಲ ಬರೀ ಗಂಡಸರೇ ಆಗಿದ್ದರೆ ನಷ್ಟವಿಲ್ಲ. ಯಾರಿಗೆ?—ಎಂದು ಕೇಳುವಿರೇನೋ. ಕಣ್ಣಿನ ಸ್ವೇಚ್ಛಾಚಾರದಲ್ಲಿ ತಲ್ಲೀನರಾಗಿ ನಡೆಯುವ ನವನಾಗರಿಕ ಪಾದಚಾರೀವೃಂದಕ್ಕೆ; ಅದರಲ್ಲೂ, ಎದುರು ದಿಕ್ಕಿನಿಂದ ಬಂದು ತಮ್ಮನ್ನು ಹಾಯ್ದು ಹೋಗುವ ಗಾಡಿಗಳನ್ನು, ತಿರುತಿರುಗಿ ನೋಡಿ ನಿಡುಸುಯ್ವ ಸಹಸ್ರಾಕ್ಷರ ಗಣನೆಯಲ್ಲಿ—ನಷ್ಟವಿಲ್ಲ. ಕುತೂಹಲದಿಂದಲೇ—ಅದನ್ನು ತೃಪ್ತಿಪಡಿಸಿಕೊಳ್ಳುವ ಲವಲವಿಕೆಯಿಂದಲೇ ಮಾನವನ ಪ್ರಗತಿ ಸಾಗಿದೆ—ಎಂದು ಶಾಸ್ತ್ರಜ್ಞರು ಸಾರುತ್ತಲೇ ಬಂದಿದ್ದಾರಷ್ಟೆ. ಈ ದೃಷ್ಟಿಯಿಂದ, ನಮ್ಮ ನಾಗರಿಕರಲ್ಲಿ ಪುರುಷ (ಗ್ರಾಮ?) ಸಿಂಹವರ್ಗಕ್ಕೆ ಸೇರಿದ ಕೆಲವು ಸುಸಂಸ್ಕೃತರು ಬಹು ಪ್ರಗತಿ

ಶೀಲರೆಂದೇ ಹೇಳಬೇಕು. ಈ ಮಾನವ "ಮಾದರಿ"ಗಳಿಗೆ ಶಿಷ್ಟಾಚಾರ, ಮಾನ-ಮರ್ಯಾದೆ ಇವುಗಳೆಲ್ಲ ಹಳೇಕಾಲದ ಹಳಸಿದ ಕಂದಾಚಾರಗಳು ; ಚಲಾವಣೆಯಲ್ಲಿಲ್ಲದ ಸವೆಕಲು ನಾಣ್ಯಗಳು. ಕೇವಲ ಗೌಣ ! ಪ್ರಗತಿಗೆ ಪ್ರತಿಬಂಧಕಗಳು ! ! "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಅಲ್ಲವೇ ? ಆದ್ದರಿಂದ ಈ ನವೀನರಿಗೆ ನಯನೇಂದ್ರಿಯದಿಂದ "ಸರ್ವೆ" ಮಾಡಿ ಪಡೆದ ಜ್ಞಾನವೇ ಪ್ರಧಾನ !—ಇಹ-ಪರಸಾಧಕ ! ! ಪ್ರಗತಿ ದಾಯಕ ! ! ! ಕಣ್ಣೆಲ್ಲ ಬಾಯಿಮಾಡಿಕೊಂಡ ಈ ಪುರುಷರತ್ನರು, ರಸ್ತೆಯಲ್ಲಿ ಪಾದ ಚಾರಿಗಳಾಗಿಯೋ—ಸೈಕಲ್ ಸವಾರರಾಗಿಯೋ ಹೋಗುತ್ತಿರುವಾಗ, ಎದುರು ದಿಕ್ಕಿನಿಂದ ಬಂದು ಹಾದುಹೋಗುವ ಗಾಡಿಗಳನ್ನು, ಕತ್ತು ಉಳುಕುವುದನ್ನೂ ಲಕ್ಷಿಸದೆ ತಿರುಗಿ ತಿರುಗಿ ನೋಡುತ್ತಾರೆ. ಎದುರಾಗಿ ಬರುತ್ತಿರುವ ಇತರ ಪಾದಚಾರಿ ಗಳಿಗೋ ಕತ್ತೆ, ಎಮ್ಮೆ, ಹಸುಗಳಿಗೋ ಕಡೆಗೆ—ತಮ್ಮ ಸ್ವಟಕ್ಕೆ ತಾವು ಒಂದು ಬದಿ ಯಲ್ಲಿ ನಿಂತು ಸೇವೆಗೈಯುತ್ತಿರುವ ದೀಪದ ಕಂಭಗಳಿಗೋ—ಢಿಕ್ಕಿಹೊಡೆಯುವು ದನ್ನೂ ಲಕ್ಷಿಸದೆ, ತಮ್ಮ ತಲೆಯನ್ನು ಮಾತ್ರ "ರೈಟ್ ಎಬೌಟ್ಟರ್ನ್" ಮಾಡು ವುದು ಈ ಸದ್ಗೃಹಸ್ಥರ ವಾಡಿಕೆ. ಇಂತಹ ರಸಿಕಶಿಖಾಮಣಿಗಳಿಗೆ "ಮಿಕ್ಸೆಡ್ ಪ್ಯಾಸೆಂಜರು"ಗಳು ಇದ್ದ ಸುಸಮಯಗಳಲ್ಲಿ—ಷಾಃಪಸಂದ್ ನೀಡುವ ಸವಿಯಾದ ಆಸ್ವದವನ್ನು ಜಟಕ ನೀಡಲಾರದು. ದೈವಕೃತಕಾರಣಗಳಿಂದ ತಮ್ಮ ಮುಖಾರ ವಿಂದವನ್ನು ಪ್ರದರ್ಶನಮಾಡಲು ಇಷ್ಟಪಡದ ನಿರ್ಭಾಗ್ಯ ನಾರೀವರ್ಗಕ್ಕೂ, ಸೌಂದರ್ಯವತಿಯರಾದರೂ, ಲಜ್ಜೆ ಶೀಲಗಳನ್ನು ಕೈಬಿಡದೆ, ಬೀದಿಯ ನಯನಜಾರರ ನಂಜುನೋಟಕ್ಕೆ ಬಾಡಿ ಮುದುಡಿಕೊಳ್ಳುವ ಭೀರುಮಾನಿನೀವೃಂದಕ್ಕೂ ಜಟಕ ವೇನೋ ಬಹಳ ಅನುಕೂಲ. ಏಕೆಂದರೆ ಎಕ್ಸ್-ರೇಗೂ ಅಭೇದ್ಯವಾದ ರೀತಿಯಲ್ಲಿ ಇದರ ಅಂತರಾಳವನ್ನು ಬಹು ಸುಲಭವಾಗಿ ಬಾಹ್ಯಪ್ರಪಂಚದಿಂದ ಪ್ರತ್ಯೇಕಿಸ ಬಹುದು. ಈ ಗಾಡಿಯ ಟಾಪಿನ ಹಿಂದು-ಮುಂದಿನ ದ್ವಾರಗಳಿಗೆ ಅಡ್ಡಲಾಗಿ, ಎರಡು ತುಂಡು ಕೃತಯುಗದ ಬೆಡ್‌ಶೀಟುಗಳನ್ನೋ ಗೋಣೀತಾಟುಗಳನ್ನೋ ಸಿಕ್ಕಿಸಿದರೆ ಆಯಿತು ; ಒಳಗೆ ಕುಳಿತಿರುವವರಿಗೆ "ದೃಷ್ಟಿ" ಯಾಗುವ ಅಥವಾ ತಾಗುವ ಸಂಭವವಿಲ್ಲ. ಸುಂದರಿಯರೂ ಮಾನವತಿಯರೂ ಆದ ನಮ್ಮ ಹೆಣ್ಣು ಮಕ್ಕಳ ಮಾನಸಂರಕ್ಷಣಾರ್ಥವಾಗಿಯೇ ಜಟಕ ನಿರ್ಮಾಣವಾಯಿತೋ ಏನೋ ? ಆದರೆ ಈಗ ಕಾಲ ಬದಲಾಯಿಸುತ್ತಿದೆ ; ಬದಲಾಯಿಸುತ್ತಿದೆ—ಏನು ! ಕಾಲಪುರುಷ ತಲೆಯ ಮೇಲೆ ನಿಂತು ಸರ್ಕಸ್ ಮಾಡುತ್ತಿದ್ದಾನೆ. ಕಲಿಯುಗವನ್ನು ಹಿಂದಕ್ಕೆ ಒದ್ದು ಖಳಯುಗದಲ್ಲಿ ಪದಾರ್ಪಣಮಾಡಿದ್ದೇವೆ. ಗಂಡಸಿಗಿಲ್ಲದ ಮಾನಮರ್ಯಾದೆಗಳ ಶೃಂಖಲೆ—ಒತ್ತಾಯ ಹೆಂಗಸಿಗೇಕೆ ?—ಎಂದು, ಕಟಿಪ್ರದೇಶದ ಮೇಲೆ ಎರಡೂ

ಕೈಯಿಟ್ಟು—ಭ್ರೂಯುಗ್ಮವನ್ನೆತ್ತಿ—ಪ್ರಶ್ನಿಸುತ್ತಿದ್ದಾರೆ—ನಮ್ಮ ಪ್ರೌಢ—ಪ್ರಮದ—ಪ್ರಮೀಳೆಯರು ದೇಶಾದ್ಯಂತ, ಮಹಾ ನಗರಗಳಿಂದ, ಹಳ್ಳಿಕೊಂಪೆಗಳಿಂದ, ದೊಡ್ಡ—ಅಡ್ಡ—ಬೀದಿಗಳಿಂದ, ಓಣಿ-ಗಲ್ಲಿಗಳಿಂದ, ಗುಡಿಸಲುಗಳಿಂದ, ಉಪ್ಪರಿಗೆಯ ಸೌಧಗಳಿಂದ "ಹೆಂಗಸು ಗಂಡಸಿಗೆ ಸಮಾನಳು!"—ಎಂಬ ದಿಟ್ಟತನದ ಧೋರಣೆಯ ಘೋಷಘರ್ಜನೆ ಕೇಳಿಬರುತ್ತಿದೆ. ಆದ್ದರಿಂದ, ಈಗ, ಜಟಕಾಗಾಡಿಯ ಸಂರಕ್ಷಣೆಯನ್ನು ಬಯಸುವ, ತುಕ್ಕು ಹಿಡಿದ ಶಿಷ್ಟಾಚಾರದ ಮಾನಿನಿಯರ ಸಂಖ್ಯೆ ಕಡಿಮೆಯಾಗಿದೆ. ನಮ್ಮ ನಗರದಲ್ಲಿ ಸಾರ್ವಜನಿಕ ವಾಹನವಾಗಿ ಜಟಕ ರದ್ದಾಗಿರುವುದಕ್ಕೆ ಬಹುಶಃ ಇದೇ ಕಾರಣವಿರಬಹುದು. ಏನೇ ಆಗಲಿ, "ಊಟ ತನಗೆ—ನೋಟ ಪರರಿಗೆ" ಎಂಬ ಸೂತ್ರಾನುವರ್ತಿಗಳಾಗಿ, ತಮ್ಮ ರೂಪ ಉಡಿಗೆ-ತೊಡಿಗೆ ಇತ್ಯಾದಿ ದೈಹಿಕ-ಐಹಿಕ ಸೌಭಾಗ್ಯಗಳನ್ನು ಲೋಕಕ್ಕೆ ಪ್ರದರ್ಶನಮಾಡಲು ಆತುರರೂ ಕಾತರರೂ ಆಗಿರುವ ಧಾರಾಳಬುದ್ಧಿಯ ಹರೆಯದ ಪ್ರಮದೆಯರಿಗೆ, ಷಾಃಪಸಂದೇ—ಮುದ್ದಣನ ಮನೋರಮೆ ಎಂದಂತೆ—"ಬಲ್ಗೊಸಗು! ಬಲ್ಗೊಸಗು!!"

ಷಾಃಪಸಂದಿನಲ್ಲಿ ಜಟಕಾದಲ್ಲಿರುವಂತೆ "ಓವರ್‌ಲೋಡ್"ಗೆ ಅವಕಾಶವಿಲ್ಲ. ಈ ದೃಷ್ಟಿಯಿಂದ, ಪೋಲೀಸ್ ಇಲಾಖೆಯ ಮೇಲ್ಮಟ್ಟದ ಅಧಿಕಾರಿಗಳಿಗೆ, ಷಾಃಪಸಂದ್ ಜಟಕಾಕ್ಕಿಂತ ಮೇಲಾಗಿ ಕಂಡರೂ, ಓವರ್‌ಲೋಡು ಮಾಡುತ್ತಿದ್ದ ಜಟಕಾವಾಲಾಗಳನ್ನು ತಡೆದು ನಿಲ್ಲಿಸಿ, ನೋಟುಬುಕ್ಕು ಪೆನ್ಸಿಲ್ಲುಗಳನ್ನು ತೆಗೆದು—ಮೀಸೆ ಕುಣಿಸುತ್ತ, ಹುಬ್ಬುಗಂಟಿಕ್ಕಿ—"ನಾಷ್ತಾ" ಖರ್ಚು ಗಿಟ್ಟಿಸುತ್ತಿದ್ದ ನಮ್ಮ ಕರ್ತವ್ಯನಿಷ್ಠ, ಕಡೇ ದರ್ಜೆಯ ಕಾನಸ್ಟೇಬಲ್ ಕುಪ್ಪಣ್ಣನಿಗೆ, ಷಾಃಪಸಂದ್ ಅಷ್ಟೇನೂ ಪಸಂದಾಗಿ ಕಾಣುವುದಿಲ್ಲ.

ಜಟಕಾದಲ್ಲಿ "ರೂಲೀಸ್ ಪರಕ್ಕಾರ" (ಚಾಟೀಧರನನ್ನು ಬಿಟ್ಟು) ಕೂಡ್ರಬಹುದಾದ ನಾಲ್ಕುಮಂದಿಯಲ್ಲಿ, ಹಿಂದೆ ಕುಳಿತುಕೊಳ್ಳುವ ಒಂದು "ಆದ್ಮಿ"ಯ ಅದೃಷ್ಟ ಒಳ್ಳೆಯದಾಗಿರುತ್ತದೆ. ಕಾರಣ—ಈ ವ್ಯಕ್ತಿ, ಗಂಡಸಾಗಿದ್ದರೆ—ಕುದುರೆಯ ನಿತಂಬದ ಕಡೆ ಬೆನ್ನುಮಾಡಿ, ಹೊರಕ್ಕೆ ಕಾಲುಗಳನ್ನು ಇಳೀಬಿಟ್ಟುಕೊಂಡು ಕುಳಿತುಕೊಳ್ಳಬಹುದು. ಉಳಿದ—ಒಳಗೆ ಕುಳಿತುಕೊಳ್ಳುವ ಮೂರು ಮಂದಿಗೆ, ಅವರು ಹೆಂಗಸರಾಗಿರಲಿ, ಗಂಡಸರಾಗಿರಲಿ, ನಪುಂಸಕರೇ ಆಗಿರಲಿ!—ಕುಕ್ಕುಟಾಸನಯೋಗ ತಪ್ಪಿದ್ದಲ್ಲ! ಶಕಟದ್ವಾರದಿಂದ ಭೂಪತನವಾಗುವ ವರೆಗೆ, "ಪುನರಪಿ ಜನನೀ ಜಠರೇ ವಾಸೇ" ಪ್ರಾಪ್ತಿಯಾದ ಹಾಗೇ ಇರುತ್ತದೆ. ಆಸ್ಪತ್ರೆಗಳಲ್ಲಿ ಡಾಕ್ಟರ ಮುಂದೆ ರೋಗಿಗಳು ನಿಂತು (ಅಂದರೆ, ನಿಲ್ಲುವುದಕ್ಕೆ ಸಾಧ್ಯವಾದರೆ!) ಹರಳೆಣ್ಣೆ ಪ್ರಾಶಿತ ಮುಖಮುದ್ರೆಯಿಂದ "ಅಯ್ಯೋ, ಡಾಕ್ಟರೇ!—ಬೆನ್ನುಮೂಳೆ ಇರಿತ, ಮೊಳಕಾಲು

ತಿವಿತ, ಬುರುಡೆ ಚಿಪ್ಪು ಒಡೆತ, ಮೈಯೆಲ್ಲ ಸಿಡಿತ"—ಎಂದು ರೋಗಮಾಲಿಕೆ ಹಾಡಿದಾಗ, ಡಾಕ್ಟರು ಕೂಡಲೆ "ಜಟಕಾದಲ್ಲಿ ಹೆಚ್ಚಾಗಿ ತಿರುಗಾಡುತ್ತೀರೋ ?" ಎಂದು ಕೇಳುತ್ತಿದ್ದರು. ನೂರಕ್ಕೆ ತೊಂಭತ್ತೊಂಭತ್ತು ಸಲ ಉತ್ತರ "ಹೌದೂ ಸ್ವಾಮೀ—ಹೌದೂ" ಎಂದಿರುತ್ತಿತ್ತು. ಡಾಕ್ಟರು "ನೋಡಿ, ಇನ್ಮೇಲೆ ಜನ್ಮೇಪಿ ಜಟಕಾ ಸವಾರಿ ಕೂಡದು ; ಇಲ್ಲದೆ, ಇದ್ದರೆ ನಿಮಗೆ ಬಂಬೂಸವಾರಿ ಶೀಘ್ರದಲ್ಲೇ ಸಿದ್ಧ !" ಎಂಬ ಎಚ್ಚರಿಕೆಯ "ಪ್ರಿಸ್ಕ್ರಿಪ್‌ಷನ್" ಕೊಡುತ್ತಿದ್ದರು. ಈ ರೋಗಾವಳಿಗೆ "ಜಟಕೈಟಿಸ್" ಎಂಬ ಹೊಸ ವೈದ್ಯಕೀ ಹೆಸರೇ ನಿರ್ಮಿತವಾಯಿತು. ವೈದ್ಯಕೀ ದೃಷ್ಟಿಕೋಣದಿಂದ ಜಾತಕಫಲ ಹೇಳುವುದಾದರೆ, ಷಾಃಪಸಂದಿನಲ್ಲಿ ಕುಳಿತುಕೊಳ್ಳುವವರ ಅಸ್ಥಿಪಂಜರ, ಜಖಂ ಆಗದೆ ಬಹುಕಾಲ ಬಾಳಿಕೆಯಲ್ಲಿರುತ್ತ—ತನ್ನ ಒಳಗೆ ಡವಡವಿಸುತ್ತಿರುವ ಪ್ರಾಣಪಕ್ಷಿಯನ್ನು ಕೋಣವಾಹನನ ಅಕಾಲದೃಷ್ಟಿಗೆ ಬೀಳದಂತೆ ಕಾಪಾಡುತ್ತದೆ. ಇದು ದೇವರು ದಯಪಾಲಿಸಿದ—ಅನ್ನಮಯ, ಪ್ರಾಣಮಯ ಕೋಶಗಳ ಮಾತಾಯಿತು. ಇದನ್ನು ಆವರಿಸುವ—ದರ್ಜಿದತ್ತ—ಹತ್ತಿ, ಉಣ್ಣೆ, ರೇಷ್ಮೆ ಇತ್ಯಾದಿ ಮಯಕೋಶಗಳನ್ನು ಗಮನಕ್ಕೆ ತಂದುಕೊಂಡರೆ, ಇಲ್ಲೂ—ಮುಖ್ಯವಾಗಿ "ಸೂಟಾ"ಂಬರ ಧಾರಿಗಳಿಗೆ—ಷಾಃಪಸಂದೇ ಸಂತೋಷದಾಯಕ. ಏಕೆಂದರೆ, ಇದರಲ್ಲಿ ಕುಳಿತರೆ ಅವರ ಕೋಟು ಷರಾಯಿಗಳ ಇಸ್ತ್ರಿಯ ರೇಖಾಭಂಗವಾಗುವುದಿಲ್ಲ. ಜಟಕಾಗಾಡಿ "ಸೂಟುವೇಷ್ಟಿತ" "ಸಿಸ್ತುಗಾರ ಪುಟಶಾಮಿ"ಗಳಿಗೆ—ದೊಡ್ಡ ಪೀಕಲಾಟ ! ಅಸಹ್ಯ !! ಒಟ್ಟಿನಲ್ಲಿ, ಪ್ರದರ್ಶನ—ಆರೋಗ್ಯ—ಅಸ್ಥಿಪಂಜರದ ಸುರಕ್ಷತೆ—ಪ್ರಾಣಪಕ್ಷಿಯ ಆಯುರ್ದಾಯ—ಇವುಗಳನ್ನೆಲ್ಲ ಅಂಕಗಣಿತದ ರೀತ್ಯಾ ಗುಣಿಸಿ, ಲೆಕ್ಕಾಚಾರಮಾಡಿ, ಪರ-ವಿರೋಧಗಳನ್ನು ಮನೋಚಿಂತಾಲಿನಲ್ಲಿ ತೂಗಿ ನೋಡಿದರೆ, ಷಾಃಪಸಂದೇ ಸೈ !—ಎನ್ನಿಸಿಕೊಳ್ಳುತ್ತದೆ. ಅಂದರೆ, ಅದು ನಿಂತಿರುವಾಗ—ದೂರದ, ಪಕ್ಕದ—ಬಾಹ್ಯನೋಟಕ್ಕೆ ! ಅದು ಓಡುತ್ತಿರುವಾಗ, ಒಳಗೆ ಕುಳಿತವರ ಅಂತರ್ನೋಟಕ್ಕೆ ? ಓ— ! ಆ ಕಥೆ ಅಲಾಯಿದ ! ಸ್ವಲ್ಪ ನಿಧಾನಿಸಿ !

ಕೂಡ್ರುವವರ ಅಂಗರಚನೆಗೂ ಅನ್ವಯಿಸಿ ಹೇಳಬಹುದಾದರೆ, (ಯಾಕಾಗಬಾರದು ?) ಆಸನದ ದೃಷ್ಟಿಯಿಂದ, ಜಟಕಾಗಾಡಿ ನಮ್ಮ ಮಾತೃಭೂಮಿಯ ಮೂರನೇ ತರಗತಿ ರೈಲುಡಬ್ಬಿ ಇದ್ದಹಾಗೆ ; ಷಾಃಪಸಂದ್ "ಇಂಟರ್" ತರಗತಿಯನ್ನು ಬಹುಮಟ್ಟಿಗೆ ಹೋಲುತ್ತದೆ. ರೈಲಿನ ಆ "ತ್ರಿಶಂಕು" ತರಗತಿಯಲ್ಲಿದ್ದಂತೆಯೇ ಇದರಲ್ಲೂ, ನುಣುಪಾದ ಕಲ್ಲು ಚಪ್ಪಡಿಯಂತಹ, ಚರ್ಮಾಚ್ಛಾದಿತ ನಾರಿಕೇಳ ತೂಲಿಕಾತಲ್ಪವಿರುತ್ತದೆ. ಜಟಕಾದಲ್ಲಿ ಮರದ ದಬ್ಬೆಗಳ ಮೇಲೆ ಜನಮೇಜಯರಾಯನ ಕಾಲದ ಗೋಣೀತಾಟು ಹಾಸಿರುತ್ತದೆ. ತಾಟಿಗೂ ದಬ್ಬೆಗಳಿಗೂ ಮಧ್ಯೆ ಹುಲ್ಲು

ಹರಡಿದ್ದರೆ, ಕುಳಿತುಕೊಳ್ಳುವವರ ಆಸನಪುಣ್ಯ! ಇಲ್ಲದೆ ಇದ್ದರೆ, ಜೀವಂತವಾಗಿರುವಾಗಲೇ, ವಂಶತಲ್ಪದ ಮೇಲೆ—ಮಲಗಿರುವುದಲ್ಲ—ಕುಕ್ಕರುಬಡಿದಂತೆ ಭಾಸವಾಗುತ್ತದೆ! ಜಟಕಾಸನದ ಮಟ್ಟ ಭೂಮಾತೆಯಿಂದ ಬಹಳ ಎತ್ತರದಲ್ಲಿರುತ್ತದೆ. ಇದರಿಂದ ಇಳಿಯಬೇಕಾದರೆ ಚಂಗನೆ ನೆಲಕ್ಕೆ ನೆಗೆಯಬೇಕು; ಇದನ್ನು ಏರುವಾಗಲೂ ಸ್ವಲ್ಪ ಪ್ರಯಾಸವೇ; ಇಲಿಯಬಿಲಕ್ಕೆ ಹೆಗ್ಗಣ ನುಗ್ಗುವಾಗ ಇರುವ ಪ್ರಯಾಸ. ಷಾಃಪಸಂದಿನಲ್ಲಿ, ಕುಳಿತುಕೊಳ್ಳುವ ಮಟ್ಟಕ್ಕೂ ಭೂಗೋಳಕ್ಕೂ ಹೆಚ್ಚು ಅಂತರವಿರುವುದಿಲ್ಲ. ಆದ್ದರಿಂದ ಇದರ ಆರೋಹಣ ಸುಲಭ; ಅಲ್ಲದೆ ಈ ಗಾಡಿಯ ಪುರೋಭಾಗಕ್ಕಿಂತ ಪೃಷ್ಠಭಾಗ ತಗ್ಗಾಗಿಯೇ ಇರುವುದರಿಂದ, ಚಲಿಸುವ ಜಾರುಗುಪ್ಪೆಯಂತಿರುವ ಇದರ ನುಣ್ಣನೆಯ ಮೆತ್ತೆಯ ಮೇಲೆ ಹಗುರವಾಗಿ ಜಾರುತ್ತ, ಸುರಕ್ಷಿತವಾಗಿ ಅವರೋಹಣ ಮಾಡಬಹುದು.

ಮನುಷ್ಯರಂತೆಯೇ ವರಸಾಮ್ಯವಿಲ್ಲದ ಜಟಕ, ಷಾಃಪಸಂದ್‌ಗಳೇ ಹೆಚ್ಚು ಅಸ್ನಿ. ಗಾಡಿ-ಗೋಡಾಗಳಲ್ಲಿ ಪುಲ್ಲಿಂಗ ಯಾವುದು ಸ್ತ್ರೀಲಿಂಗ ಯಾವುದು ಎಂದು ನನ್ನನ್ನು ಕೇಳಬೇಡಿ. ಇದು ಆಯಾ ಸಮಯಕ್ಕೆ ನಿಮಗೆ ದೊರೆತ ಗಾಡಿಗೆ "ಷಾದಿ" ಆಗಿರುವ ಚತುಷ್ಪದಿಯ ಪರೀಕ್ಷೆಮಾಡಿ ನೀವೇ ನಿರ್ಣಯಮಾಡತಕ್ಕ (ಲೈಂಗಿಕ) ಪ್ರಶ್ನೆ! ಏನೇ ಇರಲಿ, ಎರಡು ತೆರನ ಗಾಡಿಗಳಲ್ಲೂ, ಪ್ರಯಾಣಿಕರು ಭರ್ತಿಯಾದಾಗ ಹಿಂಭಾರ, ಮುಂಭಾರಗಳ ಹಿಂಸೆಯೂ (ನಿಮಗಲ್ಲ, ಗೋಡಾಕ್ಕೆ!) ಸಾರಥಿಯ "ಘೋಡಾ ಅಗ್ಗೇ ಆವ್—ಜರ್ರ ಪಿಚ್ಚೇ ಜಾವ್" ಪ್ರಾರ್ಥನೆಗಳೂ (ಇದರ ಸುಖ ಪೂರ್ತಿ ನಿಮಗೆ!) ಅನಿವಾರ್ಯ. ಆದರೆ, ಷಾಃಪಸಂದಿನಲ್ಲಿ ಎರಡಂಗುಲ "ಅಗ್ಗ"ಯೋ, ಒಂದಂಗುಲ "ಪಿಚ್ಚೆ"ಯೋ ನಿರಾಯಾಸವಾಗಿ ಜಾರುವುದಕ್ಕೆ ಚಪ್ಪಡಿಯಂಥ ಮೆತ್ತೆಯ ನುಣುಪು ಮೈ ಸಹಾಯವಾಗುತ್ತದೆ. ಜಟಕಾದಲ್ಲಿ ಇದು ಆಯಾಸಕರವಾದ ಸಾಹಸವೇ ಆಗುತ್ತದೆ; ಅದರ ಇಕ್ಕಟ್ಟಿನಲ್ಲಿ ಇಡಿ ಘಟವನ್ನು ಅನಾಮತ್ತು ಎತ್ತಿ ಇಡಬೇಕು; ಹಗುರವಾಗಿ ಹಿಂದಕ್ಕೋ ಮುಂದಕ್ಕೋ ಜಾರುವುದಕ್ಕೆ ನೀವು ಸಿದ್ಧವಿದ್ದರೂ ನಿಮ್ಮ ಆಸನ ಒಪ್ಪುವುದಿಲ್ಲ! ಅಂತು ಒಂದು ಫರ್ಲಾಂಗು ಹೋಗುವುದರೊಳಗಾಗಿ ಹತ್ತು ಸಲ "ಅಗ್ಗೆ", ಅಷ್ಟೇ ಸಲ "ಪಿಚ್ಚೆ", ಆ-ವೋದೂ ಜಾ-ವೋದೂ ಅನಿವಾರ್ಯವಾಗುವಾಗ ಷಾಃಪಸಂದಿನ ಅನುಕೂಲ ಎಷ್ಟು ಎಂದು—ಸಂದರ್ಭ ಒದಗಿದಾಗ—ನಿಮ್ಮ ಆಸನಕ್ಕೇ ವೇದ್ಯವಾಗುತ್ತದೆ.

ಜಟಕಾದ ಚಕ್ರಗಳು, ಗಾಡಿಯನ್ನು ಮುಂದಕ್ಕೆ (ಕುದುರೆಗೂ ಸಾರಥಿಗೂ ಮನಸ್ತಾಪವುಂಟಾಗಿದ್ದರೆ—ಹಿಂದಕ್ಕೂ ಆಗಬಹುದು!) ಉರುಳಿಸುವ ಸಾಧನ ಮಾತ್ರ. ಈ ವಾಹನದಲ್ಲಿ, ಅವುಗಳಿಗೂ ಪ್ರಯಾಣಿಕರಿಗೂ ಮಧ್ಯೆ, ಗಾಡಿ ಕಮಾನಿನ

ಪಕ್ಕ ಪೂರ್ತಿ ಅಡ್ಡವಾಗಿರುತ್ತದೆ. ಆದ್ದರಿಂದ, ಈ ಪ್ರಾಚೀನ ಶಕಟಡೋಲಾಯದಲ್ಲಿ (ತೂಗಾಡದ ಜಟಕ—ಷಾಃಪಸಂದ್‌ಗಳೂ ಉಂಟೇ ?—ಆಹಾ ! "ಉಂಟೇ!" ಎಂಬ ಪ್ರತಿಧ್ವನಿ ಮಾತ್ರ ಕೇಳಿಬರುತ್ತದೆ!) ಪ್ರಯಾಣಿಕರು—ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದರೆ—ಸುರಕ್ಷಿತವಾಗಿ ತೂಕಡಿಸಬಹುದು; ನಿದ್ದೆ ಹೋಗಬಹುದು ; ಹಗಲುಗನಸು ಕಾಣಬಹುದು ; ಚಕ್ಕಂದ ಹೊಡೆಯಬಹುದು ; ಚೆಲ್ಲಾಟ ಆಡಬಹುದು. ಷಾಃಪಸಂದಿನಲ್ಲಾದರೋ ಇಂತಹ ಬೇಹುಷಾರಿಗೆ ಬಿಲ್ಕುಲ್ ಅವಕಾಶವಿರುವುದಿಲ್ಲ. ಇದರಲ್ಲಿ ಗಾಡಿಯ ಟಾಪಿನ ಪಕ್ಕಗಳು, ತಳೋದರಿಯ ಬಡನಡುವಿನಂತೆ, ಕಿರಿದಾಗಿರುವುದರಿಂದ—ಚಕ್ರಗಳಿಗೆ ಪೂರ್ತಿ ಅಡ್ಡವಾಗಿರುವುದಿಲ್ಲ. ಆದ್ದರಿಂದ ಕುಳಿತ ಜೋಡಿ ಹಿಮ್ಮೊಗನಾಗಿರಲಿ—ಮುಮ್ಮೊಗನಾಗಿರಲಿ, ಹಸೆಮೇಲಿನ ವಧೂವರರಂತೆ ಹೆದರಿ—ಮುದುರಿ—ಕುಳಿತರೋ ಸರಿ ; ಇಲ್ಲದೆ, ಅವರು ಸ್ವಲ್ಪ ಎಚ್ಚರ ತಪ್ಪಿದ್ದರೂ ಸಾಕು, ಅವರ ಮೊಳಕೈಗೋ ಮೊಳಕಾಲಿಗೋ ಹಿಮ್ಮಡಿಗೋ ಚಕ್ರಗಳು ಸಾಣೆ ಹಿಡಿದು "ಚಮ್ಡಾನಿಕಾಲ್" ಮಾಡೇಬಿಡುತ್ತವೆ. ಈ ಗಾಡಿಯಲ್ಲಿ ಹಿಮ್ಮೊಗನಾಗಿ ಕುಳಿತವರಿಗೆ ಇನ್ನೊಂದು ರೀತಿಯ ಎಚ್ಚರಿಕೆಯೂ ಉಂಟು. ಗಾಡಿಯ "ಇಸ್ಪೀಡ್" ಜೋರಾದಾಗ ಇದರ ಚಕ್ರಗಳು, ರಸ್ತೆಯಲ್ಲಿ ತಮಗೆ ಅಂಟಿಕೊಂಡ—ಮಣ್ಣು—ಮರಳು ಸಗಣಿ ಮೊದಲಾದ ನೈಸರ್ಗಿಕ ಧಾತುಗಳನ್ನು, ಪೂಜಾರಿ ದೇವರ ಮುಖಕ್ಕೆ ಮಂತ್ರಾಕ್ಷತೆ ಹೂವುಗಳನ್ನು ಎಸೆದಂತೆ, ತೂಕಡಿಸುವ ಪ್ರಯಾಣಿಕರ ಮುಖಕ್ಕೆ ಎರಚಿ ಎಚ್ಚರಿಸುತ್ತವೆ.

"ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ'

ಎಂಬುದಾಗಿ ತೈತ್ತರೀಯ ಉಪನಿಷತ್ತು ಸಾರಿದೆಯೆಂದು, ಮೊನ್ನೆ ಪೌರಸಭಾ ಚುನಾವಣೆಗೋಸ್ಕರ ಬಿಳೀತೋಪಿ ಧರಿಸಿದ ಕಾಳಿಂಗಯ್ಯ (ಇವನ ಹಲ್ಲುಗಳೆಲ್ಲ ಹಾಗೇ ಇವೆ!) ಠೇವಣಾತಿ ಕಳೆದುಕೊಳ್ಳೋಕೆ ಮುಂಚೆ ನನಗೆ ಹೇಳಿದ. ಇಂತಹ ಉಪನಿಷದ್ವಾಕ್ಯವನ್ನಿಟ್ಟುಕೊಂಡೂ, ವರ್ಣಚರ್ಮದ ಪೌರಾತ್ಯ ಜನಾಂಗಗಳಾದ ನಾವು ತೂಕಡಿಕರು—ನಿದ್ರಿಗರು—ಕನಸಿಗರು—ಎಂದು, ತೊನ್ನುವರ್ಣದ ಪಾಶ್ಚಾತ್ಯರು ಬೇರೆ ನಮ್ಮನ್ನು ಹಿಯ್ಯಾಳಿಸುತ್ತಲೇ ಬಂದಿದ್ದಾರೆ. ಆದ್ದರಿಂದ ಅಸಹನೀಯವಾದ ಈ ಅಪವಾದವನ್ನು ಅಳಿಸಿಕೊಂಡು, ಜೆಚ್ಚರದಿಂದ ಎಚ್ಚರವಾಗಿ, ಚಾಮರಾಜ ರಸ್ತೆಯಲ್ಲೋ, ಚಿಕ್ಕಣ್ಣನಗಲ್ಲಿಯಲ್ಲೋ, ಓಬಿರಾಯ ಓಣಿಯಲ್ಲೋ ಮುಂದುವರಿಯಲು ನಮಗಿರುವ ಏಕಮಾತ್ರ ಸಾಧಕವಾಹನವೆಂದರೆ, ಏಕಮೇವಾದ್ವಿತೀಯವಾದ ನಮ್ಮ "ಮೈಸೂರ್ ಅಚ್ಚರಿ"—(ಮೈಸೂರುಪಾಕ್—ಬೊಂಬಾಯಿ ಬೊಂಡ—ಎಂಬಂತೆ!) ಶಕಟಕುಲರತ್ನ ಷಾಃಪಸಂದ್ !

ಮೈಸೂರಿನ ವೈಶಿಷ್ಟ್ಯಗಳಲ್ಲಿ ಒಂದಾದ ಮೈಸೂರು ಮಲ್ಲಿಗೆ ಈಗಾಗಲೇ ಕಾವ್ಯವಸ್ತುವಾಗಿ ನಮ್ಮ ತರುಣ(ಣಿ) ರಸಿಕರ ರಸನಾಂಗಣದಲ್ಲಿ ಕೆಲವು ವರ್ಷಗಳಿಂದ ರಮಿಸುತ್ತಿರುವುದನ್ನು ನಾನು ಬಲ್ಲೆ. ಆದರೆ, ಏನು ಕಾರಣವೋ, ಇದುವರೆಗೂ ನಮ್ಮ ಸಿರಿಗನ್ನಡದ ನವಕವಿ ಪರಮೇಷ್ಠಿಗಳ ಕಾವ್ಯದೃಷ್ಟಿಗೆ ಈರನಗೆರೆ ಮೊಗರುತನುವಿನ ಬದನೆ ಭಾಮಿನಿಯರ ವದನಾರವಿಂದ ಬಿದ್ದಿಲ್ಲ; ದೊಡ್ಡ (ಈಗ ಗೊಡ್ಡು) ಕೆರೆ ಏರಿಕೆಳಗಿನ ಬನಶಂಕರಿ—ಸ್ವರ್ಣಾಂಗಿ—ನಾಗವಲ್ಲೀ ಕುವರಿಯ ಸವಿಯನ್ನು ಅವರ ಕಾವ್ಯಜಿಹ್ವೆ ಹೀರಿದಂತೆ ಕಾಣುವುದಿಲ್ಲ; (ದೇವರಾಜಮಾರುಕಟ್ಟೆಯ) ವೀಳ್ಯಪತ್ರವ್ಯಾಪಾರ ವಿಲಾಸಿನಿಯರು ಕೂಡ ನಮ್ಮ ಅಭಿನವ ಕವಿಕಾಮರನ್ನು ಕೆರಳಿಸಿಲ್ಲ. ಕನ್ನಡಮ್ಮನ ಸುಕೃತ ಇನ್ನೂ ಅಷ್ಟು ಕೂಡಿಬಂದಿಲ್ಲವೆಂದು ಕಾಣುತ್ತದೆ. ಇವು ಮೂರು ಸುಕೃತಗಳು ಏಕಕಾಲದಲ್ಲೇ ಆಗಿದ್ದರೆ ಈ ವೇಳೆಗೆ ಕಾವ್ಯದ ಅಥವಾ ಕವಿಗಳ ಅನಾದರಕ್ಕೆ ಗುರಿಯಾಗಿರುವ ಇವು ಒಂದೊಂದನ್ನೂ ಕುರಿತು ದಿವ್ಯವೋ, ಭವ್ಯವೋ—ನವೋ ನವ್ಯವೋ ರಮಾರಮ್ಯವೋ ಆದ ಕಾವ್ಯರತ್ನ "ತ್ರಯಾಲಜಿ"ಯಾಗಿ, ಮಲ್ಲಿಗೆಯೊಡನೆ "ಚತುರಾಲಜಿ"ಯಾಗಿ ಇವೂ ಸ್ವರ್ಗಸ್ಥವಾಗಬಹುದಾಗಿತ್ತು. "ಸ್ವರ್ಗಸ್ಥ" ಎಂದರೆ ಅಪಾರ್ಥ ಮಾಡಬೇಡಿ, ಮಹಾಶಯ! "ಹೂವಿನಿಂದ ನಾರುಸ್ವರ್ಗಕ್ಕೆ" ಎಂದು ವೇದವನ್ನು ಮೀರಿಸಿದ ಗಾದೆಯೇ ಇಲ್ಲವೆ? ನವನವೀನ ಸುಂದರ ಕವನಗಳು ಸ್ವರ್ಗಸುಖ ಅನುಭವಿಸುವುದು, ರಸಿಕ ರಾಜ-ರಾಣಿಯರ ರಸನೆಯಲ್ಲಲ್ಲವೇ?—ನೀವೇ ಹೇಳಿ. ಇರಲಿ, ಸದ್ಯಕ್ಕೆ ಬದನೇಕಾಯನ್ನು ಬದಿಗೊತ್ತಿ, ಚಿಗುರೆಲೆಯನ್ನು ಮರೆತು, (ಅಸ್ಪೃಶ್ಯತಾ ನಿವಾರಣಾ ಕಾನೂನು ಘೋಷಣೆಯಾಗಿದ್ದರೂ!) ಚಿಗುರೆಲೆ ಮಾರುವ ಚಂಚಲಾಕ್ಷಿಯರಿಗೆ ದೂರದಿಂದಲೇ ಕೈಮುಗಿದು, ಇತ್ತೀಚೆಗೆ ಆ ವೈಶಿಷ್ಟ್ಯಗಳ ವರ್ಗಕ್ಕೆ ಸೇರಿದ ಷಾಃಪಸಂದನ್ನು ಕುರಿತು ಹೇಳಬಹುದಾದರೆ, "ಚತುರಾಲಜಿ" "ಪಂಚಾಲಜಿ" ಯಾಗುವ ಅವಕಾಶವಿದೆ. ಏಕೆಂದರೆ, ಇದು ಕೂಡ ಒಂದು ಸುದೀರ್ಘವಾದ ಕಾವ್ಯದಲ್ಲಿ—ಹೆಚ್ಚೇನು?—ಬಿಸಿಬಿಸಿ ಕುದಿಯುವ ನವ್ಯಕವಿತೆಯಲ್ಲಿ ಸ್ವೇಚ್ಛೆಯಾಗಿ ಹರಿದಾಡುತ್ತ ಗುಡುಗಾಡಬಹುದು; ಅಥವಾ ಗುಡುಗಾಡುತ್ತ ಹರಿದಾಡಬಹುದು (ಹೇಗಾದರೂ ಒಂದೇ ನವ್ಯಕವಿತೆಗೆ—ಅಲ್ಲವೇ?)—ಎಂದು ನನ್ನ ಭಾವನೆ. ಅಷ್ಟೇ ಅಲ್ಲಾ ಸ್ವಾಮೀ, ಈ ಅಪರೂಪದ, ಹಾಗೂ ಅಪರೂಪಕದ—ವಿಲಕ್ಷಣ ಕವಿತೆಯ ಜೀವಾಳದಂತಿರುವ ಶಬ್ದ (ಸದ್ದು, ಗಲಾಟೆ, ಗೊಂದಲ ಎನ್ನುವ-ಕರ್ಣವಿಕಠೋರಿ ಅರ್ಥದಲ್ಲಿ) ಛಂದಸ್ಸು, ಏರಿಳಿತ—ಅಡ್ಡಾದಿಡ್ಡಿ—ಲಯಪ್ರಳಯ—ಗತಿ, ಯತಿ, ನಿರ್ಗತಿ, ದುರ್ಗತಿಗಳನ್ನು ಸರಬರಾಜು ಮಾಡುವುದರಲ್ಲಿ ಷಾಃಪಸಂದಿನ ಶ್ರೀಮಂತಿಕೆ, ಧಾರಾಳಬುದ್ಧಿ ಜಟಕಾಕ್ಕೆ ಇಲ್ಲ—ಇಲ್ಲವೇ ಇಲ್ಲ! ಆದಕಾರಣ, ನವ್ಯ

ಕಾವ್ಯ ಸೃಷ್ಟಿ ದೃಷ್ಟಿಕೋಣದಿಂದ ಜಟಕ, ಕೋಣನಂತೆ ಜಡಂ!—ನಿರ್ಜೀವಂ!—ನೀರಸಂ!!! ಷಾಃಪಸಂದ್ ಷೋಕ್! ಬಲ್ ಝೋಕ್!! ಇದರ ಗುಟ್ಟು (ನೀವು ಷಾಃಪಸಂದಿನಲ್ಲಿ ಮಂಡಿಸಿದ್ದರೆ) ನಿಮ್ಮ ಕೆಳಗೇ ಇರುತ್ತದೆ. ನೋಡಿ, ಇದರಲ್ಲಿ ಗಾಡಿಯ ಬಾಡಿಗೂ ಚಕ್ರಗಳ ಅಚ್ಚಿಗೂ ಲಗತ್ತಿಸಿರುವ—ಸ್ಪ್ರಿಂಗುಗಳು ಜಟಕಾ ಸ್ಪ್ರಿಂಗುಗಳಿಗಿಂತ ಹೆಚ್ಚು ಬಳುಕುತ್ತವೆ. ಆದ್ದರಿಂದ ತೂಕಿ ಆಸಾಮಿಗಳು ಕುಳಿತು ಗಾಡಿ ಚಲಿಸುವಾಗ,

"ಹಾಂಗೊಮ್ಮೆ ಮುಂದಕ್ಕೆ—ಹೀಂಗೊಮ್ಮೆ ಹಿಂದಕ್ಕೆ
ಬಲಕೊಮ್ಮೆ ಆಹಾ!—ಎಡಕೊಮ್ಮೆ ಓಹೋ!!"

ಎಂಬಂತೆ, ಅದರ ಹುಚ್ಚು ತೂಗಾಟ ಹೆಚ್ಚು. ಗಾಡಿಗಿಂತ ಗೋಡ ಮಂಡೋದರಿಯೋ ಮಹಾಕಾಯನೋ ಆಗಿದ್ದರೆ, ಆ ಪ್ರಾಣಿಯು ಜಗ್ಗೋಟಕ್ಕೆ ಗಾಡಿಯ ತೂಗಾಟ ತೂರಾಟವಾಗುತ್ತದೆ. ಅಕಸ್ಮಾತ್ ಇನ್ನೊಂದು ಗಾಡಿಯೊಡನೆ ಪೈಪೋಟಿ ಬಿದ್ದರೆ. (ಜಟಕಾಧಿಪತಿಗಳೂ ಷಾಃಪಸಂದ್ ಸಾರಥಿಗಳೂ ಹುಟ್ಟು ಜೂಜುಕೋರರೆನ್ನುವುದು ಜ್ಞಾಪಕವಿರಲಿ!) ತೂರಾಟದ ಭರಾಟೆ ಹೆಚ್ಚಿ, ಪಾಸೆಂಜರುಗಳಿಗೆ ಪೀಕಲಾಟ ಪ್ರಾಪ್ತಿಯಾಗುತ್ತದೆ. ಬಡಪಾಯಿ ಕನ್ನಡಮ್ಮನ ಜನ್ಮಾಂತರದ ಕರ್ಮ ವಿಶೇಷದಿಂದ, ಒಳಗೆ ಕುಳಿತಿರುವ ಮಹಾನುಭಾವ, ವೀರಗನ್ನಡ ನವಕವಿಪುಂಗವನಾಗಿದ್ದರೆ, ಅವನು ಈ ಕ್ಷಣದಲ್ಲಿ ಒಂದು ಅಪೂರ್ವ ನವ್ಯಕವಿತಾಶಿಶುಪ್ರಸವ ವೇದನೆಯ ಆರಂಭವನ್ನು ಅನುಭವಿಸುತ್ತಾನೆ. ಕುದುರೆಯ ಉನ್ಮತ್ತಗತಿಯ ಛಂದಸ್ಸು, ಅದರ ಖುರಪುಟದ ಠಪ—ಠಪ ಧ್ವನಿ, ರಥಚಕ್ರ ನಿನಾದ, ಸ್ಪ್ರಿಂಗುಗಳ ಸೀತ್ಕಾರ, ಸಾರಥಿಯ ಸಿಳ್ಳು ಕೇಕಾರವ, ಅವನ ಹಸ್ತಭೂಷಣ ಮಿಡಿಚಾವಟಿಯ ಸ್ವಿಷ್ಕಾರ—ದಶದಿಕ್ಕುಗಳಿಗೂ ಇಡೀ ಗಾಡಿಯ ತೂಗಾಟ, ನೆಗೆಯಾಟ, ಚಿಮ್ಮಾಟ, ಸಿಡಿಯಾಟ—ಇವೇ ಮೊದಲಾದ ನಾನಾ ನಾದಜಾಲಗಳೂ, ಚಿತ್ರವಿಚಿತ್ರ ಚಲನವಲನಗಳೂ, ಒಂದೊಂದಾಗಿಯೂ ಒಟ್ಟಾಗಿಯೂ ಗಾಡಿಯಲ್ಲಿ ಕಂಗೆಟ್ಟು ಮಂಡಿಸಿರುವ ಮಹಾಕವಿಯ ಸಿರಿಸ್ಮೈಗೆ ವಿದ್ಯುದ್ವೇಗದಲ್ಲಿ "ಕಂಡಕ್ಟ"ಗಿ, ಮಿದುಳಿಗೆ ಅಡರಿ, ಅವನು ಮನೆ (ಆಸ್ಪತ್ರೆ ಅಥವಾ. . .?) ತಲುಪುವುದರೊಳಗಾಗಿ,—ಉದ್ದ, ಗಿಡ್ಡ ಸಾಲುಗಳಿಂದ ಹರಿಯುತ್ತ, ಅರ್ಥರಹಿತ ಶಬ್ದಜಾಲಗಳಿಂದ ಮೆರೆಯುತ್ತ, ವಿವಿಧ ವಿಕೃತ ಛಂದೋಲಯತಾನಗಳಿಂದಿಡಿದು ಬಿರಿಯುತ್ತ—ಆಶ್ಚರ್ಯ—ಕೋಪ—ತಾಪ—ಭಯ—ಪ್ರಶ್ನಾರ್ಥಕ ಚಿಹ್ನೆಗಳಿಂದಲೂ, ನಿರುತ್ತರ—ಶುಷ್ಕ—ಶೂನ್ಯ—ಸೂಚಕ ಸಾಲುಚುಕ್ಕೆಗಳಿಂದಲೂ ಅಲಂಕೃತಳಾದ ಅಡ್ಡಂ—ದಿಡ್ಡಂ ಬಳುಕುರೂಪದ ಕವನಕಾಮಿನಿಯೊರ್ವಳು, ಸದರಿ ಕವಿಯ ಟೊಳ್ಳುಬುರುಡೆಯ ಚಿಪ್ಪನ್ನು ಭೇದಿಸಿಕೊಂಡು, ಸಾಹಿತ್ಯಪ್ರಪಂಚಕ್ಕೆ ಥಕ—ಥೈ!—ಎಂದು ನೆಗೆಯುವುದರಲ್ಲಿ ಸಂದೇಹವಿಲ್ಲ.

ಆಧುನಿಕ ಕರ್ನಾಟಕ ಸಾಹಿತ್ಯ ದಿಗಂತದಲ್ಲಿ ಇತ್ತೀಚೆಗೆ ಮೂಡಿರುವ ಮೂರೂ ಮತ್ತೊಂದು ನವ್ಯಕವನಕಂಠೀರವರು, ಇಂಗ್ಲೆಂಡಿನ (ಹಾಲಿ ಜೀವಂತ) ನವ್ಯಕವಿ ಜಗಜಟ್ಟಿ ಎಲಿಯೆಟ್ ಪ್ರಭುವಿನಿಂದ ಸ್ಫೂರ್ತಿಪಡೆದು, (ವಿ?) ಕೃತಿರಚನೆಯಲ್ಲಿ ತೊಡಗಿದ್ದಾರೆಂದ ಒಂದು ವಾದವಿದೆ. ಆದರೆ ಈ ಕಲ್ಪನೆ—ಈ ವಾದ, ಕಠೋರ ಸತ್ಯದಿಂದ ಬಹಳ ದೂರವಾದದ್ದೆಂದು ನನ್ನ ಗಭೀರ ಗುಮಾನಿ. ನಮ್ಮ ಈ ಕವಿತಿಲಕರ (ತಿಲ=ಎಳ್ಳು+ಕ=ನೀರು, ಎಂದೂ ಪದವಿಭಾಗ ಮಾಡಬಹುದು) ಸ್ಫೂರ್ತಿ ಅಷ್ಟು ದೂರದ್ದೂ ಅಲ್ಲ, ಅಂತಹ ಪರದೇಶಿಯೂ ಅಲ್ಲ—ಎಂದು ನನಗೆ ಖಾತ್ರಿಯಾಗಿದೆ. ಕೇಳಿ, ಕೆಲವು ದಿನಗಳ ಹಿಂದೆ ಈ (ವಿ) ಜಾತೀಯ ಕವನವೊಂದನ್ನು ಓದುವ—ಸಾಧ್ಯವಾದರೆ ಅರ್ಥಮಾಡಿಕೊಳ್ಳುವ—ಸಾಹಸಕ್ಕೆ ಕೈ—ಅಲ್ಲ—ತಲೆ ಹಾಕಿದೆ. ಆ ಸಮಯದಲ್ಲಿ ನಾನು ಭದ್ರಭೂಮಿಯ ಮೇಲೆ—ಸೋಫಾದಲ್ಲಿ ಸುಖವಾಗಿ ಕುಳಿತಿದ್ದೆ. ಆಗ ಇದ್ದಕ್ಕಿದ್ದ ಹಾಗೆಯೇ ನನಗೆ ಮೂವತ್ತು ವರ್ಷಗಳ ಹಿಂದಿನ—ಅಂದರೆ ಅಷ್ಟು ವಯೋವೃದ್ಧವಾದ—ಪ್ರಥಮ ಮಾದರಿ ಷಾಃಪಸಂದಿನ ಟಾಪಿನ ಮೇಲೆ ಕುಳಿತು, ಆಕಾಶಮಾರ್ಗದಲ್ಲಿ ರುದ್ರಭೂಮಿಯತ್ತ ಧಾವಿಸುತ್ತಿದ್ದಂತೆ ಭಾಸವಾಯಿತು. ಈ ಅನುಭವವಾದ ಮರುದಿನವೇ ನಾನು ಖಲಂದರನ (ಆಹಾ! ಅವನ ಗೋಡ ಎಂತಹ ದುಷ್ಮನ್!) ಷಾಃಪಸಂದಿನಲ್ಲಿ ಕುಳಿತು, ಮುಂದಿನ ದಿನಕ್ಕಿದ್ದ ನಮ್ಮ ತಂದೆಯ ಶ್ರಾದ್ಧಕ್ಕೆ ತರಕಾರಿ ತರಲು ಮಾರ್ಕೆಟ್ಟಿಗೆ ಹೊರಟೆ. ಆಗ ನನ್ನ ಶ್ರಾದ್ಧಕ್ಕೇ ಹೊರಟಿರುವೆನೇನೋ !—ಎಂಬ ದಿವ್ಯಾನುಭವವೂ, ಜೊತೆಯಲ್ಲಿಯೇ—ಹಿಂದಿನ ದಿನ ಅರ್ಥವಾಗದೆ ಇದ್ದ ಟೀಕಾತಾತ್ಪರ್ಯ ಸಹಿತ, ಕವನ ಸ್ಮರಣೆಯೂ ಏಕ್‌ದಂ—ಆಯಿತು. ಕವನದ ಸಾಲು—ಶಬ್ದ—ಅಕ್ಷರಗಳು, ಗಗನದಲ್ಲಿ ಹಾರಾಡುವ ಹದ್ದುಕಾಗೆಗಳ ಸಾಲಿನಂತೆ ಕಂಡವು ; ಆಶ್ಚರ್ಯ—ಚಿಹ್ನೆ (!) "ಕೊಶ್ಚನು ಮಾರ್ಕು" (?) ಗಳು ಧೂಮಕೇತುಗಳಂತೆ ಕಂಡವು; ಖಾಲಿ ಸಾಲುಗಳು—ಅಂದರೆ ಸಾಲು ಚುಕ್ಕೆಗಳು—ತಾರಾಮಾಲೆಯಂತೆ ಶೋಭಿಸಿದವು. . . . ಮಿಸ್ ಜ್ಞಾನಾಮಣಿ ಸರ್ಸ್-ಅಮ್ಮ ಡಾ || ಚತುರ್ಮುಖನ್‌ರವರ ದಿವ್ಯಸನ್ನಿಧಿಯಲ್ಲಿ ತನ್ನ ಕೋಮಲಾಂಗುಳಿಗಳಿಂದ ನನ್ನ ದವಡೆ ಬಿಡಿಸಿ, ಹನಿಹನಿಯಾಗಿ ದಕ್ಷಿಣಗಂಗೆ ಕಾವೇರಿಯ ಅಮೃತವನ್ನು ಬಿಡುತ್ತಿದ್ದಾಗ, ನನಗೆ ಆಗಿದ್ದ ಅನರ್ಥದ ಜೊತೆಗೆ ಕಾವ್ಯದ ಅ (ನ) ರ್ಥವೂ ಆಯಿತು. ನನ್ನ ಶ್ರಾದ್ಧ ತಪ್ಪಿತು! ತಂದೆಯ ಶ್ರಾದ್ಧ "ಪೋಸ್ಟ್‌ಪೋನ್" ಆಯಿತು—ಅದೇನು ಹೆಚ್ಚಲ್ಲ. ಆದರೆ, ಈ ನಮ್ಮ ನವೀನ ಕವಿಗಳ ಸ್ಫೂರ್ತಿವಾಹಿನಿಯ ಉಗಮಸ್ಥಾನ ಷಾಃಪಸಂದಿನ ಗರ್ಭಗಹ್ವರ—ಎಂದು ನನಗೆ ಸ್ಪಷ್ಟವಾಯಿತು.

ಹಳೆಯ—ಸಾಂಪ್ರದಾಯಿಕ—ಕವನಗಳ ಸುಂದರ ಬಂಧುರ ಛಂದೋಬದ್ಧತೆ,

ಅರ್ಥಸಾರ್ಥಕತೆ—ಸ್ಪಷ್ಟತೆ, ಆದ್ಯಂತ ಮಧ್ಯ ಪಾಸಾನುಪ್ರಾಸ ಪ್ರಸಂಗ—ಇವೇ ಮೊದಲಾದುವು ನವ್ಯಕವಿತೆಗಳಲ್ಲಿ ಇಲ್ಲ—ಎಂಬ, ಜಠರಾಗ್ನಿ ಪೂರ್ವಕವಾದ ಅಪಾದನೆ ಇದೆ. ಇದು, ಅಂದರಹಿತ—ಸ್ವಚ್ಛಂದ ಛಂದಸ್ಸಿನ ಸೊಗಸನ್ನೂ, ನಿರರ್ಥಕದ ನಿರ್ವಾಣಭವ್ಯತೆಯನ್ನೂ, ಭಾವಾಭಾವ ಶೂನ್ಯಬಂಧುರತೆಯನ್ನೂ, ಪ್ರಾಸಗೀಸಾತೀತ ಅಧಿಕಪ್ರಸಂಗಿಕಯ ಶೂಲಸರಳು—ತೆಯನ್ನೂ ಸವಿಯಲಾರದ ಮರದಲೆಯ ಮೂರ್ಖರ ಅರಣ್ಯರೋದನ. ನವ್ಯಕವಿತೆಗೂ ಒಂದು—ಒಂದೇ ಒಂದು!—ಛಂದೋವಲಕ್ಷಣವಿದೆ. ನಿಮ್ಮ ಕುಸುಮ—ಭಾಮಿನಿ, ವಾರ್ಧಿಕ—ಭೋಗ, ಕಂದ—ಶರ ಇತ್ಯಾದಿ ಷಟ್ಪದಿಗಳನ್ನೂ, ಮತ್ತೆ—ಸಿಂಹ—ಶಾರ್ದೂಲ—ಚಂಪಕ—ಮಲ್ಲಿಕ ಇತ್ಯಾದಿ ವಿಕ್ರೀಡಿತ ಮಾಲಾವೃತ್ತಗಳನ್ನೂ ಮಟ್ಟಹಾಕುವ, ದ್ವಿಚಕ್ರಚತುಷ್ಪದೀರಂಪರಾದ್ಧಾಂತಕ-ಷಾಃಪಸಂದ್ ಪೀಡಾವಿಕ್ರೀಡಿತ ವಿಕಟ (ಅಕಟಕಟಾ!—ಅನ್ನಬೇಡಿ!) ವೃತ್ತವೇ ಇದರ ಏಕೈಕ ಪುರೋಗಾಮಿ ಛಂದೋಲಕ್ಷಣ. ಇತ್ತೀಚೆಗೆ ಪ್ರಗತಿಯ ಹೊಸ ಹೊನಲಲ್ಲಿ ಸಿಕ್ಕು—ಮುಂದುವರಿಯುವ ಏಕಮಾತ್ರ ಗುರಿಯನ್ನು ನಿಗಾದಲ್ಲಿಟ್ಟುಕೊಂಡು—ರಸ್ತೆಯೋ ಬೀದಿಯೋ, ಗಲ್ಲಿಯೋ, ಓಣಿಯೋ, ರೊಚ್ಚೆಯೋ, ಕೊಚ್ಚೆಯೋ, ಹಳ್ಳವೋ, ತಿಟ್ಟೋ—ಮುನ್ನಡಿ ಇಟ್ಟದ್ದೆಲ್ಲಾ ಒಂದು!—ಎಂದು ಹೊಸ ಆಟ ತೆಗೆದು, ಹುಚ್ಚುಗೂಳಿಯಂತೆ ಗುಟುರುಹಾಕುತ್ತ ಮುನ್ನುಗ್ಗುತ್ತಿರುವ ಕನ್ನಡಸಾಹಿತ್ಯಕುಲಸಾರ್ವಭೌಮರಿಗೆ ನವ್ಯಕವಿತೆಯ ಛಂದೋಲಕ್ಷಣವನ್ನೊದಗಿಸಿದ—ಕಡೆಯದಾದರೂ ಕೀಳಲ್ಲದ, ಔದಾರ್ಯ,—ನಮ್ಮ ಷಾಃಪಸಂದಿನದು. ಅಂದಮೇಲೆ, ಇದನ್ನು ಮೊಟ್ಟಮೊದಲಿಗೆ ಕಾಶ್ಮೀರದಲ್ಲಿ ಕಂಡುಹಿಡಿದು ಇಲ್ಲಿಗೆ ಆಮದುಮಾಡಿದ ಮಹನೀಯರಿಗೂ, ಇಲ್ಲಿ ಇದರ ಚಾಲ್ತಿಗೆ ಅವಕಾಶವನ್ನು ಕಲ್ಪಿಸಿ ಹೋದ—ಹೋಗೇ ಬಿಟ್ಟ—ನಗರ ಪಿತೃವೃಂದಕ್ಕೂ, ಹಾಲಿ ಇವುಗಳ ಚಾಲಕರ ಸಂಘದ ಖಾಯಂ ಅಧ್ಯಕ್ಷರಾದ—ನನ್ನ ಪ್ರಿಯ ದೋಸ್ತಿ ಕ್ವೇಯ್ದ್-ಎ-ಅಜಾಂ ಜನಾಬ್ ಸಯ್ಯದ್ ಪೀರ್ ಗಫೂರ್‌ಖಾನ್ ಸಾಹೇಬರಿಗೂ ಸಂತೋಷವಾಗದೆ ಇರದು. ಈ ಸಂದರ್ಭದಲ್ಲಿ, ನಮ್ಮ ನವ್ಯಕವನಕಾರರ ಮೇಲೂ ಒಂದು ಪರಮಪವಿತ್ರವಾದ ಕರ್ತವ್ಯದ ಭಾರ ಬಿದ್ದಿದೆಯೆಂದು ನಮ್ರತೆಯಿಂದ ಸೂಚಿಸಲಪೇಕ್ಷಿಸುತ್ತೇನೆ. ಈ ವಿಶಿಷ್ಟಕವಿಕುಲವು, ತಮ್ಮ ಕೃತಿರತ್ನಗಳ ತ್ರಿವರ್ಣರಂಜಿತ ಸಚಿತ್ರ ಮಹಾ ಸಂಪುಟವೊಂದನ್ನು ಷಾ-ಪಿತೃ-ಖಾನ್ ವಗೈರೆ ವೃಂದಕ್ಕೆ ಸಂಭಾವನಾ ಗ್ರಂಥವಾಗಿ ಸಮರ್ಪಿಸಿ, ಕರ್ತವ್ಯವನ್ನೆಸಗಿ (ಗಂಗಾಜಲದಲ್ಲಿ!) ಕೈತೊಳೆದುಕೊಳ್ಳಬೇಕಲ್ಲವೇ ?

ಇದುವರೆಗೂ ನಾನು ಈ ಶಕಟಮಣಿಯ ಹೊರನೋಟವನ್ನೇ ಹೆಚ್ಚಾಗಿ ಪ್ರಸ್ತಾಪಿಸಿದ್ದೇನೆ; ಅಂದರೆ, ನಾನಾಗಲಿ ನೀವಾಗಲಿ—ಮರ್ಯಾದೆಯಿಂದ, ಸುರಕ್ಷಿತ

ವಾದ ದೂರದಲ್ಲಿ—ಭೂಗೋಳದ ಭದ್ರಬುನಾದಿಯ ಮೇಲೆ—ನಿಂತು, ಅದನ್ನು ನೋಡಿ ನಲಿಯುವ ನಿರ್ಲಿಪ್ತನೋಟ. ಆದರೆ, ಅದರ ಒಳಗೆ ಮಂಡಿಸಿ, ಅದರ ನಿಕಟಬಾಂಧವ್ಯ ವನ್ನು ಹೊಂದಿ, ನೋಡುವ ಸಲಿಪ್ತ "ಒಳನೋಟ"ವೂ ಒಂದಿದೆ. ಅದು ನೀವು ಸಾರಥಿ ಸುಲೇಮಾನನ ಸಹಪಂಕ್ತಿಯಲ್ಲೋ, ಅವನಿಗೆ ಬೆನ್ನಾಗಿಯೋ ಕುಳಿತು, ಸಾಧ್ಯವಾದರೆ!—ನೋಡುವ ನವ್ಯಕವಿಕಾವ್ಯ ದಿವ್ಯದೃಷ್ಟಿ!—ಅನುಭವಿಸುವ ಅನಿರ್ವಚನೀಯ (ಅವಾಚ್ಯ?) ಅನುಭವಾಮೃತ!! ಜಾನ್‌ಗಂಥರ್ ಮಹಾಶಯ ಯೂರೋಪ್—ಏಷ್ಯಾ ಖಂಡಗಳಲ್ಲಿ ಸುತ್ತಾಡಿ, "ಯೂರೋಪಿನ ಅಂತರಾಳ" "ಏಷ್ಯದ ಅಂತರಾಳ" ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಪುಣ್ಯಾತ್ಮ ಮೈಸೂರಿಗೆ ಬಂದು, ಷಾಃಪಸಂದಿನಲ್ಲಿ ಕುಳಿತು ಒಂದು ಗಂಟೆ ಸುತ್ತಾಡಿದ್ದರೆ, ಇದರ ಅವಾಂತರಾಳವೂ ಬಹಿರಂಗವಾಗಿ, "ಅಂತರಾಳ"ಗಳ "ತ್ರಯಾಲಜಿ" ಪೂರ್ಣವಾಗುತ್ತಿತ್ತು. ಇರಲಿ, ಆ ಕೆಲಸ ನನಗೆ ಬಿಟ್ಟಿದ್ದಾನೆ. ಇದರ ಹಿಂದಿನ ಭಾಗವಾದ "ಷಾಃಪಸಂದ್ ರಥೋತ್ಸವ"ವನ್ನೂ, ಮುಂದಿನ ಭಾಗವಾದ "ಷಾಃಪಸಂದ್ ಶಕಟವಿಹಾರ"ವನ್ನೂ, "ಗಫೂರ್ ಗುಳಿಗೆ"ಯನ್ನೂ ಕ್ರಮೇಣ ಬರೆದು ಪ್ರಕಟಿಸಿ, ನಿಮ್ಮ ಜೇಬುಗಳನ್ನು ಖಾಲಿಮಾಡುವ ಖುಷಿ ಐತೆ—ನನಗೆ. ಆದರೆ ಸದ್ಯಕ್ಕೆ ವ್ಯವಧಾನವಿಲ್ಲ—"ಅಕ್ಕಿ ಇಲ್ಲ—ಇಲ್ಲದ ಅಕ್ಕಿ ಬೇಯಿಸೋಕೆ ಸೌದೆ ಇಲ್ಲ—ಬೇಯದ ಅನ್ನಕ್ಕೆ ಸಾರಿಗೆ ಬೇಳೆ ಇಲ್ಲ" ಎಂದು ನನ್ನ ಬೀಬೀ ಸಾಹೇಬಾಳು, ಬೆನ್ನಹಿಂದೆ ನಿಂತು,—ಪ್ರಭಾತದ ಪಲ್ಲವಿ ಹಾಡುತ್ತಿದ್ದಾಳೆ. ಇವೆಲ್ಲ ಚಿಲ್ಲರೆ "ಇಲ್ಲ" ಗಳು. ಈ "ಇಲ್ಲ" ಗಳನ್ನು ಇಲ್ಲದ ಹಾಗೆ ಮಾಡುವ ದುಡ್ಡು ನನ್ನ ಹತ್ತಿರ ಇಲ್ಲ—ಅನ್ನೋದು ಅವಳಿಗೆ ತಿಳಿದಿಲ್ಲ! ಸದ್ಯಕ್ಕೆ ಅಪ್ಪಣೆ ಕೊಡಿ; ಮತ್ತೆ ಭೇಟಿ ತೆಗೆದುಕೊಳ್ಳುತ್ತೇನೆ. . . . ಸಲ್ಲಾಂ ಅಲೈಕುಂ! ಇಲ್ಲದ್ದನ್ನು ಹುಡುಕಿಕೊಂಡು ಹೋಗಬೇಕಾಗಿದೆ! ಆದ್ದರಿಂದ.*

"ಆನಂದ"

---

* ೧೯೫೪ ನೇ ಫೆಬ್ರುವರಿ ೩ ನೇ ದಿನಾಂಕದಲ್ಲಿ ಎ. ಐ. ಆರ್. ಮೈಸೂರು ಕೇಂದ್ರದಿಂದ ಪ್ರಸಾರವಾದ ಭಾಷಣದ ವಿಸ್ತೃತರೂಪ. ಎ. ಐ. ಆರ್. (ಮೈಸೂರು) ಕೇಂದ್ರದ ಅಧಿಕಾರಿಗಳ ಕೃಪೆಯಿಂದ.

ಕನ್ನಡ ಕಾವ್ಯಾಲಂಕಾರ

ನಾಲ್ಕನೆಯ ಅಧ್ಯಾಯ

ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮುಪಕ್ರಮಮ್ ।
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿ ಚ ॥೧॥

ದೇಶಕಾಲಕಲಾಲೋಕನ್ಯಾಯಾಗಮವಿರೋಧಿ ಚ ।
ಪ್ರತಿಜ್ಞಾಹೇತುದೃಷ್ಟಾಂತಹೀನಂ ದುಷ್ಟಂ ಚ ನೇಷ್ಯತೇ ॥೨॥

ಅಪಾರ್ಥ, ವ್ಯರ್ಥ, ಏಕಾರ್ಥ, ಸಂದಿಗ್ಧ, ಅಪಕ್ರಮ, ಶಬ್ದಹೀನ, ಯತಿಭ್ರಷ್ಟ, ಭಿನ್ನವೃತ್ತ, ವಿಸಂಧಿ, ದೇಶವಿರುದ್ಧ, ಕಾಲವಿರುದ್ಧ, ಕಲಾವಿರುದ್ಧ, ಲೋಕವಿರುದ್ಧ, ನ್ಯಾಯವಿರುದ್ಧ, ಆಗಮವಿರುದ್ಧ, ಪ್ರತಿಜ್ಞಾಹೀನ, ಹೇತುಹೀನ, ದೃಷ್ಟಾಂತ ಹೀನ—ಈ ದೋಷಗಳೊಂದೂ ಬರಬಾರದು.[1]

ಅಪಾರ್ಥ

ಅಪಾರ್ಥಮಿತ್ಯಪೇತಾರ್ಥಂ ಸ ಚಾರ್ಥಃ ಪದವಾಕ್ಯಯೋಃ ।
ಅರ್ಥವಾನ್ ವರ್ಣಸಂಘಾತಃ ಸುಪ್ತಿಙನ್ತಂ ಪದಂ[2] ಪುನಃ ॥೩॥

'ಅಪಾರ್ಥ'ವೆಂದರೆ ಅರ್ಥವಿಲ್ಲದಿರುವುದು. ಅರ್ಥವು ಎರಡು ಬಗೆ—(೧) ಪದದ ಅರ್ಥ ಮತ್ತು (೨) ವಾಕ್ಯದ ಅರ್ಥ ಎಂದು; ನಾಮವಿಭಕ್ತಿಪ್ರತ್ಯಯ ಇಲ್ಲವೆ ಕ್ರಿಯೆಯ ಆಖ್ಯಾತಪ್ರತ್ಯಯಗಳಿಂದ ಕೂಡಿದ ಅರ್ಥಬೋಧಕವಾದ ಅಕ್ಷರಸಮುದಾಯವೇ ಪದ.

ಪದಾನಾಮೇವ ಸಂಘಾತಃ ಸಾಪೇಕ್ಷಾಣಾಂ ಪರಸ್ಪರಮ್ ।
ನಿರಾಕಾಂಕ್ಷಂ ಚ ತದ್ವಾಕ್ಯಮೇಕವಸ್ತುನಿಬಂಧನಮ್ ॥೪॥

ಒಂದಕ್ಕೊಂದು ಹೊಂದಿಕೊಂಡಿರುವ ಅನೇಕ ಪದಗಳ ಸಮೂಹವು, ಬೇರಾವ ಆಕಾಂಕ್ಷೆಗೂ ಎಡೆಗೊಡದಂತೆ ಒಂದು ವಿಷಯವನ್ನು ಪೂರ್ಣವಾಗಿ ತಿಳಿಸುತ್ತಿದ್ದರೆ ವಾಕ್ಯವೆನಿಸುವುದು.

---

[1] ಹೋಲಿಸಿ—ಕ. ರಾ. ಮಾ. I, ೬೯-೭೦ ; ಕಾವ್ಯಾ—೪೩೫.

[2] ಹೋಲಿಸಿ—ಪಾಣಿನಿಸೂತ್ರ—I, iv, ೧೪.

ಕ್ರಮವೃತ್ತಿಷು ವರ್ಣೇಷು ಸಂಘಾತಾದಿ ನ ಯುಜ್ಯತೇ ।
ಬುದ್ಧೌ ನ ಸಂಭವತ್ಯೇತದನ್ಯತ್ವೇಽಪಿ ಪ್ರತಿಕ್ಷಣಮ್ ॥ ೫ ॥
ಧೀರನ್ತ್ಯಶಬ್ದವಿಷಯಾ ವೃತ್ತವರ್ಣಾಹಿತಸ್ಮೃತಿಃ ।
ವಾಕ್ಯಮಿತ್ಯಾಹುರಪರೇ ನ ಶಬ್ದಾಃ ಕ್ಷಣನಶ್ವರಾಃ ॥ ೬ ॥

ಇತರರು ಹೀಗೆನ್ನುವರು—'ಅಕ್ಷರಗಳು ಕ್ರಮವಾಗಿ ಎಂದರೆ ಒಂದಾದ ಮೇಲೊಂದು ಹುಟ್ಟುತ್ತವೆ. (ಎರಡನೆಯದಿರುವಾಗ ಮೊದಲನೆಯದು ನಷ್ಟವಾಗಿ ಹೋಗಿರುತ್ತದೆ). ಆದುದರಿಂದ (ಭಿನ್ನಕಾಲದಲ್ಲಿ ಹುಟ್ಟುವ) ಅಕ್ಷರಗಳಿಗೆ ಏಕಕಾಲ ದಲ್ಲಿ ಸಮುದಾಯವೆಂಬುದೇ ಸಮಂಜಸವಲ್ಲ. ಹೀಗೆ ಅಕ್ಷರಗಳು ಪ್ರತಿಕ್ಷಣವೂ ಬೇರೆಯೇ ಆಗಿರುತ್ತಿದ್ದರೂ ಬುದ್ಧಿಯಲ್ಲಿ ಮಾತ್ರ ಸಮುದಾಯವು ಸಾಧ್ಯ. ಕಡೆಯ ವರ್ಣವನ್ನು ಗ್ರಹಿಸುವ ಬುದ್ಧಿಯು ಮೊದಮೊದಲು ಕೇಳಿದ ಅಕ್ಷರಗಳ ಸ್ಮೃತಿ ಯೊಡನೆ ಕೂಡಿ ಒಟ್ಟಿಗೆ ವಾಕ್ಯವಾಗುತ್ತದೆ. ಕ್ಷಣಕ್ಷಣಕ್ಕೂ ವಿನಾಶಹೊಂದುವ ಅಕ್ಷರಗಳು ವಾಕ್ಯವಲ್ಲ[3].

[3] ಇಲ್ಲಿ ಭಾಮಹನು ಪ್ರಾಭಾಕರ ಮೀಮಾಂಸಕರ ಮತವನ್ನು ನಿರೂಪಿಸಿದಂತಿದೆ. ಮೀಮಾಂಸಾಶಾಸ್ತ್ರಕ್ಕೆ ವಾಕ್ಯಶಾಸ್ತ್ರವೆಂಬ ಹೆಸರೂ ಉಂಟು. ಮೀಮಾಂಸಕರಲ್ಲಿ ವಾಕ್ಯದ ಅರ್ಥ ವೇನೆಂಬ ವಿಷಯದಲ್ಲಿ ಕುಮಾರಿಲಭಟ್ಟರಿಗೂ ಪ್ರಾಭಾಕರರಿಗೂ ಭಿನ್ನಾಭಿಪ್ರಾಯವಿದೆ. ಕುಮಾರಿಲ ಭಟ್ಟರ ವಾದಕ್ಕೆ 'ಅಭಿಹಿತಾನ್ವಯ'ವೆಂದೂ ಪ್ರಾಭಾಕರರ ವಾದಕ್ಕೆ 'ಅನ್ವಿತಾಭಿಧಾನ'ವೆಂದೂ ಹೆಸರು. ಅನ್ವಿತಾಭಿಧಾನವಾದದ ಪ್ರಕಾರ ಅಕ್ಷರಗಳು ಉಚ್ಚಾರಮಾಡಿದ ಉತ್ತರ ಕ್ಷಣದಲ್ಲಿ ವಿನಷ್ಟವಾದರೂ ಅವುಗಳ ಸಂಸ್ಕಾರವು ಕೇಳುವವನ ಮನಸ್ಸಿನಲ್ಲುಳಿಯುತ್ತದೆ. ಹೀಗೆ ಪೂರ್ವದ ಸಂಸ್ಕಾರಗಳು ಕಡೆಯ ಅಕ್ಷರದಿಂದ ಹುಟ್ಟುವ ಸಂಸ್ಕಾರದೊಡನೆ ಸೇರಿ ಪದದ ಪ್ರತೀತಿ ಯನ್ನು ಕೊಡುತ್ತವೆ. ಪದದ ಅರ್ಥವು ಮಾತ್ರ ಸ್ವತಂತ್ರವಾಗಿ ಆಗುವುದಿಲ್ಲ. ಒಂದು ವಾಕ್ಯದ ಅಂಗವಾಗಿ ಬಂದಾಗ ಮಾತ್ರ ಪದಗಳಿಗೆ ಅರ್ಥಬೋಧಕತ್ವ ಬರುತ್ತದೆ. ಆದಕಾರಣ ಮೊದಲು ಪದಗಳು ವಾಕ್ಯದ ಇತರ ಪದಗಳೊಡನೆ ಅನ್ವಯವನ್ನು ಪಡೆದ ಮೇಲೆ ಅರ್ಥಪ್ರತೀತಿಯನ್ನು ತರುತ್ತವೆ. ಎಂದಮೇಲೆ ಪದಗಳ ಅರ್ಥದಿಂದ ವಾಕ್ಯದ ಅರ್ಥ ಹುಟ್ಟುವುದಿಲ್ಲ; ವಾಕ್ಯದ ಬಲ ದಿಂದ ಪದಗಳಿಗೆ ಅರ್ಥ ಹುಟ್ಟುತ್ತದೆ ಎಂದಂತಾಗುತ್ತದೆ. (ಹೋಲಿಸಿ—ಪ್ರಾಭಾಕರಪಕ್ಷೇ . . . 'ವಾಚ್ಯ ಏವ ವಾಕ್ಯಾರ್ಥಃ, ಪದಾನ್ಯೇವ ವಾಕ್ಯಮ್, ಪದಾರ್ಥ ಏವ ತದರ್ಥಃ, ನ ತು ಪದಾ ರ್ಥೇಭ್ಯೋ ವಾಕ್ಯಾರ್ಥಃ'—ಕಾವ್ಯಪ್ರಕಾಶಸಂಕೇತ, ಪುಟ ೧೮; ಮೈಸೂರು ಮುದ್ರಣ.) ಭರ್ತೃಹರಿಯೇ ಮುಂತಾದ ವೈಯಾಕರಣಿಗಳು ವಾಕ್ಯಗ್ರಹಣವಿಲ್ಲದೆ ಶಬ್ದದ ಅರ್ಥವಿಲ್ಲವೆಂಬು ದನ್ನೊಪ್ಪುವುದಿಲ್ಲ. ಅವರಿಗೆ ಅನ್ವಿತಾಭಿಧಾನವೇ ಸಮ್ಮತ.

(ಹೋಲಿಸಿ—"ನಾದೈರಾಹಿತಬೀಜಾಯಾಮನ್ತ್ಯೇನ ಧ್ವನಿನಾ ಸಹ ।
ಆವೃತ್ತಿಪರಿಪಾಕಾಯಾಂ ಬುದ್ಧೌ ಶಬ್ದೋಽವಧಾರ್ಯತೇ ॥
—ವಾಕ್ಯಪದೀಯ

ಅತ್ರಾಪಿ ಬಹು ವಕ್ತವ್ಯಂ ಜಾಯತೇ ತತ್ತು ನೋದಿತಮ್ ।
ಗುರುಭಿಃ ಕಿಂ ವಿವಾದೇನ ಯಥಾಪ್ರಕೃತಮುಚ್ಯತೇ ॥೭॥

ಈ ವಿಷಯದಲ್ಲಿ ಹೇಳಬೇಕಾದುದು ಬಹಳವುಂಟು; ಆದರೆ ಅದನ್ನೆಲ್ಲ ಈಗ ಹೇಳಿಲ್ಲ. ಗುರುಗಳೊಡನೆ[4] ವಿವಾದ ಮಾಡುವುದರಿಂದೇನು ಫಲ? ಪ್ರಕೃತಕ್ಕೆ ಬೇಕಾದಷ್ಟನ್ನು ಮಾತ್ರ ಹೇಳುತ್ತೇವೆ.

ಸಮುದಾಯಾರ್ಥಶೂನ್ಯಂ ಯತ್ ತದಪಾರ್ಥಕಮಿಷ್ಯತೇ ।
ದಾಡಿಮಾನಿ ದಶಾಪೂಪಾಃ ಷಡಿತ್ಯಾದಿ ಯಥೋದಿತಮ್ ॥೮॥

ಯಾವುದು ಸಮುದಾಯಾರ್ಥಶೂನ್ಯವಾಗಿರುವುದೋ ಅದೇ ಅಪಾರ್ಥಕವೆಂದು ನಮ್ಮ ಮತ. ಉದಾಹರಣೆ—'ದಾಳಿಂಬೆಗಳು ಹತ್ತು ಕಡುಬುಗಳು ಆರು . . .'[5] ಇತ್ಯಾದಿ,

ವಿರುದ್ಧಾರ್ಥಂ[6] ಮತಂ ವ್ಯರ್ಥಂ ವ್ಯರ್ಥ ವಿರುದ್ಧಂ ತೂಪದಿಶ್ಯತೇ ।
ಪೂರ್ವಾಪರಾರ್ಥವ್ಯಾಘಾತಾತ್ ವಿಪರ್ಯಯಕರಂ ಯಥಾ ॥೯॥

ವಿರುದ್ಧವಾದ ಅರ್ಥವುಳ್ಳುದೇ 'ವ್ಯರ್ಥ'; ಹಿಂದಿನದಕ್ಕೂ ಮುಂದಿನದಕ್ಕೂ ಅರ್ಥದಲ್ಲಿ ಪರಸ್ಪರ ವಿರೋಧವಿರುವುದೇ ವಿರುದ್ಧವೆನಿಸುವುದು. ಇದರಿಂದ ಹೇಳಬೇಕಾದುದು ಪಲ್ಲಟವಾಗುವುದು. ಉದಾಹರಣೆ—

ಆದರೆ ಮುಂದೆ ಭಾಮಹನು ಭರ್ತೃಹರಿಯ ಸ್ಫೋಟವಾದವನ್ನೂ ನಿರಾಕರಿಸುತ್ತಾನೆ. ಈ ಸಂದರ್ಭದಲ್ಲಿ ಮಹಾಭಾಷ್ಯಕಾರನದೆಂದು ಉತ್ತುಂಗೋದಯನು ಬರೆಯುವ ವಾಕ್ಯವನ್ನು ಗಮನಿಸಬಹುದು—"ವ್ಯಕ್ತರೂಪಗ್ರಹಣಾನುಗುಣಾಹ್ಯನುಪಾಖ್ಯೇಯಾಕಾರಾ ಬಹವ ಉಪಾಯಭೂತಾಃ ಪ್ರತ್ಯಯಾ ಧ್ವನಿಭಿಃ ಪ್ರಕಾಶ್ಯಮಾನೇ ಶಬ್ದೇ ಉತ್ಪದ್ಯಮಾನಾಃ ಶಬ್ದಸ್ವರೂಪಾವಗ್ರಹ ಹೇತವೋ ಭವನ್ತಿ" (ಲೋಚನಕೌಮುದೀ. ಪುಟ ೩೪೩ *KSRI Edn.*)

[4] ಭಾಮಹನು "ಗುರುಭಿಃ" ಎನ್ನುವಾಗ ಶ್ಲೇಷೆಯಿಂದ ಪ್ರಾಭಾಕರರನ್ನೇ ಸೂಚಿಸುತ್ತಿರುವಂತೆ ಭಾಸವಾಗುತ್ತದೆ. ಪ್ರಾಭಾಕರನ ಮತಕ್ಕೆ 'ಗುರು'ಮತವೆಂಬ ರೂಢಿ ದಾರ್ಶನಿಕರ ಸಂಪ್ರದಾಯದಲ್ಲಿದೆ.

[5] "ದಶ ದಾಡಿಮಾನಿ ಷಡಪೂಪಾಃ ಕುಂಡಮಜಾಜಿನಮ್" ಎಂದು ಮುಂತಾಗಿ "ಗೌರಶ್ವಃ ಪುರುಷೋ ಹಸ್ತಿ" ಎಂಬಂತೆ ಸಮುದಾಯಾರ್ಥವಿಲ್ಲದ ಶಬ್ದಗಳು ಪತಂಜಲಿಯ ಮಹಾಭಾಷ್ಯದಲ್ಲೂ ಶಬರಸ್ವಾಮಿಯ ಪೂರ್ವಮೀಮಾಂಸಾಸೂತ್ರ—ಭಾಷ್ಯದಲ್ಲಿಯೂ ಉದಾಹೃತವಾಗಿವೆ ಇಲ್ಲಿ ಶಬ್ದಗಳಲ್ಲಿ ಕರ್ತೃ—ಕರ್ಮ—ಕ್ರಿಯೆಯೆಂಬ ಸಂಬಂಧವಿಲ್ಲ.

[6] ಪಾಠಾಂತರ—'ನಿರುದ್ಧಾರ್ಥ.'

ಸಖಿ ಮಾನಂ ಪ್ರಿಯೇ ಧೇಹಿ ಲಘುತಾಮಸ್ಯ ಮಾ ಗಮಃ ।
ಭರ್ತುಶ್ಛಂದಾನುವರ್ತಿನ್ಯಃ ಪ್ರೇಮ ಘ್ನಂತಿ ನ ಹಿ ಸ್ತ್ರಿಯಃ ॥೧೦॥

ಕೆಳದಿ ! ನಲ್ಲನೊಡನಿರುವಾಗ ನಿನ್ನ ಗರ್ವವನ್ನು ಕಾಪಾಡಿಕೊ ; ಅವನಿಗೆ ಬಹಳ ಲಘುವಾಗಬೇಡ. ಗಂಡನ ಇಚ್ಛೆಯಂತೆ ನಡೆವ ಹೆಂಗಸರು ಪ್ರೇಮವನ್ನೆಂದೂ ಕೆಡಿಸುವುದಿಲ್ಲ.[7]

ಉಪಾಸಿತಗುರುತ್ವಾತ್ ತ್ವಂ ವಿಜಿತೇಂದ್ರಿಯಶತ್ರುಷು ।
ಶ್ರೇಯಸೋ ವಿನಯಾಧಾನಮಧುನಾ ತಿಷ್ಠ ಕೇವಲಮ್ ॥೧೧॥

ಗುರುಗಳನ್ನು ನೀನು ಸೇವೆಮಾಡಿ ಇಂದ್ರಿಯಗಳೆಂಬ ಶತ್ರುಗಳನ್ನು ಗೆದ್ದಿರುವುದರಿಂದ ಈಗ ಸುಮ್ಮನೆ ಶ್ರೇಯಸ್ಸಿನ ಉಪಾಸನೆಯನ್ನು ಮಾಡು.[8]

ಏಕಾರ್ಥ

ಯದಭಿನ್ನಾರ್ಥಮನ್ಯೋನ್ಯಂ ತದೇಕಾರ್ಥಂ ಪ್ರಚಕ್ಷತೇ ।
ಪುನರುಕ್ತಮಿದಂ ಪ್ರಾಹುರನ್ಯೇ ಶಬ್ದಾರ್ಥಭೇದತಃ ॥೧೨॥

ಹೇಳಿದ ಅರ್ಥವನ್ನೇ ಮತ್ತೆ ಹೇಳುವುದನ್ನು ಏಕಾರ್ಥವೆನ್ನುವರು. ಕೆಲವರು ಇದನ್ನೇ ಶಬ್ದದ ಪುನರುಕ್ತಿ, ಅರ್ಥದ ಪುನರುಕ್ತಿ ಎಂದು ಎರಡು ಬಗೆಯಾಗಿ ಹೇಳುತ್ತಾರೆ.[9]

---

[7] ಪೂರ್ವಾರ್ಧದಲ್ಲಿ ಗಂಡನಿಗೆ ಸದರ ಕೊಡಬೇಡ ಎಂದು ಹೇಳಿ ಉತ್ತರಾರ್ಧದಲ್ಲಿ ಗಂಡನ ಇಚ್ಛೆಯಂತೆ ನಡೆಯೆಂದರೆ ಪೂರ್ವಾಪರ ವಿರೋಧ ಬರುವುದರಿಂದ ದೋಷ.

[8] ಗುರುಗಳ ಉಪಾಸನೆ ಮಾಡಿ ಮುಗಿದು ಅದರ ಫಲವೂ (ಅರಿಷಡ್ವರ್ಗವಿಜಯ) ಬಂದಾಯಿತೆಂದಮೇಲೆ ಮತ್ತೆ ಶ್ರೇಯಸ್ಸೆಂಬ ಫಲಕ್ಕಾಗಿ ಉಪಾಸನೆಯನ್ನೇ ಪ್ರಾರಂಭಿಸೆನ್ನುವುದು ಪರಸ್ಪರ ವಿರುದ್ಧ.

[9] ದಂಡಿಯು ಹೀಗೆ ಹೇಳಿದ್ದಾನೆ—

ಅವಿಶೇಷೇಣ ಪೂರ್ವೋಕ್ತಂ ಯದಿ ಭೂಯೋऽಪಿ ಕೀರ್ತ್ಯತೇ ।
ಅರ್ಥತಃ ಶಬ್ದತೋ ವಾಪಿ ತದೇಕಾರ್ಥಂ ಮತಂ ಯಥಾ ॥ IV, ೧೨.

ಆದರೂ ಅರ್ಥ—ಪುನರುಕ್ತಿಯನ್ನು ಮಾತ್ರ ಉದಾಹರಿಸಿರುವಂತಿದೆ—

ಉತ್ಕಾಮುನ್ಮನಯಂತ್ಯೇತೇ ಬಾಲಾಂ ತದಲಕತ್ವಿಷಃ ।
ಅಂಭೋಧರಾಸ್ತಟಿತ್ವನ್ತೋ ಗಂಭೀರಾಃ ಸ್ತನಯಿತ್ನವಃ ॥ IV, ೧೨.

ನ ಶಬ್ದಪುನರುಕ್ತಂ ತು ಸ್ಫಾಲ್ಯಾದತ್ರೋಪವರ್ಣ್ಯತೇ ।
ಕಥಮಾಕ್ಷಿಪ್ತಚಿತ್ತಃ ಸನ್ನುಕ್ತಮೇವಾಭಿಧಾಸ್ಯತೇ ॥೧೩॥

ಶಬ್ದದ ಪುನರುಕ್ತಿಯು ಎದ್ದು ಕಾಣುವಂತಹುದಾದ್ದರಿಂದ ನಾವಿಲ್ಲಿ ವಿವರಿಸುವುದಿಲ್ಲ. ಮನಸ್ಸು ನೆಟ್ಟಗಿರುವವನಾಗಿ, ಹೇಳಿದ್ದನ್ನೇ ತಿರುಗಿ ಹೇಗೆ ತಾನೆ ಹೇಳಿಯಾನು ?

ಭಯಶೋಕಾಭ್ಯಸೂಯಾಸು ಹರ್ಷವಿಸ್ಮಯಯೋರಪಿ ।
ಯಥಾಹ ಗಚ್ಛ ಗಚ್ಛೇತಿ ಪುನರುಕ್ತಂ ನ ತದ್ವಿದುಃ ॥೧೪॥

ಭಯ, ಶೋಕ, ಅಸೂಯೆ, ಹರ್ಷ, ವಿಸ್ಮಯ, ಇವುಗಳ ಭರದಲ್ಲಿ "ಹೋಗು ಹೋಗು" ಎಂದು ಮುಂತಾಗಿ ಒಂದನ್ನೇ ಮತ್ತೆ ಮತ್ತೆ ಹೇಳಿದರೂ ಅದನ್ನು ಪುನರುಕ್ತದೋಷವೆಂದು ಪರಿಗಣಿಸುವುದಿಲ್ಲ.[10]

ಅತ್ರಾರ್ಥಪುನರುಕ್ತಂ ಯತ್ ತದೇವೈಕಾರ್ಥಮಿಷ್ಯತೇ ।
ಉಕ್ತಸ್ಯ ಪುನರಾಖ್ಯಾನೇ ಕಾರ್ಯಾಸಂಭವತೋ ಯಥಾ ॥೧೫॥

ಅರ್ಥದಲ್ಲಿ ಪುನರುಕ್ತಿಯೆಲ್ಲಿದೆಯೋ ಅದನ್ನು ಮಾತ್ರ ನಾವು 'ಏಕಾರ್ಥ'ವೆನ್ನುತ್ತೇವೆ, ಹೇಳಿದ ವಿಷಯವನ್ನೇ ಮತ್ತೆ ಹೇಳುವುದರಿಂದ ಯಾವ ಪ್ರಯೋಜನವೂ ಇರದ ಕಾರಣ. ಉದಾಹರಣೆ—

ತಾಮುತ್ಕಮನಸಂ ನೂನಂ ಕರೋತಿ ಧ್ವನಿರಂಭಸಾಮ್ ।
ಸೌಧೇಷು ಘನಮುಕ್ತಾನಾಂ ಪ್ರಣಾಲೀಮುಖಪಾತಿನಾಮ್ ॥೧೬॥

---

10 ಭಾಮಹನ ದೃಷ್ಟಿಯಲ್ಲಿ ದೋಷಗಳು ನಿತ್ಯವಲ್ಲ ; ಅನಿತ್ಯವೇ ಎಂಬುದು ಇಲ್ಲಿ ಸ್ಪಷ್ಟ. ಈ ತತ್ತ್ವವನ್ನೇ ಮತ್ತೂ ವಿಸ್ತರಿಸಿ ಆನಂದವರ್ಧನಾದಿಗಳು ದೋಷವು ಮೂಲತಃ ಶಬ್ದಾರ್ಥಗಳಿಗೆ, ವಾಕ್ಯಕ್ಕೆ, ಅನ್ವಯಿಸಲೇ ಆರದು ; ಅವೆಲ್ಲವೂ ಬಹಿರಂಗಗಳು ; ಅಂತರಂಗವಾದ ರಸಕ್ಕೆ ಮಾತ್ರ ಅನ್ವಯಿಸಿದರೆ ದೋಷತ್ವವನ್ನು ತಾಳುವುವೆಂಬ ನವೀನ ಪ್ರಕ್ರಿಯೆಯನ್ನೇ ಸಾಧಿಸಿದರು. ಈ ನೂತನ ದೃಷ್ಟಿಯಲ್ಲಿ ಅನೌಚಿತ್ಯವೊಂದೇ ದೋಷ. ಹೋಲಿಸಿ—"ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಮ್" (**ಕನ್ನಡ ಧ್ವನ್ಯಾಲೋಕ**, ಪುಟ ೯೫) ಮತ್ತು "ಮುಖ್ಯಾರ್ಥಹತಿರ್ದೋಷಃ ರಸಶ್ಚ ಮುಖ್ಯಃ ತದಾಶ್ರಯಾದ್ವಾಚ್ಯಃ । ಉಭಯೋಪಯೋಗಿನಃ ಸ್ಯುಃ ಶಬ್ದಾದ್ಯಾಃ ತೇನ ತೇಷ್ವಪಿ ಸಃ" ॥—ಕಾವ್ಯಪ್ರಕಾಶ, VII, ೧.)

ಮೋಡಗಳಿಂದ ಬೀಳುತ್ತಾ ಮನೆಯ ಸೂರುಕಟ್ಟುಗಳಲ್ಲಿ ಸುರಿಯುವ ನೀರುಗಳ ಸದ್ದು ನಿಜವಾಗಿಯೂ ಆಕೆಯನ್ನು ಉತ್ಕಂಠಿತ ಚಿತ್ತಳನ್ನಾಗಿ ಮಾಡುವುದು.[11]

ಸಸಂಶಯ

ಶ್ರುತೇಃ ಸಾಮಾನ್ಯಧರ್ಮಾಣಾಂ ವಿಶೇಷಸ್ಯಾನುದಾಹೃತೇಃ।
ಅಪ್ರತಿಷ್ಠಂ ಯದತ್ರೇತಿ ತಜ್ಜ್ಞಾನಂ ಸಂಶಯಂ ವಿದುಃ[12] ॥೧೭॥

ಎರಡಕ್ಕೂ ಸಮಾನವಾದ ಅಂಶಗಳನ್ನು ಮಾತ್ರ ಹೇಳಿ, ಒಂದೊಂದಕ್ಕೂ ಬೇರೆಯಾದ ಅಂಶಗಳನ್ನು ಹೇಳದೆ ಹೋದರೆ ಇದು ಹೀಗೆಂಬ ನಿರ್ಣಯವಿಲ್ಲದೆ ಹೋಗುವ ಜ್ಞಾನವೇ ಸಂಶಯ.

ಸಸಂಶಯಮಿತಿ ಪ್ರಾಹುಸ್ತತಸ್ತಜ್ಜನನಂ ವಚಃ।
ಇಷ್ಟಂ ನಿಶ್ಚಿತಯೇ ವಾಕ್ಯಂ ನ ವೇಲಾಯೇತಿ ತದ್ಯಥಾ ॥೧೮॥

ಆದರಿಂದಲೇ ಅದನ್ನು (=ಸಂಶಯವನ್ನು) ಹುಟ್ಟಿಸುವಂತಹ ಮಾತನ್ನು 'ಸಸಂಶಯ'ವೆನ್ನುವರು. ವಾಕ್ಯವು ಯಾವಾಗಲೂ ನಿಶ್ಚಿತವಾಗಿರಬೇಕೆಂದು ಬಯಸುವರೇ ಹೊರತು ಬದಲಾಯಿಸುತ್ತಿರಲೆನ್ನುವುದಿಲ್ಲ (?).[13] ಉದಾಹರಣೆ—

ವ್ಯಾಲವಂತೋ ದುರಾರೋಹಾ ರತ್ನವಂತಃ ಫಲಾನ್ವಿತಾಃ।
ವಿಷಮಾ ಭೂಭೃತಸ್ತೇಭ್ಯೋ ಭಯಮಾಶು ಪ್ರಮಾದಿನಾಮ್ ॥೧೯॥

ವ್ಯಾಲಗಳು (=ಸರ್ಪಗಳು ಮತ್ತು ದುರ್ಜನರು) ಸುತ್ತಿಕೊಂಡ, ದುರಾರೋಹ (=ಏರಲು ದುಷ್ಕರ ಮತ್ತು ಸಮೀಪಿಸಲು ದುಷ್ಕರ)ಗಳಾದ, ರತ್ನ ಮತ್ತು ಫಲಗಳಿಂದ ತುಂಬಿದ ಭೂಧರಗಳು (=ಪರ್ವತಗಳು ಮತ್ತು ಅರಸರು) ವಿಷಮವೇ (=ಸಮತಲವಲ್ಲ ಮತ್ತು ನಿಷ್ಠುರಸ್ವಭಾವದವರು). ಸ್ವಲ್ಪ ಮೈಮರೆತರೂ ಆಕ್ಷಣ ಅವುಗಳಿಂದ (ಮತ್ತು ಅವರಿಂದ) ಭಯವೇ.[14]

---

11 ಮೂಲಶ್ಲೋಕದ ಪಾಠದಲ್ಲಿ ತಪ್ಪಿರುವಂತೆ ಕಾಣುತ್ತದೆ. 'ತಾಮ್' ಎಂಬ ಸ್ತ್ರೀಲಿಂಗಾಂತ ಶಬ್ದಕ್ಕೂ 'ಉತ್ಕಮನಸಂ' ಎಂಬ ರೂಪಕ್ಕೂ ಅನ್ವಯವು ಸುಲಭವಾಗಿಲ್ಲ. ಆದರೆ ಮಳೆಯೆಂಬ ಒಂದೇ ವಿಷಯವನ್ನು ಮತ್ತೆ ಮತ್ತೆ ಶಬ್ದಾಂತರಗಳಿಂದ ಹೇಳಿರುವುದು ಸ್ಪಷ್ಟ.

12 "ಯದತ್ರೇತಿ" ಎಂಬುದಕ್ಕೆ ಪ್ರತಿಯಾಗಿ "ಯದೇಕತ್ರ" ಎಂಬ ಪಾಠದಿಂದ ಈ ಶ್ಲೋಕವನ್ನು ವಾದಿಜಂಘಾಲನು ಕಾವ್ಯಾದರ್ಶ ಟೀಕೆಯಲ್ಲಿ ಉದಾಹರಿಸಿದ್ದಾನೆ.

13 'ವೇಲಾಯ' ಎಂಬ ಪಾಠದಲ್ಲಿ ತಪ್ಪಿರಬಹುದೆ?

14 ಕಾವ್ಯಾನುಶಾಸನ ಟೀಕೆಯಲ್ಲಿ ಇದು ಉದಾಹೃತವಾಗಿದೆ. ಇಲ್ಲಿ ನವೀನರ ಪ್ರಕಾರ ಶ್ಲೇಷಾಲಂಕಾರವನ್ನೇ ಹೇಳಬಹುದು—ರಾಜರು ಮತ್ತು ಬೆಟ್ಟಗಳು ಎರಡೂ ಪ್ರಸ್ತುತವೆಂದು

ಅಪಕ್ರಮ

ಯಥೋಪದೇಶಂ ಕ್ರಮಶೋ ನಿರ್ದೇಶೋಽತ್ರ ಕ್ರಮೋ ಮತಃ ।
ತದಪೇತಂ ವಿಪರ್ಯಾಸಾದ್ ಇತ್ಯಾಖ್ಯಾತಮಪಕ್ರಮಮ್ ॥ ೨೦ ॥

ಯಾವ ಅನುಕ್ರಮದಲ್ಲಿ ಪ್ರಾರಂಭವಾಗಿದೆಯೋ ಆ ಅನುಕ್ರಮವನ್ನೇ ಕಡೆಯುವರೆಗೂ ಬಿಡದಿರುವುದೇ 'ಕ್ರಮ.' ಅದು ಅದಲುಬದಲಾದರೆ ಕ್ರಮವು ತಪ್ಪುವುದರಿಂದ 'ಅಪಕ್ರಮ'ವೆನಿಸುತ್ತದೆ.[16]

ವಿದಧಾನೌ ಕಿರೀಟೇನ್ದೂ ಶ್ಯಾಮಾಭ್ರಹಿಮಸಚ್ಛವೀ ।
ರಥಾಂಗಶೂಲೇ ಬಿಭ್ರಾಣೌ ಪಾತಾಂ ವಃಶಂ ಭುಶಾಙ್ರ್ಗಿಣೌ ॥ ೨೧ ॥

ಕಿರೀಟ ಮತ್ತು ಚಂದ್ರರನ್ನು ತಲೆಯಲ್ಲಿ ಧರಿಸಿ, ನೀಲಮೇಘ ಮತ್ತು ಹಿಮಕ್ಕೆ ಸದೃಶವಾದ ಕಾಂತಿಯಿಂದ, ಚಕ್ರಶೂಲಗಳನ್ನು ಹಿಡಿದು ಶೋಭಿಸುವ ಶಂಭುವಿಷ್ಣುಗಳು ನಿಮ್ಮನ್ನು ಕಾಪಾಡಲಿ.

ಸೂತ್ರಕೃತ್ಪದಕಾರೇಷ್ಟಪ್ರಯೋಗಾದ್ಯೋಽನ್ಯಥಾ ಭವೇತ್ ।
ತಮಾಪ್ತಶ್ರಾವಕಾ[16]ಸಿದ್ಧೇಃ ಶಬ್ದಹೀನಂ ವಿದುರ್ಯಥಾ ॥ ೨೨ ॥

ಸೂತ್ರಕಾರ[17], ಪದಕಾರ[18], ಇವರಿಗೆ ಇಷ್ಟವಾದ ಪ್ರಯೋಗಕ್ಕಿಂತ ಯಾವುದು ಬೇರೆಯಾಗಿರುವುದೋ, ಅದನ್ನು ಶಿಷ್ಟರು ಕೇಳಲು ಸಿದ್ಧರಲ್ಲದ ಪ್ರಯುಕ್ತ 'ಶಬ್ದಹೀನ'ವೆನ್ನುವರು.[19]

ಪರಿಗಣಿಸಿದರೆ, ಒಂದೇ ಪ್ರಸ್ತುತವಾದರೆ ಇನ್ನೊಂದು ಶಬ್ದಶಕ್ತಿಮೂಲಧ್ವನಿಯೆನಿಸಬಹುದು. ಇಲ್ಲಿ ಯಾವುದು ಪ್ರಸ್ತುತ, ಯಾವುದು ಅಲ್ಲ ಎಂದು ನಿರ್ಧರಿಸಲು ಪ್ರಕರಣ (= Context)ವೇ ನಿಯಾಮಕ. ಅದು ಗೊತ್ತಿಲ್ಲವೆಂದರೆ 'ಸಸಂಶಯ'ವೆಂಬ ದೋಷವು ಪ್ರಸಕ್ತವಾಗುತ್ತದೆ.

15 ಈ ದೋಷವು 'ಯಥಾಸಂಖ್ಯ'ವೆಂಬ ಅಲಂಕಾರಕ್ಕೆ ನೇರವಾಗಿ ವಿರುದ್ಧ. ಯಾವ ಅನುಕ್ರಮ—ನಿಯಮದ ಪಾಲನೆಯಿಂದ ಯಥಾಸಂಖ್ಯವು ಅಲಂಕಾರವೆನಿಸುವುದೋ ಅದೇ ನಿಯಮದ ಭಂಗದಿಂದ 'ಅಪಕ್ರಮ' ದೋಷವು ಪ್ರಾಪ್ತವಾಗುವುದು.

16 'ಶ್ರಾವಕಾಃ' ಎಂದು ಪಾಠಾಂತರ.

17 **ಸೂತ್ರಕಾರ**ನೆಂದರೆ ಪಾಣಿನಿ, 'ಅಷ್ಟಾಧ್ಯಾಯೀ' ಎಂಬ ಸಂಸ್ಕೃತ ವ್ಯಾಕರಣಸೂತ್ರಗಳನ್ನು ಬರೆದವನು.

18 ಪದಕಾರನೆಂದರೆ ವಾರ್ತಿಕಕಾರನಾದ ಕಾತ್ಯಾಯನ.

19 ಈ ಭಾಮಹನ ಮಾತನ್ನೇ ಹೋಲುವ 'ಅಶಿಷ್ಟೇಷ್ಟಃ' ಎಂಬ ವಿಶೇಷಣವನ್ನು ದಂಡಿಯು ತನ್ನ ಲಕ್ಷಣದಲ್ಲಿ ಹೇಳುತ್ತಾನೆ. ಹೋಲಿಸಿ—ಕಾವ್ಯಾದರ್ಶ, IV, ೨೫.

ಸ್ಫುರತ್ತಟಿದ್ವಲಯಿನೋ ವಿತತಾಂಭೋಗರೀಯಸಃ ।
ತೇಜಸ್ತಿರಯತಃ ಸೌರಂ ಘನಾನ್ ಪಶ್ಯ ದಿವೋಽಭಿತಃ[20] ॥ ೨೩॥

ಹೊಳೆಯುವ ಮಿಂಚೆಂಬ ಬಟ್ಟೆಗಳನ್ನು ತೊಟ್ಟು, ಹೇರಳವಾದ ನೀರಿನಿಂದ ಭಾರವಾಗಿ, ಸೂರ್ಯನ ಕಾಂತಿಯನ್ನೂ ಕುಂದಿಸುತ್ತಿರುವ ಮೋಡಗಳನ್ನು ದಿಗಂತದಲ್ಲಿ ನೋಡು !

ಯತಿಭ್ರಷ್ಟ

ಯತಿಶ್ಛನ್ದೋಽಧಿರೂಢಾನಾಂ ಶಬ್ದಾನಾಂ ಯಾ ವಿಚಾರಣಾ ।
ತದಪೇತಂ ಯತಿಭ್ರಷ್ಟಮಿತಿ ನಿರ್ದಿಶ್ಯತೇ ಯಥಾ ॥

ಛಂದಶ್ಶಾಸ್ತ್ರದ ನಿಯಮಗಳಿಗನುಸಾರವಾಗಿ ಶಬ್ದಗಳು ನಿಲ್ಲಬೇಕೆಂಬ ಪರಾಮರ್ಶವೇ ಯತಿ[21]. ಅದಿಲ್ಲದ್ದು 'ಯತಿಭ್ರಷ್ಟ'ವೆನಿಸುತ್ತದೆ. ಉದಾಹರಣೆ—

ವಿದ್ಯುನ್ತ್ವನ್ನಸ್ತಮಾಲಾಸಿತವಪುಷ ಇಮೇ ವಾರಿವಾಹಾ ಧ್ವನಂತಿ[22] ॥ ೨೪॥

ಮಿಂಚುಗಳನ್ನು ಪಡೆದು ಹೊಗೆಯಂತೆ ನೀಲವಾದ ಮೈಯುಳ್ಳ ಈ ಮೋಡಗಳು ಗರ್ಜಿಸುತ್ತವೆ.

ಭಿನ್ನವೃತ್ತ

ಗುರುರ್ಲಘೋಶ್ಚ ವರ್ಣಸ್ಯ ಯೋಽಸ್ಥಾನೇ ರಚನಾವಿಧಿಃ ।
ತನ್ನ್ಯೂನಾಧಿಕತಾ ವಾಪಿ ಭಿನ್ನವೃತ್ತಮಿದಂ ಯಥಾ ॥ ೨೫॥

ಗುರು ಮತ್ತು ಲಘು ಅಕ್ಷರಗಳನ್ನು ಅಸ್ಥಾನದಲ್ಲಿ ಪ್ರಯೋಗಿಸುವುದೂ,

---

[20] ಇಲ್ಲಿರುವ ವ್ಯಾಕರಣದೋಷಗಳಿಗೆ ಮೂಲಶ್ಲೋಕದ ಪ್ರಯೋಗಗಳು ಮಾತ್ರ ಲಕ್ಷ್ಯ. 'ದಿವೋಽಭಿತಃ' ಎಂಬಲ್ಲಿ ಷಷ್ಠೀವಿಭಕ್ತಿಯ ಬದಲು 'ದಿವಮ್ ಅಭಿತಃ' ಎಂದು ದ್ವಿತೀಯಾ ವಿಭಕ್ತಿಯಿರಬೇಕಾಗಿತ್ತು (ಅಭಿತಃ ಪರಿತಃ ಸಮಯಾನಿಕಷಾಹಾಪ್ರತಿಯೋಗೇಽಪಿ—ವಾರ್ತಿಕ).

[21] ಹೋಲಿಸಿ—'ಶ್ಲೋಕೇಷು ನಿಯತಸ್ಥಾನಂ ಪದಚ್ಛೇದಂ ಯತಿಂ ವಿದುಃ' |—ದಂಡಿ, IV, ೨೯.

[22] ಇದು ಸ್ರಗ್ಧರಾವೃತ್ತ. ಏಳನೆಯ ಅಕ್ಷರದ ಕಡೆಗೆ ಯತಿಭಂಗವಾಗಿದೆ—ಯತಿನಿಯಮಕ್ಕೆ ತಕ್ಕಂತೆ ನಿಲ್ಲಿಸಿಕೊಂಡು ಓದಿದರೆ 'ಅಸಿತ' ಎಂಬುದು ಹೋಗಿ ವಿರುದ್ಧವಾದ 'ಸಿತ' ಎಂಬ ಶಬ್ದಭಾಗವೇ ನಿಲ್ಲುವುದರಿಂದ.

ವೃತ್ತದ ಅಕ್ಷರಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಗಳಾಗುವುದೂ 'ಭಿನ್ನವೃತ್ತ'. ಉದಾಹರಣೆ—

ಭ್ರಮತಿ ಭ್ರಮರಮಾಲಾ ಕಾನನೇಷೂನ್ಮದಾಸೌ ।
ವಿರಹಿತರಮಣೀಕೋಽರ್ಹಸ್ಯದ್ಯ ಗಂತುಮ್[23] ॥೨೬॥

ಇಗೋ ! ಮತ್ತವಾದ ದುಂಬಿವಿಂಡು ಕಾಡುಗಳಲ್ಲಿ ಅಲೆಯುತ್ತಿದೆ. ನಲ್ಲೆಯನ್ನಗಲಿದ ನೀನು ಹೋಗುವುದೇ ಸರಿ.

ವಿಸಂಧಿ

ಕಾಂತೇ ಇಂದುಶಿರೋರತ್ನೇ ಆದಧಾನೇ ಉದಂಶುನೀ ।
ಪಾತಾಂ ವಃ ಶಂಭುಶರ್ವಾಣ್ಯಾವಿತಿ ಪ್ರಾಹುರ್ವಿಸಂಧ್ಯದಃ[24] ॥೨೭॥

ಸುಂದರವೂ ಕಾಂತಿಯುಕ್ತವೂ ಆದ ಚಂದ್ರ ಮತ್ತು ಶಿರೋಮಣಿಗಳನ್ನು ಧರಿಸಿದ ಶಿವಪಾರ್ವತಿಯರು ಕಾಪಾಡಲಿ ! ಇಲ್ಲಿ 'ಮೂಲಶ್ಲೋಕದಲ್ಲಿ'ಪದಗಳನ್ನು ಸಂಧಿಮಾಡದೆ ಇರುವುದರಿಂದ 'ವಿಸಂಧಿ' ಯೆಂಬ ದೋಷವುಂಟು.

---

23 ಇದು ಮಾಲಿನೀವೃತ್ತ. ಮೊದಲ ಸಾಲಿನಲ್ಲಿ ಮೊದಲನೆಯದು ನಗಣ (⏑⏑⏑) ವಾಗಿರಬೇಕಾಗಿತ್ತು. ಆದರೆ 'ಭ್ರಮತಿ ಭ್ರಮರ . . .' ಎನ್ನುವಾಗ ಸಂಯುಕ್ತಾಕ್ಷರವಾದ 'ಭ್ರ' ಎಂಬುದರ ಹಿಂದಿನ 'ತಿ' ಎಂಬ ವರ್ಣ ದೀರ್ಘವೆನಿಸಿ, ಮೊದಲನೆಯ ಗಣವು ಸಗಣ (⏑⏑—) ವಾಗಿದೆ. ಎರಡನೆಯ ಸಾಲಿನಲ್ಲಿ ಹದಿನೈದು ಅಕ್ಷರಗಳ ಬದಲು ಹದಿಮೂರೇ ಅಕ್ಷರಗಳಿವೆ.

24 ಭಾಮಹನ ಪ್ರಕಾರ ಸಂಧಿಮಾಡಲವಕಾಶವಿರಲಿ, ಇಲ್ಲದಿರಲಿ, ಸಂಧಿ ಮಾಡದಿರುವುದು 'ವಿಸಂಧಿ.' ಪ್ರಕೃತಿಭಾವಗಳು ವ್ಯಾಕರಣ ನಿಯಮಗಳನ್ನನುಸರಿಸಿ ಬಂದಿದ್ದರೂ ಅದು ವಿಸಂಧಿಯೇ ಆಗುತ್ತದೆ. ಇಲ್ಲಿ ಇಂದುಶಿರೋರತ್ನೇ ಆದಧಾನೇ ಉದಂಶುನೀ ಎಂಬ ಸ್ವರಾದಿಯಾದ ಪದಗಳೆಲ್ಲವೂ ಈಕಾರಾಂತ ಇಲ್ಲವೆ ಏಕಾರಾಂತವಾದ ದ್ವಿವಚನಗಳಾದುದರಿಂದ 'ಈದೂದೇದ್ ದ್ವಿವಚನಂ ಪ್ರಗೃಹ್ಯಮ್' ಎಂಬ ಸೂತ್ರದಿಂದ 'ಪ್ರಗೃಹ್ಯ'ವೆಂಬ ಸಂಜ್ಞೆಯನ್ನು ಪಡೆಯುವುವು. ಪ್ರಗೃಹ್ಯಗಳಿಗೆ ಸ್ವರಸಂಧಿಯ ನಿಯಮಗಳು ಅನ್ವಯಿಸುವುದಿಲ್ಲ. ಆದರೆ ದಂಡಿಯು ಈ ಮತವನ್ನು ಖಂಡಿಸುತ್ತಾನೆ. ಸಂಧಿಮಾಡಲವಕಾಶವಿದ್ದರೂ ಮಾಡದಿರುವುದು ಮಾತ್ರ ಅವನ ದೃಷ್ಟಿಯಲ್ಲಿ ವಿಸಂಧಿ ; ಪ್ರಗೃಹ್ಯಗಳ ಕಾರಣದಿಂದ ಅಗತ್ಯವಾಗುವ ವಿಸಂಧಿಯಲ್ಲ. ಹೋಲಿಸಿ—

ನ ಸಂಹಿತಾಂ ವಿವಕ್ಷಾಮೀತ್ಯಸಂಧಾನಂ ಪದೇಷು ಯತ್ ।
ತದ್ವಿಸಂಧೀತಿ ನಿರ್ದಿಷ್ಟಂ ನ ಪ್ರಗೃಹ್ಯಾದಿಹೇತುಕಮ್ ॥

ಕಾವ್ಯಾದರ್ಶ, IV, ೩೬.

ದೇಶವಿರೋಧಿ

ಯೊ ದೇಶೇ ದ್ರವ್ಯಸಂಭೂತಿರಪಿ ವಾ ನೋಪದಿಶ್ಯತೇ ।
ತತ್ತದ್ವಿರೋಧಿ ವಿಜ್ಞೇಯಂ ಸ್ವಭಾವಾತ್ ತದ್ಯಥೋಚ್ಯತೇ ॥ ೨೮॥

ಯಾವ ಸ್ಥಲದಲ್ಲಿ ಒಂದು ವಸ್ತುವು ಸಂಭವವೋ ಅಲ್ಲಿ ಅದನ್ನು ಹೇಳದೆ ಮತ್ತಾವುದೋ ಸ್ವಭಾವತಃ ವಿರುದ್ಧವಾದುದನ್ನು ಹೇಳುವುದು 'ದೇಶವಿರೋಧಿ'. ಉದಾಹರಣೆ—

ಮಲಯೇ ಕಂದರೋಪಾಂತರೂಢಕಾಲಾಗುರುದ್ರುಮೇ ।
ಸುಗಂಧಿಕುಸುಮಾನಮ್ರಾ ರಾಜಂತೇ ದೇವದಾರವಃ ॥ ೨೯॥

ಗುಹೆಗಳ ಹತ್ತಿರ ಅಗಿಲಿನ ಮರಗಳು ಬೆಳೆದುಕೊಂಡಿರುವ ಮಲಯ ಪರ್ವತದಲ್ಲಿ ದೇವದಾರುಗಳು ಪರಿಮಳದ ಹೂಗಳ ಭಾರದಿಂದ ಬಾಗಿ ಕಂಗೊಳಿಸುತ್ತವೆ![25]

ಕಾಲವಿರೋಧಿ

ಷಣ್ಣಾಂ ಋತೂನಾಂ ಭೇದೇನ ಕಾಲಃ ಷೋಢೇವ ಭಿದ್ಯತೇ ।
ತದ್ವಿರೋಧಕೃದಿತ್ಯಾಹುಃ ವಿಪರ್ಯಾಸಾದಿದಂ ಯಥಾ ॥ ೩೦ ॥

ಕಾಲವನ್ನು ಆರು ಋತುಗಳೆಂದು ಆರು ವಿಭಾಗ ಮಾಡಲಾಗಿದೆ. ಆ ನಿಯಮವನ್ನು ಭಂಗಿಸಿದರೆ, 'ಕಾಲವಿರೋಧಿ' ಯೆಂಬ ದೋಷ. ಉದಾಹರಣೆ—

ಉದೂಢಶಿಶಿರಾಸಾರಾನ್ ಪ್ರಾವೃಷೇಣ್ಯಾನ್ ನಭಸ್ವತಃ ।
ಫುಲ್ಲಾಃ ಸುರಭಯಂತೀಮೇ ಚೂತಾಃ ಕಾನನಶೋಭಿನಃ ॥ ೩೧॥

ಅರಳಿದ ಹೂಗಳಿಂದ ಕಾಡಿನಲ್ಲಿ ಕಂಗೊಳಿಸುವ ಮಾವಿನ ಮರಗಳು ಮಳೆಗಾಲದ ಮಳೆಯ ಹನಿಗಳನ್ನು ಹೊತ್ತ ಗಾಳಿಗಳನ್ನು ಸುಗಂಧಿಗಳನ್ನಾಗಿ ಮಾಡುತ್ತವೆ![26]

ಕಲಾವಿರೋಧಿ

ಕಲಾ ಸಂಕಲನಾ ಪ್ರಜ್ಞಾ ಶಿಲ್ಪಾನ್ಯಸ್ಯಾಶ್ಚ ಗೋಚರಃ ।
ವಿಪರ್ಯಸ್ತಂ ತಥೈವಾಹುಸ್ತದ್ವಿರೋಧಕರಂ ಯಥಾ ॥ ೩೨ ॥

---

[25] ಅಗಿಲಿನ ಮರಗಳಾಗಲಿ ದೇವದಾರುಗಳಾಗಲಿ ಮಲಯದಲ್ಲಿ ಬೆಳೆಯುವುದಿಲ್ಲ. ಇವು ಹಿಮಾಚಲ ಪ್ರದೇಶದಲ್ಲಿ ಬೆಳೆಯುವುದು ಪ್ರಸಿದ್ಧ.

[26] ಮಳೆಗಾಲದಲ್ಲಿ ಮಾವಿನ ಮರಗಳೆಂದೂ ಹೂ ಬಿಡುವುದಿಲ್ಲ.

ಚೆನ್ನಾಗಿ ಒಟ್ಟಾಗಿಸುವ ಪ್ರಜ್ಞೆಯೇ ಕಲೆ. ಕುಶಲ ಕರ್ಮಗಳೇ ಮುಂತಾದುವು ಇದರಲ್ಲಿ ಅಡಕವಾಗುತ್ತವೆ. ಆ ನಿಯಮಕ್ಕೆ ವಿರುದ್ಧವಾಗಿ ಹೇಳಿದರೆ 'ಕಲಾವಿರೋಧಿ 'ಯೆನ್ನುವರು.[27] ಉದಾಹರಣೆ—

ಋಷಭಾತ್ ಪಂಚಮಸ್ತಸ್ಮಾತ್ ಸಷಡ್ಜಂ ಧೈವತಂ ಸ್ಮೃತಮ್ ।
ಅಯಂ ಹಿ ಮಧ್ಯಮಗ್ರಾಮೋ ಮಧ್ಯಮೋತ್ಕ್ಷಿಪ್ತರ್ಷಭಃ ॥ ೩೩॥

ಇತಿ ಸಾಧಾರಿತಂ ಮೋಹಾದನ್ಯಥೈವಾವಗಚ್ಛತಿ ।
ಅನ್ಯಾಸ್ವಪಿ ಕಲಾಸ್ವೇವಮಭಿಧೇಯಾ ವಿರೋಧಿತಾ ॥ ೩೪॥

ಋಷಭದಿಂದ ಪಂಚಮ ; ಅದರಿಂದ ಷಡ್ಜಸಹಿತವಾದ ಧೈವತ ; ಋಷಭವನ್ನು ಮಧ್ಯಮದಿಂದ ಒತ್ತುವುದೇ ಮಧ್ಯಮಗ್ರಾಮ—ಎನ್ನುವವನು ಪ್ರಸಿದ್ಧವಾದುದನ್ನು ಭ್ರಾಂತಿಯಿಂದ ಬೇರೆಯಾಗಿಯೇ ತಿಳಿಯುತ್ತಿರುವನು.[28] ಉಳಿದ ಕಲೆಗಳಲ್ಲಿಯೂ ಹೀಗೆಯೇ ವಿರೋಧವನ್ನು ತಿಳಿಯಬೇಕು.

ಲೋಕವಿರೋಧಿ

ಸ್ಥಾಸ್ನುಜಂಗಮಭೇದೇನ ಲೋಕಂ ತತ್ತ್ವವಿದೋ ವಿದುಃ ।
ಸ ಚ ತದ್ವ್ಯವಹಾರೋऽತ್ರ ತದ್ವಿರೋಧಕರಂ ಯಥಾ ॥ ೩೫॥

---

[27] ಇಲ್ಲಿ ಬರುವ 'ಕಲೆ' ಮತ್ತು 'ಶಿಲ್ಪ' ಈ ಶಬ್ದಗಳಿಗೆ ಇಂದಿನ ಯುಗದ ಅರ್ಥಗಳನ್ನು ಕಲ್ಪಿಸಿ ಅಪಾರ್ಥಮಾಡಲಾಸ್ಪದವಿದೆ. ಪ್ರಾಚೀನಭಾರತದಲ್ಲಿ ಕಲೆಗಳು "ಚತುಷ್ಷಷ್ಟಿ" ಅಥವಾ ೬೪ ಎನ್ನುತ್ತಿದ್ದರು. ಇವುಗಳಿಗೆಲ್ಲಾ ಸಮಾನವಾದ ಅಂಶವೆಂದರೆ—ಬಿಡಿಬಿಡಿಯಾದ ಬೇರೆ ಅಂಶಗಳನ್ನು ಹೊಸದಾಗಿ ಅಳವಡಿಸಿಕೊಂಡು ನೂತನಕಾರ್ಯವನ್ನು ಮಾಡುವುದು. ಇವುಗಳಲ್ಲಿ ನಾವಿಂದು *fine arts* ಎನ್ನುವ ಕಾರ್ಯಗಳು ಬರುತ್ತಿದ್ದಂತೆಯೇ *useful arts* ಅಥವಾ ಉಪಯುಕ್ತ ಸಂಯೋಜನೆಗಳು ಕೂಡ ಅಂತರ್ಗತವಾಗುತ್ತಿದ್ದುವು. ಅಮರಕೋಶದಲ್ಲಿ "ಶಿಲ್ಪಂ ಕರ್ಮ ಕಲಾದಿಕಮ್" ಎಂದು ಹೇಳಿದೆ. 'ಶಿಲ್ಪ'ವೆಂದರೆ 'ಕಾರ್ಯಕೌಶಲ'ವೆಂದರ್ಥವೇ ಹೊರತು ದೇವಾಲಯವೇ ಮೊದಲಾದ ಕಟ್ಟಡಗಳನ್ನು ಕಟ್ಟುವುದೆಂದರ್ಥವಲ್ಲ. ಈ ಸಂದರ್ಭದಲ್ಲಿ ಕಾಳಿದಾಸನ "ಪಾತ್ರವಿಶೇಷೇ ನ್ಯಸ್ತಂ ಗುಣಾಂತರಂ ವ್ರಜತಿ **ಶಿಲ್ಪಮ್** ಆಧಾತುಃ" (ಮಾಳವಿಕಾಗ್ನಿಮಿತ್ರ I. ೬) ಎಂಬ ಪ್ರಯೋಗವನ್ನು ನೆನೆಯಬಹುದು. ಆದ್ದರಿಂದಲೇ ದಂಡಿಯು "ನೃತ್ಯಗೀತಪ್ರಭೃತಯಃ ಕಲಾಃ **ಕಾಮಾರ್ಥಸಂಶ್ರಯಾಃ**" ಎನ್ನುತ್ತಾನೆ. ಕಾಮ ಮತ್ತು ಅರ್ಥ ಎರಡನ್ನೂ ಅವಲಂಬಿಸಿ ಹೊರಟವೇ ಕಲೆಗಳು. ಈ ದೃಷ್ಟಿಯಿಂದಲೇ ಕಳ್ಳತನವೂ ಒಂದು 'ಕಲೆ'ಯಾಗುತ್ತದೆ.

[28] ಗೀತಕಲೆಯಲ್ಲಿ ಸ್ವರಗಳು ಏಳು—"ಷಡ್ಜಶ್ಚ ಋಷಭಶ್ಚೈವ ಗಾಂಧಾರೋ ಮಧ್ಯಮಸ್ತಥಾ । ಪಂಚಮೋ ಧೈವತಶ್ಚೈವ ನಿಷಾದಃ ಸಪ್ತ ತೇ ಸ್ವರಾಃ"—ಭರತ. ಲಕ್ಷ್ಯದಲ್ಲಿ ಹೇಳಿರುವ ಸ್ವರಗಳ ಉತ್ಪತ್ತಿಕ್ರಮವು ಸಂಗೀತಕಲೆಗೆ ವಿರುದ್ಧ.

ಲೋಕವು ಸ್ಥಾವರ, ಜಂಗಮ ಎಂದು ಎರಡು ಬಗೆಯೆಂದು ಬಲ್ಲವರು ತಿಳಿಯು ತ್ತಾರೆ. ಇಲ್ಲಿ 'ಲೋಕ'ವೆಂದರೆ ಸ್ಥಾವರ—ಜಂಗಮ ಲೋಕದ ವ್ಯವಹಾರ. ಅದಕ್ಕೆ ವಿರುದ್ಧವಾದುದೇ 'ಲೋಕವಿರೋಧಿ.' ಉದಾಹರಣೆ—

ತೇಷಾಂ ಕಟತಟಭ್ರಷ್ಟೈರ್ಗಜಾನಾಂ ಮದಬಿಂದುಭಿಃ ।
ಪ್ರಾವರ್ತತ ನದೀ ಘೋರಾ ಹಸ್ತ್ಯಶ್ವರಥವಾಹಿನೀ ॥ ೩೬ ॥

ಆ ಮದ್ದಾನೆಗಳ ಗಂಡಸ್ಥಲದಿಂದ ಹೊರಟ ಮದೋದಕಗಳಿಂದ ಆನೆ, ಕುದುರೆ, ರಥಗಳೆಲ್ಲವನ್ನೂ ಕೊಚ್ಚಿಕೊಂಡು ಹೋಗುವ ಘೋರವಾದ ನದೀಪ್ರವಾಹವೇ ಹರಿಯಲಾರಂಭವಾಯಿತು.[29]

ಧಾವತಾಂ ಸೈನ್ಯವಾಹಾನಾಂ ಫೇನವಾರಿ ಮುಖಚ್ಯುತಮ್ ।
ಚಕಾರ ಜಾನುದಘ್ನಾಪಾನ್ ಪ್ರತಿದಿಙ್ಮುಖಮಧ್ವನಃ ॥ ೩೭ ॥

ಓಡುವ ಸೈನ್ಯದ ಕುದುರೆಗಳ ಬಾಯಿಂದ ಸುರಿದ ನೊರೆಗಟ್ಟಿದ ಜೊಲ್ಲು ದಿಕ್ಕು ದಿಕ್ಕುಗಳಲ್ಲಿಯೂ ದಾರಿಯಲ್ಲಿ ಮಂಡಿಯುದ್ದ ನೀರು ನಿಲ್ಲುವಂತೆ ಮಾಡಿತು.[30]

ನ್ಯಾಯವಿರೋಧಿ

ನ್ಯಾಯಃ ಶಾಸ್ತ್ರಂ ತ್ರಿವರ್ಗೋಕ್ತಿರ್ದಂಡನೀತಿಂ ಚ ತಾಂ ವಿದುಃ ।
ಅತೋ ನ್ಯಾಯವಿರೋಧೀಷ್ಟಮಪೇತಂ ಯತ್ತಯಾ ಯಥಾ ॥ ೩೮ ॥

'ನ್ಯಾಯ' ವೆಂದರೆ ಧರ್ಮ, ಅರ್ಥ, ಕಾಮಗಳನ್ನು ಕುರಿತ ಶಾಸ್ತ್ರಗಳು ಮತ್ತು ದಂಡನೀತಿ. ಈ ಶಾಸ್ತ್ರಗಳಿಗೆ ಸಮ್ಮತವಲ್ಲದ್ದು 'ನ್ಯಾಯವಿರೋಧಿ'. ಉದಾಹರಣೆ—

ವಿಜಿಗೀಷುಮುಪನ್ಯಸ್ಯ ವತ್ಸೇಶಂ ವೃದ್ಧದರ್ಶನಮ್ ।
ತಸ್ಯೈವ ಕೃತಿನಃ ಪಶ್ಚಾದಭ್ಯಧಾಚ್ಚಾರಶೂನ್ಯತಾಮ್ ॥ ೩೯ ॥

ವಿಜಯಾರ್ಥಿಯಾದ ವತ್ಸರಾಜನು ವೃದ್ಧರ ಸಲಹೆಗಳನ್ನು ಪಾಲಿಸುತ್ತಿದ್ದ

---

[29] ಲೋಕಪ್ರಸಿದ್ಧವಾದುದಕ್ಕೇ ಇಲ್ಲಿ ವಿರೋಧವಿದೆ. ಯಾರೂ ಇದನ್ನು ನಂಬುವುದಿಲ್ಲ. ಇದನ್ನು 'ಅತಿಶಯೋಕ್ತಿ' ಅಲಂಕಾರವೆನ್ನುವುದು ತಪ್ಪೆ ? ಎಂಬ ಶಂಕೆ ಬರುತ್ತದೆ. ಆದ್ದರಿಂದಲೇ ದಂಡಿಯು—"ಆನೆಯು ಕೇಸರಗಳನ್ನು ಕೊಡಹುತ್ತದೆ; ಕುದುರೆಯ ಕೋಡು ಮೊನೆಯಾಗಿದೆ; ಹರಳುಗಿಡವು ಬಹಳ ಗಟ್ಟಿಯಾಗಿದೆ" ಎಂದು ಮುಂತಾದ ಉದಾಹರಣೆಗಳನ್ನು ಕೊಡುತ್ತಾನೆ.

[30] ಇದೂ ಮೇಲಿನ ಉದಾಹರಣೆಯಂತೆಯೇ ನಂಬಲು ಅಸಾಧ್ಯವಾಗಿದೆ.

ನೆಂದು ಮೊದಲು ವರ್ಣಿಸಿ ಆಮೇಲೆ ಅದೇ ಮಹಾಶಯನ ಬಳಿಯಲ್ಲಿ ಒಬ್ಬರೂ ಚಾರರೇ ಇರಲಿಲ್ಲವೆಂದು ವರ್ಣಿಸಿರುವುದು.[81]

ಅಂತರ್ಯೋಧಶತಾಕೀರ್ಣಂ ಸಾಲಂಕಾಯನನೇತೃಕಮ್ ।
ತಥಾವಿಧಂ ಗಜಚ್ಛದ್ಮ ನಾಜ್ಞಾಸೀತ್ ಸ ಸ್ವಭೂಗತಮ್ ॥೪೦॥

ನೂರು ಜನ ಯೋಧರನ್ನು ಒಳಗೆ ಅಡಗಿಸಿಕೊಂಡಿದ್ದ, ಸಾಲಂಕಾಯನೇ ಮುಂದಾಳಾಗಿ ತಂದಿದ್ದ, ಆ ಆನೆಯ ಮೋಸವನ್ನು ತನ್ನ ರಾಜ್ಯದಲ್ಲಿರುವಾಗಲೂ ಆತ ತಿಳಿಯಲಿಲ್ಲ!

ಯದಿ ಹೋಪೇಕ್ಷಿತಂ ತಸ್ಯ ಸಚಿವೈಃ ಸ್ವಾರ್ಥಸಿದ್ಧಯೇ ।
ಅಹೋ ನು ಮಂದಿಮಾ ತೇಷಾಂ ಭಕ್ತಿರ್ವಾ ನಾಸ್ತಿ ಭರ್ತರಿ ॥೪೧॥

ಮಂತ್ರಿಗಳು ಬಳಿಯಲ್ಲಿದ್ದರೂ (ಅವರಿಗೆ ತಿಳಿದರೂ) ಹೇಳದೆ ಸುಮ್ಮನಾದರೆಂದರೆ ಅವರು ಸ್ವಾರ್ಥಪರರಾಗಿದ್ದಿರಬೇಕು ಅಥವಾ ಅವರು ಅದನ್ನು ತಿಳಿಯದಷ್ಟು ದಡ್ಡರಾಗಿದ್ದಿರಬೇಕು ಅಥವಾ ಒಡೆಯನಲ್ಲಿ ಅವರಿಗೆ ಭಕ್ತಿಯಿಲ್ಲದೆ ಹೋಗಿರಬೇಕು.

ಶರಾ ದೃಢಧನುರ್ಮುಕ್ತಾಃ ಮನ್ಯುಮದ್ಭಿರರಾತಿಭಿಃ ।
ವರ್ಮಾಣಿ ಪರಿಹೃತ್ಯಾಸ್ಯ ಪತಿಷ್ಯನ್ತೀತಿ ಕಾನುಮಾ ॥೪೨॥

ಕಡುಮುಳಿದ ವೈರಿಗಳು ದೊಡ್ಡ ಬಿಲ್ಲುಗಳನ್ನು ಹಿಡಿದು (ಒಂದೇ ಸಮನಾಗಿ) ಬಾಣಗಳನ್ನು ಬಿಡುತ್ತಿದ್ದರೆ, ಇವನ ಮರ್ಮಸ್ಥಾನಗಳಿಗೆ ಒಂದೂ ತಾಗದೆ ಎಲ್ಲವೂ ಎಲ್ಲಿಯೋ ಹೋಗುವುವೆನ್ನಲು ತಾನೆ ಆಧಾರವೇನು?

---

[81] ಇಲ್ಲಿಂದ ೪೬ ನೆಯ ಶ್ಲೋಕಾಂತ್ಯದ ವರೆಗೆ ಉದಯನನ ಕಥೆಯಲ್ಲಿ ಬರುವ ಶಾಸ್ತ್ರವಿರುದ್ಧವಾದ ಅಂಶಗಳನ್ನು ಭಾಮಹನು ಬರೆದಿದ್ದಾನೆ. ಈ ಕಥೆಯನ್ನು ಭಾಸನ 'ಪ್ರತಿಜ್ಞಾಯೌಗಂಧರಾಯಣ' ನಾಟಕದಿಂದಲೇ ಭಾಮಹನು ಎತ್ತಿಕೊಂಡಿರಬೇಕೆಂದು ಶ್ರೀಮಾನ್ ಟಿ. ಗಣಪತಿ ಶಾಸ್ತ್ರಿಗಳ ಅಭಿಪ್ರಾಯ. ಮೂಲ ಬೃಹತ್ಕಥೆಯಿಂದಲ್ಲದಿದ್ದರೆ ಆಗ ಪ್ರಚಲಿತವಿದ್ದ ಒಂದು ಸಂಸ್ಕೃತ ಭಾಷಾಂತರದಿಂದ ಎತ್ತಿಕೊಂಡಿರಬೇಕೆಂದು ನಮಗೆ ತೋರುತ್ತದೆ. ಗಂಗರಾಜನಾದ ದುರ್ವಿನೀತನು ಇಂತಹ ಒಂದು ಭಾಷಾಂತರ ಮಾಡಿದ್ದ ಉಲ್ಲೇಖವನ್ನು ನೆನಪಿಗೆ ತಂದುಕೊಳ್ಳಬಹುದು. ಪ್ರತಿಜ್ಞಾ-ನಾಟಕಕ್ಕೂ ಭಾಮಹನಿಗೂ ಒಂದೇ ಮೂಲವಿದ್ದಿರಬಹುದು. ಪುಸ್ತಕಕ್ಕೆ ಕಾವ್ಯಾಲಂಕಾರವೆಂದು ಹೆಸರಿಟ್ಟು, ನಾಟಕಾದಿಗಳು 'ಅಭಿನೇಯಾರ್ಥ'ಗಳೆಂದೂ ಅವುಗಳ ವಿಷಯವನ್ನು ಬೇರೆಡೆ ನೋಡಿಕೊಳ್ಳಬೇಕೆಂದೂ ಹೇಳಿರುವ ಭಾಮಹನು ಮತ್ತಾವ ನಾಟಕವನ್ನೂ ಪ್ರಸ್ತಾಪಿಸದೆ, ಕೇವಲ ಪ್ರತಿಜ್ಞಾಯೌಗಂಧರಾಯಣ ನಾಟಕವನ್ನು ಮಾತ್ರ ವಿಮರ್ಶಿಸುವನೆನ್ನುವುದು ಇಂದಿನ ಭಾಸಕರ್ತೃತ್ವವಾದಕ್ಕೆ ಸಾಕ್ಷಿಯನ್ನೊದಗಿಸುವುದಕ್ಕೋಸ್ಕರವೇ ಹೀಗೆ ಮಾಡಿದನೆಂದಂತೆ ಆಭಾಸವಾಗುತ್ತದೆ. ವಿವರವಾಗಿ ಈ ಕಥೆಯನ್ನು ತಿಳಿಯಲು ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳ ಕಥಾಮೃತವನ್ನೋದಬೇಕು.

ಹತೋಽನೇನ ಮಮ ಭ್ರಾತಾ ಮಮ ಪುತ್ರಃ ಪಿತಾ ಮಮ ।
ಮಾತುಲೋ ಭಾಗಿನೇಯಶ್ಚ ರುಷಾ ಸಂರಬ್ಧಚೇತಸಃ[32] ॥೪೩॥

ಅಸ್ಯನ್ತೋ ವಿವಿಧಾನ್ಯಾಜಾವಾಯುಧಾನ್ಯಪರಾಧಿನಮ್ ।
ಏಕಾಕಿನಮರಣ್ಯಾನ್ಯಾಂ ನ ಹನ್ಯುರ್ಬಹವಃ ಕಥಮ್ ॥೪೪॥

ಅಯ್ಯೋ ! ನನ್ನ ಸೋದರನು ಇವನಿಂದ (=ವತ್ಸರಾಜನಿಂದ) ಹತನಾದನು ! ನನ್ನ ಮಗನು ಹೋದನಲ್ಲಾ ! ನನ್ನ ತಂದೆ ಸತ್ತನು ! ಸೋದರಮಾವ, ಸೋದರಳಿಯ ಎಲ್ಲಾ ಹತರಾದರಲ್ಲಾ ! ಎಂದು ಕಡುಸೊಂದು ಮುನಿದು, ಅಪರಾಧಿಯಾದ, ಕಾಡಿನಲ್ಲಿ ಏಕಾಕಿಯಾಗಿ ಸಿಕ್ಕಿದ, ಈತನ ಮೇಲೆ ನಾನಾ ಬಗೆಯ ಆಯುಧಗಳನ್ನು ಯುದ್ಧದಲ್ಲವರು ಅಷ್ಟೊಂದು ಜನ ಪ್ರಯೋಗಿಸಿದ ಮೇಲೆ ಇವನನ್ನು ಕೊಲ್ಲದೆ ಇದ್ದುದು ಹೇಗೆ ?

ನಮೋಽಸ್ತು ತೇಭ್ಯೋ ವಿದ್ವದ್ಭ್ಯೋ ಯೇಽಭಿಪ್ರಾಯಂ ಕವೇರಿಮಮ್ ।
ಶಾಸ್ತ್ರಲೋಕಾವಪಾಸ್ಯೈವಂ ನಯಂತಿ ನಯವೇದಿನಃ ॥೪೫॥

ಹೀಗೆ ಲೋಕವ್ಯವಹಾರಕ್ಕೂ ಶಾಸ್ತ್ರರೀತಿಗೂ ವ್ಯತಿರಿಕ್ತವಾಗಿರುವ ಕವಿಯ ಇಂಗಿತವನ್ನು ತಾವು ನ್ಯಾಯನಿಸ್ಸೀಮರೆಂದುಕೊಂಡು ಸರಿಯೆಂದು ಸಾಧಿಸುವ ವಿದ್ವಾಂಸರಿಗೆ ದೊಡ್ಡದೊಂದು ನಮಸ್ಕಾರ ![33]

ಸಚೇತಸೋ ವನೇಭಸ್ಯ ಚರ್ಮಣಾ ನಿರ್ಮಿತಸ್ಯ ಚ ।
ವಿಶೇಷಂ ವೇದ ಬಾಲೋಽಪಿ ಕಷ್ಟಂ ಕಿಂ ನು ಕಥಂ ನು ತತ್ ॥೪೬॥

ಜೀವದ ಕಾಡಾನೆಗೂ ಚರ್ಮದಿಂದ ಮಾಡಿದ ಆನೆಗೂ ವ್ಯತ್ಯಾಸವನ್ನು ಹುಡುಗನೂ ತಿಳಿಯಬಲ್ಲನು. ಏನು ಕಷ್ಟವೋ ! ಹೇಗೆ ಕಷ್ಟವೋ ! ನಾವು ಕಾಣೆವು.

ಆಗಮವಿರೋಧಿ

ಆಗಮೋ ಧರ್ಮಶಾಸ್ತ್ರಾಣಿ ಲೋಕಸೀಮಾ ಚ ತತ್ಕೃತಾ ।
ತದ್ವಿರೋಧಿ ತದಾಚಾರವ್ಯತಿಕ್ರಮಣತೋ ಯಥಾ ॥೪೭॥

---

32 ಈ ಮಾತುಗಳೇ ಪ್ರತಿಜ್ಞಾ-ನಾಟಕದ ಗದ್ಯಭಾಗದಲ್ಲಿ ಬರುವುವೆಂಬುದು ಶ್ರೀಮಾನ್ ಟಿ. ಗಣಪತಿಶಾಸ್ತ್ರಿಗಳ ವಾದಕ್ಕೆ ಮೂಲ. ಆದರೆ ಅಲ್ಲಿಂದಲೇ ಭಾಮಹನು ಉದ್ಧರಿಸಿರುವನೆನ್ನಲು ಆಧಾರ ಸಾಲದು.

33 ಈ ಮಾತುಗಳಲ್ಲಡಗಿರುವ ಕಟಕಿಯಿಂದ ತನಗಿಂತ ಹಿಂದೆ ಬರೆದ ಲಕ್ಷಣಕಾರರನ್ನು ಭಾಮಹನು ಖಂಡಿಸುತ್ತಿರುವಂತೆ ಭಾಸವಾಗುತ್ತದೆ.

ಆಗಮವೆಂದರೆ ಧರ್ಮಶಾಸ್ತ್ರಗಳು. ಲೋಕದ ಕಟ್ಟಳೆಗಳಿಗೆಲ್ಲ ಅವೇ ಮೂಲ. ಅವುಗಳಲ್ಲಿ ಹೇಳಿರುವ ಆಚರಣೆಗೆ ವಿರುದ್ಧವಾದುದು 'ಆಗಮವಿರೋಧಿ.' ಉದಾಹರಣೆ—

ಭೂಭೃತಾಂ ಪೀತಸೋಮಾನಾಂ ನ್ಯಾಯ್ಯೇ ವರ್ತ್ಮನಿ ತಿಷ್ಠತಾಮ್ ।
ಅಲಂಕರಿಷ್ಣುನಾ ವಂಶಂ ಗುರೌ ಸತಿ ಜಿಗೀಷುಣಾ ॥೪೮॥

ಅಭಾರ್ಯೋಢೇನ ಸಂಸ್ಕಾರಮಂತರೇಣ ದ್ವಿಜನ್ಮನಾ ।
ನರವಾಹನದತ್ತೇನ ವೇಶ್ಯಾವಾನ್ ನಿಶಿ ಪೀಡಿತಃ ॥೪೯॥

ಸೋಮಪೀತಿಗಳೂ ನ್ಯಾಯಮಾರ್ಗನಿರತರೂ ಆದ ರಾಜರ ವಂಶಕ್ಕೆ ಭೂಷಣನೆನಿಸಿ, ಗುರುವಿರುತ್ತಿದ್ದರೂ, ವಿಜಯಾಕಾಂಕ್ಷೆಯನ್ನಿಟ್ಟುಕೊಂಡಿದ್ದರೂ, ಮದುವೆಯೇ ಆಗದೆ ಬ್ರಹ್ಮಚಾರಿಯಾಗಿದ್ದರೂ, ದ್ವಿಜನೆನಿಸಿಕೊಂಡ ನರವಾಹನದತ್ತನು ಪರಿಶುದ್ಧಿಯ ಸಂಸ್ಕಾರ ಕೂಡ ಇಲ್ಲದೆ ವೇಶ್ಯೆಯೊಬ್ಬಳನ್ನು ಕೂಡುವುದಕ್ಕಾಗಿ ರಾತ್ರಿಯ ವೇಳೆ ಅವಳ ಮಿಂಡನನ್ನು ಪೀಡಿಸಿದನು![34]

ನ ದೂಷಣಾಯಾಯಮುದಾಹೃತೋ ವಿಧಿಃ
ನ ಚಾಭಿಮಾನೇನ ಕಿಮು ಪ್ರತೀಯತೇ ।
ಕೃತಾತ್ಮನಾಂ ತತ್ತ್ವದೃಶಾಂ ಚ ಮಾದೃಶೋ
ಜನೋಽಭಿಸಂಧಿಂ ಕ ಇವಾವಭೋತ್ಸ್ಯತೇ ॥೫೦॥

(ಹಿಂದಿನವರನ್ನು) ದೂಷಿಸುವ ಉದ್ದೇಶದಿಂದ ಈ ನಿಯಮಗಳಿಗೆ ನಾವು ಉದಾಹರಣೆಗಳನ್ನಾರಿಸಿಲ್ಲ ಅಥವಾ ನಾವು ಹೆಚ್ಚೆಂಬ ಆತ್ಮಾಭಿಮಾನದಿಂದಲೂ ಅಲ್ಲ. 'ಹಾಗಾದರೆ ತಾತ್ಪರ್ಯವೇನು?' ಎಂದರೆ— ಕೃತಾರ್ಥರೂ ತತ್ತ್ವಜ್ಞರೂ ಆದವರ ಗೂಢಾಭಿಪ್ರಾಯಗಳನ್ನು ನನ್ನಂತಹವರು ಏನೆಂದು ತಾನೆ ತಿಳಿಯಲು ಶಕ್ಯ!

ನಾಲ್ಕನೆಯ ಅಧ್ಯಾಯ ಮುಗಿದುದು.

---

[34] ಇದು ಮದನಮಂಚುಕೆಯ ವೃತ್ತಾಂತವಿರಬಹುದೆ? ಕಥೆಗೆ ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳ **ಕಥಾಮೃತ**, ಮದನಮಂಚುಕಾಲಂಬಕವನ್ನು ನೋಡಿ. ಈಗಿರುವ ಕಥೆಯಲ್ಲಿ ಮದನಮಂಚುಕೆಯನ್ನು ರಾತ್ರೆ ಸ್ವೀಕರಿಸಲು ಬಂದಿದ್ದವನು ಆಕೆಯ ತಾಯಿಯು ಸಮ್ಮತಿಸದೆ ಹೋದ್ದರಿಂದ ಹಾಗೆಯೇ ತಿರುಗಿ ಹೋದನೆಂದೂ ಆ ಮೇಲೆ ನರವಾಹನದತ್ತನು ಅವಳನ್ನು ಗಾಂಧರ್ವವಿಧಿಯಿಂದ ಮದುವೆಯಾದನೆಂದೂ ಹೇಳಿದೆ. ಭಾಮಹನ ಮೂಲದಲ್ಲಿ ಕಥೆ ಬೇರೆ ವಿಧವಾಗಿದ್ದಿರಬಹುದು ಅಥವಾ ಇದು ಬೇರೊಬ್ಬಳ ವೃತ್ತಾಂತವನ್ನು ಕುರಿತಿರಬಹುದು.

ಐದನೆಯ ಅಧ್ಯಾಯ

ಅಥ ಪ್ರತಿಜ್ಞಾಹೇತ್ವಾದಿಹೀನಂ ದುಷ್ಟಂ ಚ ವರ್ಣ್ಯತೇ ।
ಸಮಾಸೇನ ಯಥಾನ್ಯಾಯಂ ತನ್ಮಾತ್ರಾರ್ಥಪ್ರತೀತಯೇ ॥೧॥

ಇನ್ನು ಮುಂದೆ 'ಪ್ರತಿಜ್ಞಾಹೀನ' ಮುಂತಾದ ತರ್ಕದೋಷಗಳನ್ನು[1] ಸಂಗ್ರಹವಾಗಿಯೂ ಸಯುಕ್ತಿಕವಾಗಿಯೂ ಅವುಗಳ ಸ್ವರೂಪದ ಕಲ್ಪನೆ ಬರುವಂತೆ ವಿವರಿಸಲಾಗುತ್ತದೆ.

---

[1] ಸಂಸ್ಕೃತ ನ್ಯಾಯಶಾಸ್ತ್ರದ ಮೊದಲನೆಯ ಗ್ರಂಥ ಗೋತಮನ 'ನ್ಯಾಯಸೂತ್ರ' ಪ್ರಮಾಣ-ಪ್ರಮೇಯಗಳ ವಿಚಾರವು ಇಲ್ಲಿ ಬರುವಂತೆಯೇ ವಾದವಿಧಿಯ ಮತ್ತು ವಾದಗಳಲ್ಲಿ ಪರಾಜಯಕ್ಕೆ ಸೂಚಕಗಳಾದ 'ನಿಗ್ರಹಸ್ಥಾನ'ಗಳ ವಿವರಣೆಯೂ ಬರುತ್ತದೆ. ವಾದಿಗಳು ಪ್ರಮಾಣದಿಂದ ಸ್ವಪಕ್ಷವನ್ನು ಸಾಧಿಸುವುದಕ್ಕೂ ತರ್ಕದಿಂದ ಪ್ರತಿಪಕ್ಷವನ್ನು ಖಂಡಿಸುವುದಕ್ಕೂ ಹೊರಡುವುದೇ 'ವಾದ.' ಅದು ಸಿದ್ಧಾಂತಕ್ಕೆ ಅವಿರುದ್ಧವಾಗಿಯೂ ಸಯುಕ್ತಿಕವಾದ ಪಂಚಾವಯವವಾಕ್ಯ (= *Syllogism*) ಗಳಿಂದಲೂ ಕೂಡಿರುತ್ತದೆ (ನ್ಯಾ. ಸೂ. I, ii, ೧). 'ಪ್ರತಿಜ್ಞೆ', 'ಹೇತು', 'ಉದಾಹರಣ', 'ಉಪನಯ', 'ನಿಗಮನ'ಗಳೇ ವಾದೋಪಯುಕ್ತವಾದ ವಾಕ್ಯದ ಐದು **ಅವಯವಗಳು.** ಸಾಧ್ಯದ ನಿರ್ದೇಶವೇ ಪ್ರತಿಜ್ಞೆ'; ಉದಾಹರಣೆಯ ಸಾಧರ್ಮ್ಯದಿಂದಾಗಲಿ ವೈಧರ್ಮ್ಯದಿಂದಾಗಲಿ ಸಾಧ್ಯವನ್ನು ಸಾಧಿಸುವುದೇ 'ಹೇತು'; ಸಾಧ್ಯಸಾಧರ್ಮ್ಯದಂತೆ ಹೇತುಸಾಧರ್ಮ್ಯವೂ ಸ್ಪಷ್ಟವಾಗಿರುವ ದೃಷ್ಟಾಂತವೇ ಉದಾಹರಣೆ; ಎರಡರ ವೈಧರ್ಮ್ಯವೇ ಸ್ಪಷ್ಟವಾಗಿದ್ದರೆ ವಿಪರೀತ ದೃಷ್ಟಾಂತ. ಉದಾಹರಣೆಯ ಆಧಾರದಮೇಲೆ 'ಹಾಗೆಯೇ ಇದೂ' ಅಥವಾ 'ಅದಕ್ಕೆ ವಿರುದ್ಧ ಇದು' ಎಂದು ಸಾಧ್ಯಕ್ಕೆ ಅನ್ವಯಿಸಿ ಹೇಳುವುದು 'ಉಪನಯ'. ಹೇತುವನ್ನು ಹೇಳಿಯಾದ ಮೇಲೆ ಪ್ರತಿಜ್ಞೆಯನ್ನೇ ಮತ್ತೆ ಒತ್ತಿಹೇಳಿ ಮುಗಿಸುವುದು 'ನಿಗಮನ' (ನ್ಯಾ. ಸೂ. I. i. ೩ - ೩೯). ಹೇತುವಿನಲ್ಲಿ ಬರುವ ದೋಷಗಳೇ 'ಹೇತ್ವಾಭಾಸ'ಗಳು (I, ii, ೪). ಪ್ರತಿಜ್ಞಾಹಾನಿ, ಪ್ರತಿಜ್ಞಾಂತರ, ಪ್ರತಿಜ್ಞಾವಿರೋಧ, ಪ್ರತಿಜ್ಞಾಸನ್ಯಾಸ, ಇತ್ಯಾದಿಗಳೂ, ಹೇತ್ವಾಭಾಸಗಳೂ ವಾದಿಯ ವಿರುದ್ಧಜ್ಞಾನ ಇಲ್ಲವೆ ಅಜ್ಞಾನವನ್ನು ಸೂಚಿಸಿ ವಾದವನ್ನು ಮುಗಿಸುವ ನಿಗ್ರಹಸ್ಥಾನಗಳೆನಿಸುತ್ತವೆ (I, ii, ೨೦ ಮತ್ತು V, ii, ೧). ಪ್ರತಿ—ದೃಷ್ಟಾಂತದಲ್ಲಿರುವ ಧರ್ಮವನ್ನು ಸ್ವದೃಷ್ಟಾಂತದಲ್ಲೊಪ್ಪುವುದೇ ಪ್ರತಿಜ್ಞಾಹಾನಿ; ಪ್ರತಿಜ್ಞೆಗೆ ಬೇರೊಂದು ಅರ್ಥವನ್ನು ಹೇಳುವುದು ಪ್ರತಿಜ್ಞಾಂತರ; ಪ್ರತಿಜ್ಞೆಗೂ ಹೇತುವಿಗೂ ವಿರೋಧಬಂದರೆ ಪ್ರತಿಜ್ಞಾವಿರೋಧ, ಪ್ರತಿಜ್ಞೆಯನ್ನು ಬಿಟ್ಟುಬಿಡುವುದೇ ಪ್ರತಿಜ್ಞಾಸನ್ಯಾಸ (V, ii, ೨-೫). 'ಸವ್ಯಭಿಚಾರ' (=ಎರಡು ಕಡೆಗೂ ಪೋಷಕ), 'ವಿರುದ್ಧ' (ಸಿದ್ಧಾಂತಕ್ಕೆ), 'ಪ್ರಕರಣಸಮ' (=ನಿರ್ಣಯಸಹಾಯಕವಲ್ಲದ್ದು), 'ಸಾಧ್ಯಸಮ' ಮತ್ತು 'ಕಾಲಾತೀತ' ಇವೈದೂ ಹೇತ್ವಾಭಾಸಗಳು (I, ii, ೪-೯). ಲೌಕಿಕ ಪರೀಕ್ಷಕರೆಲ್ಲರಿಗೂ ಯಾವುದರಲ್ಲಿ ನಿಸ್ಸಂಶಯವಾದ ನಿರ್ಣಯವಿದೆಯೋ ಅದೇ ದೃಷ್ಟಾಂತ (I, i, ೨೫). ನ್ಯಾಯಶಾಸ್ತ್ರಕ್ಕೆ ಮೂಲವಾಗಿ ಗೋತಮನು ಹೇಳುವ ಹದಿನಾರು ತತ್ವಗಳಲ್ಲಿ ದೃಷ್ಟಾಂತ, ಅವಯವ, ಹೇತ್ವಾಭಾಸ, ನಿಗ್ರಹಸ್ಥಾನಗಳು ನಾಲ್ಕು. ಭಾಮಹನ ಮುಂದಿನ ವಿಚಾರಗಳಿಗೆ ಹಿನ್ನೆಲೆಯಾಗಿ ಈ ತರ್ಕದ ಶಬ್ದಗಳ ಖಚಿತವಾದ ಕಲ್ಪನೆ ಅಗತ್ಯ.

ಪ್ರಾಯೇಣ ದುರ್ಬೋಧತಯಾ ಶಾಸ್ತ್ರಾದ್ ಬಿಭ್ಯತ್ಯಮೇಧಸಃ ।
ತದುಪಚ್ಛನ್ದನಾಯೈಷ ಹೇತುನ್ಯಾಯಲವೋಚ್ಚಯಃ ॥೨॥

ಶಾಸ್ತ್ರವೆಂದರೆ ಸಾಕು; ಅಜ್ಞರು ಅಂಜುತ್ತಾರೆ—ಅದನ್ನು ತಿಳಿಯುವುದೇ ಪ್ರಾಯಶಃ ದುಷ್ಕರವಾದ್ದರಿಂದ. ಅಂತಹವರ ಮನಸ್ಸಿಗೂ ಸುಲಭವಾಗಿ ತಿಳಿಯಲೆಂದು ತರ್ಕನ್ಯಾಯಗಳ ಕಣಗಳನ್ನಿಲ್ಲಿ ಕೂಡಿಸಿಡುತ್ತಿದ್ದೇವೆ.

ಸ್ವಾದುಕಾವ್ಯರಸೋನ್ಮಿಶ್ರಂ ಶಾಸ್ತ್ರಮಪ್ಯುಪಯುಂಜತೇ ।
ಪ್ರಥಮಾಲೀಢಮಧವಃ ಪಿಬನ್ತಿ ಕಟು ಭೇಷಜಮ್ ॥೩॥

ರುಚಿಕರವಾದ ಕಾವ್ಯರಸದೊಡನೆ ಕಲೆತ ಶಾಸ್ತ್ರವನ್ನು ಸಹ ಜನರು ಉಪಯೋಗಿಸಿಕೊಳ್ಳುತ್ತಾರೆ; ಜೇನುತುಪ್ಪವನ್ನು ಮೊದಲು ಸವಿದು (ಅದರಲ್ಲಿ ಕಲಸಿದ) ಕಹಿಯಾದ ಔಷಧವನ್ನು ಸಹ ಕುಡಿಯುವುದಿಲ್ಲವೆ?[3]

ನ ಸ ಶಬ್ದೋ ನ ತದ್ವಾಚ್ಯಂ ನ ಸ ನ್ಯಾಯೋ ನ ಸಾ ಕಲಾ ।
ಜಾಯತೇ ಯನ್ನ ಕಾವ್ಯಾಂಗಮಹೋ ಭಾರೋ ಮಹಾನ್ ಕವೇಃ ॥೪॥

ಕಾವ್ಯಕ್ಕೆ ಅಂಗವಾಗದೆ ಹೋಗುವ ಒಂದೇ ಒಂದು ಶಬ್ದವಾಗಲಿ, ಒಂದೇ

---

[2] . . . ನ್ಯಾಯಲವ . . . ಎಂಬ ಮಾತು ಗಮನಾರ್ಹ. ಬೌದ್ಧ ತಾರ್ಕಿಕನಾದ ಧರ್ಮಕೀರ್ತಿಯ ಒಂದು ಗ್ರಂಥದ ಹೆಸರು 'ನ್ಯಾಯಬಿಂದು.' ಭಾಮಹನು ಗೌತಮನ ನ್ಯಾಯಶಾಸ್ತ್ರವನ್ನಷ್ಟೇ ಅಲ್ಲ; ಬೌದ್ಧರ ತರ್ಕವನ್ನೂ ಅಭ್ಯಾಸಮಾಡಿದ್ದಾನೆಂಬುದು ಮುಂದಿನ ಟಿಪ್ಪಣಿಗಳಲ್ಲಿ ವಿವರವಾಗಿ ಬರುತ್ತದೆ.

[3] ದಂಡಿಯ 'ಕಾವ್ಯಾದರ್ಶ'ದಲ್ಲಿ ಈ ಮಾತನ್ನು ಹಾಸ್ಯಮಾಡುವಂತೆ ಕಾಣುವ ಒಂದು ಉಕ್ತಿಯಿದೆ—

ಪ್ರತಿಜ್ಞಾಹೇತುದೃಷ್ಟಾಂತಹಾನಿರ್ದೋಷೋ ನ ವಾಪ್ಯಸೌ ।
ವಿಚಾರಃ ಕರ್ಕಶಃ ಪ್ರಾಯಸ್ತೇನಾಲೀಢೇನ ಕಿಂ ಫಲಮ್ ॥ (III, ೧೨೭)

'ಪ್ರತಿಜ್ಞಾಹಾನಿ, ಹೇತುಹಾನಿ, ದೃಷ್ಟಾಂತಹಾನಿ—ಇವು ದೋಷವೇ ಅಥವಾ ಅಲ್ಲವೆ ಎಂಬ ವಿಚಾರವೇ ಕರ್ಕಶವೆನಿಸೀತು. ಅದನ್ನು "ಸವಿನೋಡುವುದರಿಂದ" ಏನುಫಲ? ಇಲ್ಲಿ ದಂಡಿಗೆ ವ್ಯಂಗ್ಯವಾಗಿ ಅದರ ಸವಿನೋಡುವ ಭಾಮಹನನ್ನು ಅಣಕಿಸುತ್ತಿರುವ ಭಾವವುಂಟೇ ಇಲ್ಲವೆ ಎಂಬುದನ್ನು ನಿರ್ಣಯಿಸಲು ಸಹೃದಯರೇ ಪ್ರಮಾಣ. ಪ್ರೊ|| ಎ. ಬಿ. ಧ್ರುವ ಅವರು ಹೌದೆಂದರೆ ಮಹಾಮಹೋಪಾಧ್ಯಾಯ ಪಿ. ವಿ. ಕಾಣೆಯವರು ಇಲ್ಲವೆನ್ನುತ್ತಾರೆ (*History of Sanskrit Poetics*, p. ೭೬-೭೭). ಸಹೃದಯರು ದಂಡಿಯಲ್ಲಿ ವ್ಯಂಗ್ಯೋಕ್ತಿಯಿದೆಯೆಂದೊಪ್ಪಿದರೆ ಭಾಮಹನೇ ಆತನಿಗಿಂತ ಪ್ರಾಚೀನನೆಂದು ಸಿದ್ಧವಾಗುತ್ತದೆ.

ಒಂದು ಅರ್ಥವಾಗಲಿ ಇಲ್ಲ; ಒಂದೇ ಒಂದು ಶಾಸ್ತ್ರಯುಕ್ತಿಯಾಗಲಿ ಒಂದೇ ಒಂದು ಕಲೆಯಾಗಲಿ ಇಲ್ಲ—ಎಂದ ಮೇಲೆ ಕವಿಯ ಹೊರೆ ಎಷ್ಟು ದೊಡ್ಡದು![4]

ಸತ್ತ್ವಾದಯಃ ಪ್ರಮಾಣಾಭ್ಯಾಂ ಪ್ರತ್ಯಕ್ಷಮನುಮಾ ಚ ತೇ।
ಅಸಾಧಾರಣಸಾಮಾನ್ಯವಿಷಯತ್ವಂ ತಯೋಃ ಕಿಲ ॥೫॥

'ಸತ್ತ್ವ' ಮುಂತಾದುವನ್ನು ನಿರ್ಧರಿಸುವುದಕ್ಕೆ ಇರುವ ಪ್ರಮಾಣಗಳು ಎರಡು—(೧) ಪ್ರತ್ಯಕ್ಷ ಮತ್ತು (೨) ಅನುಮಾನ. 'ಪ್ರತ್ಯಕ್ಷ'ದ ವಿಷಯ 'ಅಸಾಧಾರಣ'ವಂತೆ; 'ಅನುಮಾನ'ದ ವಿಷಯ 'ಸಾಧಾರಣ'ವಂತೆ.[5]

---

[4] ಈ ಶ್ಲೋಕವು ಸ್ವಲ್ಪ ಹೆಚ್ಚು ಕಡಿಮೆ ಇದೇ ಮಾತುಗಳಲ್ಲಿ ಭರತನ ನಾಟ್ಯಶಾಸ್ತ್ರದಲ್ಲಿಯೂ ಬರುತ್ತದೆ.

[5] ಮೊದಲನೆಯ ವಾಕ್ಯವು ಭಾಮಹನಿಗೂ ಸಮ್ಮತವೆಂದೇ ತೋರುತ್ತದೆ. ಎರಡನೆಯದರಲ್ಲಿ ವಿಮತಿಯು ವ್ಯಂಗ್ಯವಾಗಿದೆ. ಗೋತಮನು ಒಪ್ಪುವ ಪ್ರಮಾಣಗಳು ನಾಲ್ಕು—ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ (ನ್ಯಾ. ಸೂ. I, i, ೩). ಬೌದ್ಧರು ಒಪ್ಪುವುದು ಮೊದಲ ಎರಡನ್ನೇ; ಪ್ರಾಚೀನ ವೈಶೇಷಿಕರು ಒಪ್ಪುವುದೂ ಮೊದಲ ಎರಡನ್ನೇ; ಅಂತೆಯೇ ಅವರನ್ನು 'ಅರ್ಧ-ವೈನಾಶಿಕ'ರೆಂದು ವೇದಾಂತಿಗಳು ಹಾಸ್ಯಮಾಡಿದ್ದಾರೆ. ಆದರೆ ಭಾಮಹನು ಎರಡನೆಯ ವಾಕ್ಯದಲ್ಲಿ ನಿಸ್ಸಂದಿಗ್ಧವಾಗಿ ಬೌದ್ಧರ ಸಿದ್ಧಾಂತವನ್ನೇ ಪೂರ್ವಪಕ್ಷವಾಗಿ ಎತ್ತಿಕೊಂಡಿದ್ದಾನೆ. ಬೌದ್ಧರ ತರ್ಕದ ಸಂಕ್ಷಿಪ್ತ ಇತಿಹಾಸ ಇಲ್ಲಿ ಪ್ರಸ್ತುತ—

ಭಗವಾನ್ ಬುದ್ಧನ ತತ್ತ್ವಬೋಧೆಯನ್ನು ಸಾಂಪ್ರದಾಯಿಕವಾದ 'ವಿಭಾಷೆ'ಗಳಲ್ಲೂ ಸೂತ್ರಗಳಲ್ಲೂ ಅಭ್ಯಾಸಮಾಡುವವರ ಸಂಖ್ಯೆಯೇ ಮೊದಮೊದಲು ಹೆಚ್ಚಾಗಿದ್ದಿತು. ಇವುಗಳನ್ನು ಶಾಸ್ತ್ರೀಯವಾಗಿ ವಿಮರ್ಶಿಸಿ ತತ್ತ್ವಚಿಂತನೆ ಮಾಡಬೇಕೆಂಬ ಪ್ರವೃತ್ತಿ ಕಡೆಗೆ (ಕ್ರಿ.ಶ. ೧ ನೆ ಶತಮಾನದ ಹೊತ್ತಿಗೆ) ಬಂದಿತು. ಮೊದಮೊದಲು ಬೌದ್ಧರಲ್ಲಿ ಹತ್ತಾರು ಪಂಗಡಗಳಿದ್ದರೂ ಕಡೆಕಡೆಗೆ ತತ್ತ್ವಚಿಂತಕರಲ್ಲಿ ಮುಖ್ಯವಾಗಿ 'ವೈಭಾಷಿಕ', 'ಸೌತ್ರಾಂತಿಕ', 'ಯೋಗಾಚಾರ', 'ಮಾಧ್ಯಮಿಕ' ಎಂಬ ನಾಲ್ಕೇ ಪಂಗಡಗಳುಳಿದುವು. ಇವರ ವಾದಗಳಿಗೂ ಬೇರೆ ಬೇರೆ ಹೆಸರಿವೆ. ವೈಭಾಷಿಕರೂ ಸೌತ್ರಾಂತಿಕರೂ 'ಸರ್ವಾಸ್ತಿತ್ವವಾದಿ'ಗಳು. ಎಂದರೆ ಎಲ್ಲವೂ ಕ್ಷಣಿಕವಾದರೂ ಬಾಹ್ಯಾರ್ಥಕ್ಕೆ ಕ್ಷಣರೂಪಿಯಾದ ಸತ್ತೆಯುಂಟೆನ್ನುವವರು. ಯೋಗಾಚಾರರು ವಿಜ್ಞಾನವೊಂದಕ್ಕೆ ಮಾತ್ರ ಪಾರಮಾರ್ಥಿಕವಾದ ಸತ್ತೆಯನ್ನೊಪ್ಪುವವರು; ಮಾಧ್ಯಮಿಕರು ಸದಸದ್ವಿಲಕ್ಷಣವಾದ 'ಶೂನ್ಯ'ವನ್ನು ಮಾತ್ರ ಪರಮಾರ್ಥವೆನ್ನುವವರು. ವಿಜ್ಞಾನವಾದ ಮತ್ತು ಶೂನ್ಯವಾದಗಳಿಗೆ "ಮಹಾಯಾನ"ವೆಂದೂ ಸರ್ವಾಸ್ತಿತ್ವವಾದಕ್ಕೆ "ಹೀನಯಾನ"ವೆಂದೂ ಹೇಳುವುದುಂಟು. ವೈಭಾಷಿಕರ ಪಂಗಡವು ಬಹಳ ಪ್ರಾಚೀನವಿದ್ದಿರಬಹುದಾದರೂ ಅವರ ತತ್ತ್ವಜ್ಞಾನವನ್ನು ಕ್ರೋಢೀಕರಿಸಿರುವ ಮೊದಲ ಗ್ರಂಥ ವಸುಬಂಧುವಿನ ಅಭಿಧರ್ಮಕೋಶ (ಸುಮಾರು ಕ್ರಿ.ಶ. ೪ ನೆ ಶತಮಾನ). ಇವರು ಜಗತ್ತನ್ನೆಲ್ಲ ಕ್ರಮವಾಗಿ ಬಾಹ್ಯ ಮತ್ತು ಆಭ್ಯಂತರಗಳೆನಿಸುವ ಭೂತ-ಭೌತಿಕ ಮತ್ತು ಚಿತ್ತ-ಚೈತ್ತ ಧರ್ಮಗಳ ಮೂಲಕ ವಿವರಿಸುತ್ತಾರೆ. ಆಭ್ಯಂತರ ಧರ್ಮಗಳಲ್ಲಿ ಪಂಚಸ್ಕಂಧ, ಷಡಾಯತನ,

ಪ್ರತ್ಯಕ್ಷಂ ಕಲ್ಪನಾಪೋಢಂ ತತೋಽರ್ಥಾದಿತಿ ಕೇಚನ।
ಕಲ್ಪನಾಂ ನಾಮಜಾತ್ಯಾದಿಯೋಜನಾಂ ಪ್ರತಿಜಾನತೇ ॥೬॥

ಅಷ್ಟಾದಶಧಾತುಗಳ ಪ್ರಕ್ರಿಯೆ ಬರುತ್ತದೆ. ಬಾಹ್ಯಧರ್ಮಗಳು 'ಸಂಸ್ಕೃತ' ಮತ್ತು 'ಅಸಂಸ್ಕೃತ'ಗಳೆಲ್ಲಾ ಸೇರಿ ೭೨ ಆಗುತ್ತವೆ. ಅತಿರಿಕ್ತವಾದ ಆತ್ಮವನ್ನೊಪ್ಪದಿರುವುದೂ ಸರ್ವವೂ ಕ್ಷಣಿಕವೆನ್ನುವುದೂ ನಾಲ್ಕು ಬೌದ್ಧಪಂಗಡಗಳಿಗೂ ಸಮಾನ.

ಸೌತ್ರಾಂತಿಕರು ಈ ಕ್ಷಣಿಕವಾದಕ್ಕೂ, ನೈರಾತ್ಮ್ಯವನ್ನು ಸಿದ್ಧಮಾಡುವ ಪ್ರಕ್ರಿಯೆಗಳಿಗೂ ತರ್ಕಶುದ್ಧವಾದ ಉಪಪತ್ತಿಯನ್ನು ಕಲ್ಪಿಸುತ್ತಾರೆ. ವೈದಿಕ ದರ್ಶನಗಳಾದ ನ್ಯಾಯ, ವೈಶೇಷಿಕಗಳಲ್ಲಿದ್ದ ನ್ಯಾಯವಿಚಾರವು ಎಷ್ಟುಮಾತ್ರಕ್ಕೂ ಸಾಲದೆಂದು ಹೊಸ ವಿಮರ್ಶೆಯನ್ನು ಬಹಳ ಆಳವಾಗಿ ಮಾಡಿದ್ದಾರೆ. ಬೌದ್ಧ ತರ್ಕಕ್ಕಷ್ಟೇ ಅಲ್ಲ, ಭಾರತೀಯ ತರ್ಕಕ್ಕೂ ಮಾತ್ರವಲ್ಲ, ವಿಶ್ವದ ತರ್ಕಶಾಸ್ತ್ರಕ್ಕೂ ಇವರಿಂದ ಎಷ್ಟೋ ಹೊಸ ವಿಚಾರಧಾರೆಗಳು ಬಂದಿವೆಯೆಂಬುದು ವಿದ್ವಾಂಸರ ಅಭಿಪ್ರಾಯ. ಈ ತರ್ಕಶಾಸ್ತ್ರದ ಮೂಲಪ್ರವರ್ತಕ ಆಚಾರ್ಯ ದಿಙ್ನಾಗ (ಸುಮಾರು ಕ್ರಿ.ಶ. ೫ನೆಯ ಶತಮಾನ). ಇವನು ವಸುಬಂಧುವಿನ ಶಿಷ್ಯನಂತೆ. ಇದೇ ವಸುಬಂಧುವು ವೈಭಾಷಿಕ ಪ್ರಕ್ರಿಯೆಯ ಅಭಿಧರ್ಮಕೋಶವನ್ನು ಬರೆದಂತೆಯೇ ತನ್ನ ಸೋದರನಾದ ಅಸಂಗನೊಡನೆ ಯೋಗಾಚಾರರ ವಿಜ್ಞಾನವಾದಕ್ಕೆ ಆಧಾರಗ್ರಂಥಗಳನ್ನು ಬರೆದಿದ್ದಾನೆ. ಇವನ ಶಿಷ್ಯನಾದ ದಿಙ್ನಾಗನೂ ಗುರುವಿನ ವಿಜ್ಞಾನವಾದವನ್ನು ಬಾಯಲ್ಲೊಪ್ಪಿದರೂ ವಾಸ್ತವದಲ್ಲಿ ಅದರ ಬುಡವನ್ನೇ ಮೇಲುಮಾಡುವ ವರೆಗೆ ಸೌತ್ರಾಂತಿಕ ತರ್ಕವನ್ನು ವಿಸ್ತರಿಸಿದ್ದಾನೆ. ಹೀಗೆ ಬೌದ್ಧರ ಪಂಗಡಗಳಲ್ಲಿ ನಿಷ್ಕೃಷ್ಟ ಭೇದಕ್ಕಿಂತ ಒಬ್ಬನೇ ಅನೇಕ ವಿಚಾರಗಳನ್ನು ಕಾಲದಿಂದಕಾಲಕ್ಕೆ ಹೇಳುತ್ತಿದ್ದ ವೈಚಿತ್ರ್ಯವಿದೆ.

ದಿಙ್ನಾಗನನ್ನು ಮಧ್ಯಕಾಲೀನ ಭಾರತೀಯ ತರ್ಕದ ಜನಕನೆನ್ನಬಹುದು. ತರ್ಕಭೂಮಿಯಲ್ಲಿ ಅವನು ನೆಟ್ಟು ನೀರೆರೆದ ನ್ಯಾಯದ ಸಸಿಯು ಮುಂದೆ ಧರ್ಮಕೀರ್ತಿಯ (ಸುಮಾರು ಕ್ರಿ.ಶ. ೭ನೆಯ ಶತಮಾನ) ಕೈಯಲ್ಲಿ ಬೆಳೆದು ಚಿಗುರಿ ಶಾಂತರಕ್ಷಿತ ಕಮಲಶೀಲರ ಬರವಣಿಗೆಯಲ್ಲಿ ಹೂಹಣ್ಣುಗಳನ್ನು ಬಿಟ್ಟು ದೊಡ್ಡ ಮರವಾಯಿತು. ದಿಙ್ನಾಗನ ಗ್ರಂಥಗಳೆಲ್ಲವೂ ಉಪಲಬ್ಧವಿಲ್ಲ. ಟಿಬೆಟನ್ ಭಾಷೆಯಿಂದ ಸಂಸ್ಕೃತಕ್ಕೆ ಪರಿವರ್ತಿಸಿ "ಪ್ರಮಾಣಸಮುಚ್ಚಯ"ವನ್ನು ಶ್ರೀಮಾನ್ ಎಚ್. ಆರ್. ರಂಗಸ್ವಾಮಿ ಐಯಂಗಾರರೂ, "ಆಲಂಬನಪರೀಕ್ಷೆ"ಯನ್ನು ಶ್ರೀಮಾನ್ ಅಯ್ಯಾಸ್ವಾಮಿ ಶಾಸ್ತ್ರಿಗಳೂ ಇತರ ಕೆಲವು ಭಾಗಗಳನ್ನು ಶ್ರೀ. ಎಚ್. ಎನ್. ರ್‍ಯಾಂಡಲ್ ಅವರೂ ಮುದ್ರಿಸಿದ್ದಾರೆ. ಪ್ರಿ|| ಎ. ಬಿ. ಧ್ರುವರು ಮುದ್ರಿಸಿರುವ "ನ್ಯಾಯಪ್ರವೇಶ"ವು ದಿಙ್ನಾಗನದೇ ಎಂದು ಖಚಿತವಾಗಿ ಗೊತ್ತಿಲ್ಲ. ಭಾಮಹನು ಈ ಅಧ್ಯಾಯದ ಉದ್ದಕ್ಕೂ ದಿಙ್ನಾಗನ ಪ್ರಕ್ರಿಯೆಯನ್ನು ಅನುಸರಿಸುತ್ತಾನೆ.

ಈ ಪ್ರಕ್ರಿಯೆಯನ್ನು ಸಮಗ್ರವಾಗಿಯೂ ನಿಷ್ಕೃಷ್ಟವಾಗಿಯೂ ವಿವರಿಸಿದವನೇ ಧರ್ಮಕೀರ್ತಿ. ಇವನ 'ನ್ಯಾಯಬಿಂದು' (ಇದಕ್ಕೆ ಧರ್ಮೋತ್ತರನ ಟೀಕೆಯಿದೆ), 'ಪ್ರಮಾಣವಾರ್ತಿಕ' (ಸವೃತ್ತಿ), 'ವಾದನ್ಯಾಯ'ವೆಂಬ ಗ್ರಂಥಗಳು ಅಚ್ಚಾಗಿವೆ. 'ಪ್ರಮಾಣವಿನಿಶ್ಚಯ'ವು ಸಿಕ್ಕಿಲ್ಲ. ಇವನ 'ಪ್ರಮಾಣವಾರ್ತಿಕ'ವು ದಿಙ್ನಾಗನ 'ಪ್ರಮಾಣಸಮುಚ್ಚಯ'ಕ್ಕೆ ವೃತ್ತಿಯೆಂದರೂ ವಾಸ್ತವದಲ್ಲಿ

ಸ್ವತಂತ್ರಗ್ರಂಥವೇ. ಕಡೆಗೆ "ತತ್ವಸಂಗ್ರಹ"ವನ್ನು ಬರೆದ ಶಾಂತರಕ್ಷಿತನು ಅದನ್ನು ಸ್ವತಂತ್ರ ಗ್ರಂಥವೆಂದರೂ ಅದು 'ಪ್ರಮಾಣವಾರ್ತಿಕ'ದ ವೃತ್ತಿಯೇ. ತತ್ವಸಂಗ್ರಹದ ಕಾಲ ಕ್ರಿ.ಶ. ೮ ನೆಯ ಶತಮಾನ. ಕಮಲಶೀಲನ ಪಂಜಿಕೆಯೊಡನೆ ಇದು ಅಚ್ಚಾಗಿದೆ. ಈ ಗ್ರಂಥದಲ್ಲಿ ಭಾಮಹನ ವಿಚಾರಗಳ ಖಂಡನೆ ಬರುತ್ತದೆ.

ಈ ಬೌದ್ಧ ತಾರ್ಕಿಕರ ಪ್ರಧಾನಮಲ್ಲರೆಂದರೆ ನೈಯಾಯಿಕರು ಮತ್ತು ಮೀಮಾಂಸಕರು. ಗೋತಮನ ನ್ಯಾಯಸೂತ್ರ, ಅದರ ಮೇಲೆ ಬರೆದಿದ್ದ ವಾತ್ಸ್ಯಾಯನನ ಭಾಷ್ಯಗಳ ಮೇಲೆ ದಿಙ್ನಾಗನು ಮಾಡಿದ ಮಹೋಗ್ರ ಖಂಡನೆಯನ್ನು ತಡೆಯಲು ನೈಯಾಯಿಕನಾದ ಉದ್ಯೋತಕರನು ಹೊಸ "ನ್ಯಾಯವಾರ್ತಿಕ"ವನ್ನೇ ಬರೆಯಬೇಕಾಯಿತು.

(ಹೋಲಿಸಿ—ಯದಕ್ಷಪಾದಃ ಪ್ರವರೋ ಮುನೀನಾಂ
ಶಮಾಯ ಶಾಸ್ತ್ರಂ ಜಗತೋ ಜಗಾದ|
ಕುತಾರ್ಕಿಕಜ್ಞಾನನಿವೃತ್ತಿಹೇತುಃ
ಕರಿಷ್ಯತೇ ತಸ್ಯ ಮಯಾ ಪ್ರಬಂಧ|| —ನ್ಯಾ. ವಾ. I, i, ೧.)

ಧರ್ಮಕೀರ್ತಿಯು ಇದನ್ನೆಲ್ಲ ತನ್ನ "ಪ್ರಮಾಣವಾರ್ತಿಕ'ದಲ್ಲಿ ಖಂಡಿಸಿಬಿಟ್ಟಾಗ ಉದ್ಯೋತಕರನ ಯುಕ್ತಿಗಳು ಕೆಸರಲ್ಲಿ ಕಾಲು ಹೂತುಕೊಂಡು ಮೇಲೇಳಲಾರದ ಮುದಿಹಸುಗಳಂತಾದುವು. ಅವುಗಳನ್ನು ಎತ್ತಿ ನಿಲ್ಲಿಸಿ ಪುಣ್ಯಕಟ್ಟಿಕೊಳ್ಳುವ ಪ್ರಯತ್ನಕ್ಕೆ ಸರ್ವತಂತ್ರ ಸ್ವತಂತ್ರರಾದ ವಾಚಸ್ಪತಿ ಮಿಶ್ರರು "ನ್ಯಾಯವಾರ್ತಿಕ ತಾತ್ಪರ್ಯಟೀಕೆ"ಯನ್ನು ಬರೆಯಲು ಮುಂದಾಗಬೇಕಾಯಿತು. (ಹೋಲಿಸಿ—ಯದಲಂಭಿ ಕಿಮಪಿ ಪುಣ್ಯಂ ದುಸ್ತರಕುನಿಬಂಧಪಂಕಮಗ್ನಾನಾಮ್| ಉದ್ಯೋತಕರಗವೀನಾಮತಿಜರತೀನಾಂ ಸಮುದ್ಧರಣಾತ್—ನ್ಯಾ. ವಾ. ತಾ. ಟೀ. I, i, ೧). ಧರ್ಮಕೀರ್ತಿಯು ಮೀಮಾಂಸಕರಮೇಲೆ ಮಾಡಿದ ಖಂಡನೆಗಳ ನಿವಾರಣೆಗಾಗಿ ಕುಮಾರಿಲಭಟ್ಟರು "ಶ್ಲೋಕವಾರ್ತಿಕ"ವೆಂಬ ಮಹಾಗ್ರಂಥವನ್ನು ರಚಿಸಿದರು. ಈ ದಾರ್ಶನಿಕರ ಖಂಡನೆಗಳಿಗೆ ಪ್ರತ್ಯುತ್ತರ ಹೇಳಲು ಶಾಂತರಕ್ಷಿತ ಕಮಲಶೀಲರು "ತತ್ವಸಂಗ್ರಹ"ವೆಂಬ ಉದ್ಗ್ರಂಥ ಬರೆದರು. ಆದರೆ ಅವರ ಪ್ರಯತ್ನ ವಿಫಲವಾಗಿ ಬೌದ್ಧರು ಜನ್ಮಭೂಮಿಯನ್ನು ಬಿಟ್ಟು ಟಿಬೆಟ್ಟಿನಲ್ಲಿ ಆಶ್ರಯ ಪಡೆಯಬೇಕಾಯಿತು. ಇದಕ್ಕೆ ಶಂಕರಾಚಾರ್ಯರ ಪೆಟ್ಟೂ ಒಂದು ಮುಖ್ಯ ಕಾರಣ. ಬೌದ್ಧ ತರ್ಕದ ಈ ಇತಿಹಾಸದ ಹಿನ್ನೆಲೆಯಲ್ಲಿ ಭಾಮಹನ ಮಾತುಗಳ ಮರ್ಮವನ್ನು ಸರಿಯಾಗಿ ತಿಳಿಯಬಹುದೆಂದು ಇಷ್ಟು ವಿಸ್ತಾರವಾಗಿ ಬರೆದಿದೆ. ಭಾಮಹನಿಗೆ ಪ್ರಚೋದನೆ ಬಂದುದು ದಿಙ್ನಾಗನಿಂದಲೋ, ಧರ್ಮಕೀರ್ತಿಯಿಂದಲೋ ಎಂಬ ವಿಷಯ ಇನ್ನೂ ಪಂಡಿತರಲ್ಲಿ ವಾದಗ್ರಸ್ತವಾಗಿಯೇ ಉಳಿದಿದೆ. ಇಂದಿನ ಅಲಂಕಾರಶಾಸ್ತ್ರ ವಿಮರ್ಶೆಗೆ ಜನಕ ಸಮಾನರಾದ ಶ್ರೀ. ಹರ್ಮಾನ್ ಯಾಕೊಬಿಯವರ ಅಭಿಪ್ರಾಯದಲ್ಲಿ ಭಾಮಹನು ಧರ್ಮಕೀರ್ತಿಗೂ ಋಣಿ. ಶ್ರೀಮಾನ್ ಪಿ. ವಿ. ಕಾಣೆಯವರೂ ಇದು ಅಸಂಭವವಲ್ಲವೆನ್ನುತ್ತಾರೆ (*HSP.* p. ೧೨೦). ಪ್ರಿ|| ಎ. ಬಿ. ಧ್ರುವರೂ ಭಾಮಹನ ಗ್ರಂಥ ಸಂಪಾದಕರಾದ ಬಟುಕನಾಥಶರ್ಮ, ಬಲದೇವ ಉಪಾಧ್ಯಾಯರೂ ಧರ್ಮಕೀರ್ತಿಯನ್ನು ಭಾಮಹ ನೋಡಿರಲಾರನೆನ್ನುತ್ತಾರೆ. ಇದರ ನಿರ್ಣಯವಿನ್ನೂ ಆಗುವಂತಿಲ್ಲ. ಭಾಮಹನ ಕಾಲನಿರ್ಣಯಕ್ಕೆ ಇದರಿಂದ ಎಷ್ಟು ಸಹಾಯವಾಗುವುದೆಂದು ಒತ್ತಿ ಹೇಳಬೇಕಾಗಿಲ್ಲ.

'ಕಲ್ಪನೆ'ಯು ಎಲ್ಲಿಲ್ಲವೋ ಅದೇ 'ಪ್ರತ್ಯಕ್ಷ'ವೆಂದು ಕೆಲವರೆಂದರೆ[6] ವಸ್ತುವಿ

ಭಾಮಹನ ವಾಕ್ಯದೊಡನೆ ಧರ್ಮಕೀರ್ತಿಯ ಈ ಮಾತುಗಳನ್ನು ಹೋಲಿಸಿ—"ದ್ವಿವಿಧಂ ಸಮ್ಯಜ್ಞಾನಂ ಪ್ರತ್ಯಕ್ಷಮನುಮಾನಂ ಚ . . . ತಸ್ಯ (=ಪ್ರತ್ಯಕ್ಷಸ್ಯ) ವಿಷಯಃ ಸ್ವಲಕ್ಷಣಮ್ . . . ಅನ್ಯತ್ಸಾಮಾನ್ಯಲಕ್ಷಣಂ. ಸೋऽನುಮಾನಸ್ಯ ವಿಷಯಃ". (ನ್ಯಾಯಬಿಂದು, ಪುಟ ೧೦೩). ಈ ಅಭಿಪ್ರಾಯವೇ ದಿಙ್ನಾಗನ ಪ್ರಮಾಣಸಮುಚ್ಚಯದಲ್ಲಿಯೂ ಬರುತ್ತದೆ. ಇದರ ಪ್ರಕ್ರಿಯೆಯನ್ನು ಧರ್ಮಕೀರ್ತಿಯ ಪ್ರಮಾಣವಾರ್ತಿಕದ ಆಧಾರದ ಮೇಲೆ ಹೀಗೆ ವಿವರಿಸಬಹುದು—

'ಸತ್ತ್ವ' ಅಥವಾ ಅಸ್ತಿತ್ವದಲ್ಲಿ 'ಪರಮಾರ್ಥಸತ್ತ್ವ' ಮತ್ತು 'ವ್ಯಾವಹಾರಿಕಸತ್ತ್ವ' ಎಂಬೆರಡು ವಿಭಾಗಗಳನ್ನು ಮಾಡಲೇ ಬೇಕು. ಯಾವುದರಲ್ಲಿ ಅರ್ಥಕ್ರಿಯಾಕಾರಿತ್ವವುಂಟೋ ಅದು ಮಾತ್ರ ಪರಮಾರ್ಥಸತ್ ಎನ್ನಬೇಕು. ಯಾವ ಬೆಂಕಿಯು ಸುಡುವುದು, ಬೇಯಿಸುವುದು, ಬೆಳಗುವುದೇ ಮುಂತಾದ ಕ್ರಿಯೆಗಳಿಗೆಲ್ಲ ಸಮರ್ಥವೋ ಅದೇ ನಿಜವಾಗಿಯೂ ಬೆಂಕಿ. ಯಾವುದು ಸುಡುವುದಕ್ಕೂ ಬೇಯಿಸುವುದಕ್ಕೂ ಬೆಳಗುವುದಕ್ಕೂ ಬಾರದೋ ಅದು ಬೆಂಕಿಯೇ ಅಲ್ಲ. ಅರ್ಥಕ್ರಿಯೆಯಲ್ಲಿ ಅಸಮರ್ಥವಾದ ವಸ್ತುವಿನ ವಿಚಾರಮಾಡುವುದು ಸೌಭಾಗ್ಯಕಾಂಕ್ಷಿಣಿಯಾದ ಕಾಮಿನಿ ಷಂಡನ ರೂಪ-ವಿರೂಪಗಳ ಪರೀಕ್ಷೆ ಮಾಡಿದಂತೆಯೇ ಸರಿ (ಪ್ರಮಾಣವಾರ್ತಿಕ, I, ೨೧೨). ಹೀಗೆ ಯಾವುದೇ ವಸ್ತುವಿನ ಅರ್ಥಕ್ರಿಯಾಸಾಮರ್ಥ್ಯ ಅಥವಾ ಪರಮಾರ್ಥಸತ್ತ್ವವೆಂದರೆ ಸ್ವಲಕ್ಷಣವೇ ಹೊರತು ಬೇರೆಯಲ್ಲ. ಈ ಸ್ವಲಕ್ಷಣವು ಪ್ರತ್ಯಕ್ಷಮಾತ್ರವೇದ್ಯವಾದ, ಅನಿರ್ವಚನೀಯವಾದ, ಕ್ಷಣ. ಅನುಮಾನದ ವಿಷಯ ಸಾಮಾನ್ಯ ಲಕ್ಷಣ ಸಾಮಾನ್ಯ ಲಕ್ಷಣವು ವಾಗ್ವ್ಯಾಪರಕ್ಕೆ ವಿಷಯವಾಗುವುದರಿಂದ ಭ್ರಾಂತ; ಪರಮಾರ್ಥಸತ್ ಅಲ್ಲ. ಅದು ಕ್ಷಣದ ಬೋಧವನ್ನು ಮಾಡಿಕೊಡಲಾರದು. ಆದ್ದರಿಂದ ಸ್ವಸಂವೇದನದ್ವಾರಾ ಪ್ರತ್ಯಕ್ಷವಾದ ಅನಿರ್ವಚನೀಯ ಕ್ಷಣವೇ ಪರಮಾರ್ಥಸತ್ ಎನ್ನಬೇಕು. 'ಇದಂ', 'ಅತ್ರ' 'ಅಧುನಾ' ಎಂಬ ಮಾತುಗಳಲ್ಲಡಗಿರುವ ಅನಿರ್ವಚನೀಯವಾದ ಕ್ಷಣವೇ ಸ್ವಲಕ್ಷಣ; ಇದೇ ಅರ್ಥಕ್ರಿಯಾಸಮರ್ಥ. ಬುದ್ಧಿಯು ಅಲ್ಲಿಯ ವರೆಗೆ ಹರಿಯಲೇ ಆರದು. ಬುದ್ಧಿಯು ಕೇವಲ ಧರ್ಮಿ-ಧರ್ಮಗಳ ಅನುಮಾನಜಾಲದಲ್ಲಿ ಮಾತ್ರ ಓಡಾಡಬಲ್ಲದು. ಆದ್ದರಿಂದ ಬುದ್ಧಿವಿಷಯವಾದ ಸಮಸ್ತಜಗತ್ತೆಲ್ಲ ವ್ಯಾವಹಾರಿಕವೇ ಹೊರತು ಪಾರಮಾರ್ಥಿಕವಲ್ಲ. ಇದನ್ನೇ 'ವಿಜ್ಞಪ್ತಿ', 'ಉಪಚಾರ', 'ಕಲ್ಪನೆ', ಸ್ವೇಚ್ಛಾ-ರಚಿತ-ಸಂಕೇತ ಎಂದೂ ಹೇಳುವರು. ತತ್ತ್ವಮಾತ್ರ ಅನಿರ್ವಚನೀಯವಾದ ಸ್ವಲಕ್ಷಣ ಅಥವಾ ಕ್ಷಣ. ಒಂದಾಗಿಯೇ ಕಾಣುವ ದೀಪಶಿಖೆ ವಾಸ್ತವವಾಗಿ ಅನೇಕ ಕ್ಷಣಗಳಲ್ಲಿ ಹುಟ್ಟಿ ನಾಶವಾಗುತ್ತಿರುವ ಬೆಳಕಿನ ಸಂತಾನವಲ್ಲವೇ? ಒಂದೇ ಪ್ರವಾಹವೆಂದರೂ ನದಿಯ ನೀರು ಪ್ರತಿಕ್ಷಣವೂ ಬೇರೆಯೇ ಅಲ್ಲವೆ? ಅಂತೆಯೇ ಕ್ಷಣಪ್ರವಾಹ ಒಂದೆಂಬ ಕಲ್ಪನೆ ಮಿಥ್ಯೆ; ಬುದ್ಧಿಕೃತ. ಕ್ಷಣ ಬೇರೆ, ಕ್ಷಣಿಕವಸ್ತು ಬೇರೆ, ಎಂಬ ವಿಭಾಗಕ್ಕೆ ಈ ಮಿಥ್ಯೆಯೇ ಮೂಲ. ವಸ್ತುತಃ ಪರಿವರ್ತನವಿಲ್ಲದ ವಸ್ತುವೇ ಇಲ್ಲ. ಎಂದರೆ ಸತ್ತ್ವವೇ ಪರಿವರ್ತನ; ಹಾಗೆಯೇ ಸತ್ತ್ವಕ್ಕೆ ಪರಿವರ್ತನವೂ ಇಲ್ಲ ಎಂಬ ಈ ವಿರೋಧಾಭಾಸವೇ ಬೌದ್ಧರ ಕ್ಷಣಿಕವಾದದ ತಳಪಾಯ.

[6] ಹೋಲಿಸಿ—'ತತ್ರ ಪ್ರತ್ಯಕ್ಷಂ ಕಲ್ಪನಾಪೋಢಂ ಯಜ್ಞಾನಮರ್ಥೇ ಯಥಾ ರೂಪಾದೌ ನಾಮಜಾತ್ಯಾದಿಕಲ್ಪನಾರಹಿತಮ್'—ನ್ಯಾಯಪ್ರವೇಶ.

ನಿಂದ ಬರುವ ವಿಜ್ಞಾನವೇ ಪ್ರತ್ಯಕ್ಷವೆಂದು ಮತ್ತೆ ಕೆಲವರ[7] ಹೇಳಿಕೆ. 'ಕಲ್ಪನೆಯೆಂದರೇನು' ಎಂದು ಕೇಳಿದರೆ ನಾಮ, ಜಾತಿ ಮುಂತಾದುವನ್ನು ವಸ್ತುಗಳಿಗೆ ಆರೋಪಿಸುವುದಕ್ಕೇ ಆ 'ಹೆಸರು' ಎನ್ನುತ್ತಾರೆ.[8]

ಸಮಾರೋಪಃ ಕಿಲ್ಕೈತಾವಾನ್ ಸದರ್ಥಾಲಂಬನಂ ಚ ತತ್ ।
ಜಾತ್ಯಾದ್ಯಪೋಹೇ ವೃತ್ತಿಃ ಕ್ವ ಕ್ವ ವಿಶೇಷಃ ಕುತಶ್ಚ ಸಃ ॥ ೭ ॥

'ನಾಮಕಲ್ಪನಾ ಯಥಾ ಡಿತ್ಥ ಇತಿ ಜಾತಿಕಲ್ಪನಾ ಯಥಾ ಗೌರಿತಿ'—ಹರಿಭದ್ರನವೃತ್ತಿ.

"ಪ್ರತ್ಯಕ್ಷಂ ಕಲ್ಪನಾಪೋಢಮಭ್ರಾಂತಂ" ಅಭಿಲಾಪಸಂಸರ್ಗಯೋಗ್ಯಪ್ರತಿಭಾಸಪ್ರತೀತಿಃ ಕಲ್ಪನಾ, ತಯಾ ರಹಿತಮ್. ತಿಮಿರಾಶುಭ್ರಮಣನಾಯಾನಸಂಕ್ಷೋಭಾದ್ಯಸಾಹಿತವಿಭ್ರಮಂ ಜ್ಞಾನಂ ಪ್ರತ್ಯಕ್ಷಮ್"—ನ್ಯಾಯಬಿಂದು.

"ಪ್ರತ್ಯಕ್ಷಂ ಕಲ್ಪನಾಪೋಢಂ ನಾಮಜಾತ್ಯಾದ್ಯಸಂಯುತಮ್ ।
ಅಭ್ರಾಂತಮಪರೋಕ್ಷಂ ಚ ಪ್ರತ್ಯಕ್ಷೇಣೈವ ಸಿಧ್ಯತಿ" ॥—ತತ್ತ್ವಸಂಗ್ರಹ.

ದಿಙ್ನಾಗನ ಲಕ್ಷಣದಲ್ಲಿ ಬರದ 'ಅಭ್ರಾಂತಂ' ಎಂಬ ಮಾತನ್ನು ಸೇರಿಸಿದವನು ಧರ್ಮಕೀರ್ತಿ. ಭಾಮಹನೂ ದಿಙ್ನಾಗನ ಅಭಿಪ್ರಾಯವನ್ನೇ ಬರೆಯುತ್ತಿರುವಂತಿದೆ. ವಾಚಸ್ಪತಿಮಿಶ್ರರೂ ದಿಙ್ನಾಗನ ಲಕ್ಷಣವೆಂದು ಭಾಮಹನಂತೆಯೇ ಉದಾಹರಿಸಿದ್ದಾರೆ.

7 ಇದು ವಸುಬಂಧುವಿನ ಲಕ್ಷಣವೆಂದು ವಾಚಸ್ಪತಿಮಿಶ್ರರು ಬರೆಯುತ್ತಾರೆ:—"ವಾಸಬಂಧವಂ ತಾವತ್ ಪ್ರತ್ಯಕ್ಷಲಕ್ಷಣಂ ವಿಕಲ್ಪಯಿತುಮುಪನ್ಯಸ್ಯತಿ—'ಅಪರೇ ಪುನರ್ವರ್ಣಯಂತಿ ತತೋಽರ್ಥಾದ್ವಿಜ್ಞಾನಂ ಪ್ರತ್ಯಕ್ಷಮಿತಿ.' ಈ ಮಾತುಗಳನ್ನವರಾಡದಿದ್ದರೆ ಭಾಮಹನ ವಾಕ್ಯಕ್ಕೆ ಅರ್ಥವೇ ಆಗುವಂತಿರಲಿಲ್ಲ. ವಸುಬಂಧುವು ವಿಜ್ಞಾನವಾದದ ಸಮರ್ಥಕನಾದುದರಿಂದ ಅವನಿಗೆ ವಿಜ್ಞಾನವೇ ಪರಮಾರ್ಥಸತ್. ಹೀಗೆ ವಿಜ್ಞಾನಕ್ಕೆ ಪರಮಾರ್ಥಸತ್ತ್ವವನ್ನು ಹೇಳುವುದಕ್ಕೆ ಆಧಾರ ಅದೇ ಪರಮಾರ್ಥಸತ್ತಾದ ಸ್ವಲಕ್ಷಣವೆಂಬ ಅಭಿಪ್ರಾಯ ಇರಬಹುದು. ಬೆಂಕಿಯ ಸ್ವಲಕ್ಷಣವು ಬೆಂಕಿಯ ವಿಜ್ಞಾನಕ್ಕೆ ಕಾರಣವಾದರೆ ಆಗ ಬೆಂಕಿಯು ಪ್ರಮಾ ಅಥವಾ ಸಮ್ಯಜ್ಞಾನವಾದ ಪ್ರತ್ಯಕ್ಷವಿಷಯವಾಗುತ್ತದೆ. ಈ ದೃಷ್ಟಿಯಿಂದ ನೈಯಾಯಿಕರು ಹೇಳುವ ಘಟ, ಪಟಾದಿಗಳೆಂದೂ ಪ್ರತ್ಯಕ್ಷವಿಷಯವೇ ಅಲ್ಲ. ಎಲ್ಲವೂ ವ್ಯಾವಹಾರಿಕ ಅಥವಾ ಕಾಲ್ಪನಿಕ ಅಥವಾ 'ಸಂವೃತಿಜ್ಞಾನ', 'ಜಾತಿ' (Genus)ಯ ಯೋಜನೆಯಿರುವುದರಿಂದ. ಅನಿರ್ವಚನೀಯವಾದ ಸ್ವಲಕ್ಷಣ ಕ್ಷಣಮಾತ್ರ ಪ್ರತ್ಯಕ್ಷಗಮ್ಯ.

8 ದಿಙ್ನಾಗನ ವಾಕ್ಯವನ್ನು ಉದ್ಯೋತಕರನು ಹೀಗೆ ಉದಾಹರಿಸಿದ್ದಾನೆ—"ಅಥ ಕೇಯಂ ಕಲ್ಪನಾ ? ನಾಮಜಾತಿಯೋಜನೇತಿ." ವಸ್ತುಗಳಿಗೆ 'ಡಿತ್ಥ'. ಎಂದು ಮುಂತಾಗಿ ಕೊಡುವ ಹೆಸರೇ ನಾಮಕಲ್ಪನೆ. 'ಹಸು' ಎಂದರೆ ಗೊರಸು, ಕೋಡು, ಗಂಗೆದೊಗಲುಗಳುಳ್ಳ ಒಂದು ಪ್ರಾಣಿಯ ಜಾತಿಯೆಂದು ತಿಳಿಯುವುದೇ ಜಾತಿಕಲ್ಪನೆ. ನಾಮ, ಜಾತಿಗಳಂತೆ ಗುಣ, ಕ್ರಿಯೆ, ಸಂಬಂಧಗಳು ಕೂಡ 'ಕಲ್ಪನೆ'ಗಳೇ (ನ್ಯಾಯವಾರ್ತಿಕ ಮತ್ತು ತಾತ್ಪರ್ಯಟೀಕೆ, I, ೧, ೪).

ದಿಙ್ನಾಗ, ವಸುಬಂಧುಗಳ ಲಕ್ಷಣವನ್ನು ಉದ್ಯೋತಕರ, ವಾಚಸ್ಪತಿಮಿಶ್ರರೂ ಖಂಡಿಸಿದ್ದಾರೆ.

'ಕಲ್ಪನೆ'ಯೆನ್ನುವುದು ಸಮಾರೋಪವೇ ಹೊರತು ಬೇರೇನೂ ಅಲ್ಲವೆಂದಂತೆಯೇ ಆಯಿತು. ಸಮಾರೋಪಕ್ಕೆ ಮೂಲ ಆಧಾರವೇ ವಸ್ತುಗಳ ಸತ್ತೆ. ಜಾತಿ ಮುಂತಾದ ಅಂಶಗಳನ್ನೆಲ್ಲ ತೆಗೆದುಹಾಕಿಬಿಟ್ಟ ಮೇಲೆ ಸಮಾರೋಪಕ್ಕೆ ಇನ್ನು ಆಶ್ರಯವೆಲ್ಲಿ? ಬೇರೆ ಬೇರೆ ಪ್ರತ್ಯಕ್ಷಗಳಿಗೆ ವ್ಯತ್ಯಾಸವೆಲ್ಲಿಯದು? ವ್ಯತ್ಯಾಸಕ್ಕೆ ಕಾರಣವಾದರೂ ಏನು?[9]

ತದಪೋಹೇಷು ಚ ತಥಾ ಸಿದ್ಧಾ ಸಾ ಬುದ್ಧಿಗೋಚರಾ ।
ಅವಸ್ತುಕಂ ಚೇದ್ವಿತಥಂ ಪ್ರತ್ಯಕ್ಷಂ ತತ್ತ್ವವೃತ್ತಿ ಹಿ ॥೮॥

'ಜಾತಿ' ಮುಂತಾದುವುಗಳನ್ನು ಇಲ್ಲವೆನ್ನುವಾಗ ಕೂಡ (ವಸ್ತುರೂಪವಾಗಿ ಅಲ್ಲದಿದ್ದರೆ) ಬುದ್ಧಿಗೋಚರವಾಗಿಯಾದರೂ ಕಲ್ಪನೆಯು ಉಳಿದೇ ಉಳಿಯುತ್ತದೆ. ವಸ್ತುವೇ ಇಲ್ಲವಾದರೆ ಪ್ರತ್ಯಕ್ಷವು ಅಯಥಾರ್ಥವಾದೀತು. ಪ್ರತ್ಯಕ್ಷವು ವಸ್ತುವಿನ ಯಥಾರ್ಥತೆಯನ್ನೇ ಆಶ್ರಯಿಸುವುದೆಂದು ಒಪ್ಪಲೇ ಬೇಕಲ್ಲವೆ?[10]

ಗ್ರಾಹ್ಯಗ್ರಾಹಕಭೇದೇನ ವಿಜ್ಞಾನಾಂಶೋ ಮತೋ ಯದಿ ।
ವಿಜ್ಞಾನಮಾತ್ರಸಾದೃಶ್ಯಾದ್ವಿಶೇಷೋಽಸ್ಯ ವಿಕಲ್ಪನಾ ॥೯॥

(ಬಾಹ್ಯವಸ್ತುವಿಲ್ಲದಿದ್ದರೂ) 'ವಿಜ್ಞಾನ'ದಲ್ಲಿಯೇ 'ಗ್ರಾಹ್ಯ', 'ಗ್ರಾಹಕ'ಗಳೆಂಬ ಎರಡು ಅಂಶಗಳುಂಟೆಂದರೂ, (ಬೇರೆ ಬೇರೆ ವಸ್ತುಗಳ ಪ್ರತ್ಯಕ್ಷಕಾಲದಲ್ಲಿ)

---

[9] ಇದು ದಿಙ್ನಾಗನ ಲಕ್ಷಣದ ಖಂಡನೆ. ಕಲ್ಪನೆ ಎಂದರೆ ಆರೋಪ. ಆರೋಪಕ್ಕೆ ವಿಷಯವೊಂದು, ಧರ್ಮವೊಂದು, ಎರಡೂ ಇದ್ದರೆ ತಾನೆ ಆರೋಪ ಸಾಧ್ಯವಾಗುವುದು? ನಾವು ಜಾತಿ, ಮುಂತಾದುವೆಲ್ಲ ಆರೋಪಿತ ಧರ್ಮಗಳೆನ್ನಬೇಕಾದರೆ ಆರೋಪಕ್ಕೆ ವಿಷಯವಾದ ಪರಮಾರ್ಥ ಸತ್ತಾದ ವಸ್ತುವೂ ಒಂದಿರಲೇ ಬೇಕಲ್ಲವೆ? ಜಾತಿ, ಗುಣ, ಕ್ರಿಯೆ, ಸಂಬಂಧ ಎಲ್ಲ ಧರ್ಮಗಳನ್ನೂ ತೆಗೆದಮೇಲೆ ನಿಲ್ಲುವ ಸದ್ವಸ್ತು ಯಾವುದು? ಸ್ವಲಕ್ಷಣವೆಂಬ ಅನಿರ್ವಚನೀಯ ಕ್ಷಣವು ವಸ್ತುವೆನ್ನುವುದೆಂತು? ಒಂದು ವೇಳೆ ಅದು ವಸ್ತುವೆಂದೊಪ್ಪಿದರೂ ಒಂದು ಪ್ರತ್ಯಕ್ಷದ ಸ್ವಲಕ್ಷಣಕ್ಕೂ ಮತ್ತೊಂದು ಪ್ರತ್ಯಕ್ಷದ ಸ್ವಲಕ್ಷಣಕ್ಕೂ ಅಂತರವನ್ನು ತೋರಿಸುವ ಪರಿ ಹೇಗೆ? ಎರಡೂ ಕ್ಷಣಗಳೇ ಅಲ್ಲವೆ?

[10] ವಾಗ್ವ್ಯವಹಾರವೆಲ್ಲ, ಬುದ್ಧಿವ್ಯಾಪಾರವೆಲ್ಲ, ಕಲ್ಪನೆಯೇ ಎಂದಾದಮೇಲೆ 'ಪ್ರತ್ಯಕ್ಷವು ಕಲ್ಪನಾರಹಿತ' ಎಂಬ ವಾಕ್ಯವೂ ಕೂಡ ಬುದ್ಧಿವ್ಯಾಪಾರಕ್ಕೆ ಗೋಚರವೇ ಆದಕಾರಣ ಕಲ್ಪನಾಸಹಿತವೇ ಆಗುವುದಲ್ಲವೆ? ಪರಮಾರ್ಥಸತ್ತೆಯುಳ್ಳ ವಸ್ತುವಿಲ್ಲದ್ದರೆ ಪ್ರತ್ಯಕ್ಷವು ಬೌದ್ಧರು ಹೇಳುವಂತೆ 'ಸಮ್ಯಜ್ಞಾನ'ವೆನಿಸುವುದೆಂತು? ಅದು ಮಿಥ್ಯೆಯೇ ಆಗಿಬಿಡುತ್ತದೆ ಅಥವಾ 'ಸಂವೃತಿಜ್ಞಾನ'ವೆನಿಸುತ್ತದೆ.

ಎರಡೂ 'ವಿಜ್ಞಾನ'ವೆನಿಸುವ ಕಾರಣ, ಸಾದೃಶ್ಯವೇ ಎದ್ದು ಕಾಣುವುದಲ್ಲದೆ, ವ್ಯತ್ಯಾಸಕ್ಕೆ ಕೊಡುವ ಉಪಪತ್ತಿಯು ಕಾಲ್ಪನಿಕವೇ ಆಗುತ್ತದೆ.[11]

ಅರ್ಥಾದೇವೇತಿ ರೂಪಾದೇಸ್ತತ ಏವೇತಿ ನಾನ್ಯತಃ ।
ಅನ್ಯಥಾ ಘಟವಿಜ್ಞಾನಮನ್ಯೇನ ವ್ಯಪದಿಶ್ಯತೇ ॥೧೦॥

ರೂಪ (ಜಾತಿ) ಮುಂತಾದುವೆಲ್ಲ (ಪಾರಮಾರ್ಥಿಕ ಸತ್ತೆಯುಳ್ಳ) ವಿಷಯದಿಂದಲೇ ಹುಟ್ಟುವುದರಿಂದಲೂ, ಅದರಿಂದ ಮಾತ್ರವೇ ಹುಟ್ಟುವುದರಿಂದಲೂ, ಬೇರಾವುದರಿಂದಲೂ ಹುಟ್ಟುವುದಿಲ್ಲವೆಂದೇ ಆಯಿತು. ಇಲ್ಲದಿದ್ದರೆ ಘಟದ (ಪ್ರತ್ಯಕ್ಷ)

---

[11] ಇದು ವಸುಬಂಧುವಿನ ಲಕ್ಷಣದ ಖಂಡನೆ. ವಿಜ್ಞಾನವಾದದಲ್ಲಿ ವಿಜ್ಞಾನದ ಹೊರತಾಗಿ ಬೇರೆ ಪರಮಾರ್ಥಸತ್ತ್ವವುಳ್ಳ ವಸ್ತುವೇ ಇಲ್ಲ. 'ವಿಜ್ಞಪ್ತಿಮಾತ್ರತಾಸಿದ್ಧಿ'ಯೆಂಬ ವಸುಬಂಧುವಿನ ಗ್ರಂಥದ ಹೆಸರೇ ಇದನ್ನು ಸಮರ್ಥಿಸುತ್ತದೆ. ಈ ವಾದದಲ್ಲಿ ಜ್ಞಾನವು ತ್ರಿವಿಧ—೧ ಪರಿಕಲ್ಪಿತ. ೨. ಪರತಂತ್ರ. ೩. ಪರಿನಿಷ್ಪನ್ನ. ಮೊಲದ ಕೋಡು, ಬಂಜೆಯ ಮಗ, ಮೃಗಜಲ, ಸ್ವಪ್ನಚಿತ್ರಗಳು—ಎಲ್ಲಾ ಪರಿಕಲ್ಪಿತಗಳು. ಇವು ಅತ್ಯಂತ ಅಸದ್ರೂಪಗಳು. ಸವಿಕಲ್ಪಕ ಬುದ್ಧಿಯಿಂದ ಬರುವ ಜ್ಞಾನ 'ಪರತಂತ್ರ', ಇದು ಬುದ್ಧಿಗೋಚರ; ಕಾರ್ಯಕಾರಣಭಾವ-ನಿಷ್ಠ. ಆದರೆ ಬುದ್ಧನಿಗೆ ಮಾತ್ರ ವೇದ್ಯವಾದುದು 'ಪರಿನಿಷ್ಪನ್ನ; ಪರತಂತ್ರವು ದೃಷ್ಟಿಯಿಂದ 'ಪರಿಕಲ್ಪಿತವು ಹೇಗೆ ಅಸತ್ತೆನಿಸುವುದೋ, ಪರಿನಿಷ್ಪನ್ನದ ದೃಷ್ಟಿಯಿಂದ 'ಪರತಂತ್ರ'ವೂ ಅಷ್ಟೇ ಅಸತ್ತು; ಅಥವಾ ಆಭಾಸ. ಗ್ರಾಹಕ-ಗ್ರಾಹ್ಯ, ವಿಷಯಿ-ವಿಷಯ, ಜೀವ-ಜಗತ್ ಮುಂತಾದ ಭೇದಗಳೆಲ್ಲವೂ 'ಪರತಂತ್ರ'ದ ಪ್ರಕಾರಗಳು. ಪರಿನಿಷ್ಪನ್ನವಾದ ವಿಜ್ಞಪ್ತಿಮಾತ್ರವೇ ಅವಿದ್ಯೆಯೆಂಬ ವಾಸನೆಯ ಮೂಲಕ ಈ ಪರತಂತ್ರದ ದ್ವೈತಗಳನ್ನು ತೋರಿಸುತ್ತದೆ. ಗ್ರಾಹಕ-ಗ್ರಾಹ್ಯ ಇವೆರಡೂ ವಿಜ್ಞಪ್ತಿಮಾತ್ರದ ಆಯತನಗಳೇ ಎಂದು ಭಗವಾನ್ ಬುದ್ಧನೇ ಹೇಳಿದ್ದಾನೆ. ಹೋಲಿಸಿ—

'ಯತಃ ಸ್ವಬೀಜಾತ್ ವಿಜ್ಞಪ್ತಿರ್ಯದಾಭಾಸಾ ಪ್ರವರ್ತತೇ ।
ದ್ವಿಧಾಯತನತ್ವೇನ ತೇ ತಸ್ಯಾ ಮುನಿರಬ್ರವೀತ್'

—ವಿಜ್ಞಪ್ತಿಮಾತ್ರತಾಸಿದ್ಧಿವಿಂಶತಿಕಾ,
(Ed. Sylvain Levi, Paris, 1925)

ಮತ್ತು "ನ ಗ್ರಾಹ್ಯಗ್ರಾಹಕಾಕಾರಬಾಹ್ಯಮಸ್ತಿ ಚ ಲಕ್ಷಣಮ್ ।
ಅತೋ ಲಕ್ಷಣಶೂನ್ಯತ್ವಾತ್ ನಿಃಸ್ವಭಾವಾಃ ಪ್ರಕಾಶಿತಾಃ ॥

—ಪ್ರಮಾಣವಾರ್ತಿಕ, III, ೨೧೫.

ಈ ತತ್ತ್ವದಂತೆ 'ಪರತಂತ್ರ' ಅಥವಾ ವ್ಯಾವಹಾರಿಕ ದಶೆಯಲ್ಲಿ ಕಾಣಬರುವ ಭೇದಕ್ಕಿಂತಲೂ ಪರಿನಿಷ್ಪನ್ನ ವಿಜ್ಞಾನದ ದೃಷ್ಟಿಯಿಂದ ಇರುವ ಅಭೇದವೇ ಸ್ಥಿರವಾದಂತಾಗಲಿಲ್ಲವೆ ಎಂದು ಭಾಮಹನು ಕೇಳುತ್ತಾನೆ.

ಜ್ಞಾನವನ್ನು (ಪಟವೇ ಮುಂತಾದ) ಮತ್ತೊಂದರ ಜ್ಞಾನವೆಂದು ಹೇಳಬೇಕಾದೀತು![12]

ತ್ರಿರೂಪಾಲ್ಲಿಂಗತೋ ಜ್ಞಾನಮನುಮಾನಂ ಚ ಕೇಚನ।
ತದ್ವಿದೋ ನಾಂತರೀಯಾರ್ಥದರ್ಶನಂ ಚಾಪರೇ ವಿದುಃ ॥೧೧॥

ಮೂರು ಬಗೆಯಾದ 'ಲಿಂಗ' (='ಹೇತು')ಗಳ ಮೂಲಕ ಬರುವ ಜ್ಞಾನವೇ ಅನುಮಾನವೆಂದು ಕೆಲವರು ಪಂಡಿತರೂ[13] ಸಂಪೂರ್ಣ ಸಾಹಚರ್ಯ ಸಂಬಂಧವಿರುವ ಎರಡರಲ್ಲಿ ಒಂದರ ಮೇಲಿಂದ ಮತ್ತೊಂದನ್ನು ತಿಳಿಯುವುದೇ ಅನುಮಾನವೆಂದು ಇತರರೂ[14] ಹೇಳುವರು.

ವಿವಿಧಾಸ್ಪದಧರ್ಮೇಣ ಧರ್ಮೀ ಕೃತವಿಶೇಷಣಃ।
ಪಕ್ಷಸ್ತಸ್ಯ ಚ ನಿರ್ದೇಶಃ ಪ್ರತಿಜ್ಞೇತ್ಯಭಿಧೀಯತೇ ॥೧೨॥

---

12 ವಸುಬಂಧುವು ಹೇಳಿದ ಲಕ್ಷಣಕ್ಕೆ ಇಲ್ಲಿ ಇನ್ನೊಂದರ್ಥವನ್ನು ಕಲ್ಪಿಸಿದೆ, "ಅರ್ಥಾತ್" ಎಂಬ ಪದದ ಮೇಲೆ (೬ ನೆ ಶ್ಲೋಕ) ಅವಧಾರಣೆಯನ್ನಿಡುವ ಮೂಲಕ, ವಿಜ್ಞಾನವೇ ಪರಮಾರ್ಥ ಸತ್ತೆಂಬ ಅವಧಾರಣೆ ಹೋಗಿ ಇಲ್ಲಿ 'ಅರ್ಥ' ಅಥವಾ ಬಾಹ್ಯವಸ್ತುವಿಂದಲೇ ಪ್ರತ್ಯಕ್ಷ ಜ್ಞಾನವುಂಟಾಗುವುದೆಂಬ ವಿವಕ್ಷೆ ಬರುತ್ತದೆ. 'ಅರ್ಥ ವೆಂದರೆ ಸ್ವಲಕ್ಷಣವೆಂಬ ವಸುಬಂಧುವಿನ ವಿವಕ್ಷೆಯನ್ನೂ ಇಲ್ಲಿ ಬದಲಾಯಿಸಿ ಭಾಮಹನು ಬಾಹ್ಯವಸ್ತುವೆಂಬ ಸಾಮಾನ್ಯಾರ್ಥವನ್ನೂ ಕಲ್ಪಿಸಿ ಚರ್ಚೆಯನ್ನು ಮುಗಿಸುತ್ತಾನೆ. ಈ ಅರ್ಥದಲ್ಲಿಯೂ ವಸುಬಂಧುವಿನ ಲಕ್ಷಣವನ್ನು ಉದ್ಯೋತಕರ, ವಾಚಸ್ಪತಿಮಿಶ್ರರು ಖಂಡಿಸುತ್ತಾರೆ (ನ್ಯಾ. ವಾ. I, i. ೪).

13 ಇದು ದಿಙ್ನಾಗನ ಪ್ರಮಾಣ-ಸಮುಚ್ಚಯದಲ್ಲೇ ಇದ್ದಿರಬೇಕೆಂದು ಡಾ|| ವಿದ್ಯಾಭೂಷಣರ ಟಿಬೆಟನ್ ಗ್ರಂಥದ ಆಧಾರದ ಮೇಲೆ ಕಾಶಿಯ ಬಟುಕನಾಥಶರ್ಮ ಮತ್ತು ಬಲದೇವ ಉಪಾಧ್ಯಾಯರು ವಾದಿಸುತ್ತಾರೆ. ಯಾಕೊಬಿ ಮತ್ತು ಕಾಣೆಯವರು ಕೆಳಗೆ ಕೊಟ್ಟ ಧರ್ಮಕೀರ್ತಿಯ ನ್ಯಾಯಬಿಂದುವಿನ ವಾಕ್ಯವೇ ಭಾಮಹನ ಆಧಾರವೆನ್ನುತ್ತಾರೆ—"ಅನುಮಾನಂ ದ್ವಿಧಾ ಸ್ವಾರ್ಥಂ ಪರಾರ್ಥಂ ಚ ; ತತ್ರ ಸ್ವಾರ್ಥಂ ತ್ರಿರೂಪಲ್ಲಿಂಗಾತ್ ಯದನುಮೇಯೇ ಜ್ಞಾನಂ ತದನುಮಾನಮ್." 'ವ್ಯಕ್ತಿವಿವೇಕ'ಕಾರನಾದ ಮಹಿಮಭಟ್ಟನೂ ಈ ವಾಕ್ಯಭಾಗವನ್ನು ತನ್ನ ಗ್ರಂಥದಲ್ಲಿ ಉದಾಹರಿಸಿದ್ದಾನೆ (ಕಾಶೀ ಮುದ್ರಣ, ಪುಟ ೭೮). ಈ ವಿಷಯವನ್ನು ಬೇರೆ ವಿದ್ವಾಂಸರು ಇದುವರೆಗೆ ಗಮನಿಸಿದಂತಿಲ್ಲ.

ಆದರೆ ಈ ಪ್ರಕ್ರಿಯೆ ಬೌದ್ಧತರ್ಕದಲ್ಲಿ ಮಾತ್ರ ಇತ್ತೆಂದು ಹೇಳುವುದೂ ಕಷ್ಟ. ಲಿಂಗತ್ರೈರೂಪ್ಯವು (೧. ಪಕ್ಷಧರ್ಮತ್ವ, ೨. ಸಪಕ್ಷಸತ್ತ್ವ ಮತ್ತು ೩. ವಿಪಕ್ಷವ್ಯಾವೃತ್ತಿ) ನೈಯಾಯಿಕರಿಗೂ ಸಮ್ಮತವೇ.

14 ಈ ಲಕ್ಷಣವು ಮೂಲತಃ ದಿಙ್ನಾಗನದೇ ಎಂದು ವಾಚಸ್ಪತಿಮಿಶ್ರರು ಹೇಳಿರುವರಂತೆ (ಕಾಶೀ ಮುದ್ರಣದ ಪೀಠಿಕೆ, ಪುಟ ೪೧). ಆಗ ಭಾಮಹನು ಕೇಚನ, ಅಪರೇ ಎಂಬ ವಿಭಾಗ

ಪ್ರತ್ಯಕ್ಷಕ್ಕೆ ಗೋಚರವಾಗದಿರುವ ಒಂದು 'ಧರ್ಮ'ವು[15] 'ಧರ್ಮಿ'ಯಲ್ಲಿದೆ[16] ಯೆಂದು ಸೂಚಿಸಲು ವಿಶೇಷಣಸಹಿತವಾಗಿ ಹೇಳುವ ವಿಶೇಷ್ಯವೇ 'ಪಕ್ಷ'. ಇದನ್ನು ವಾಕ್ಯರೂಪವಾಗಿ ನಿರ್ದೇಶಿಸುವುದೇ 'ಪ್ರತಿಜ್ಞೆ.'

ತದರ್ಥಹೇತುಸಿದ್ಧಾಂತಸರ್ವಾಗಮವಿರೋಧಿನೀ ।
ಪ್ರಸಿದ್ಧಧರ್ಮಾ ಪ್ರತ್ಯಕ್ಷಬಾಧಿನೀ ಚೇತಿ ದುಷ್ಯತಿ ॥೧೩॥

ಪ್ರತಿಜ್ಞಾವಾಕ್ಯದಲ್ಲಿ 'ಪ್ರತಿಜ್ಞೆಯ ಅರ್ಥದಲ್ಲಿ ವಿರೋಧ', 'ಹೇತು ವಿರೋಧ', 'ಸಿದ್ಧಾಂತ-ವಿರೋಧ', 'ಸರ್ವಾಗಮ-ವಿರೋಧ', 'ಪ್ರಸಿದ್ಧ-ಧರ್ಮ-ನಿರ್ದೇಶ', 'ಪ್ರತ್ಯಕ್ಷ-ವಿರೋಧ'—ಈ ಆರು ದೋಷಗಳಿಗೆಡೆಯುಂಟು.[17]

ಮಾಡುವುದಕ್ಕೆ ಕಾರಣವೇ ಸಮಂಜಸವಾಗುವುದಿಲ್ಲ. ಮಹಿಮಭಟ್ಟನ ವ್ಯಕ್ತಿವಿವೇಕದಲ್ಲಿ ಈ ಅರ್ಥದ ವಿವರಣೆ ಬರುತ್ತದೆ—"ನ ಹ್ಯರ್ಥಾದರ್ಥಾಂತರಪ್ರತೀತಿರನುಮಾನಮಂತರೇಣಾರ್ಥಾತಂರಮುಪಪದ್ಯತೇ ; ಉಪಮಾನಾದೀನಾಂ ಚ ತತ್ರೈವಾಂತರ್ಭಾವಾತ್. **ಯದಾಹು** :—"ನ ಚಾನ್ಯದರ್ಶನೇsನ್ಯಕಲ್ಪನಾ ಯುಕ್ತಾತಿಪ್ರಸಂಗಾತ್. ತಸ್ಯ ನಾಂತರೀಯಕತಾಯಾಂ ಸ್ಯಾತ್. ನ ಹಿ ಯಥಾವಿಧಸಿದ್ಧಃ ತಥಾವಿಧಂ ನಿಧಾನಂ ಸೂಚಯತಿ. ಸಾಮಾನ್ಯೇನ ಚ ಸಂಬಂಧಿನಾರ್ಥಪ್ರತಿಪತ್ತಿರನುಮಾನಮಿತಿ ದ್ವೇ ಏವ ಪ್ರಮಾಣೇ" ಇತಿ (ಪುಟ ೭೮-೭೯). 'ಒಂದು ಅರ್ಥದಿಂದ ಮತ್ತೊಂದು ಅರ್ಥ ಬರುವುದಕ್ಕೆ ಅನುಮಾನವೊಂದೇ ಕಾರಣ ; ಅದಲ್ಲದೆ ಬೇರಾವುದೂ ಅಲ್ಲ. ಉಪಮಾನಾದಿಗಳೂ ಉಪಮಾನದಲ್ಲೇ ಅಂತರ್ಗತವಾಗುತ್ತವೆ. ಶಾಸ್ತ್ರಕಾರರು ಹೇಳಿರುವಂತೆ—'ಒಂದನ್ನು ನೋಡಿ ಬೇಕಾದ ಮತ್ತೊಂದನ್ನು ಊಹಿಸುವುದು ಯುಕ್ತವಲ್ಲ—ಊಹೆಗೆ ಕೊನೆಮೊದಲೇ ಇಲ್ಲದೆ ಹೋಗುವುದರಿಂದ ಆದರೆ 'ನಾಂತರೀಯಕತೆ' ಇಲ್ಲವೆ 'ಅವಿನಾಭಾವ' ಇಲ್ಲವೆ ಅನ್ವಯವ್ಯತಿರೇಕ ಸಾಹಚರ್ಯವೆಂಬ ನಿಕಟಸಂಬಂಧ ಎರಡಕ್ಕಿದ್ದಾಗ ಮಾತ್ರ ಊಹೆ ಸರಿಯಾಗುತ್ತದೆ. ಯಾವ ರೀತಿ ತಾನಿರುವುದೋ ಅದೇ ರೀತಿ ಸ್ವತಂತ್ರವಾಗಿರುವ ಮತ್ತೊಂದನ್ನು ಯಾವುದೂ ಸೂಚಿಸಲಾರದು. ಆದರೆ ಎರಡಕ್ಕೂ ಸಂಬಂಧಿಸುವ ಒಂದು ಸಾಮಾನ್ಯವಾದ ಅಂಶವಿದ್ದಾಗ ಮಾತ್ರ ಒಂದು ಮತ್ತೊಂದನ್ನು ಸೂಚಿಸುತ್ತದೆ. ಆದ್ದರಿಂದ ಪ್ರಮಾಣಗಳು ಎರಡೇ."

ಇಲ್ಲಿಯ ಕಡೆಯ ವಾಕ್ಯವು ಬೌದ್ಧರ ಸಿದ್ಧಾಂತಕ್ಕೆ ಮಾತ್ರ ಅನ್ವಯಿಸುವುದರಿಂದ ಹಿಂದಿನ ವಾಕ್ಯಗಳೂ ಬೌದ್ಧತಾರ್ಕಿಕರದೇ ಎಂಬುದು ನಿಶ್ಚಿತ. ಒಂದೇ ವಾಕ್ಯದ ಹಿಂದೆ ಧರ್ಮಕೀರ್ತಿಯ ವಾಕ್ಯ ಉದಾಹೃತವಾಗಿರುವುದರಿಂದ ಇದೂ ಅವನ ಗ್ರಂಥದಿಂದಲೇ ತೆಗೆದುಕೊಂಡುದಾಗಿರಬೇಕು. ಈ ಅಂಶವನ್ನೂ ಬೇರೆ ವಿದ್ವಾಂಸರಾರೂ ವಿಮರ್ಶಿಸಿಲ್ಲ. ಇದರ ಪರಾಮರ್ಶದಿಂದ ಪೂರ್ವವಾಕ್ಯವು ದಿಙ್ನಾಗನದೂ ಈ ವಾಕ್ಯವು ಧರ್ಮಕೀರ್ತಿಯದೆಂದೂ ಸದ್ಯಕ್ಕೆ ಊಹಿಸಬಹುದಾಗಿದೆ.

15 ಧರ್ಮ = ಗುಣ (= *Characteristic*).

16 ಧರ್ಮಿ = ಗುಣಕ್ಕೆ ಆಶ್ರಯವಾದ ವಸ್ತು (= *Object*).

17 ಈ ಆರೂ ಪ್ರತಿಜ್ಞಾಭಾಸಗಳು. ಇಲ್ಲಿಯೂ ಭಾಮಹನು ಬೌದ್ಧತರ್ಕವನ್ನೇ ಅನುಸರಿಸಿದಂತಿದೆ.

ತಯೈವ ಹಿ ತದರ್ಥಸ್ಯ ವಿರೋಧಕರಣಂ ಯಥಾ ।
ಯತಿರ್ಮಮ ಪಿತಾ ಬಾಲ್ಯಾತ್ ಸೂನುರ್ಯಸ್ಯಾಹಮೌರಸಃ ॥೧೪॥

ಪ್ರತಿಜ್ಞೆಯ ಅರ್ಥದಲ್ಲಿಯೇ ವಿರೋಧ ಬರುವುದಕ್ಕೆ ಉದಾಹರಣೆ:—ನನ್ನ ತಂದೆ ಬಾಲ್ಯದಿಂದಲೂ ಸನ್ಯಾಸಿ; ಅವನ ಔರಸಪುತ್ರನೇ ನಾನು.'

ಅಸ್ತ್ಯಾತ್ಮಾ ಪ್ರಕೃತಿರ್ವೇತಿ ಜ್ಞೇಯಾ ಹೇತ್ವಪವಾದಿನೀ ।
ಧರ್ಮಿಣೋಽಸ್ಯಾಪ್ರಸಿದ್ಧತ್ವಾತ್ ತದ್ಧರ್ಮೋಽಪಿ ನ ಸೇತ್ಸ್ಯತಿ ॥೧೫॥

'ಆತ್ಮವಿದೆ ಇಲ್ಲವೆ ಪ್ರಕೃತಿಯಿದೆ' ಎಂಬ ಪ್ರತಿಜ್ಞಾವಾಕ್ಯದಲ್ಲಿ ಹೇತು ವಿರೋಧವಿದೆಯೆಂದರಿಯಬೇಕು. ಏಕೆಂದರೆ, 'ಧರ್ಮಿ'ಯೇ ಇಲ್ಲಿ ಅಪ್ರಸಿದ್ಧ (= Unknown) ವಾದ್ದರಿಂದ ಅದರ 'ಅಸ್ತಿತ್ವ' ಇತ್ಯಾದಿ ಧರ್ಮಗಳು ಕೂಡ ಅಸಿದ್ಧವೇ.[18]

ಶಾಶ್ವತೋಽಶಾಶ್ವತೋ ವೇತಿ ಪ್ರಸಿದ್ಧೇ ಧರ್ಮಿಣಿ ಧ್ವನೌ ।
ಜಾಯತೇ ಭೇದವಿಷಯೋ ವಿವಾದೋ ವಾದಿನೋರ್ಮಿಥಃ ॥೧೬॥

ಧರ್ಮಿಯು ಪ್ರತ್ಯಕ್ಷ—ಸಿದ್ಧವಾಗಿದ್ದಾಗ ಮಾತ್ರ ಅದರ ಧರ್ಮಗಳನ್ನು ಕುರಿತು ವಾದಿಗಳಲ್ಲಿ ಪರಸ್ಪರ ವಿವಾದವು ಹುಟ್ಟುತ್ತದೆ; ಉದಾಹರಣೆಗೆ ಶಬ್ದವು ನಿತ್ಯವೋ ಅಥವಾ ಅನಿತ್ಯವೋ ಎಂಬ ವಿಚಾರಕ್ಕೆ ಶಬ್ದವು ಉಭಯವಾದಿ ಸಮ್ಮತವಾದ ಪಕ್ಷವಾಗಿರುವುದೇ ಮೂಲ.[19]

ಸ್ವಸಿದ್ಧಾಂತವಿರೋಧಿತ್ವಾದ್ ವಿಜ್ಞೇಯಾ ತದ್ವಿರೋಧಿನೀ ।
ಕಣಭಕ್ಷೋ ಯಥಾ ಶಬ್ದಮಾಚಕ್ಷೀತಾವಿನಶ್ವರಮ್ ॥೧೭॥

---

[18] ಭಾಮಹನು ಬೌದ್ಧನೇ ಅಲ್ಲವೇ ಎಂಬ ಬಗ್ಗೆ ಬೇಕಾದಷ್ಟು ಚರ್ಚೆ ನಡೆದಿದೆ. ಆದರೆ ಈ ಉದಾಹರಣೆಯನ್ನು ವಿದ್ವಾಂಸರು ಗಮನಿಸಿದಂತಿಲ್ಲ. ಇಲ್ಲಿ 'ಅಸ್ತಿ ಆತ್ಮಾ' ಅಥವಾ 'ಅಸ್ತಿ ಪ್ರಕೃತಿಃ' ಎಂಬ ವೇದಾಂತ, ಸಾಂಖ್ಯ ಮುಂತಾದ ಆಸ್ತಿಕದರ್ಶನಕಾರರ ಮೂಲ ಪ್ರತಿಜ್ಞೆಯೇ ದುಷ್ಟವೆಂದು ತೋರಿಸಿದೆ. ಈ ಕೆಲಸವನ್ನೇ ದಿಙ್ನಾಗ ಧರ್ಮಕೀರ್ತಿಗಳೂ ಮಾಡಿದ್ದು. ಭಾಮಹನೂ ಬೌದ್ಧನಲ್ಲದಿದ್ದರೆ ಈ ಉದಾಹರಣೆಗಳನ್ನು ಕೊಡುತ್ತಿರಲಿಲ್ಲವೆನಿಸುತ್ತದೆ. 'ಅಸ್ತಿ ಆತ್ಮಾ' ಎನ್ನುವಾಗ ಆತ್ಮವು ಪಕ್ಷವಾಗುತ್ತದೆ. ಇದೇ ಸಾಧ್ಯವೂ ಆದಕಾರಣ ಸಾಧ್ಯವನ್ನೇ ಪಕ್ಷವೆಂದು ಗ್ರಹಿಸುವುದು ಇಂಗ್ಲಿಷಿನಲ್ಲಿ '*Begging the Question*' ಎಂಬ ತರ್ಕದೋಷಕ್ಕೆ ಗುರಿಯಾಗುತ್ತದೆ.

[19] ಈ ದೋಷ ತಪ್ಪಬೇಕಾದರೆ ಹೇಗಿರಬೇಕೆಂದು ಭಾಮಹನು ಇಲ್ಲಿ ವಿವರಿಸುತ್ತಾನೆ. ಪಕ್ಷ ಅಥವಾ ಧರ್ಮಿಯು ಸಾಧ್ಯಸಮವಾಗದೆ ಉಭಯವಾದಿಗಳಿಗೂ ಸಮ್ಮತವಿರುವಂತೆ ಸ್ವತಂತ್ರ ಅಸ್ತಿತ್ವವನ್ನು ಪಡೆದಿರಬೇಕು.

ತನ್ನ ಸಿದ್ಧಾಂತಕ್ಕೆ ವಿರೋಧವು ಪ್ರತಿಜ್ಞಾ-ವಾಕ್ಯದಲ್ಲಿ ಬಂದರೆ ಅದು 'ಸಿದ್ಧಾಂತ-ವಿರೋಧ. ಕಣಾದನು ಶಬ್ದವನ್ನು ನಿತ್ಯವೆನ್ನುವುದೇ ಆದರೆ ಈ ದೋಷ ಸ್ಪಷ್ಟ (ಹಾಗೆನ್ನುವುದು ಅವನ ಮೂಲಸಿದ್ಧಾಂತಕ್ಕೇ ವಿರುದ್ಧವಾದುದರಿಂದ).[20]

ಸರ್ವಶಾಸ್ತ್ರವಿರುದ್ಧತ್ವಾತ್ ಸರ್ವಾಗಮವಿರೋಧಿನೀ ।
ಯಥಾ ಶುಚಿಸ್ತನುಃ ಸ್ತ್ರೈಣೀ ತತ್ಪ್ರಮಾಣಾನಿ ಸನ್ತಿ ವಾ ॥೧೮॥

ಎಲ್ಲ ಶಾಸ್ತ್ರಗಳಿಗೂ ವಿರುದ್ಧವಾದ ಪ್ರತಿಜ್ಞೆಯೇ 'ಸರ್ವಾಗಮ—ವಿರುದ್ಧ.' ಉದಾಹರಣೆ:—'ಸ್ತ್ರೀ ದೇಹವು ಶುಚಿ' ಅಥವಾ 'ಸ್ತ್ರೀದೇಹವು ಶುಚಿಯೆನ್ನಲು ಪ್ರಮಾಣಗಳುಂಟು', ಇತ್ಯಾದಿ ವಾಕ್ಯಗಳು.[21]

ಆಕುಮಾರಮಸಂದಿಗ್ಧಧರ್ಮಾಹಿತವಿಶೇಷಣಾ ।
ಪ್ರಸಿದ್ಧಧರ್ಮೇತಿ ಮತಾ ಶ್ರೋತ್ರಗ್ರಾಹ್ಯೋ ಧ್ವನಿರ್ಯಥಾ ॥೧೯॥

ಮಕ್ಕಳಿಂದ ಹಿಡಿದು ಎಲ್ಲರಿಗೂ ನಿಸ್ಸಂದೇಹವಾಗಿ ಗೊತ್ತಿರುವ ಧರ್ಮಗಳೇ ಧರ್ಮಿಗೆ ವಿಶೇಷಣವಾಗಿರುವಂತಹ ಪ್ರತಿಜ್ಞಾ-ವಾಕ್ಯವು 'ಪ್ರಸಿದ್ಧ-ಧರ್ಮ'ವೆಂಬ ದೋಷವೆನಿಸುತ್ತದೆ. 'ಕಿವಿಯಿಂದ ಕೇಳಿಬರುವುದೇ ಶಬ್ದ'ವೆಂಬ ವಾಕ್ಯ ಇದಕ್ಕೆ ಉದಾಹರಣೆ.[22]

ಪ್ರತ್ಯಕ್ಷಬಾಧಿನೀ ತೇನ ಪ್ರಮಾಣೇನೈವ ಬಾಧ್ಯತೇ ।
ಯದಾ ಶೀತೋಽನಲೋ ನಾಸ್ತಿ ರೂಪಮುಷ್ಣಃ ಕ್ಷಪಾಕರಃ ॥ ೨೦ ॥

ಪ್ರತ್ಯಕ್ಷ ಪ್ರಮಾಣಕ್ಕೆ ವಿರುದ್ಧವಾದ ಪ್ರತಿಜ್ಞೆಯೇ 'ಪ್ರತ್ಯಕ್ಷ—ವಿರುದ್ಧ'ವೆನಿಸುವುದು. 'ಬೆಂಕಿ ತಣ್ಣಗಿದೆ; ರೂಪವೆಂಬುದೇ ಇಲ್ಲ; ಚಂದ್ರನು ಉಷ್ಣ'— ಇವೇ ಮುಂತಾದ ವಾಕ್ಯಗಳೇ ಉದಾಹರಣೆ.[23]

---

20 ಕಣಭಕ್ಷ ಅಥವಾ ಕಣಾದನು ವೈಶೇಷಿಕದರ್ಶನದ ಸೂತ್ರಕಾರ. ಕಾರ್ಯವಾದುದೆಲ್ಲವೂ ಅನಿತ್ಯವೆಂದು ಆ ದರ್ಶನದ ಸಿದ್ಧಾಂತ. ಶಬ್ದವು ಎರಡು ವಸ್ತುಗಳ ಸಂಯೋಗ ಅಥವಾ ವಿಭಾಗದಿಂದ ಹುಟ್ಟುವ ಕಾರ್ಯವೆಂದೂ ಆ ದರ್ಶನದಲ್ಲಿ ಹೇಳಿದೆ. ಎಂದಮೇಲೆ ಸ್ವಸಿದ್ಧಾಂತಕ್ಕೆ ವಿರುದ್ಧವಾಗಿ ಶಬ್ದವು ನಿತ್ಯವೆಂದಿದ್ದರೆ ಅದು ದೋಷವೇ ಆಗುತ್ತಿತ್ತು. ವಸ್ತುತಃ ಕಣಾದನು ಹೀಗೇನೂ ಹೇಳಿಲ್ಲ. ಶಬ್ದವು ನಿತ್ಯವೆನ್ನುವವರು ಮೀಮಾಂಸಕರು.

21 (ಚಾರ್ವಾಕಮತವನ್ನು ಬಿಟ್ಟರೆ) ಭಾರತದ ಆಸ್ತಿಕ—ನಾಸ್ತಿಕ ದರ್ಶನಗಳಿಗೆಲ್ಲ ಸಮಾನವಾದ ಅಂಶವೆಂದರೆ ಸಂಸಾರದ ನಿಸ್ಸಾರತೆ; ಕಾಯವು ಅಶುಚಿಯೆಂಬ ಅಭಿಪ್ರಾಯ.

22 'ಸಿದ್ಧಸಾಧನ'ವೆಂದೂ ಈ ದೋಷವನ್ನು ಕರೆಯುವುದುಂಟು.

23 ಇದೇ 'ಬಾಧಿತ'ವೆಂಬ ಹೇತ್ವಾಭಾಸಕ್ಕೆ ಮೂಲ.

ಡಾ|| ಕೆ. ಕೃಷ್ಣಮೂರ್ತಿ.

ಸಂಖ್ಯೆಗಳಲ್ಲಿ ಸಂಚಾರ

ಗಣಿತದಲ್ಲಿ ಉಪಯುಕ್ತವಾಗುವ ಪ್ರಮುಖಭಾವನೆಗಳಲ್ಲಿ "ಸಂಖ್ಯೆ"ಯೂ ಒಂದು. ಸಂಖ್ಯೆಗಳನ್ನು ಸಹಜ ಜನ್ಯ ಎಂದು ವಿಭಾಗಿಸುತ್ತಾರೆ. ಸಹಜಸಂಖ್ಯೆಗಳು ನಮಗೆಲ್ಲಾ ಪರಿಚಿತವೇ. ಬುದ್ಧಿಗೆ ಸಹಜವಾಗಿ ಸ್ಫುರಿಸುವ ಸಂಖ್ಯೆಗಳೇ ಸಹಜ ಸಂಖ್ಯೆಗಳು. ಉದಾಹರಣೆಗೆ:—ಒಂದು ತಲೆ, ಒಂದು ಕೋಲು, ಒಂದು ಸೂರ್ಯ, ಒಂದು ಚಂದ್ರ. ಹೀಗೆ ಇದೇ ಗುಂಪಿನ ವಸ್ತುಗಳೆಲ್ಲದರ ಸಮಾನಧರ್ಮ "ಒಂದು" ಎಂಬ ಸಂಖ್ಯೆಯಾಯಿತು. ಎರಡು ಕೈ, ಎರಡು ಕಾಲು, ಎರಡು ಕಣ್ಣು ಮುಂತಾದ ವಸ್ತುಗಳ ಸಮಾನಧರ್ಮ "ಎರಡು" ಎಂಬ ಸಂಖ್ಯೆಯಾಯಿತು, ಹೀಗೆಯೇ. . . .

ಆದರೆ, ಬುದ್ಧಿ ಸ್ವಲ್ಪ ಬಲಿತ ಮೇಲೆ ಮಾನವನಿಗೆ ಇಷ್ಟೇ ಸಾಲದೆನಿಸಿತು. "ಹಣ್ಣಿನ ಎರಡು ಹೋಳುಗಳಲ್ಲೊಂದು" ಎನ್ನುವ ಬದಲು "ಎರಡರಲ್ಲೊಂದು ಪಾಲು, ಅರ್ಧ" ಎನ್ನುವ ಭಾವನೆ ಬಂತು. ಒಟ್ಟನ್ನು ಎಷ್ಟು ಪಾಲು ಮಾಡಿ ಅದರ ಲ್ಲೆಷ್ಟು ಪಾಲು ತೆಗೆದುಕೊಳ್ಳುವುದು ?" ಎಂದು ರಾಶಿಯನ್ನೊಡೆದು ಲೆಕ್ಕಮಾಡುವ "ಭಿನ್ನರಾಶಿ"ಗಳು ಬಂದುವು.

ಈ ಮೆಟ್ಟಲಿನಲ್ಲೇ ನಾವು ಶುದ್ಧ-ಪ್ರಯುಕ್ತ ವಿಜ್ಞಾನಗಳ ಪೂರಕತೆಯನ್ನು ಕಾಣುತ್ತೇವೆ. ವ್ಯವಹಾರಕ್ಕೆ ಸಹಜಸಂಖ್ಯೆಗಳೇ ಸಾಕಾಗದಾಗ ಭಿನ್ನರಾಶಿಗಳ ಸೃಷ್ಟಿಯಾಯಿತು. ಆದರೆ, ಅಷ್ಟಕ್ಕೇ ನಿಲ್ಲಲಿಲ್ಲ. ಭಿನ್ನರಾಶಿಗಳನ್ನೂ ಸಹಜಸಂಖ್ಯೆ ಗಳಂತೆಯೇ ಕೂಡಿ—ಗುಣಿಸಬಹುದೆನ್ನಿಸಿತು. ವ್ಯವಹಾರದೊಡನೆ ಶಾಸ್ತ್ರವೂ ಬೆಳೆದು ಬಂತು.

ಇನ್ನೂ ಸ್ಪಷ್ಟವಾದ ಮತ್ತೊಂದು ಉದಾಹರಣೆಯಿದೆ. ಜಗತ್ತಿನಲ್ಲೆಲ್ಲಾ ಈಗ ಪ್ರಚಾರದಲ್ಲಿರುವ "ದಶಮಾನ" ಪದ್ಧತಿಯೇ ಅದು. ಈ ಹಾಗು ಇಂಥ ಇತರ ಪದ್ಧತಿ (ಉದಾ.—ದ್ವಾದಶಮಾನ, ಷಷ್ಠಿಮಾನ)ಗಳ ಬೆಳವಣಿಗೆಗಳನ್ನು ಪರಿಶೀಲಿಸಿ ದರೆ ಶುದ್ಧ-ಪ್ರಯುಕ್ತ ವಿಜ್ಞಾನಗಳ ಪರಸ್ಪರ ಪೂರಕತೆ ಗೊತ್ತಾಗುತ್ತದೆ. ಕೂಡು ವುದು—ಕಳೆಯುವುದು, ಗುಣಾಕಾರ ಮುಂತಾದುವು ಈಗ ಎಷ್ಟು ಸುಲಭ! ಪ್ರಾಥ ಮಿಕ ಶಾಲೆಯ ಹುಡುಗರೂ ಈ ಪರಿಕರ್ಮಗಳನ್ನು ಸುಲಭವಾಗಿ ಮಾಡಬಲ್ಲರು— ಆದರೂ ಹಿಂದೆ ಅತಿ ಬುದ್ಧಿವಂತರಾದ ಗ್ರೀಕ್-ರೋಮನ್ ಗಣಿತಜ್ಞರೂ ಕೂಡಲು—ಕಳೆಯಲು, ಗುಣಿಸಲು, ಭಾಗಿಸಲು ಬಹುಕಾಲ ಕಷ್ಟಪಡುತ್ತಿದ್ದರು.

ಇದೇಕೆ? ಇದನ್ನು ತಿಳಿಯಬೇಕಾದರೆ, ನಾವು ನಮ್ಮ ದಶಮಾನಪದ್ಧತಿಯನ್ನು ಸ್ವಲ್ಪ ಮರೆತರೆ ಸಾಕು. ಆಗ, ಸಂಖ್ಯೆಗಳನ್ನು ಬರೆಯುವುದು ಹೇಗೆ? ಒಂದಕ್ಕೆ ಒಂದು ಗೆರೆ, ಎರಡಕ್ಕೆ ಎರಡು ಗೆರೆ, ಹೀಗೆ. ಆದರೆ ಪುಣ್ಯವಶಾತ್ ಐದಕ್ಕೆ V ಎಂದು ಬರೆಯುತ್ತಿದ್ದರು. ನಾಲ್ಕನ್ನು ಐದಕ್ಕೊಂದು ಕಡಮೆ IV ಎಂದೂ ಆರನ್ನು ಐದು ಮತ್ತೊಂದು VI ಎಂದೂ ಬರೆಯುತ್ತಿದ್ದರು. ಈ ಮಟ್ಟದ ಕೌಶಲಕ್ಕೂ—ಐದನ್ನು ಒಂದು ಗುಂಪೆಂದು ಭಾವಿಸುವುದಕ್ಕೆ—ಅದರ ಉಪಯುಕ್ತತೆ—ಸಹಜತೆಯೇ ಕಾರಣ. ಏಕೆಂದರೆ, ಒಂದೊಂದು ಬೆರಳೂ "ಒಂದು" ಎಂಬ ಸಂಖ್ಯೆಯನ್ನು ಸೂಚಿಸಿದರೆ, ಐದು ಬೆರಳೂ ಸೇರಿ ಒಂದು "ಹಸ್ತ" ಅಲ್ಲವೆ? ಹಾಗೆಯೇ ಹತ್ತಕ್ಕೆ X ಎಂಬ ಸಂಜ್ಞೆ ರೂಢಿಗೆ ಬಂತು. ಇಷ್ಟಕ್ಕೆ ಮುಗಿಯಲಿಲ್ಲ. ಐವತ್ತಕ್ಕೆ L, ನೂರಕ್ಕೆ C, ಐನೂರಕ್ಕೆ D ಮುಂತಾದ ಬೇರೆ ಬೇರೆ ಸಂಜ್ಞೆಗಳ ರೂಢಿಯಾಯಿತು. ಈ ಪದ್ಧತಿಯಲ್ಲಿ ಎಂಟುನೂರ ನಲವತ್ತೆಂಟನ್ನು ಹೀಗೆ ಲೆಕ್ಕಮಾಡಬೇಕಾಗಿತ್ತು.

"ಒಂದು" ಐನೂರು	"ಮೂರು" ನೂರುಗಳು	ಐವತ್ತಕ್ಕೆ ಹತ್ತು ಕಡಮೆ	ಐದು	ಮೇಲೆ ಮೂರು
D	CCC	XL	V	III

ಹೀಗೆ, ಕೇವಲ ವ್ಯವಹಾರವೇ ಅವರನ್ನು ಕರೆತಂದುಬಿಟ್ಟುದು ಈ ಸಂಜ್ಞೆಗಳ ಗೊಂಡಾರಣ್ಯಕ್ಕೆ. ಇದರೊಡನೆ, ವಿಜ್ಞಾನಮನೋಧರ್ಮ ಕೂಡಿದಾಗ, ಮನಸ್ಸು ಕೆಲವು ಪ್ರಶ್ನೆಗಳನ್ನು ಹಾಕುತ್ತದೆ. ಐನೂರರಲ್ಲಿನ ಐದಕ್ಕೂ, ಐವತ್ತರಲ್ಲಿನ ಐದಕ್ಕೂ, ಐದರಲ್ಲಿನ ಐದಕ್ಕೂ ಏನಾದರೂ ಸಾಮ್ಯವೈಷಮ್ಯಗಳುಂಟೇ? ಈ ಪ್ರಶ್ನೆಗೆ ಸರಿಯಾದ ಉತ್ತರ ಬಂದರೆ ಈಗಿನ ನಮ್ಮ ಸುಲಭವಾದ ದಶಮಾನಪದ್ಧತಿಗೇ ಬಂದಂತಾಗುತ್ತದೆ. "ಐದು" ಎಂಬ ಒಂದೇ ಭಾವನೆಯೇ ಅವೆಲ್ಲದರಲ್ಲೂ ಇದೆ. ಆದರೆ, "ಐದು ಏನು?" ಎಂಬುದೇ ಅವುಗಳಲ್ಲಿನ ಭೇದ. ಐದರಲ್ಲಿ ಐದು "ಒಂದು"ಗಳು ಐವತ್ತರಲ್ಲಿ ಐದು "ಹತ್ತು"ಗಳು, ಐನೂರರಲ್ಲಿ ಐದು "ನೂರುಗಳು" ಇವೆ. "ಅರ್ಧ" ಎಂಬುದು "ಎರಡರಲ್ಲೊಂದುಪಾಲು" ಎನ್ನುವಂತೆಯೇ "ಒಂದು ಹತ್ತು" ಎಂಬುದು "ಹತ್ತು ಒಂದು"ಗಳ ಗುಂಪು. "ನೂರು" ಎಂಬುದು "ಹತ್ತು ಹತ್ತು"ಗಳ ಗುಂಪು, . . . ಹೀಗೆಯೇ.

ಈ ಯೋಚನಾಲಹರಿ ನಮಗೆ ಬಹಳ ಸುಲಭವೆನಿಸುತ್ತದೆ, ಅದು ಸಹಜವೇ. ಏಕೆಂದರೆ ಚಿಕ್ಕಂದಿನಿಂದ ಈ ಭಾವನೆ--ಈ ಬಗೆಯ ತರ್ಕ ನಮ್ಮಲ್ಲಿದ್ದು, ನಮ್ಮೊಡನೆ ಬೆಳೆದಿರುತ್ತದೆ. ನಾವು ಸಂಖ್ಯೆಗಳನ್ನು ಹೆಸರಿಸುವುದೇ ಈ ತರ್ಕದ ಬಲದಿಂದ. ಆದರೆ ಈ ಬಗೆಯ ಚಿಂತನೆಗೆ ಹೊರತಾಗಿದ್ದ ಜನ ಹೊಸದಾಗಿ ಇದನ್ನರಿಯುವುದು ಹುಟ್ಟು ಕುರುಡನಿಗೆ ಕಣ್ಣು ಬಂದಂತೆ. ಸ್ಪರ್ಶದಿಂದ ಮಾತ್ರ ವಸ್ತುವನ್ನು ತಿಳಿಯುತ್ತಿದ್ದವನು

ಅದರ ಬಣ್ಣವನ್ನು ಅರಿಯುವಂತೆ. ಏಕೆಂದರೆ, ಐನೂರನ್ನು ಅವರು ನೋಡುತ್ತಿದ್ದುದು ಒಂದು "ಸಮಷ್ಟಿ"ಯಾಗಿ ಅದರ ಅಂಗಗಳಾದ "ಐದು"ನೂರುಗಳಿಗೂ "ಐದು" ಎಂಬ ಸಂಖ್ಯೆಗೂ ಇರುವ ಸಂಬಂಧ ಅವರ ಮನಸ್ಸಿಗೆ ಅಷ್ಟು ಸ್ಪಷ್ಟವಾಗಿರಲಿಲ್ಲ.

ಒಮ್ಮೆ ಈ ಅರಿವಾಯಿತೆಂದರೆ, ವಿಜ್ಞಾನದ ಬಳಕೆಗೆ ವ್ಯವಹಾರ ತನ್ನ ನೀರನ್ನು ಊಡುತ್ತದೆ. ಸಹಜಸಂಖ್ಯೆಗಳನ್ನೆಲ್ಲ ಹೀಗೆ ಆವರ್ತಕ್ರಮದಿಂದ—ದಶಮಾನದಲ್ಲಾಗಲಿ, ದ್ವಾದಶಮಾನದಲ್ಲಾಗಲಿ, ಮತ್ತಾವುದೇ ಪದ್ಧತಿಯಲ್ಲಾಗಲಿ—ಹೇಳಬಹುದೆಂದೊಡನೆ ವ್ಯವಹಾರವು ದಶಮಾನವನ್ನು ಈ ಪಟ್ಟಕ್ಕೇರಿಸಿತು, ಮನುಷ್ಯನು ಕೆಲಸಮಾಡುವುದು ಕೈಗಳಿಂದ, ಕೈಬೆರಳುಗಳೂ ಹತ್ತು, ಆದ್ದರಿಂದ ಎಣಿಕೆಗೆ ದಶಮಾನಪದ್ಧತಿ ಅನುಕೂಲ. ಈ ಕಾರಣದಿಂದಲೇ ಕೆಲಕಾಲ ಹಲವೆಡೆ ಪ್ರಚಾರದಲ್ಲಿದ್ದ ಇತರ ಪದ್ಧತಿಗಳು ದಶಮಾನಪದ್ಧತಿಯ ಮುಂದೆ ಮಂಜಿನಂತೆ ಮಾಯವಾಗಿವೆ.

ಅಷ್ಟೇ ಅಲ್ಲ, ಐದು ಐನೂರುಗಳಲ್ಲಿನ ಸಾಧರ್ಮ್ಯ ಸ್ಪಷ್ಟವಾಗಿ ತೋರದೆ ಹಿಂದೆ ಐದಕ್ಕೆ, ಐವತ್ತಕ್ಕೆ, ಐನೂರಕ್ಕೆ . . . ಬೇರೆ ಬೇರೆ ಗುರುತುಗಳನ್ನಿಟ್ಟು ಕೊಂಡಿದ್ದರು. ಮತ್ತು ಹತ್ತು, ನೂರು, ಸಾವಿರಗಳಿಗೆ ಬೇರೆ ಬೇರೆ ಸಂಜ್ಞೆಗಳನ್ನಿಟ್ಟು ಕೊಂಡಿದ್ದರು. ಅವುಗಳೊಳಗಣ ಸಂಬಂಧ ಅರಿವಾದೊಡನೆ ಈ ನಾನಾ ಸಂಜ್ಞೆಗಳ ಗೊಂದಲ ತಪ್ಪಿತು. ಹತ್ತೇ ಸಂಜ್ಞೆಗಳಿಂದ ಎಷ್ಟೇ ದೊಡ್ಡ ಸಂಖ್ಯೆಯನ್ನಾದರೂ ಈಗ ಬರೆಯಬಹುದು.

ಗಣಿತದ ಇತರ ಭಾಗಗಳ ಮಾತಿರಲಿ. ಸಂಖ್ಯೆಗಳ ಬೆಳವಣಿಗೆಯೂ ಇಲ್ಲಿಗೇ ಮುಗಿಯಲಿಲ್ಲ. ಗಣಿತ ಪರಿಕರ್ಮಗಳೆಲ್ಲಾ ಸಾಧ್ಯವಾದಷ್ಟು ಸಾರ್ವತ್ರಿಕವಾಗಿರ ಬೇಕೆಂದು ಒಂದು ಭಾವನೆ. ಇದು ಒಂದು ಬಗೆಯ ಸಾಹಸ. ಥಟ್ಟನೆ ನೋಡಲು ವಿಚಿತ್ರ ವಾಗಿ ಭಾಸವಾದರೂ ಕುತೂಹಲಸ್ವಭಾವದ ಕೂಸು ಇದು. ಗೊತ್ತಿರುವ ಹಳೆಯ ಶಬ್ದಗಳನ್ನೇ ಹೊಸ ಹಿನ್ನೆಲೆಯಲ್ಲಿ ಉಪಯೋಗಿಸಿ ಹೊಸ ಸೃಷ್ಟಿಗೈಯುವ ಕವಿಯ ಮನೋಧರ್ಮ ವಿಜ್ಞಾನಿಯ ಶೋಧದಲ್ಲೂ ಇಣುಕುಹಾಕುತ್ತದೆ. ಒಬ್ಬ ಗಣಿತಜ್ಞನ ಮಾತಿನ ವೈಖರಿಯಲ್ಲಿ ಹೇಳುವುದಾದರೆ:—ಜನ ಹೆಚ್ಚಾದಾಗಲೋ, ಸಾಹಸಿ ಗಳಾದರೆ ತಮ್ಮ ಕುತೂಹಲವನ್ನು ತಣಿಸಲೋ, ಕೆಲಮಂದಿ ವಲಸೆ ಹೋಗುವು ದುಂಟು. ವಸಾಹತು ಸ್ಥಾಪಿಸುವುದುಂಟು. ಅಂಥ ವಸಾಹತು ಮೊದಮೊದಲಲ್ಲಿ ಮಾತೃದೇಶದ ಕಾನೂನು ಕಟ್ಟಳೆಗಳನ್ನೇ ಅನುಸರಿಸುತ್ತದೆ. ಆದರೂ, ದಿನಕಳೆದಂತೆಲ್ಲ ವಸಾಹತು ಬೆಳೆದು ಅದರ ವಾತಾವರಣ ಮಾರ್ಪಾಡಾದಂತೆಲ್ಲ, ಹಳೆಯ ಕಾನೂನು ಗಳಿಗೆ ಹೊಸ ಮಿರುಗು ಹೊಸ ಅರ್ಥ ಬರುವುದು, ಹೊಸ ಕಟ್ಟಳೆಗಳು ಹುಟ್ಟುವುದೂ ಉಂಟು. ಹಾಗೆಯೇ ಗಣಿತಜ್ಞಾನಿಯ ಕುತೂಹಲ ಕೆರಳಿದಾಗ ಅವನು ತನ್ನ

ಅದುವರೆಗಿನ ಸೃಷ್ಟಿಯ ಜಗತ್ತಿನ ಕೋಟೆಯನ್ನೊಡೆದು ಹೊರಗೆ ಇಣುಕಿನೋಡ ಲೆಳಸುತ್ತಾನೆ. ಆಗ ಅವನು ಕಾಣುವುದು, ಕಂಡುದಕ್ಕೆ ಅರ್ಥ ಕಲ್ಪಿಸುವುದು ಎಲ್ಲಾ ಒಂದು ಬಗೆಯ ವಿಶ್ವಾಮಿತ್ರಸೃಷ್ಟಿ. ಕೆಲವು ಬಾರಿ ಅದು ವಿಚಿತ್ರವಾಗಿ ತೋರುವು ದುಂಟು. ಆದರೆ, ತಿಳಿಯುವ ಕಣ್ಣಿದ್ದರೆ ಆ ವೈಚಿತ್ರ್ಯದಲ್ಲೂ ಒಂದು ಮೋಹಕತೆ ಒಂದು ಆಕರ್ಷಣೆ ಕಂಡುಬರುತ್ತದೆ. ಅಲ್ಲದೆ, ವಿಶ್ವಾಮಿತ್ರಸೃಷ್ಟಿಯೂ ಎಷ್ಟೋ ಪ್ರಯೋಜನಕರವೂ ಆಹುದಲ್ಲವೆ ?

ಗಣಿತದ ಪರಿಕರ್ಮಗಳು ಸಾರ್ವತ್ರಿಕವಾಗಿರಬೇಕೆಂದೇನೋ ಬಯಸಿದೆವು. ಆದರೆ ಅದು ಸಾಧ್ಯವೇ ? ಸಹಜಸಂಖ್ಯೆಗಳು (ಜೊತೆಗೆ ಭಿನ್ನರಾಶಿಗಳನ್ನೂ ಸೇರಿ ಸೋಣ) ಎಲ್ಲ ಪರಿಕರ್ಮಗಳಿಗೂ ಎಟಕುತ್ತವೆಯೆ ? ಕೂಡುವುದು ಗುಣಿಸುವು ದೇನೋ ಸಾರ್ವತ್ರಿಕವಾದವು. ಆದರೆ ಕಳೆಯುವುದು ಭಾಗಾಹಾರ ಮಾತ್ರ ಎಲ್ಲೆಡೆ ಗಳಲ್ಲೂ ಸಾಧ್ಯವಾಗವು, ನಮ್ಮ ಸಂಖ್ಯೆಗಳಲ್ಲಿ. ಚಿಕ್ಕ ಸಂಖ್ಯೆಯನ್ನು ದೊಡ್ಡದರಿಂದ ಕಳೆಯಬಹುದು. ಆದರೆ ದೊಡ್ಡದನ್ನು ಚಿಕ್ಕದರಿಂದ ಕಳೆಯಬೇಕೆಂದರೆ ?

ಶುದ್ಧ ವಿಜ್ಞಾನದ ದಾರಿಯಲ್ಲಿ ನಡೆಯಬೇಕಾದರೆ, ನಾವು ಈ ಪರಿಕರ್ಮ ಗಳನ್ನೂ ಸಾಧ್ಯವಾಗಿಸುವಂಥ ಸಂಖ್ಯೆಗಳನ್ನು ಸೃಜಿಸಬೇಕು. ಅವುಗಳನ್ನೂ ಒಳ ಗೊಳ್ಳುವಂತೆ ಸಂಖ್ಯೆಯನ್ನು ಕುರಿತ ಒಂದು ವಿಶ್ವಾಮಿತ್ರಕಲ್ಪನೆಯನ್ನು ನಿರ್ಮಿಸ ಬೇಕು. ಹೀಗೆ ಆಗಿಯೇ ಋಣಸಂಖ್ಯೆಗಳು ಹುಟ್ಟಿಕೊಂಡುವು. ವ್ಯವಹಾರಕ್ಕೂ ಇದು ಉಪಯುಕ್ತವಾಗಿ ಋಣಸಂಖ್ಯೆಗಳಿಗೂ ಒಂದು ವ್ಯಾವಹಾರಿಕ ಅರ್ಥ ಅಂಟಿ ಕೊಂಡಿತು. ಸಹಜಸಂಖ್ಯೆ (ಹೆಚ್ಚು ಖಚಿತವಾಗಿ ಹೇಳಬೇಕಾದರೆ—ಧನಸಂಖ್ಯೆ) ಆಸ್ತಿಯನ್ನು ಆದಾಯವನ್ನು ಸೂಚಿಸಿದರೆ, ಋಣಸಂಖ್ಯೆ ಸಾಲವನ್ನು ವೆಚ್ಚವನ್ನು ತೋರಿಸಿತು ; ಧನಸಂಖ್ಯೆ ಎತ್ತರವನ್ನು ತೋರಿಸಿದರೆ ಋಣಸಂಖ್ಯೆ ಆಳವನ್ನು ತೋರಿಸಿತು ; ಒಟ್ಟಿನಲ್ಲಿ "ಧನಸಂಖ್ಯೆ ಎತ್ತಾಗಿ ಏರಿಗೆಳೆದರೆ ಋಣಸಂಖ್ಯೆ ಕೋಣ ನಾಗಿ ನೀರಿಗೆಳೆಯಿತು."

ಭಾಗಹಾರವೇನೋ ಭಿನ್ನರಾಶಿಗಳ ಮೂಲಕ, ಒಟ್ಟಿನಲ್ಲಿ ಸಂಖ್ಯೆಗಳ ವ್ಯಾಪ್ತಿ ಯನ್ನು ಹಿಗ್ಗಿಸದೆಯೇ ಸಾರ್ವತ್ರಿಕವಾಯಿತು. ಆದರೆ ಸೊನ್ನೆಯಿಂದ ಭಾಗಿಸುವ ಕಲ್ಪನೆ ಮಾತ್ರ ಕೊಂಚ ತೊಂದರೆ ಮಾಡುತ್ತದೆ. ಆದರೆ ಅದು ಮುಂದೆ ಇನ್ನೆಂದಿ ಗಾದರೂ ಇರಲಿ.

ಗುಣಾಕಾರವೆಂದರೇನು ? ಒಂದು ಸಂಖ್ಯೆಯನ್ನೇ ಮತ್ತೆ ಮತ್ತೆ ಕೆಲ ಬಾರಿ ಕೂಡುವುದಷ್ಟೆ. ಎಂದರೆ ಗುಣಾಕಾರ ಕೂಡುವುದರ ವಿಶಿಷ್ಟ ಬಗೆ. ಆದರೆ ಗುಣಾ ಕಾರದಲ್ಲೂ ಒಂದು ವಿಶಿಷ್ಟ ಬಗೆ ಉಂಟು. ಸಂಖ್ಯೆಯನ್ನು ಮತ್ತೆ ಮತ್ತೆ ಅದರಿಂದಲೇ

ಗುಣಿಸುವುದು. ಇದೇ ವರ್ಗ ಘನ, ಚತುರ್ಘಾತ ಮುಂತಾದ ಘಾತಕರಣ. ಸಹಜ ಸಂಖ್ಯೆಗಳು ಅಮಿತವಾದವು, ಅಸಂಖ್ಯಾತವಾದವು. ಆದ್ದರಿಂದ ಎಷ್ಟೇ ದೊಡ್ಡ ಸಂಖ್ಯೆಗೂ ಅದರ ಘಾತಗಳುಂಟು. ಇದರ ವಿಲೋಮ ಪರಿಕರ್ಮಕ್ಕೆ ಮೂಲ ಕರಣವೆನ್ನಬಹುದು. ಉದಾಹರಣೆಯೊಂದು ಇದನ್ನು ಸ್ಪಷ್ಟಪಡಿಸುತ್ತದೆ. $2^2=4$; $2^3=8$; $5^3=125$; ಇದೇ ಸಂಬಂಧವನ್ನು ಮೂಲಕ್ರಮದಲ್ಲಿ ಹೇಳುವುದು ಹೀಗೆ:— 2=4 ರ ವರ್ಗಮೂಲ $(=\sqrt{4})$=8 ರ ಘನಮೂಲ $(=\sqrt{8})$. 5=125 ರ ಘನಮೂಲ $(=\sqrt{125})$, ಇತ್ಯಾದಿ.

ಘಾತಕರಣವೇನೋ ಸಾರ್ವತ್ರಿಕವೆಂದಾಯ್ತು. ಆದರೆ, ಮೂಲಕರಣವೋ? ಈಗ ಮತ್ತೊಮ್ಮೆ ಸಂಖ್ಯೆಗಳ ವ್ಯಾಪ್ತಿಗೆ ತೊಂದರೆ ಬಂದಿತು. ಸಂಖ್ಯೆಗಳು ಈಗಿರುವಂತೆ ಧನ ಋಣ ಭಿನ್ನಗಳು ಮಾತ್ರವೇ ಆದರೆ ಮೂಲಕರಣ ಸಾರ್ವತ್ರಿಕವಾಗುವುದು ಅಸಾಧ್ಯ. ಏಕೆಂದರೆ, 2. 3. 5 ಮುಂತಾದ ಸಂಖ್ಯೆಗಳ ವರ್ಗಮೂಲ ಘನಮೂಲ ಮುಂತಾದುವುಗಳಾಗಿ ಯಾವ ಧನ ಋಣ ಭಿನ್ನ ಸಂಖ್ಯೆಗಳೂ ಆಗಲಾರವು. ಎಂದರೆ ಯಾವ ಧನ ಋಣ ಭಿನ್ನ ಸಂಖ್ಯೆಯನ್ನೂ ಅದರಿಂದಲೇ ಎಷ್ಟು ಬಾರಿ ಗುಣಿಸಿದರೂ 2. 3. 5 ಮುಂತಾದ ಸಂಖ್ಯೆಗಳು ಬರುವುದಿಲ್ಲ. ಆದ್ದರಿಂದ ಮತ್ತೊಮ್ಮೆ ಹೊಸ ಸೃಷ್ಟಿ ಹೊಸ ಕಲ್ಪನೆ ಹುಟ್ಟಬೇಕಾಯ್ತು. ಹೀಗಾಗಿ ಅಪರಿಮೇಯ ಸಂಖ್ಯೆಗಳು (ಕರಣಿಗಳು Surds) ಹುಟ್ಟಿದುವು. ಹೊಸ ಹೊಸ ಸಂಖ್ಯೆಗಳ ಹುಟ್ಟಿನೊಡನೆ ಸಂಖ್ಯೆಗಳ ವಿವಿಧ ಜಾತಿಗಳ ಜನನವೂ ಆಯಿತು.

ಇದುವರೆಗೂ ನಾವು ಸಂಖ್ಯೆಗಳ ಜಾತಿ, ಜಾತಿಯೊಳಗಣ ಭೇದಗಳನ್ನು ಅರಿಯಲು ಯತ್ನಿಸಿಲ್ಲ. ಆದರೆ ಈಗ ಆ ವೈವಿಧ್ಯ ವೈಷಮ್ಯಗಳನ್ನು ಕೊಂಚ ಪರಿಶೀಲಿಸುವುದು ಸೂಕ್ತ. ಹಿಂದಿನವರ ತಪ್ಪುಗಳನ್ನೂ ಕುಂದುಗಳನ್ನೂ ನೋಡಿ ನಗುವ ನಾವು ನಮ್ಮ ಕೊರತೆಗಳನ್ನು ಮರೆಯುತ್ತೇವೆ. ಹಿಂದಿನವರು ಐದು, ಐವತ್ತು, ಐನೂರುಗಳಲ್ಲಿ "ಐದು" ಎಂಬ ಕಲ್ಪನೆಯ ಸಾಧರ್ಮ್ಯವನ್ನು ಕಾಣದಿದ್ದರೆ ನಾವು ಭಿನ್ನರಾಶಿಗಳಿಗೂ ಚಿಹ್ನಿತಸಂಖ್ಯೆಗಳಿಗೂ ಮತ್ತು ಸಹಜಸಂಖ್ಯೆಗಳಿಗೂ ಇರುವ ವ್ಯತ್ಯಾಸವನ್ನು ಮರೆಯುತ್ತೇವೆ. ಆದ್ದರಿಂದಲೇ 1, +1 ; 2, +2 ; ಮುಂತಾದುವು ಒಂದೇ ಎಂದೂ ವ್ಯಾವಹಾರಿಕ ಸೌಕರ್ಯಕ್ಕಾಗಿ ಧನಚಿಹ್ನೆಯನ್ನು ಬಿಟ್ಟುಬಿಡುತ್ತೇವೆಂದೂ ಎಂದುಕೊಳ್ಳುತ್ತೇವೆ; ಸಂಖ್ಯೆಗಳ ಕಲ್ಪನೆಯು ನಾನಾ ಬಗೆಯ ಸಂಖ್ಯೆಗಳ ಹುಟ್ಟಿನೊಡನೆ ಬದಲಾಗುತ್ತ ಬಂದಿರುವುದನ್ನು ಮರೆತು $\frac{3}{4}$, $\frac{6}{7}$ ಮುಂತಾದ ಭಿನ್ನರಾಶಿಗಳಲ್ಲಿನ ಅಂಶಾಂಕ ಛೇದಾಂಕಗಳನ್ನು ಸಹಜಸಂಖ್ಯೆಗಳೆಂದೇ ಎಣಿಸುತ್ತೇವೆ.

2 ಎಂಬ ಸಂಖ್ಯೆ ಕೇವಲ ಸಂಖ್ಯಾಪರಿಮಾಣಕಲ್ಪನೆಯನ್ನುಂಟುಮಾಡುತ್ತದೆ.

ಆದರೆ, +2, −2 ಎಂಬುವುಗಳಲ್ಲಿ ಪರಿಮಾಣಕ್ಕೆ ಒಂದು ವಿಶೇಷಣವಿದೆ. ಉದಾ. ಗೆ ಚಿಹ್ನೆಗಳು ಆಸ್ತಿ-ಸಾಲಗಳನ್ನು ಸೂಚಿಸುವಾಗ "+2" ಆಸ್ತಿಯನ್ನು ಸೂಚಿಸಿದರೆ "−2" ಸಾಲವನ್ನು ಸೂಚಿಸುತ್ತದೆ. ಹಾಗೆಯೇ "+2" ಎತ್ತರವನ್ನು ಸೂಚಿಸಿದರೆ "−2" ಆಳವನ್ನು ತೋರಿಸುತ್ತದೆ. ಎಂದರೆ +2, −2 ಮುಂತಾದುವು 2 ಎಂಬ ಸಂಖ್ಯಾಪರಿಮಾಣದೊಂದಿಗೆ ಏರಿಕೆ-ಇಳಿಕೆ ಮುಂತಾದ ವ್ಯಾಪಾರಗಳನ್ನೂ ಸೂಚಿಸುತ್ತವೆ. ಎಂದರೆ ಸಚಿಹ್ನಸಂಖ್ಯೆಗಳು ವ್ಯಾಪಾರಸೂಚಿಗಳು. ಹಾಗೆಯೇ ಭಿನ್ನರಾಶಿಗಳಲ್ಲಿನ $\frac{1}{1}$, $\frac{1}{2}$, $\frac{3}{4}$, $\frac{5}{5}$. . . . ಮುಂತಾದುವುಗಳಲ್ಲಿ $\frac{1}{1}$ ಮತ್ತು $\frac{5}{5}$ ಮುಂತಾದುವು ಸಹಜಸಂಖ್ಯೆ "1"ಕ್ಕಿಂತ ಬೇರೆಯಾದವು. ಏಕೆಂದರೆ, $\frac{1}{1}$, $\frac{5}{5}$ ಮುಂತಾದುವು ಪ್ರಮಾಣಸೂಚಿಗಳು, ಆದರೆ "1" ಎಂಬುದು ಸಂಖ್ಯಾಪರಿಮಾಣಸೂಚಿ.

ಇದೇ ಸಂದರ್ಭದಲ್ಲಿ ಮತ್ತೊಂದಂಶವನ್ನು ಗಮನಿಸಬಹುದು. ಸಂಖ್ಯೆಗಳಿಗೆ ನಾನಾ ಅರ್ಥಗಳನ್ನು ಕೊಟ್ಟಂತೆಯೇ ಅವುಗಳನ್ನು ಬೇರೆ ಬೇರೆ ರೀತಿಗಳಲ್ಲಿ ಗುರ್ತಿಸುವುದೂ ಸಾಧ್ಯ. ಎಷ್ಟೋ ವೇಳೆ ಅವಶ್ಯವೂ ಹೌದು. "ಕರಣಿ" (Surds)ಗಳು ಇದಕ್ಕೊಂದು ಒಳ್ಳೆಯ ಉದಾಹರಣೆ : 25 ರ ವರ್ಗಮೂಲವೇನೋ 5. ಆದರೆ, 5 ರ ವರ್ಗಮೂಲವನ್ನು ಗುರ್ತಿಸುವುದು ಹೇಗೆ? ಯಾವ ಧನ ಋಣ ಭಿನ್ನಸಂಖ್ಯೆಗಳಿಂದಲೂ ಅದನ್ನು ಗುರ್ತಿಸುವುದಿಲ್ಲವಷ್ಟೆ? ಎಂದಮೇಲೆ ಅದನ್ನು ಗುರ್ತಿಸುವ ವಿಧಾನ ಯಾವುದು? ಹೆಸರುಗೊತ್ತಿಲ್ಲದ ವ್ಯಕ್ತಿಗಳನ್ನು ನಿರ್ದೇಶಿಸುವುದು ಹೇಗೆ? ಗೊತ್ತಿರುವ ಸಂಬಂಧದಿಂದ ಆ ಗೊತ್ತಿಲ್ಲದವರನ್ನು ನಿರ್ದೇಶಿಸುವುದು "ಆವತ್ತು ಬಂದಿದ್ದರಲ್ಲ, ನಮ್ಮ ಮನೆಗೆ, ಅವರು" ಎಂದು. ಹಾಗೆಯೇ ಎರಡರ ವರ್ಗಮೂಲವನ್ನು, ಇಪ್ಪತ್ತಮೂರರ ಘನಮೂಲವನ್ನು ಹಾಗೆಂದೇ ಕರೆದು ಅದರ ಸೂಚಕವಾಗಿ ಕರಣೀ ಚಿಹ್ನೆಯನ್ನು ಸಂಖ್ಯೆಯ ಎಡಮಗ್ಗುಲಲ್ಲೂ, ಮೂಲ ಸೂಚಿಯನ್ನು ಎಡ ಮೇಲು ಮೂಲೆಯಲ್ಲೂ ಬರೆಯುವುದು. ಎರಡರ ವರ್ಗ ಮೂಲ $= \sqrt[2]{2}$; ಇಪ್ಪತ್ತ ಮೂರರ ಘನಮೂಲ $= \sqrt[3]{23}$. . . . ಹೀಗೆ. ಬೇರೆ ರೀತಿಯಲ್ಲಿ— ಸಹಜಸಂಖ್ಯೆಗಳನ್ನು ಗುರ್ತಿಸುವ ವಿಧಾನದಿಂದ, ಇದನ್ನು ಸೂಚಿಸುವುದು ಸಾಧ್ಯವಿಲ್ಲ. ಸಂಖ್ಯೆಗಳನ್ನು ಮತ್ತೊಂದು ರೀತಿಯಲ್ಲಿ ಗುರ್ತಿಸುವುದುಂಟು. ರೇಖೆಯ ಮೇಲಣ ಬಿಂದುಗಳಿಂದಲೂ ಸಂಖ್ಯೆಗಳನ್ನು ಗುರ್ತಿಸಬಹುದು. ಒಂದು ನಿರ್ದಿಷ್ಟ ಉದ್ದವನ್ನು ಮಾನವಾಗಿಟ್ಟುಕೊಂಡು, ಒಂದು ಗೊತ್ತಾದ ಬಿಂದುವನ್ನು ಮೂಲ ಬಿಂದುವಾಗಿಟ್ಟುಕೊಂಡು +1, +2, −3, $-1\frac{1}{4}$, ಮುಂತಾದ ಉದ್ದಗಳನ್ನೆಲ್ಲ ಗುರ್ತಿಸಬಹುದು. ಮೂಲಬಿಂದುವಿನಿಂದ ನಿರ್ದಿಷ್ಟ ದೂರದಲ್ಲಿರುವ ಬಿಂದು (ಬಲಕ್ಕೆ ಇರುವ ಬಿಂದು) +1 ನ್ನು ಸೂಚಿಸಲಿ. ಅಲ್ಲಿಂದ ಮತ್ತೆ ಅದೇ ದಿಕ್ಕಿನಲ್ಲಿ ಅಷ್ಟೇ ದೂರ

ಹೋದರೆ ಸಿಕ್ಕುವ ಬಿಂದು +2. ಹಾಗೆಯೇ ಮೂಲಬಿಂದುವಿನಿಂದ ಎಡಕ್ಕಿರುವ ಬಿಂದುಗಳು ಋಣಸಂಖ್ಯೆಗಳನ್ನು ಸೂಚಿಸುತ್ತವೆ. ಇದರಲ್ಲಿನ ಮತ್ತೊಂದು ಅನುಕೂಲ ವೆಂದರೆ, $\sqrt{2}$, $\sqrt{3}$, $\sqrt{37}$ ಮುಂತಾದುವನ್ನೂ ಈ ಕ್ರಮದಲ್ಲಿ ಸೂಚಿಸಬಹುದು.

ಶುದ್ಧ ವಿಜ್ಞಾನದೃಷ್ಟಿ ವ್ಯಾವಹಾರಿಕದೃಷ್ಟಿಯೊಡನೆ ಸೇರಿ ಪ್ರಯುಕ್ತವಾಗುವುದಕ್ಕೆ ಮತ್ತು ಉಪಯುಕ್ತವಾಗುವುದಕ್ಕೆ ಇದು ಮತ್ತೊಂದು ಉದಾಹರಣೆ. ಒಂದು ಚದರದ ಎರಡರಷ್ಟು ವಿಸ್ತೀರ್ಣದ ಮತ್ತೊಂದು ಚದರವನ್ನು ರಚಿಸ ಬೇಕೆನ್ನೋಣ. ಮೊದಲ ಚದರದ ಬಾಹು 1 ಎಂದು ಭಾವಿಸಿದರೆ ನಮಗೆ ಬೇಕಾದ ಚದರದ ಬಾಹು $\sqrt{2}$ ಆಗಿರಬೇಕು. ಏಕೆಂದರೆ ಮೊದಲನೆಯದರ ವಿಸ್ತೀರ್ಣ $1^2=1$ ಚ. ಮಾನ ಮತ್ತು ಎರಡನೆಯದರದು $(\sqrt{2})^2=2$ ಚ. ಮಾನ. ಬೇಸರವಾಯಿತೇನೋ ? ಹಾಗಾದರೆ ಕೆಳಗಿನ ಸಮಸ್ಯೆಯನ್ನು ನೋಡಿ—

ಹುಲ್ಲುಗಾವಲಲ್ಲಿ ಹಸು ಕಟ್ಟಿದ್ದರು. ಕಟ್ಟಿದ್ದ ಹಗ್ಗ ಹತ್ತಡಿಯುದು. ಗುಂಟದ ಹತ್ತು ಅಡಿ ಸುತ್ತಲೂ ಇದ್ದ ಮೇವನ್ನೆಲ್ಲಾ ಹಸುವು ತಿಂದು ಮುಗಿಸಿತು. ಬಂದ ಯಜಮಾನ ಇದನ್ನು ನೋಡಿ "ಇದರ ಎರಡರಷ್ಟಾದರೂ ಹುಲ್ಲು ಎಟುಕಿದ್ದರೆ ಚೆನ್ನಾಗಿತ್ತು ಹಸುವಿಗೆ" ಎಂದುಕೊಂಡ. ಆದರೆ ಇದ್ದ ಹಗ್ಗವೆಲ್ಲ ಹತ್ತೇ ಅಡಿ. ಅದಷ್ಟೂ ಮುಗಿದಿತ್ತು. ಆಗ ತನ್ನ ನೆರೆಯವರ ಬಳಿಗೆ ಹೋಗಿ ವಿಷಯ ಹೇಳಿದನಂತೆ. ಆದರೆ ಪಾಪ, ಅವರಲ್ಲಿದ್ದುದು ಹದಿನೈದೇ ಅಡಿಯ ಹಗ್ಗ. ಅಷ್ಟೇ ಹಗ್ಗ ಸಾಕೆ? ಹಸುವಿಗೆ ಎಷ್ಟುದ್ದದ ಹಗ್ಗ ಕಟ್ಟಿದ್ದರೆ ಹತ್ತಡಿಯ ಹಗ್ಗ ಕಟ್ಟಿದ್ದಾಗಿನ ಎರಡರಷ್ಟು ಪ್ರದೇಶದಲ್ಲಿ ಹಸು ಹುಲ್ಲುಮೇಯಬಹುದಾಗಿತ್ತು ?

ಹಿಂದೆ ಒಂದೆಡೆ ಸಂಖ್ಯೆಗಳಿಗೆ ನಾನಾ ಅರ್ಥಕೊಡುವ ಮಾತು ಬಂದಿತ್ತು. ಹಾಗೆಂದರೇನು ? ನಾಲ್ಕು ಐದಾವರ್ತಿ ಇಪ್ಪತ್ತು ($4 \times 5=20$) ಎಂದರೆ ಏನು ? ನಾಲ್ಕರ ಐದು ಗುಂಪುಗಳು ಇಪ್ಪತ್ತಕ್ಕೆ ಸಮವೆಂದು ತಾನೆ? ಇಲ್ಲಿ ನಾಲ್ಕಕ್ಕೂ ಐದಕ್ಕೂ ಏನಾದರೂ ವ್ಯತ್ಯಾಸವುಂಟೆ ? ನಾಲ್ಕು ಎಂಬುದೇನೋ ಸಾಮಾನ್ಯವಾದ "ಇಷ್ಟು" ಎಂಬುದನ್ನು ಸೂಚಿಸುತ್ತದೆ. ಆದರೆ "ಐದು" ಎಂಬುದು ಆ ನಾಲ್ಕನ್ನು ಎಷ್ಟು ಬಾರಿ ಸೇರಿಸಬೇಕು ?" ಎಂಬುದನ್ನು ಸೂಚಿಸುತ್ತದೆ. ಮೊದಲಿನದು ವಸ್ತುಗಳ ಪರಿಮಾಣವನ್ನು ಸೂಚಿಸಿದರೆ, ಎರಡನೆಯದು "ಸಂಕಲನ ಕ್ರಿಯೆ ಎಷ್ಟು ಬಾರಿ ನಡೆಯಬೇಕು?" ಎಂಬುದನ್ನು ತಿಳಿಸುತ್ತದೆ. ಆದ್ದರಿಂದ $4 \times 5=20$ ಎಂದು ಬರೆಯುವಾಗ 4 ಕ್ಕೂ 5 ಕ್ಕೂ ತೋರಿಕೆಗೆ ಯಾವ ವ್ಯತ್ಯಾಸವೂ ಕಾಣಬರದಿದ್ದರೂ ಮೇಲೆ ಹೇಳಿದ ರೀತಿ ಅವುಗಳಲ್ಲಿ ಸ್ವಲ್ಪ ಭೇದವುಂಟು.

ಈಗ ಮತ್ತೊಂದು ಹೊಸಬಗೆಯ ಸಂಖ್ಯೆಯನ್ನು ನೋಡಬಹುದು. ಮೂಲ

ಕರಣವು ಸಾರ್ವತ್ರಿಕವಾಗಲು ಕರಣಿಗಳು ಮಾತ್ರವೇ ಸಾಕೇ? ಧನಸಂಖ್ಯೆಗಳ ಮೂಲಗಳು ಮಾತ್ರ ನಮ್ಮ ಇದುವರೆಗಿನ ಸಂಖ್ಯೆಗಳ ಕಲ್ಪನೆಯಲ್ಲೇ ಅಡಕವಾಗುತ್ತವೆ. ಆದರೆ ಯಾವುದೇ ಧನಋಣಸಂಖ್ಯೆಯ ವರ್ಗವೂ ಧನಸಂಖ್ಯೆಯೇ ಆಗುತ್ತದೆ. ಆದ್ದರಿಂದ ಋಣಸಂಖ್ಯೆಯ ವರ್ಗಮೂಲವು ನಮ್ಮನ್ನು ಮತ್ತೆ ಕೋಟೆಯಿಂದಾಚೆಗೆ ಕರೆದೊಯ್ಯುತ್ತದೆ. ಏಕೆಂದರೆ ನಮಗೆ ಇದುವರೆಗೆ ತಿಳಿದಿರುವ ಸಂಖ್ಯೆಗಳಲ್ಲಿ ಯಾವುದರ ವರ್ಗವೂ ಋಣಸಂಖ್ಯೆಯಾಗಲಾರದು. ಹಾಗಾದರೆ ಋಣಸಂಖ್ಯೆಯ ವರ್ಗಮೂಲಕ್ಕೆ ಅರ್ಥವೇನು?

ಈ ಪ್ರಶ್ನೆಯನ್ನುತ್ತರಿಸಲು ಮುಖ್ಯಮಾರ್ಗದಿಂದ ಕವಲುದಾರಿಗೆ ಸ್ವಲ್ಪ ಬರಬೇಕು. ಸದ್ಯಕ್ಕೆ -1 ರ ವರ್ಗಮೂಲವನ್ನು i ಎಂದು ಕರೆಯೋಣ. [ಎಂದರೆ $i^2=-1$ ಅಥವಾ $i=\sqrt{-1}$] ನಮಗಿನ್ನೂ ಈ i ಯ ವಿಚಾರ ಗೊತ್ತಿಲ್ಲ. ಕೇವಲ ಅಜ್ಞಾನವಾಗಿ, ಒಂದು ಚಿನ್ಹೆಯೆಂದು ಮಾತ್ರ ಇದನ್ನು ಅಂಗೀಕರಿಸಿದ್ದೇವೆ. ಸಂಖ್ಯೆಗಳನ್ನು ಬಿಂದುರೂಪದಲ್ಲಿ ಗುರ್ತಿಸುವ ವಿಧಾನವಿದೆಯಲ್ಲ, ಅಲ್ಲಿ ಇದಕ್ಕೇನಾದರೂ ಅರ್ಥ ದೊರಕೀತೆ?

ನಾವು ಹಿಂದೆಯೇ ನೋಡಿದಂತೆ ಸಂಖ್ಯೆಗಳಿಗೆ ವ್ಯೆಯಾಪಾರಿಕ (Operational) ಅರ್ಥಕೊಡಲು ಆಗುವುದಷ್ಟೆ. ಈಗ ಘಾತಕ್ರಮಕ್ಕೂ ವ್ಯೆಯಾಪಾರಿಕ ಅರ್ಥ ಕಲ್ಪಿಸಲು ಸಾಧ್ಯವೋ? $a^1, a^2, a^3, \ldots$ ಮುಂತಾದುವುಗಳಲ್ಲಿ ಘಾತಸೂಚಿಗಳಾದ 1, 2, 3 ಮುಂತಾದುವು ಒಂದೇ ಬಗೆಯ ಅರ್ಥ ಸೂಚಿಸಬೇಕಷ್ಟೆ? ಎಂದರೆ ಘಾತದ 1 ಏನನ್ನು ಸೂಚಿಸುತ್ತದೋ ಅದೇ ಕ್ರಿಯೆಯನ್ನು ಎರಡು ಬಾರಿ ಮಾಡಿದರೆ ವರ್ಗವಾಗಬೇಕು. ಮೂರು ಬಾರಿ ಮಾಡಿದರೆ ಘನವಾಗಬೇಕು. ನಾಲ್ಕು ಬಾರಿ ಕೂಡಿದರೆ ಚತುರ್ಘಾತ, . . . ಹೀಗೆ ಅಲ್ಲದೆ ಹೊಸ ಅರ್ಥವೊಂದನ್ನು ಕಲ್ಪಿಸಬೇಕಾದರೂ ಅದಕ್ಕೆ ಪೂರ್ವಾಪರ ವಿರೋಧವಿರಬಾರದು. ಆದ್ದರಿಂದ ಘಾತಕರಣಕ್ಕೆ ನಾವು ಕೊಡುವ ಹೊಸ ಅರ್ಥದಿಂದ, ಇದುವರೆಗಿನ ಅರ್ಥಗಳಿಗೆ ವಿರೋಧ ಬರಬಾರದು. ಎಂದರೆ ನಾವು ಕಲ್ಪಿಸುವ ಅರ್ಥಕ್ಕನುಗುಣವಾಗಿ ಬಿಂದು "H"ನ್ನು ವರ್ಗಮಾಡಲಿ, ಘನಮಾಡಲಿ, ಚತುರ್ಘಾತಮಾಡಲಿ ಅದೇ ಬಿಂದು "H" ಬರಬೇಕು. (ಏಕೆಂದರೆ $(+1)^2=+1$; $(+1)^3=+1$; $(+1)^4=+1, \ldots$ ತಾನೆ ನಮ್ಮ ಇದುವರೆಗಿನ ಸಂಖ್ಯೆಗಳಲ್ಲಿ?) ಇಂಥ ಯಾವ ವ್ಯಾಪಾರವನ್ನು ಘಾತಕರಣಕ್ಕೆ ಅರ್ಥವೆನ್ನಬಹುದು?


ಇಂಥದೇ ಸಮಸ್ಯೆಗೆ ಉತ್ತರ ನಾವು ದೇವಸ್ಥಾನಕ್ಕೆ ಹೋದಾಗ ಸಿಕ್ಕುತ್ತದೆ. ಪ್ರತಿಯೊಂದು ಪ್ರದಕ್ಷಿಣೆ ಪೂರ್ತಿಯಾದಾಗಲೂ ನಾವು ಹೊರಟ ಸ್ಥಳಕ್ಕೇ

ಬಂದಿರುತ್ತೇವೆ. ಅರ್ಥಾತ್ ಕೇಂದ್ರದ ಸುತ್ತ ಎಷ್ಟೇ ಪೂರ್ಣ ಸುತ್ತುಹಾಕಿದರೂ ಹೊರಟಲ್ಲಿಗೇ ಮತ್ತೆ ಬರುತ್ತೇವೆ. ಆದ್ದರಿಂದ ಘಾತಕ್ರಮವನ್ನು ಕೇಂದ್ರದ ಸುತ್ತ ಸುತ್ತುವ ಕ್ರಿಯೆಯೆಂದು ಭಾವಿಸಬಹುದು. ಮುಂದಿನ ಚಿತ್ರದಿಂದ ಇದರ ವಿವರವನ್ನು ಸ್ವಲ್ಪ ಪರೀಕ್ಷಿಸೋಣ.

ಇದರಲ್ಲಿ ಬಿಂದು $+1$ ರಿಂದ ಬಿಂದು -1 ಕ್ಕೆ ವೃತ್ತಪರಿಧಿಯ ಮೂಲಕ ಹೋಗುವ ಕ್ರಿಯೆ "-1" ರ ಒಂದನೆಯ ಘಾತವನ್ನು ಸೂಚಿಸಲಿ. ಆಗ $(-1)^2$ ಎಂಬುದು $+1$ ರಿಂದ -1 ಕ್ಕೆ ಪರಿಧಿಯ ಮೂಲಕ ಹೋಗುವ ಕ್ರಿಯೆಯನ್ನೇ ಅನುಕ್ರಮವಾಗಿ ಎರಡುಬಾರಿ ಮಾಡಬೇಕೆಂದು, ಎಂದರೆ $+1$ ರಿಂದ -1 ಕ್ಕೆ ವೃತ್ತಪರಿಧಿಯ ಮೇಲೆ ಅರ್ಧ ಸುತ್ತು ಬಂದು -1 ರಿಂದ ಮತ್ತೆ ಅದೇ ರೀತಿಯಲ್ಲಿ ಮುಂದಿನ ಅರ್ಧ ಪರಿಧಿಯನ್ನು ಹಾದರೆ ಸಿಕ್ಕುವ ಬಿಂದುವನ್ನು ಸೂಚಿಸುತ್ತದೆ. ಚಿತ್ರದಲ್ಲಿ ಗೊತ್ತಾಗುವಂತೆ ಅದು ಬಿಂದು "$+1$"ನ್ನೇ ಸೂಚಿಸುತ್ತದೆ. ಹಾಗೆಯೇ ಈ ಪದ್ಧತಿಗೆ ಅನುಗುಣವಾಗಿ $(-1)^3 = -1 \ldots$ ಒಟ್ಟಿನಲ್ಲಿ $(-1)^{2n+1} = -1$ ಮತ್ತು $(-1)^{2n} = +1$. ಈಗಾಗಲೇ ನಾವು ಒಪ್ಪಿರುವ ಇತರ ಕ್ರಮಗಳ ಫಲಿತಾಂಶಕ್ಕೂ ಹೊಸಕ್ರಮದ ಫಲಿತಾಂಶಕ್ಕೂ ಹೊಂದಿಕೆಯಿದೆಯೆಂದಾಯ್ತು. ಆದ್ದರಿಂದ ಈ ಕ್ರಮವನ್ನು ಘಾತಕರಣಕ್ಕೆ ಅನ್ವಯಿಸಿಕೊಳ್ಳಬಹುದು—ಅಳವಡಿಸಿಕೊಳ್ಳಬಹುದು. ವೃತ್ತಪರಿಧಿಯ ಮೇಲೆ ನಿರ್ದಿಷ್ಟದೂರ ಸುತ್ತುವ ಕ್ರಿಯೆಯನ್ನು ಎಷ್ಟು ಬಾರಿ ಮಾಡುತ್ತೇವೋ ಆ ವರ್ಗದ (of that order) ಘಾತಕರಣ ಮಾಡಿದೆವೆನ್ನಬಹುದು. ಇದಕ್ಕನುಗುಣವಾಗಿ ಮೂಲಕರಣಕ್ಕೂ ಅರ್ಥಮಾಡಬಹುದಷ್ಟೆ? ಇದರಂತೆ $+1$ ರ ವರ್ಗಮೂಲವೆಷ್ಟು? ಅರ್ಥಾತ್ ಯಾವುದರ ವರ್ಗ ಮಾಡಿದರೆ $+1$ ಬರುತ್ತದೆ? $+1$ ಬಿಂದುವಿನಿಂದ ಹೊರಟು ಅಲ್ಲಿಗೇ ಒಂದು ಪೂರ್ಣ ಸುತ್ತು ಬಂದರೆ $+1$ ಬರುತ್ತದೆ. ಹಾಗೆಯೇ ಅನುಕ್ರಮವಾಗಿ ಎರಡುಸುತ್ತು ಬಂದರೂ $+1$ ಕ್ಕೆ ಬರುತ್ತೇವೆ. ಎಂದರೆ $(+1)^2 = +1$; ಆದ್ದರಿಂದ $+1$ ಎಂಬುದು $+1$ ರ ಒಂದು ವರ್ಗಮೂಲ; ಹಾಗೆಯೇ, ಹಿಂದೆ ನೋಡಿದಂತೆ $(-1)^2 = +1$; ಆದ್ದರಿಂದ -1 ಎಂಬುದು $+1$ ರ ಮತ್ತೊಂದು ವರ್ಗಮೂಲ. ಪರಿಚಿತವಾದ ಬೀಜಪರಿಭಾಷೆಯಲ್ಲಿ ಬರೆದರೆ $\sqrt{1} = \pm 1$. ಹಾಗಾದರೆ -1 ರ ವರ್ಗಮೂಲ ಯಾವುದು? ಎಂದರೆ, ಯಾವ ಬಿಂದುವಿನ ವರ್ಗಬಿಂದು -1 ಆಗುತ್ತದೆ?

ಚಿತ್ರದಿಂದ $+1$ ರಿಂದ $\frac{1}{4}$ ಸುತ್ತು, $\frac{3}{4}$ ಸುತ್ತು ಬಂದರೆ ಸಿಗುವ ಬಿಂದುಗಳೇ ಈ ಬಿಂದುಗಳೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಬಿಂದುಗಳಲ್ಲೊಂದನ್ನು $+i$ ಎಂತಲೂ ಇನ್ನೊಂದನ್ನು $-i$ ಎಂತಲೂ ಭಾವಿಸಬಹುದು. "O" ಯಿಂದ

ನೇರ ಮೇಲಕ್ಕಿರುವ ಬಿಂದುವನ್ನೇ $+i$ ಎಂದು ಭಾವಿಸುವದು ರೂಢಿ. ಆದ್ದರಿಂದ "O"ನಿಂದ ಕೆಳಗಿರುವ ಬಿಂದುವನ್ನು $-i$ ಎಂದಂತಾಯಿತು.



ಎಂದರೆ $+i, -i$ ಗಳು -1 ರ ವರ್ಗಮೂಲಗಳು. ಆದರೆ (-1), $+1$ ರ ಒಂದು ವರ್ಗಮೂಲ. ಆದ್ದರಿಂದ, $+i, -i$ ಗಳು $+1$ ರ ವರ್ಗಮೂಲದ ವರ್ಗಮೂಲಗಳು – ಎಂದರೆ ಚತುರ್ಥಮೂಲ (fourth—ನಾಲ್ಕನೆಯ) ಮೂಲಗಳು. ಎಂದಮೇಲೆ $(+i)^4=+1, (-i)^4=+1$ ಎಂದಾಗಬೇಕು ತಾನೆ? ಚಿತ್ರದಿಂದ ನಮ್ಮ ಹೊಸ ಕ್ರಮದಲ್ಲೂ ಇದು ನಿಜವೆಂದು ಸ್ಪಷ್ಟವಾಗುತ್ತದೆ.

ಈಗ ಇನ್ನೂ ಒಂದು ಹೆಜ್ಜೆ ಮುಂದಿಡಬಹುದು. $+i$ ಎಂಬುದು "O" ಬಿಂದುವಿನಿಂದ ನೇರ ಮೇಲಕ್ಕಿದೆ. ಅಲ್ಲದೆ ಅವುಗಳಿಗಿರುವ ದೂರ $=1$; ಆದ್ದರಿಂದ $+i$ ನ್ನು $(+1)i$ ಎಂದು ಹೇಳಬಹುದು. ಹಾಗೆಯೇ $-i$ ಯನ್ನು $(-1)i$ ಎಂದು ಹೇಳಬಹುದು. ಹಾಗೆಯೇ $+i$ ಮತ್ತು $-i$ ಗಳನ್ನು ಸೇರಿಸುವ ರೇಖೆಯ ಮೇಲಣ ಬಿಂದುಗಳಿಗೂ ಸಂಖ್ಯೆಗಳಿಗೂ ಒಂದು ಏಕಸ್ಯೈಕ—One to One—ಸಂಬಂಧವನ್ನು ಕಲ್ಪಿಸಬಹುದು. ಆದರೆ ಮೂಲರೇಖೆಯ ಮೇಲೆ ಸಿಕ್ಕುವ ಆ ಸಂಖ್ಯೆಗಳಿಗೂ ಈ ಲಂಬರೇಖೆಯ ಮೇಲಣ ಸಂಖ್ಯೆಗಳಿಗೂ ಇರುವ ವ್ಯತ್ಯಾಸವನ್ನು ಸೂಚಿಸಲು "i"ಯನ್ನೇ ವಿಶೇಷಣವಾಗಿ ಉಪಯೋಗಿಸಬಹುದು. ಈ ಹೊಸ ಸಂಖ್ಯೆಗಳನ್ನು ಊಹಾಸಂಖ್ಯೆಗಳೆಂದು ಕರೆಯುವುದು ರೂಢಿ.


ಇಲ್ಲಿಗೆ ಮೂಲಬಿಂದುವೊಂದಕ್ಕೆ ಮತ್ತು ಒಂದು ಮೂಲರೇಖೆಗೆ ಸಾಪೇಕ್ಷವಾಗಿ (With respect to) ಸಮತಲದಲ್ಲಿನ ಬಿಂದುಗಳೆಲ್ಲಾ ಮೂರು ಕವಲಾಗಿ ಒಡೆಯುವ ಕಡೆಗೆ ಬಂದಂತಾಯ್ತು. ಮೂಲರೇಖೆಯ ಮೇಲೆ ಇರುವ ನಿಜಸಂಖ್ಯೆಗಳು, ಮೂಲಬಿಂದುವಿನ ಮೂಲಕ ಹಾಯುವ ಲಂಬದ ಮೇಲಿರುವ ಊಹಾಸಂಖ್ಯೆಗಳು ಮತ್ತು ಇವೆರಡರಿಂದಲೂ ಹೊರತಾಗಿದ್ದು ಸಮತಲದಲ್ಲಿಯೇ ಇರುವ ಇತರ ಬಿಂದುಗಳು—ಹೀಗೆ ತಲದಲ್ಲಿನ ಬಿಂದುಗಳು ಮೂರು ಬಗೆಯಾಗಿವೆ.

ಕೊನೆಯ ಗುಂಪಿನ ಸಂಖ್ಯೆಗಳು ಮೊದಲೆರಡು ಗುಂಪಿನವುಗಳೊಡನೆ ಐಕ್ಯವಾಗದಿದ್ದರೂ ಅವುಗಳಿಗೂ ಇವುಗಳಿಗೂ ಒಂದು ಬಗೆಯ ಏಕಸ್ಯೈಕ ಸಂಬಂಧವನ್ನು

ಕಲ್ಪಿಸಲು ಸಾಧ್ಯ. ಈ ಸಂಬಂಧವನ್ನು ಕಂಡುಕೊಳ್ಳಲು ಮತ್ತೆ ನಮ್ಮ ಜೀವನದ ಕಡೆಗೇ ನೋಡಬಹುದು, ಜೀವನದಿಂದ ಸ್ಫೂರ್ತಿ ಪಡೆಯಬಹುದು.

ಇಲ್ಲಿ ನಮಗೆ ಗೊತ್ತಿರುವ ಅಂಶಗಳು ಯಾವುವು? ಮೂಲಬಿಂದು, ಮೂಲ ರೇಖೆ, ಲಂಬರೇಖೆ. ಇವಿಷ್ಟರ ಸಹಾಯದಿಂದ ತಲದಲ್ಲಿನ ಯಾವುದೇ ಬಿಂದುವನ್ನಾದರೂ ನಿರ್ದೇಶಿಸುವುದು ಹೇಗೆ? ಬೇರೆ ರೀತಿಯಲ್ಲಿ ಹೇಳಬೇಕಾದರೆ, ಮೂಲಬಿಂದುವಿನಿಂದ ಹೊರಟು ಮೂಲರೇಖೆ ಲಂಬರೇಖೆಗಳ ಪರಿಚಯದಿಂದ ನಿರ್ದಿಷ್ಟ ಬಿಂದುವಿಗೆ ಬರುವುದು ಹೇಗೆ?

ರೈಲು ಸ್ಟೇಷನ್ನಿನಲ್ಲಿ ಬಂದಿಳಿದವರಿಗೆ ಅರಮನೆ ಕಛೇರಿಗಳಿಗೆ ದಾರಿ ತೋರಿಸಬೇಕೆನ್ನೋಣ. ಆಗ ನಾವು ಅನುಸರಿಸುವ ಮಾರ್ಗ ಯಾವುದು? “ಸ್ಟೇಷನಿನಿಂದ ನೇರವಾಗಿ ದಕ್ಷಿಣಕ್ಕೆ ನಡೆಯಿರಿ. ಮೊದಲ ನಾಲ್ಕು ಚೌಕಗಳನ್ನೂ ಹಾಯ್ದು ಐದನೆಯದಕ್ಕೆ ಬನ್ನಿ (ಅಲ್ಲೊಂದು ಐದು ದೀಪದ ಕಂಬವಿದೆ). ಆ ಚೌಕದಿಂದ ನೇರವಾಗಿ ಪೂರ್ವಕ್ಕೆ (ಎಂದರೆ ಮೂಲರೇಖೆಗೆ ಲಂಬವಾಗಿ) ನಡೆಯಿರಿ. ಎರಡು ಚೌಕಗಳನ್ನು ಹಾದು ಮೂರನೇ ಚೌಕಕ್ಕೆ ಬನ್ನಿ. ಅಲ್ಲೇ ಇವೆ ಅರಮನೆ




ಕಛೇರಿಗಳು” ಇದನ್ನೇ ಪಕ್ಕದಲ್ಲಿ ಕೊಟ್ಟಿರುವ ನಕ್ಷೆಯಿಂದಲೂ ಹೇಳಬಹುದು. ಗಣಿತ ಭಾಷೆಯಲ್ಲಿ ಇದನ್ನೇ ಹೀಗೆ ಹೇಳಬಹುದು. ಮೂಲಬಿಂದುವಿನಿಂದ $+5$ ನಡೆದು, ಮೂಲರೇಖೆಗೆ ಲಂಬವಾಗಿ $+3$ (ಎಂದರೆ, $3i$) ನಡೆಯಿರಿ. ನೀವು ಅರಮನೆ ಆಫೀಸುಗಳಿಗೆ ಬಂದಂತಾಯ್ತು. ಹೀಗೆಯೇ ಯಾವುದೇ ಸ್ಥಳ (ಬಿಂದು) ವನ್ನಾದರೂ ಮೂಲರೇಖೆ ಲಂಬರೇಖೆಗಳ ಸಹಾಯದಿಂದ ತಿಳಿಸಲು ಸಾಧ್ಯ. ವಿವರ

ವಾಗಿ ಹೀಗೆ ಬರೆಯುವ ಬದಲು ಅಡಕವಾಗಿ ಈ ಪರಿಕರ್ಮಗಳನ್ನೆಲ್ಲಾ $(+5+3i)$ ಎಂದು ಹೇಳಬಹುದು. ಇಂಥ ಸಂಖ್ಯೆಗಳು ಹಿಂದೆ ಹೇಳಿದ ಮೂರನೆಯ ಗುಂಪಿನ ಬಿಂದುಗಳನ್ನು ಸೂಚಿಸುತ್ತವೆ. ಶುದ್ಧ ನಿಜ ಮತ್ತು ಶುದ್ಧ ಊಹಾಸಂಖ್ಯೆಗಳ ಕಲಬೆರಕೆಯಿಂದ ಹುಟ್ಟಿದ ಈ ಸಂಖ್ಯೆಗಳನ್ನು ಸಂಕರಸಂಖ್ಯೆ (Complex Number) ಗಳೆನ್ನುತ್ತಾರೆ.

ಸಂಕರಸಂಖ್ಯೆಗಳ ಪರಿಚಯವಾದಂತಾಯ್ತು. ಈಗ $+1$ ರ ಇತರ ಮೂಲಗಳನ್ನೂ ನೋಡಬಹುದು. $x^5=1$; $x^6=1$; $x^8=1$ ಮುಂತಾದುವುಗಳನ್ನು ನಕ್ಷೆಯ ಕ್ರಮದಲ್ಲಿ ಬಿಡಿಸೋಣ. ಮೊದಲು $x^8=1$ ಎಂಬ ಸಮೀಕರಣವನ್ನು ನೋಡೋಣ. ಯಾವ ಸಂಖ್ಯೆಯು ಎಂಟನೆಯ ಘಾತ $+1$ ಆಗುತ್ತದೆ? ಎಂಬುದೇ ಪ್ರಶ್ನೆ. ನಮಗೆ ಗೊತ್ತಿರುವಂತೆ $x=1$ ಎಂಬ ಸಮೀಕರಣಕ್ಕೆ $+i$ ಯು ಒಂದು ಮೂಲ. ಆದರೆ $x^8=(a^2)^4$ ಆದ್ದರಿಂದ $x^8=1$ ಎಂಬುದರ ಒಂದು ಮೂಲವು $x^2=+i$ ಎಂಬುದರ ಮೂಲವೂ ಆಗಿರಬೇಕು. ಎಂದರೆ $x^8=1$ ಎಂಬುದಕ್ಕೆ $\sqrt{+i}$ ಎಂಬುದು ಒಂದು ಮೂಲವಾಗಿರಬೇಕು. $+1$ ಬಿಂದುವಿನಿಂದ $\frac{1}{4}$ ಸುತ್ತು ಬಂದರೆ $+i$ ಎಂಬ ಬಿಂದು ಸಿಕ್ಕುತ್ತದೆ. ಆದ್ದರಿಂದ $+i$ ಯ ವರ್ಗಮೂಲ ನಾವು $+1$ ರಿಂದ $\frac{1}{4}$ ಸುತ್ತಿನ $\frac{1}{2}$ ಎಂದರೆ $\frac{1}{8}$ ಸುತ್ತು ಬಂದರೆ ಸಿಕ್ಕುತ್ತದೆ. ಈ ಬಿಂದುವಿನ ಸ್ಥಾನಸೂಚಿ (Co-ordinate)ಗಳು ಯಾವುವು? ಎಂದರೆ ಸಂಖ್ಯೆಯನ್ನು ಬಿಂದು ರೂಪದ ಬದಲು ಸಂಖ್ಯಾಸಂಜ್ಞೆಗಳಲ್ಲಿ ಹೇಗೆ ಹೇಳುವುದು? ಚಿತ್ರದಲ್ಲಿ ಆ ಬಿಂದುವನ್ನು P ಎಂದು ಗುರ್ತಿಸಿದೆ. ಅದೇನೋ ಸರಿಯೆ. ಆದರೆ ಇದನ್ನು ಗುರ್ತಿಸುವುದು ಹೇಗೆ?

ನಾವು ನಾಲ್ಕನೆಯ ಒಂದು ಸುತ್ತನ್ನು ಗುರ್ತಿಸಿದ್ದು ಹೇಗೆಂದು ನೆನೆಸಿಕೊಳ್ಳೋಣ. OA ಗೆ ಲಂಬವಾಗಿ O ನಲ್ಲಿ ಲಂಬವೆಳೆದೆವು. ಅದು AA′ ನ್ನು ವ್ಯಾಸವಾಗುಳ್ಳ ವೃತ್ತವನ್ನು BB′ ನಲ್ಲಿ ಕತ್ತರಿಸಿತು. AA′$=\frac{1}{2}$ ಸುತ್ತು, AB$=\frac{1}{4}$ ಸುತ್ತು ಎಂದೆವು. ಈ ಸುತ್ತುವಿಕೆಯನ್ನು ಹೀಗೆಯೇ ಹೇಳಬಹುದಲ್ಲವೆ? B ಯನ್ನು ಕೇಂದ್ರ "O" ಗೆ ಸೇರಿಸಿದಾಗ OA ಯೊಡನೆ ಮಾಡುವ ಕೋನ 90°. ಒಂದು ಪೂರ್ಣ ಸುತ್ತು ಬಂದರೆ 360° ಗಳನ್ನು ಸುತ್ತಿದಂತಾಯ್ತು. ಆದ್ದರಿಂದ 90° ಕೋನ ಮಾಡಲು $\frac{90}{360}° = \frac{1}{4}$ ಸುತ್ತು ಬರಬೇಕು. ಎಂದರೆ 360° ಗಳ ಕಾಲುಭಾಗದಷ್ಟು ಪ್ರಮಾಣದ ಕೋಣವನ್ನು ಮೂಲರೇಖೆ OA ಯೊಡನೆ O ನಲ್ಲಿ ಮಾಡುವಂತೆ ಒಂದು ಗೆರೆಯೆಳೆದರೆ ಅದು 'O' ಕೇಂದ್ರವುಳ್ಳ ಮತ್ತು O ಗೆ ತ್ರಿಜ್ಯದ ವೃತ್ತವನ್ನು ಸಂಧಿಸುವ ಬಿಂದುವೇ ವೃತ್ತದ ಕಾಲುಭಾಗ ಸುತ್ತಿದಾಗ ಬರುವ ಬಿಂದುವಾಗುತ್ತದೆ. ಹಾಗೆಯೇ $\frac{1}{8}$ ಭಾಗ

ಸುತ್ತಿದಾಗ ಬರುವ ಬಿಂದುವೂ 360° ಗಳ $\frac{1}{8}$ ಪಾಲಿನಷ್ಟು ಕೋನವನ್ನು ಮಾಡುವ ರೇಖೆ ವೃತ್ತವನ್ನು ಕತ್ತರಿಸುವ ಬಿಂದುವೂ ಒಂದೇ ಆಗುತ್ತದೆ. ಆದರೆ ಆ ಬಿಂದು +1 ರ 8 ನೆಯ ವರ್ಗದ ಮೂಲಗಳಲ್ಲೊಂದು. ಆದ್ದರಿಂದ $x^8=+1$ ಎಂಬುದರ ಒಂದು ಉತ್ತರ ಯಾವುದಾಯ್ತು? OA ಯೊಡನೆ 360° ರ $\frac{1}{8}=45°$ ಕೋನವನ್ನು O ನಲ್ಲಿ ಮಾಡುವ ರೇಖೆ ವೃತ್ತವನ್ನು ಸಂಧಿಸುವ ಬಿಂದುವೇ ನಮಗೆ ಬೇಕಾದ +1 ರ ಒಂದು ಅಷ್ಟಮಮೂಲ. ಚಿತ್ರದಲ್ಲಿ ಈ ಬಿಂದುವನ್ನು P ಎಂದು ಗುರ್ತಿಸಿದೆ. ಆದರೆ ಸಂಖ್ಯಾಸಂಜ್ಞೆಗಳಲ್ಲಿ P ಯನ್ನು ಬರೆಯುವುದು ಹೇಗೆ? P ಯ ಸ್ಥಾನ ಸೂಚಿಗಳಾವುವು?



P ಯಿಂದ OA ಗೆ ಲಂಬವೆಳೆಯೋಣ. ಅದು AO ವನ್ನು Q ನಲ್ಲಿ ಸಂಧಿಸಲಿ. ಈಗ P ಬಿಂದು $\equiv (OQ+i\,QP)_3$ ಈ OQ ಮತ್ತು QP ಗಳ ಉದ್ದವನ್ನು ಅಳೆದರೆ P ಬಿಂದುವನ್ನು ಸಂಖ್ಯಾಸಂಜ್ಞೆಗಳಲ್ಲಿ ಹೇಳಬಹುದು.

ಅಳೆಯುವುದೇನೋ ಸುಲಭವೇ ಸರಿ. ಆದರೆ ಸರಿಯಾಗಿ ಅಳೆಯುವುದೇ ಕಷ್ಟ. ಎಲ್ಲರಿಗೂ ಗೊತ್ತಿರುವ ವಿಷಯವೇ ಇದು. ಅಂಗಡಿಯಲ್ಲಿ ಅಕ್ಕಿ ಕೊಳ್ಳುವಾಗ ಅಂಗಡಿಯವನು ನಮ್ಮೆದುರಿಗೇ ಸೇರು ಪಾವು ಅರಪಾವು ಅಕ್ಕಿ ಅಳೆಯುತ್ತಾನೆ. ಆದರೆ ಮನೆಗೆ ಬರುವ ವೇಳೆಗೆ ಅರೆಪಾವು ಅಕ್ಕಿ ನಾಪತ್ತೆಯಾಗಿರುತ್ತದೆ. ಇದೇನೋ ಹೋಗಲಿ ವ್ಯವಹಾರ; ಅಂಗಡಿಯವನು ಕಾಸುಕೇಳದೆ ಬಿಟ್ಟಿಯಾಗಿಯೇ ತೋರಿಸುವ ಹಸ್ತಲಾಘವ—ಕಲಾಕೌಶಲವೆನ್ನೋಣ. ಆದರೆ ನಾವೇ ದೊಡ್ಡ ರಾಶಿಯನ್ನು ಎರಡು ಬಾರಿ ಅಳೆದರೆ ಅಳತೆ ಹೆಚ್ಚುಕಡಿಮೆಯಾಗಿರುವಂತೆ ತೋರುತ್ತದೆ. ಇವುಗಳಲ್ಲಿ ಯಾವುದು ಸರಿ? ಹೇಗೆ ಹೇಳುವುದು? ಅಲ್ಲದೆ $\sqrt{2}$ ಮುಂತಾದ ಉದ್ದಗಳನ್ನು ಜ್ಯಾಮಿತೀಕವಾಗಿ ಗುರ್ತಿಸಿದರೂ ಅಂಕೆಗಳಲ್ಲಿ ಅಂಥವನ್ನು ಖಚಿತವಾಗಿ ಹೇಳಲಾರೆವಷ್ಟೆ;—ಆದ್ದರಿಂದಲೇ ಎಷ್ಟೇ ಖಚಿತವಾದ—ನಿಖರವಾದ (Accurate) ಯಂತ್ರ ಸಾಧನಾದಿಗಳ ನಿಖರತ್ವಕ್ಕೂ ಮಿತಿಯುಂಟು. ಇನ್ನು ಹೆಚ್ಚು ಸೂಕ್ಷ್ಮವಾದ ಅಳತೆಗಳ ದೃಷ್ಟ್ಯಾ ಅವು "ತಕ್ಕಮಟ್ಟಿಗೆ" "ನಿಖರ" ಅಷ್ಟೆ. ಸಂಪೂರ್ಣವಾಗಿ ನಿಖರವೆನ್ನಲಾಗುವುದಿಲ್ಲ. ಆದ್ದರಿಂದ ಇಲ್ಲೂ ನಾವು ಅಳೆಯುವುದೆಂದರೆ ಅಡಿಗಡ್ಡಿಯಲ್ಲಿ ಅಳೆಯುವುದೆಂದು ಹೇಳಬೇಕಾಗಿಲ್ಲ. OP ಯನ್ನು "1" ಎಂದು ಕರೆದರೆ OQ, PQ

ಗಳು ಎಷ್ಟೆಷ್ಟಿರಬೇಕೆಂದು ಗಣಿತದಿಂದಲೇ ನಿರ್ಧರಿಸಬಹುದು. ಇದು ಹೇಗೆಂದು ನೋಡೋಣ.

OPQ ತ್ರಿಭುಜದಲ್ಲಿ $P\hat{O}Q=45°$, $O\hat{Q}P=90°$, ಆದ್ದರಿಂದ $O\hat{P}Q=45$ $\therefore P\hat{O}Q=O\hat{P}Q$; $\therefore OQ=QP$. ಆದರೆ OQP ತ್ರಿಭುಜದಲ್ಲಿ $O\hat{Q}P$ ಯು ಒಂದು ಸಮಕೋನ. $\therefore OP^2=OQ^2+QP^2$, $\therefore OP^2=2OQ^2$; ಅಥವಾ $OQ^2=\frac{OP^2}{2}$; $OQ=\frac{OP}{\sqrt{2}}=\frac{1}{\sqrt{2}}$ ಆದ್ದರಿಂದ $P\equiv\left(\frac{1}{\sqrt{2}}+i\frac{\cdot 1}{\sqrt{2}}\right)$; ಎಂದರೆ $x^8=1$ ಆದರೆ $\frac{1}{\sqrt{2}}+\frac{i}{\sqrt{2}}$ ಎಂಬುದು x ನ ಒಂದು ಬೆಲೆ. ಇದನ್ನು ಬೀಜಕ್ರಮದಿಂದಲೂ ತಾಳೆ ನೋಡಬಹುದು.

$x=\frac{1}{\sqrt{2}}+\frac{i}{\sqrt{2}}$ ಆದರೆ, $x^8=\left(\frac{1}{\sqrt{2}}+\frac{i}{\sqrt{2}}\right)^8$; ಈಗ ಈ ಸಮೀಕರಣದ ಬಲ ಭಾಗ $=+1$ ಎಂದು ತೋರಿಸಿದರೆ ನಮ್ಮ ಉತ್ತರ ಸರಿಯೆಂದಾಯ್ತು.

$$\left(\frac{1}{\sqrt{2}}+\frac{i}{\sqrt{2}}\right)^8=\left[\left(\frac{1+i}{\sqrt{2}}\right)^2\right]^4=\left[\frac{(1)^2+(i)^2+2\times 1\times i}{2}\right]^4=$$
$$\left[\frac{1-1+2i=2i}{2}=i\right]^4=+1.$$

ಹೀಗೆಯೇ $x^6=1$ ನ್ನು ಬಿಡಿಸಬಹುದು. ಇದರ ಒಂದು ಉತ್ತರವನ್ನು ನೋಡೋಣ. $x^6=1$ ಆದ್ದರಿಂದ X ನ ಒಂದು ಬೆಲೆ, OA ಯೊಡನೆ O ನಲ್ಲಿ $\frac{360°}{6}=60°$ ಗಳ ಕೋನವನ್ನು ಮಾಡುವ ರೇಖೆ ವೃತ್ತವನ್ನು ಸಂಧಿಸುವ ಬಿಂದುವಾಗಿರಬೇಕು. ಇದು P ಎಂದು ಭಾವಿಸೋಣ. PQ ವನ್ನು OA ಗೆ ಲಂಬವಾಗಿ ಎಳೆಯೋಣ. POQ ತ್ರಿಭುಜದಲ್ಲಿ $P\hat{O}Q=45°$, $P\hat{Q}O=90°$. ಆದ್ದರಿಂದ $OQ=\frac{1}{2}PO$ ಎಂದು ತೋರಿಸ ಬಹುದು. ಆದ್ದರಿಂದ $PQ=\sqrt{OP^2-OQ^2}=\sqrt{1-\frac{1}{4}}=\sqrt{\frac{3}{4}}$. ಎಂದಮೇಲೆ $P\equiv$ $(\frac{1}{2}+\sqrt{\frac{3}{4}}i)$ ಎಂದರೆ, $x=\frac{1}{2}+\sqrt{\frac{3}{4}}i$ ಎಂಬುದು $x^6=1$ ಎಂಬುದರ ಒಂದು ಮೂಲ. ಹಿಂದಿನಂತೆಯೇ ಇದನ್ನೂ ಬೀಜಕ್ರಮದಲ್ಲಿ ತಾಳೆ ನೋಡೋಣ.

$x^6=\left(\frac{1}{2}+\frac{\sqrt{3}i}{2}\right)^6$ ಎಂಬ ಸಮೀಕರಣದ ಬಲಭಾಗ

$$=\left[\left(\frac{1+\sqrt{3}i}{2}\right)\left(\frac{1+\sqrt{3}i}{2}\right)^2\right]^2=$$

$$\left[\left(\frac{1+\sqrt{3}i}{2}\right)\left(\frac{1+3i^2+2\sqrt{3}i}{4}=\frac{2(\sqrt{3}i-1)}{4}\right)\right]^2$$

$$=\left[\left(\frac{\sqrt{3}i+1}{2}\right)\left(\frac{\sqrt{3}i-1}{2}\right)\right]^2=\left[\frac{3i^2-1}{4}=\frac{-3-1}{4}=-1\right]^2$$

$= +1 =$ ಸಾಧನೀಯ.

ಒಂದು ಸಂಶಯ ಇಲ್ಲಿ ತಲೆಹಾಕುತ್ತದೆ. ಇದುವರೆಗೆ ನಾವು $x^6=1$, $x^8=1$ ಮುಂತಾದ ಬೀಜಸಮೀಕರಣಗಳಲ್ಲಿ ಒಂದೊಂದು ಮೂಲವನ್ನು ಮಾತ್ರ ನೋಡಿದೆವು. ಆದರೆ ಉಳಿದ ಮೂಲಗಳ ಗತಿಯೇನು? ಅವುಗಳನ್ನೂ ಮಾತನಾಡಿಸಬೇಡವೆ?

ಆಗಬಹುದು ಅವಶ್ಯವಾಗಿ. ಆದರಿಂದ ಒಂದು ವಿಷಯ—ಬಹು ವಿಚಿತ್ರವೂ ಕುತೂಹಲಕಾರಕವೂ ಆದುದು—ಬೆಳಕಿಗೆ ಬರುತ್ತದೆ. ಆದರೆ ಮೊದಲು ಒಂದು ರೂಪಧಾರಣಮಾಡುವ ಮುಂಚೆಯೇ ಯಾವುದಾದರೊಂದು ಸಮೀಕರಣದ ಮೂಲಗಳ ಗುಂಪನ್ನು ಅವುಗಳ ಖಾಸಾ ಮನೆಯಲ್ಲೇ, ಬೀಜಗಣಿತದಲ್ಲೇ, ಸಂಖ್ಯಾ ಸಂಜ್ಞೆಗಳ ತೊಡಿಗೆಯಲ್ಲಿರುವಾಗಲೇ ಭೇಟಿಮಾಡುವುದು ಹೆಚ್ಚು ಪ್ರಯೋಜನಕರ. ಭೇಟಿಗೆ $x^3=1$ ಎಂಬ ಸಮೀಕರಣವನ್ನು ತೆಗೆದುಕೊಳ್ಳೋಣ.

"ಎತ್ತರ" ಶಾಲೆಯ ಮೆಟ್ಟಲೇರಿದವರಿಗೆಲ್ಲ ಗೊತ್ತು $x^3=1$ ಎಂದರೆ $x^3-1=0$ ಎಂದು. ಹಾಗೆಯೇ ಗಣಿತವನ್ನು ಇಚ್ಛಿಸಿ ಆಸಕ್ತಿವಹಿಸಿದವರಿಗೆ $x^3-1=(x-1)(x^2+x+1)$ ಎಂದೂ ಗೊತ್ತು. ಆದ್ದರಿಂದ $x^3=1$ ಆಗಬೇಕಾದರೆ $(2-1)$ $(x^2+x+1)=0$ ಆಗಬೇಕೆಂದು ಅವರಾದರೂ ಊಹಿಸಿಯಾರು. x ನ ಯಾವ ಬೆಲೆಗಳಿಗೆ ಇದು ಸಾಧ್ಯ? ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಗುಣಲಬ್ಧ ಶೂನ್ಯವಾಗಬೇಕಾದರೆ ಗುಣ್ಯಾಗುಣಕಗಳಲ್ಲೊಂದಾದರೂ ಸೊನ್ನೆಯಾಗಿರಬೇಕಷ್ಟೆ. ಆದ್ದರಿಂದ X ನ ಬೆಲೆಗಳು $x-1=0$ ಆಗುವಂತಿರಬೇಕು ಅಥವಾ $x^2+x+1=0$ ಆಗುವಂತಿರಬೇಕು. ಮೊದಲಿನದೇನೋ ಗೊತ್ತು $x=1$ ಎಂದು. ಈಗ ಎರಡನೆಯ ಸಮೀಕರಣವನ್ನು ನೋಡೋಣ.

$x^2+x+1=0$. ಕಂಡಹಾಗೇ ಇದು ಒಂದು ವರ್ಗಸಮೀಕರಣವೆಂದು ಗೊತ್ತಾಗುತ್ತದೆ. ವರ್ಗಸಮೀಕರಣದ ಸಾಧಾರಣ ರೂಪ (General Form) ವಾದ $ax^2+bx+c=0$ ಯಲ್ಲಿ X ನ ಬೆಲೆ ಎಷ್ಟು? ಸೂತ್ರದಿಂದ : $x=\frac{-b+\sqrt{b^2-4ac}}{2a}$ ಅಥವಾ $\frac{-b-\sqrt{b^2-4ac}}{2a}$ ತಾನೆ?

ಹಾಗಾದರೆ $x^2+x+1=0$ ನ ಮೂಲಗಳು ಯಾವುವು? ಸೂತ್ರದಿಂದ ತಿಳಿದು ಬರುವಂತೆ $x=\frac{-1\pm\sqrt{1^2-4\times1\times1}}{21}=\frac{-1\pm\sqrt{3}i}{2}$ ಎಂದರೆ $\frac{-1+\sqrt{3}i}{2}$

ಮತ್ತು $\frac{-1+\sqrt{3}i}{2}$ ಇವೆರಡರಲ್ಲಿ ಯಾವುದಾದರೊಂದು ಮೂಲವನ್ನು ವರ್ಗ ಮಾಡೋಣ.

$$\left(\frac{-1-\sqrt{3}i}{2}\right)^2=\frac{1+3i^2+2\sqrt{3}i}{4}=\frac{-2+{}^2\sqrt{3}i}{4}=\frac{-1+\sqrt{3}i}{2}=$$

ಎರಡನೆಯ ಮೂಲ.


ಹಾಗೆಯೇ $\left(\frac{-1+\sqrt{3}i}{2}\right)^2=\frac{1+3i^2-2\sqrt{3}i}{4}=\frac{-2-2\sqrt{3}i}{4}=$
$\frac{-1-\sqrt{3}i}{2}=$ ಉಳಿದ ಮೂಲ.

ಹೀಗೆಯೇ ಇವುಗಳಲ್ಲಾವುದನ್ನಾದರೂ ಘನ ತ್ರಿಘಾತಮಾಡಿದರೆ $+1$ ಬರುತ್ತದೆ. ಇದರಂತೆಯೇ $x^n=1$ ಎಂಬ ಸಮೀಕರಣದಲ್ಲಿ (n ಎಂಬುದು ಅವಿಭಾಜ್ಯ ಸಂಖ್ಯೆಯಾದಾಗ) ಸಮೀಕರಣದ ಯಾವುದೇ ಮೂಲವನ್ನು ವರ್ಗಮಾಡಲಿ, ತ್ರಿಘಾತ ಮಾಡಲಿ, ಚತುರ್ಘಾತಮಾಡಲಿ, . . . n ನೇ ಘಾತಮಾಡಲಿ, ಇತರ ಮೂಲಗಳು ಒಂದು ಕ್ರಮವನ್ನು ಅನುಕರಿಸಿ ಬರುತ್ತವೆ. n ನೇ ಘಾತ$=+1$, $n+1$ ನೇ ಘಾತ$=$ಅದೇ ಮೂಲ; ಮತ್ತೆ ಹಿಂದೆ ಒಂದೇ ಕ್ರಮದಲ್ಲೇ ಮೂಲದ $n+2, n+3, n+4,\ldots$ ನೇ ಘಾತಗಳು ಬರುತ್ತ ಹೋಗುತ್ತವೆ.

ಗಣಿತೋದ್ಯಾನದ ಈ ಬಾಗಿಲನ್ನು ಹಾದು ಮುನ್ನಡೆದರೆ ಮತ್ತೊಂದು ಸುಂದರ ದೃಶ್ಯ ಕಂಡುಬರುತ್ತದೆ. $x^n=1$ ಸಮೀಕರಣದ n ಮೂಲಗಳನ್ನು $P_1, P_2, P_3 \ldots, P_n$ ಎಂದು ಕರೆಯೋಣ. $P_n=A$ ಎಂಬುದು ಸ್ಪಷ್ಟ. ಈ $P_1\, P_2\, P_3 \ldots P_n$ ಗಳನ್ನು ಅನುಕ್ರಮವಾಗಿ ಸೇರಿಸಿದರೆ, ಎಂದರೆ P_1P_2, $P_2 P_3$, $P_3P_4, \ldots P_n-1\, P_nP_nP_1$ ಗಳನ್ನು ಸೇರಿಸಿದರೆ ಒಂದು ಚಕ್ರೀಯ $n-$ ಭುಜಾಕೃತಿ ಉಂಟಾಗುತ್ತದೆ. ಎಂದರೆ $+1$ ರ n ಮೂಲಗಳಿಗೂ ಸಮ $n-$ ಭುಜಾಕೃತಿಯ ಶೃಂಗ (Vertex)ಗಳಿಗೂ ಒಂದು ಏಕಸ್ವೈಕ ಸಂಬಂಧವಿದೆಯೆಂದಾಯ್ತು.

ಹೀಗೆ ಸಹಜಸಂಖ್ಯೆಗಳಿಂದ ಹೊರಟ ದಾರಿ, ನಮಗೆ ಹಲವಾರು ವಿಚಿತ್ರ ದೃಶ್ಯಗಳನ್ನು ತೋರಿಸಿ, ಕೊನೆಗೆ ಜ್ಯಾಮಿತಿಯ ಪ್ರಶ್ನೆಯೊಂದಕ್ಕೆ ಕರೆತಂದಿದೆ. ನಮ್ಮ ಕಲ್ಪನಾಶಕ್ತಿ ಹಿಗ್ಗಿದಂತೆಲ್ಲ ನಾವು ಹೊಸ ಹೊಸ ಸಂಖ್ಯೆಗಳ ರಾಜ್ಯದಲ್ಲಿ ಸಂಚರಿಸಲು ಸಮರ್ಥರಾಗುತ್ತೇವೆ. ಸಹಜಸಂಖ್ಯೆಗಳನ್ನೊಡೆದು ಭಿನ್ನರಾಶಿಗಳನ್ನು ಸೃಜಿಸಿದೆವು. ಭಿನ್ನರಾಶಿಗಳನ್ನೂ ಸಧನ ಋಣಸಂಖ್ಯೆಗಳನ್ನೂ ರೇಖೆಯ ಮೇಲಣ ಬಿಂದುಗಳನ್ನಾಗಿಸಿದೆವು. ಈ ಸಂಖ್ಯೆಗಳ ಬಸಿರಿಂದ ಕರಣಿ (Surd)ಗಳು ಹುಟ್ಟಿದುವು. ಇಲ್ಲಿ

ಕಲ್ಪನೆ ಮತ್ತೊಂದು ಹೊಸ ದಾರಿಯನ್ನೇ ಮಾಡಿ—ಘಾತಕರಣಕ್ಕೆ ಒಂದು ವ್ಯಾವಹಾರಿಕ (Operational) ಅರ್ಥ ಕಲ್ಪಿಸಿ ಊಹಾಂಕಗಳಿಗೆ ಜನ್ಮ ಕೊಟ್ಟಿತು. "ಏಕ" (Unity)ದ ವಿವಿಧ ಮೂಲಗಳು ಈ ಹೊಸ ಸಂಖ್ಯೆಗಳೊಡನೆ ಹಳೆಯ ಸಹಜ ಸಂಖ್ಯೆಗಳು ಸೇರಿ ಉಂಟಾದ ಸಂಕರ ಸಂಖ್ಯೆಗಳ ಗುಂಪಿನಲ್ಲಿ ಒಂದು ಭಾಗ ಮಾತ್ರ. ಬಿಂದು ರೂಪ ಧರಿಸಿದ ಈ ಸಂಕರಸಂಖ್ಯೆಗಳ ಸುಂದರವಾದ ಚಕ್ರೀಯ ಬಹುಭುಜಾಕೃತಿಗಳನ್ನು ಸೃಷ್ಟಿಸಿ ಮೆರೆದುವು. ಈ ಹೊಸ ದಾರಿಯಲ್ಲಿ ಸ್ವಲ್ಪ ದೂರ ಜಾಗ್ರತೆಯಾಗಿ ಪಯಣಮಾಡಿದರೆ ಮತ್ತೊಂದು ಹೊಸ ಸಂಖ್ಯಾಸೃಷ್ಟಿ ಕಣ್ಣಿಗೆ ಬೀಳುತ್ತದೆ.



ಸಮ ಅಷ್ಟಭುಜಾಕೃತಿ $n=8$

ಒಂದೇ ವೃತ್ತದೊಳಗಿನ ಸಮತ್ರಿಭುಜಕ್ಕಿಂತ ಸಮಷಡ್ಭುಜ, ಅದಕ್ಕಿಂತ ಸಮದ್ವಾದಶ ಭುಜ, ಅದಕ್ಕಿಂತ ಸಮಚತುರ್ವಿಂಶಭುಜದ ಕ್ಷೇತ್ರಫಲ (Area) ಹೆಚ್ಚು. ಭುಜಸಂಖ್ಯೆ ಹೆಚ್ಚುತ್ತ ಹೋದಂತೆ ಸಲೆಯೂ ಹೆಚ್ಚುತ್ತಾ ಹೋಗುತ್ತದೆ. ಆದರೆ ಎಷ್ಟೇ ಹೆಚ್ಚಾದರೂ ಅದು ಪೂರ್ಣವೃತ್ತದ ಸಲೆಗಿಂತ ಸ್ವಲ್ಪ ಕಡಮೆಯೇ. ಆದರೂ ಈ ಅಂತರವನ್ನು ಇಷ್ಟಬಂದಷ್ಟು ಕಡಮೆಮಾಡಬಹುದು. ಅದಕ್ಕೂ ಇನ್ನೂ ಕಡಮೆಮಾಡಬಹುದು. ಆದ್ದರಿಂದ ಭುಜಸಂಖ್ಯೆ ಹೆಚ್ಚಿದಂತೆಲ್ಲ ಆಕೃತಿ ವೃತ್ತದ ಸಲೆಗೆ ಹತ್ತಿರವಾಗುತ್ತ ಹೋಗುತ್ತದೆ. ಇದನ್ನೇ n ಅನಂತ (Infinity)ವಾದರೆ ವೃತ್ತದೊಡನೆ ಆಕೃತಿ ಐಕ್ಯವಾಗುತ್ತದೆ, ಬಹು ಭುಜದ ಮಿತಿ (Limit) ವೃತ್ತ ಎನ್ನುತ್ತಾರೆ. ಆದರೆ ಈ ವೃತ್ತದ ಕ್ಷೇತ್ರಫಲವನ್ನು ನಾವಿದುವರೆಗೆ ನೋಡಿದ ಎಂಥ ಸಂಖ್ಯೆಯಿಂದಲೂ ಹೇಳಲಾಗುವುದಿಲ್ಲ. ಆದರೂ ವೃತ್ತದ ಸಲೆ, ತ್ರಿಜ್ಯ (Radius)ದ ವರ್ಗಕ್ಕೆ ಅನುಪಾತವಾಗಿರು (Proportional)ತ್ತದೆ. ಎಂದರೆ ವೃತ್ತದ ಸಲೆ = ತ್ರಿಜದವರ್ಗ × ಒಂದು ನಿರ್ದಿಷ್ಟ ಖಚಿತಸಂಖ್ಯೆ. ಈ ಸಂಖ್ಯೆಯನ್ನು ಗ ಎಂದು ಬರೆಯುತ್ತಾರೆ. . . ಈ "ಗ" ನಾವು ಇದುವರೆಗೂ ಕಂಡ ಸಂಖ್ಯೆಗಳಲ್ಲಾವ ಗುಂಪಿಗೂ ಸೇರದು. ಯಾವ ಸಂಖ್ಯೆಯನ್ನೇ ಕೂಡಲಿ, ಕಳೆಯಲಿ, ಗುಣಿಸಲಿ, ಭಾಗಿಸಲಿ, ಘಾತಮಾಡಲಿ, ಮೂಲಮಾಡಲಿ ಈ ಸಂಖ್ಯೆ ಬರದು. ಇಂತಹ ಬೀಜಗಣಿತ

ಪರಿಕರ್ಮ (Operations)ಗಳಿಗೆ ಒಳಪಡದ ಸಂಖ್ಯೆಗಳನ್ನು "ಗಣಿತ ಕ್ರಿಯಾತೀತ ಸಂಖ್ಯೆ" (Transcendental Number)ಗಳೆನ್ನುತ್ತಾರೆ. ಇವುಗಳ ದೂರದ ನೋಟವೇ ರಮ್ಯ. ಈ ಬೆಟ್ಟ ಹತ್ತಲು ಇರುವ ದಾರಿ ಬಹಳ ಕಷ್ಟದ್ದು. ಇದನ್ನು ಇಂಥ ಕಷ್ಟಗಳನ್ನೇ ಅರಸಿಕೊಂಡು ಅಲೆಯುವ ಅತಿ ಸಾಹಸಿಗಳಿಗೆ ಬಿಟ್ಟು ಮರಳಿ ಮನೆ ಸೇರುವುದೇ ಈಗ ಸೂಕ್ತ.

ಎಸ್. ಎನ್. ನರಹರಿ ಪಂಡಿತ್.

ಸಿಳ್ಳ

"ಸಿಳ್ಳ . . . ಲೋ . . . ಸಿಳ್ಳಾ . . ."

". . . . . . ."

"ಓ! ಸಿಳ್ಳ . . . ಏನು ಮಾಡ್ತಾನೋ . . . ಮುಟ್ಠಾಳ . . ." ಲಿಂಗಯ್ಯ ನವರು ಇನ್ನೂ ಮುಂದೆ ಬಂದರು. ಅತ್ತ ಇತ್ತ ನೋಡಿದರು. ಸಿಳ್ಳನ ಸುಳಿವಿರಲಿಲ್ಲ. ಅರ್ಧ ಹೆಣೆದ ಪಂಜರ ಅತ್ತ ಹಾಗೆಯೇ ಉರುಳಿಕೊಂಡಿತ್ತು. ಸೀಳಿದ ಬಿದುರು ದೆಬ್ಬೆಗಳು, ಸಿಬುರುಗಳು, ಮಚ್ಚು, ಕುಡಲು ಎಲ್ಲವೂ ಅವರನ್ನೇ ನೋಡುತ್ತಿದ್ದವು. ಒಂದು ಕುಡಿಕೆಯಲ್ಲಿ ತಿಳಿದಿದ್ದ ನೀರನ್ನು ಕಾಗೆಯೊಂದು ಕುಡಿದು ಹಾರಿಹೋಯಿತು ಅವರು ಹತ್ತಿರ ಬಂದಾಗ. ಸಿಳ್ಳ ಕುಳಿತು ಸುಕ್ಕಾದ ಹಳೆಯ ಬಟ್ಟೆಯನ್ನು ಧೂಳು ಆವರಿಸಿಕೊಂಡಿತ್ತು. ಒಂದೆರಡು ಮರದ ದಿಮ್ಮಿಗಳು, ಆಗ ತಾನೆ ಹೆಣೆದು ಸಿದ್ಧಗೊಳಿಸಿದ್ದ ಕುಕ್ಕೆಗಳು, ಮೊರಗಳು ಎಲ್ಲವೂ ಬಿಸಲಿಗೆ ಮಿರುಗುತ್ತಿದ್ದವು. ಮರದ ನೆರಳು ಅಸ್ಪಷ್ಟವಾಗಿ ಆ ಎಡೆಯಲ್ಲಿ ಚೆಲ್ಲಿಕೊಂಡಿತ್ತು. ಬುಡವನ್ನೊರಗಿ ಕುಳಿತಿದ್ದ ಸಿಳ್ಳ ಎಲ್ಲಿಹೋದನೆಂಬುದೇ ಲಿಂಗಣ್ಣನವರಿಗೆ ತೋಚಲಿಲ್ಲ. ಅವರ ಕೋಪ ಎಲ್ಲೆ ಮೀರಿತು. ಆ ಹಣಕ್ಕಾಗಿ ಇಂದು ಬರುವಂತೆ ಹೇಳಿದ್ದ. ಇಂದು ಎಂದರೆ ಇದು ಹತ್ತನೆಯ 'ಇಂದು'. ಎಷ್ಟೋ ಸಾರಿ ಅವರು ಬಂದು ನೋಡಿದ್ದರು. ಅವನ ವರ್ತನೆಗೆ ಹೇಸಿ ರೇಗಿದ್ದರು. ಕಿವಿ ಬಿರಿಯುವಂತೆ ಕೂಗಿದ್ದರು. ಸಿಳ್ಳ ನಮ್ರತೆಯಿಂದಲೇ ಹೇಳಿದ್ದ; "ಮೂರು ದಿನದಾಗೆ ಕೊಟ್ಟುಬುಟ್ಟೇನು ನನ್ನೊಡೆಯ . . . ಗಂಜಿಗೆ ಮೂರು ಕಾಸಿಲ್ಲ."

ಎಷ್ಟು ಬಾರಿ ಎಂದು ಸಹಿಸಿಯಾರು ಲಿಂಗಣ್ಣನವರು! ಕರುಣಾಳುಗಳಾದುದ ರಿಂದಲೋ ಏನೋ ಬಂದಾಗಲೆಲ್ಲಾ ಅವನ ಸಮಾಧಾನಕ್ಕೆ ಮರುಕಗೊಂಡು ಹಿನ್ನಡೆಯುವರು. ಹತ್ತಾರು ಗಜ ಹಿಂದೆ ಹೋಗಿ ಮತ್ತೆ ಬಂದು "ನಾಡ್ದು ಕೊಡ್ದೆ ಹೋದ್ರೆ ನಿನ್ನ ಜೀವಸ್ಸೈತ ಬಿಡಾಕಿಲ್ಲ" ಎಂದು ಹೆದರಿಸಿ ಗೃಹಾಭಿಮುಖಿ ಯಾಗುವರು. ಸಿಳ್ಳನೂ ಅವರ ಹಣವನ್ನು ಆದಷ್ಟು ಬೇಗ ಕೊಟ್ಟುಬಿಡಬೇಕೆಂದು ಸತತ ಪ್ರಯತ್ನಪಡುತ್ತಿದ್ದ. ಆದರೆ ಸಾಧ್ಯವಾಗುತ್ತಲೇ ಇರಲಿಲ್ಲ. ಒಂದು ಕುಕ್ಕೆ ಯನ್ನು ಮಾರಿದರೆ ನಾಲ್ಕಾಣೆ ಬಂದೀತು; ಅಂದಿನ ಗಂಜಿಗಾಯಿತು. ಬಾರದ ದಿನ ಉಪವಾಸವಾದರೂ ಆಯಿತು. ಸಾಲವನ್ನೇನೋ ಮಾಡಿದ—ಆದರೆ ತೀರಿಸುವ

ಸಾಮರ್ಥ್ಯ ಅವನಲ್ಲಿಲ್ಲವಾಯಿತು. ಮಗನಿದ್ದಾನೆ, ಸೊಸೆಯೂ ಇದ್ದಾಳೆ. ಯಾರಿದ್ದರೇನು? ಯಾರ ಹಂಗಿನಲ್ಲಿಯೂ ಸಿಳ್ಳ ಜೀವನಮಾಡಲೆಳಸಲಿಲ್ಲ. ಸ್ವತಂತ್ರನಾಗಿ ದುಡಿದು ಸಾಯಬೇಕು, ಯಾರ ಋಣವೂ ತನ್ನ ತಲೆಯಮೇಲಿರಬಾರದು ಎಂಬುದೇ ಅವನ ಧ್ಯೇಯ. ಆ ಧ್ಯೇಯಸಾಧನೆಗಾಗಿ ಹಗಲಿರುಳು ಶ್ರಮಿಸುತ್ತಿದ್ದ. ನಿತ್ಯಜೀವನದಲ್ಲಿ ಸತ್ಯದ ನೆರೆಯಲ್ಲಿರಬಯಸುತ್ತಿದ್ದ. ಕೆಲವೊಂದುಬಾರಿ ಅದು ಸಾಧ್ಯವಾಗುತ್ತಿರಲಿಲ್ಲ. ನಿಜ, ಲಿಂಗಣ್ಣನವರ ಸಾಲ ತೀರಿಸಲೂ ಅದು ಸಾಧ್ಯವಾಗಲಿಲ್ಲ. ಅವರು ಬಂದು 'ಲೋ ಸಿಳ್ಳಾ' ಎಂದರೆ ಎದ್ದುನಿಂತು, ತಲೆ ಕೆರೆದುಕೊಳ್ಳುತ್ತ "ಬುದ್ಧೀ . . ." ಎಂದು ದೀನದೃಷ್ಟಿಯಿಂದ ನೋಡುವನು. ಅವರೇನಾದರೂ ಕೆರಳಿಕೆಂಡವಾದರೆ ಮುಂದೆ ಬಂದು "ನಮ್ಮಪ್ಪ . . . ನಿನ್ನ ಪಾದ . . . ನಾನು ಬಡವ . . . ಮುದುಕ" ಎಂದು ಗದ್ಗದಿತವಾಗುವನು. ಲಿಂಗಣ್ಣನವರ ಎದೆಯಲ್ಲಿ ತಣ್ಣೀರಿನ ಬುಗ್ಗೆ ಜಿಲ್ಲೆನ್ನುವುದು. "ಥೂ . . . ಮುಂ . . . ಮಗನೆ" ಎಂದು ಹಿಂದಿರುಗುವರು. ಆದರೆ ಇಂದು ಏನಾದರೂ ಮಾಡಿ ಹಣವನ್ನು ಕಸಿದುಕೊಳ್ಳಲೇಬೇಕೆಂದು ಅವರು ನಿರ್ಧರಿಸಿದ್ದರು. ಮನಸ್ಸಿನಲ್ಲಿ ಛಲ ಮೂಡಿ ಸಿಳ್ಳನನ್ನು ಹುಡುಕಿಕೊಂಡು ಬಂದರು. ಆದರೆ ಸಿಳ್ಳ ನಿತ್ಯದಂತೆ ಆ ಮರದ ಕೆಳಗೆ ಕಾಣಲಿಲ್ಲ. ಆ ಜಾಗ ಬರಿದಾಗಿದ್ದರೂ ಅವನ ವಸ್ತುಗಳೆಲ್ಲವೂ ಅಂತೆಯೇ ಹರಡಿಕೊಂಡಿದ್ದವು. ಹತ್ತು ಗಜಗಳ ದೂರದಲ್ಲಿಯೇ ಇದ್ದ ಅವನ ಮುರುಕು ಗುಡಿಸಲು, ಲಿಂಗಣ್ಣನವರನ್ನು ಅತ್ತ ಕರೆಯಿತು. ಅಲ್ಲಿಗೂ ಬಂದು ತಲೆಯ ಮೇಲಣ ಪೇಟವನ್ನು ತೆಗೆದು, ಚೌಕದಿಂದ ಮುಖವನ್ನು ಒರಸಿಕೊಂಡು, ಬಾಗಿಲಲ್ಲಿ ನಿಂತು ಮತ್ತೆ:

"ಲೋ . . . ಸಿಳ್ಳಾ . . ." ಎಂದರು. ಮುಚ್ಚಿದ್ದ ತದ್ದಿಲು ಉತ್ತರವೀಯಬಯಸಲಿಲ್ಲ. ಲಿಂಗಣ್ಣನವರ ಕೈಗಳೂ ಸುಮ್ಮನಿರಲಿಲ್ಲ. ಕೃಶವಾದ ಅದನ್ನು ಹಿಂದೆ ತಳ್ಳಿದವು. "ಸರ್ . . . ಸರ್ . . ." ಎಂದು ಸದ್ದುಮಾಡುತ್ತ ಅದು ನಡುಗಿ ಹಿಂದೆ ಸಾಗಿತು—ಒಳಗಿನಿಂದ ಬರಿಯ ಗಾಳಿ "ಏನು ಬಂದಿರಿ?" ಎಂದಿತು. ಲಿಂಗಣ್ಣನವರು ತಮ್ಮ ನಡುವಿನುದ್ದಕ್ಕಿದ್ದ ಆ ಬಾಗಿಲಿನಲ್ಲಿ ಬಾಗಿ, ಒಳಗೆ ನೋಡಿದರು.

ಜೋಡಿಸಿದ್ದ ಕಲ್ಲುಗಳ ಮೇಲೆ ಒಂದು ಸಣ್ಣ ಮಡಕೆ ನಿದ್ದೆಮಾಡುತ್ತಿತ್ತು . . . ಒಲೆಯಲ್ಲಿ ಕೆಂಡ ತರಗಿನೊಡನೆ ಕೂಡಿ ಹೊಗೆಯಾಡುತ್ತಿತ್ತು. ಕಂಠವಿಲ್ಲದ ಗಡಿಗೆಯಲ್ಲಿ ನೀರು ತೊಟ್ಟಿಕ್ಕಿದ್ದ ಪ್ರಯುಕ್ತ ನೆಲ ತೇವವಾದಂತಿತ್ತು. ಒಂದೆರಡು ಮುಚ್ಚಳಗಳು, ಪುಳ್ಳೆಗಳು, 'ಅಸೀಕಲ್ಲು', 'ಗುಂಡುಕಲ್ಲು', 'ಕವೆಗೋಲು' ಎಲ್ಲ ಮೌನವಾಗಿ ಲಿಂಗಣ್ಣನವರ ಆಗಮನಕ್ಕೆ ಬೆಚ್ಚಿ ಕುಳಿತಿದ್ದವು. ಕತ್ತಾಳೆಯಿಂದ

ನಿರ್ಮಿತವಾದ ಗೋಡೆಯ ಸಂದಿನಿಂದ ಸೂರ್ಯನ ತೀಕ್ಷ್ಣವಾದ ಕಿರಣಗಳು ಗುಡಿಸಲೊಳಗೆ ನುಗ್ಗಿ ಬೆಳಕನ್ನು ಹರಡಿದ್ದವು. ಸಿಳ್ಳ ಮಲಗುವ ಗೋಣಿಚೀಲದ ಮೇಲೆ ಅವನ ಎಲೆಯಡಿಕೆಯ ಚೀಲವೂ ಬಿದ್ದಿತ್ತು. ಅವನು ಅಲ್ಲಲ್ಲಿ ತಿರುಗುವಾಗ ಬಳಸುವ ದೊಣ್ಣೆಯೂ ಆ ಚೀಲದ ಪಕ್ಕದಲ್ಲಿಯೇ ಮಲಗಿದ್ದಿತು . . . ಈ ಗುಡಿಸಲ ಚಿತ್ರ ವಿಚಿತ್ರವನ್ನು ಲಿಂಗಣ್ಣನವರು ನೋಡುತ್ತಿರುವುದು ಇದೇ ಮೊದಲು. ಸಿಳ್ಳನ 'ಮನೆ'ಯನ್ನು ಕಂಡು ಅವರೆದೆಯಲ್ಲಿ ಮರುಕವೊಳೆಯಿತು. ಮುರುಕು ಮೊರ ವೊಂದರಲ್ಲಿ ತುಂಬಿರಿಸಿದ್ದ ಬತ್ತದ ಜೊಳ್ಳುಗಳು, ಜೋಳದ ಹಿಟ್ಟು . . . ಇವನ್ನೆಲ್ಲಾ ನೋಡುತ್ತ ಅವರು "ಇಷ್ಟರಲ್ಲಿಯೇ ಇವನ ಜೀವನ ಸಾಗಬೇಕೆ?" ಎಂದು ನಿಟ್ಟುಸಿರುಬಿಟ್ಟರು. 'ಬಡಪಾಯಿ, ಎಲ್ಲಿಗೋ ಹೋಗಿದ್ದಾನೆ ಬರಲಿ' ಎಂದು ಮತ್ತೆ ಅತ್ತ ಬಂದು ಮರದಡಿಯ ಕಲ್ಲೊಂದರ ಮೇಲೆ ಕುಳಿತುಕೊಂಡರು.

ಲಿಂಗಣ್ಣನವರಿಗೂ ಸಿಳ್ಳನಷ್ಟೇ ವರ್ಷಗಳು ಮಾಲೆಹಾಕಿದ್ದವಾದರೂ ಅವರು ಅವನಷ್ಟು ಹಂದರವಾಗಿರಲಿಲ್ಲ. ಅವರೇನು ಬಡವರಲ್ಲ. ಬಡವರೆದೆ ರಕ್ತವನ್ನು ಹೀರುವ ಐಶ್ವರ್ಯವಂತರೂ ಅಲ್ಲ. ಸಾಮಾನ್ಯ ಕುಲಜರು. ಮಧ್ಯಮ ವರ್ಗದವರು. ಸಿಳ್ಳನನ್ನು ಮೊದಲಿನಿಂದಲೂ ಬಲ್ಲವರು. ಅವನ ಮಗ ತಂದೆಯನ್ನು ಮನೆಯಿಂದ ಓಡಿಸಿದಾಗ, ಇವರೇ ಹೋಗಿ ನೀತಿ ಹೇಳಿದ್ದರು. ಆದರೂ ಅವನು ತಂದೆಯನ್ನು ಸಾಕಲು ಒಪ್ಪಲಿಲ್ಲ. ಸಿಳ್ಳ ತನ್ನ ತಂದೆಯಲ್ಲವೆನ್ನುವುದಕ್ಕೂ ಅವನು ಹಿಂದೆಗೆಯಲಿಲ್ಲ. ಸಿಳ್ಳನೇ ತಾನು ದುಡಿದಿಟ್ಟ ಹಣದಿಂದ ಮಗನ ಮದುವೆಯನ್ನು ಮಾಡಿದ—ಆದರೆ ಮಗ ಅಷ್ಟು ಕೃತಜ್ಞನಲ್ಲ. ಹೆಂಡತಿಯ ಅಪಾರ ಅನುರಾಗದ ಆಳಕ್ಕಿಳಿದು ತಂದೆಯೆಂಬ ರತ್ನವನ್ನು ತೆಗೆದು ಹೊರಗೆಸೆದಿದ್ದನು. ಸಂಮೋಹನಾಸ್ತ್ರದಲ್ಲಿ ಬಂಧಿಸಲ್ಪಟ್ಟು ಸಾಕಿ ಸಲಹಿದ ಪಿತೃದೇವನನ್ನು ತನ್ನಿಂದ ದೂರವಿಟ್ಟನು.

ಸಿಳ್ಳ ಮಗನನ್ನು ನಂಬಿರಲಿಲ್ಲ. ತನ್ನ ಜೀವನವನ್ನು ತಾನು ಕಲ್ಪಿಸಿಕೊಳ್ಳಬಲ್ಲೆ ನೆಂಬ ಎದೆಗಾರಿಕೆಯಿತ್ತವನಿಗೆ. ತನ್ನ ಕುಲವೃತ್ತಿಯನ್ನು ಕೈಗೊಂಡ. ನಿತ್ಯವೂ ಕಾಡಿಗೆ ಹೋಗಿ ಬಿದಿರುಗಳನ್ನು ಕಡಿದು, ಯಾವುದಾದರೂ ಊರಿನ ಗಾಡಿ ಆ ದಾರಿಯಲ್ಲಿ ಬರುವ ವರೆಗೂ ಕಾದಿದ್ದು, ನಂತರ ಅದರಲ್ಲಿ ಹೇರಿಕೊಂಡು, ತಾನೂ ಗಾಡಿಯಲ್ಲಿ ಕುಳಿತು ಹಿಂದಿರುಗುತ್ತಿದ್ದ. ಊರಾಚೆಯ ಹಿಪ್ಪೆಯ ಮರಕ್ಕೆ ಸಮೀಪ ದಲ್ಲಿ ಲಿಂಗಣ್ಣನವರ ಹೊಲದಲ್ಲಿಯೇ ಒಂದು ಗುಡಿಸಲನ್ನು ಕಟ್ಟಿಕೊಂಡು, ಹಿಪ್ಪೆಯ ಮರದಡಿಯಲ್ಲಿ ಕುಳಿತು, ಬಿದಿರನ್ನು ತನ್ನ ಮುದಿಗೈಗಳಿಂದಲೇ ಮಿದುಗೊಳಿಸುತ್ತಿದ್ದ. ಹಿಪ್ಪೆಯ ದಟ್ಟ ತಣ್ಣೆಳಲಲ್ಲಿ, ವೃದ್ಧಾಪ್ಯದ ಅಂತಿಮಘಟ್ಟಕ್ಕೇರುತ್ತಿದ್ದ ಸಿಳ್ಳ, ಒಂದು ಕಾಲನ್ನು ದಡಿಯಂತೆ ಚಾಚಿ ಮತ್ತೊಂದನ್ನು ಮಡಿಸಿ ಹಳೆಯ ಬಟ್ಟೆಯ ಮೇಲೆ

ಕುಳಿತು ಹರಿತವಾದ ಚಾಕುವಿನಿಂದ ದೆಬ್ಬೆಯನ್ನೆರೆಯಲು ಆರಂಭಿಸಿದನೆಂದರೆ ಅವನ ಬಾಯಿಂದ 'ತಾನೀ ತಂದನ್ನ ತಾನ . . . ದೊಡ್ಡಮ್ಮಿ ಕೇಳ್ . . . ಸಣ್ಣಮ್ಮಿ ಕೇಳ್ . . . ತಾನಿತಂದನ್ನತಾನ' ಎಂಬ ಗೀತೆ ತಾನಾಗಿಯೇ ಹೊರಹೊಮ್ಮುತ್ತಿತ್ತು. ಬೆಳಗಿನ ಜಾವ ಜೋಳದ ರೊಟ್ಟಿಯೊಂದನ್ನು ತಿಂದು, ಒಂದು ಗುಟುಕು ನೀರು ಕುಡಿದು ಈ ಮರವನ್ನು ಸೇರಿದನೆಂದರಾಯಿತು. ಸಂಜೆಗೆ ಹಳ್ಳದಂಚಿನಿಂದ ದನ ಕುರಿಗಳು ಊರಿಗೆ ಮರಳಬೇಕು. ಆಗ ಎದ್ದು, ತನ್ನ ಸಾಮಾನನ್ನೆಲ್ಲಾ ಒಂದು ಬಟ್ಟೆಯಲ್ಲಿ ಸುತ್ತಿಕೊಂಡು ಗುಡಿಸಲಿಗೆ ಹೋಗಿ—ರಾತ್ರಿಯ ಊಟವೆಂಬ ಶಾಸ್ತ್ರ ವನ್ನು ಮುಗಿಸಿಕೊಂಡು ಊರ ದಾರಿ ಹಿಡಿಯುತ್ತಾನೆ. ಅಲ್ಲಿ ಅವರಿವರ ಜಗುಲಿಯಲ್ಲಿ ಆ ಮಾತು ಈ ಮಾತುಗಳನ್ನಾಡುತ್ತ—ಯಾರಾದರೂ ಹುಡುಗರು ಬಂದರೆ ನಾಲ್ಕು ನಗೆಬಾಣಗಳನ್ನೂ ಬೀರುತ್ತ ನಿದ್ದೆಹೋಗುತ್ತಾನೆ. ಬೆಳಗ್ಗೆ ಮೊದಲ ಕೋಳಿ ಕೂಗುವ ಮುನ್ನವೇ ಎದ್ದು ನದಿಯ ಕಡೆ ಹೋಗಿ ಬಂದು ಗುಡಿಸಲನ್ನು ಸೇರುತ್ತಾನೆ. ಯಥಾಪ್ರಕಾರ ಬಿಸಿಲೇರುವಷ್ಟರಲ್ಲಿ ಹಿಪ್ಪೆಯ ಮರದಡಿಯಲ್ಲಿ ಸಿಳ್ಳ ಬಂದು ಕುಳಿತ ನೆಂದರೆ ಗಂಟೆ ಬೇಕಾದವರಿಗೆ ಗಡಿಯಾರವೇ ಬೇಕಾಗುವುದಿಲ್ಲ 'ಒಂಭತ್ತು ಗಂಟೆ ಆತು' ಎಂದು ಮಠದ ಹುಡುಗರು ಶಾಲೆಯ ಕಡೆ ಓಡುತ್ತಿರುತ್ತಾರೆ. ಸಿಳ್ಳನ ದಿನಚರಿ ಅವನ ಕುಲಸ್ಥರಿಗೆಲ್ಲಾ ಆದರ್ಶಪ್ರಾಯವೆನಿಸಿತ್ತು.

ಬೆಳಗಿನಿಂದ ಸಂಜೆಯ ವರೆಗೂ ಅವನ ಬೇಸರ ಕಳೆಯಲು ಮತ್ತೊಂದು ಸಾಧನವೂ ಇದೆ. ಸಿಳ್ಳನ ಮಗನ ಮನೆ ಹಿಪ್ಪೆಯ ಮರಕ್ಕೆ ಅತಿ ಸಮೀಪ. ಅವನ ಮೊಮ್ಮಗ 'ಯಂಕ್ಟ' ನಿತ್ಯವೂ ತಾತನನ್ನು ಹುಡುಕಿಕೊಂಡು ಇತ್ತ ಬರುತ್ತಾನೆ. ತಾತ ಕೊಟ್ಟ ರೊಟ್ಟಿಯ ಚೂರನ್ನು ತಿಂದುಕೊಂಡು, ತನ್ನ ಮನೆ, ತಾಯಿ, ತಂದೆ ಎಲ್ಲರನ್ನೂ ಮರೆಯುತ್ತಾನೆ. ತಾತನೊಡನೆ ಮುದ್ದುಮಾತಾಡಿಕೊಂಡು, ಅವನು ಮಾಡಿದಂತೆಯೇ ತಾನೂ ಕೆಲಸಮಾಡಲು ಯತ್ನಿಸುತ್ತಾನೆ. ಬಿದಿರನ್ನು ಸೀಳ ಹೋಗುತ್ತಾನೆ. ಆಗ ಸಿಳ್ಳ "ಲೋ . . . ಲೋ . . . ಬ್ಯಾಡ . . . ಬ್ಯಾಡ . . . ಕೈ ಕುಯ್ಕೋತೀಯಾ" ಎಂದು ಹೆದರಿಸಿ ಚಾಕುವನ್ನು ಅವನ ಕೈಯಿಂದ ಕಿತ್ತು ಕೊಳ್ಳುತ್ತಾನೆ. ಆದರೂ 'ಯಂಕ್ಟ' "ನಾ . . . ನಾ . . . ಕುಯಾಕಿಲ್ಲ . . . ಕೊ . . . ಕೊ . . . ಕೊಲು . . . ತಾದ" ಎಂದು ತೊದಲಿಸಿಕೊಂಡು ಕಿತ್ತು ಕೊಳ್ಳಲು ಮುಂದೆ ಬರುತ್ತಾನೆ. ಸಿಳ್ಳ ಅವನನ್ನೆತ್ತಿ ತೊಡೆಯ ಮೇಲೆ ಕೂರಿಸಿಕೊಂಡು ರೊಟ್ಟಿಯನ್ನು ಕೈಗಿತ್ತು, ಮೊಮ್ಮಗನ ಎಳೆಗೆನ್ನೆಗೆ ತನ್ನ ಸುಕ್ಕು ತುಟಿಗಳನ್ನೊತ್ತಿ ತನ್ನ ಅಂತರಂಗದಲ್ಲಡಗಿರುವ ಅಚಲಪ್ರೀತಿಯನ್ನು ವ್ಯಕ್ತಪಡಿಸಿಕೊಳ್ಳುತ್ತಾನೆ. ಗಡ್ಡ ಮೀಸೆಗಳು ವಿಕಾರವಾಗಿ ಬೆಳೆದಿದ್ದರೂ ಕೂಡ ವೆಂಕಟನ ದೃಷ್ಟಿಯಲ್ಲಿ ಅವೆಲ್ಲಾ

ಆಟದ ಸಾಮಾನು. ತಾತನ ತೋಳುತೆಕ್ಕೆಯಲ್ಲಿ ಕುಳಿತ ಅವನು ಅವನ್ನೆಲ್ಲಾ ಎಳೆದು, ಮುದಿ ಶರೀರದಮೇಲೆ ವಿಕಟನಗೆ ಬೀರುತ್ತ ನೃತ್ಯಮಾಡುತ್ತಾನೆ . . . ಮನಸಾರ ಕುಣಿಯುತ್ತಾನೆ. ಆಗ ಸಿಳ್ಳನಿಗೆ ಹೊರಪ್ರಪಂಚ ಬಹು ದೂರವಾಗುತ್ತದೆ . . . ತನ್ನದೇ ಆದ ಲೋಕದಲ್ಲಿ ವಿಹರಿಸುತ್ತಾನೆ. ಆನಂದಭಾಷ್ಪವನ್ನು ಸುರಿಸುತ್ತ ಮೊಮ್ಮಗನ ಭವ್ಯ ಭವಿಷ್ಯದ ಗೋಪುರವನ್ನು ಕಟ್ಟುತ್ತ ವೆಂಕಟನನ್ನು ತಬ್ಬಿ ತಬ್ಬಿ ಮುದ್ದಾಡುತ್ತಾನೆ. ದಿನಗಳನ್ನೇನೋ ಕಳೆಯುತ್ತಾನೆ. ಮಗ ಅವನಿಗೆ ಬೇಡವಾದ. ಆದರೆ ಮೊಮ್ಮಗ ಹೃದಯಕ್ಕೆ ಬಹಳ ಸಮೀಪವಾದ. ಅವನ ಜೀವಜ್ಯೋತಿಯೂ ಅವನಾದ. ಅವನು ಬದುಕಿರುವುದಾದರೂ ಮೊಮ್ಮಗನಿಗೇ ಎಂದು ಆಗಾಗ ಎಲ್ಲರೊಡನೆಯೂ ಹೇಳಿ ಕೊಳ್ಳುತ್ತಿದ್ದ.

ಕೆಲವು ದಿನಗಳ ಹಿಂದೆ ಸಿಳ್ಳನ ಮಗ ಬಿದಿರನ್ನು ಕಡಿಸಿತರಲು ಕೆಲವು ಜನರನ್ನು ಕೂಡಿಕೊಂಡು ಮೂಡುಸೀಮೆಗೆ ಹೋದ. ಅಲ್ಲಿಗೆ ಹೋದರೆ ಬರುವುದು ಎರಡು ಮೂರು ತಿಂಗಳಾಗಬೇಕು. ಹೆಂಡತಿ, ಮಗನನ್ನು ಇಲ್ಲಿಯೇ ಬಿಟ್ಟುಹೋದ. ಅವನ ಕೆಲಸಕ್ಕೆ ಇಲ್ಲಿನ ಬಿದಿರು ಸಾಲುತ್ತಿರಲಿಲ್ಲ. ಅದಕ್ಕಾಗಿಯೇ ಅಷ್ಟು ದೂರ ಹೋಗ ಬೇಕಾಯಿತು. ಹೋಗಿ ಒಂದು ತಿಂಗಳು ಕಳೆದಿತ್ತು.

ಒಂದು ದಿನ ಸಿಳ್ಳ ತನ್ನ ಮೊಮ್ಮಗನನ್ನು ಬಹಳ ಹೊತ್ತಿನ ವರೆಗೂ ಎದುರು ನೋಡಿ ಸೋತ. ಅವನು ಬರಲಿಲ್ಲ. ಏಕೆಂಬುದೇ ಇವನಿಗೆ ವ್ಯಕ್ತವಾಗಲಿಲ್ಲ. ಮನಸ್ಸಿನಲ್ಲಿ ಕಾತರ ಹೆಚ್ಚಿತು. ತನ್ನ ಸೊಸೆ ಬರದಂತೆ ಅಡ್ಡಿಪಡಿಸಿರಬಹುದೆ ಎನಿಸಿತು. ಅದನ್ನು ನಂಬಲಾಗಲಿಲ್ಲ. ಮಗನ ಮನೆಯ ಕಡೆಯೇ ಅವನ ಗಮನವೆಲ್ಲಾ ಇದ್ದಿತು. "ಯಂಕ್ಟ ಯಾಕೆ ಬರನಿಲ್ಲ?" ಎಂಬುದೇ ಅವನ ಯೋಚನೆಯಾಯಿತು. ಯೋಚಿಸಿ ದಷ್ಟೂ ಮನಸ್ಸು ಬಡಿದುಕೊಳ್ಳಲಾರಂಭಿಸಿತು. ಅಂದು ಕೆಲಸ ಸಾಗಲಿಲ್ಲ. ಒಂದೆರಡು ಚಿಬ್ಬಲುಗಳನ್ನಾದರೂ ಹೆಣೆಯಬಹುದಿದ್ದಿತು. ಆದರೆ ಸಾಧ್ಯವಾಗಲಿಲ್ಲ. ತಾನೇ ಅಲ್ಲಿಗೆ ಹೋಗಿ ಬರಬೇಕೆನಿಸಿತು. ಅತ್ತ ಸತ್ತರೂ ಸುಳಿಯುವುದಿಲ್ಲವೆಂದು ಛಲದ ಮಾತಾಡಿದ್ದ ಹಿಂದೆ. ಆದರೆ ಇಂದು ಮೊಮ್ಮಗ ಬರಲಿಲ್ಲ. ಜೀವನದಲ್ಲಿ ಬೇಸರ ಗೊಂಡು ಅದೊಂದು ಬೆಳಕಿಗಾಗಿ ಹಗಲಿರುಳು ಹವಣಿಸುತ್ತಿದ್ದ ದೀಪ ಅವನ ಆತ್ಮ ದೀಪ ಇಂದು ಬರಲಿಲ್ಲ. ಅವನ ಮುದ್ದುಗಿಣಿ ಮೊಗ ತೋರಲಿಲ್ಲ. ಸಿಳ್ಳನಿಗೆ ಶಂಕೆಗಳ ಮೇಲೆ ಶಂಕೆಗಳು ಮೂಡತೊಡಗಿದುವು. ಗಾಬರಿಗೊಂಡು ನೋಡಿಯೇಬಿಡಬೇಕೆಂದು ಮಗನ ಮನೆಯ ಕಡೆ ಬಂದ! ಸೊಸೆಯನ್ನು ಮಾತಾಡಿಸಿದರೆ ನನ್ನ ನಾಲಿಗೆಯನ್ನು ಕಿತ್ತೆಸೆಯುತ್ತೇನೆ ಎಂದು ನಿರ್ಧರಿಸಿದ್ದವನು "ಯಂಕ್ಟ ಎಲ್ಲಾ . . . ರಂಗೀ . . ." ಎಂದು ಒಳಗೆ ಬಂದ. ವೆಂಕಟ ಗೋಣಿಚೀಲವೊಂದರ ಮೇಲೆ ಮೈತುಂಬ ಹೊದ್ದು

ಕೊಂಡು ಚಳಿಯಿಂದ ಗಡಗಡನೆ ನಡುಗುತ್ತಿದ್ದ. ಆದರೂ ತಾತನನ್ನು ಕಣ್ಣುಬಿಟ್ಟು ನೋಡಿದ. . . . "ಆ . . . ಆ . . . ತಾದ . . . ಆ . . ." ಎಂದು ಕ್ಷೀಣಿಸಿದ. ಸಿಳ್ಳ ಅವನ ಬಳಿಯಲ್ಲಿ ಕುಳಿತು ಹಣೆಯನ್ನು ಮುಟ್ಟಿನೋಡಿದ. ಹಸ್ತಕ್ಕೆ ವಿದ್ಯುತ್ತು ತಾಗಿದಂತಾಯಿತು. 'ಹಾ!' ಎಂದು ಗಾಬರಿಗೊಂಡು ಮೇಲೆದ್ದ. ಅಲ್ಲಿ ನಿಲ್ಲಲಿಲ್ಲ. ಬರಬರನೆ ಬಿರುಗಾಳಿಯಂತೆ ಲಿಂಗಯ್ಯನವರ ಮನೆಯ ಕಡೆ ಹೊರಟುಬಿಟ್ಟ. ತನ್ನ ಜೀವನಜ್ಯೋತಿಯನ್ನು ಉಳಿಸುವಂತೆ ಬೇಡಿಕೊಂಡ. ಲಿಂಗಯ್ಯನವರಲ್ಲಿಯೂ ಯಾವ ಹಣವೂ ಇರಲಿಲ್ಲ. ಆದರೆ ಕಂದಾಯಕ್ಕೆಂದು ಕೂಡಿಟ್ಟ ಐವತ್ತು ರೂಪಾಯಿಗಳಲ್ಲಿ ಹತ್ತು ರೂಪಾಯಿಗಳನ್ನು ಹಿಂದೆ ಮುಂದೆ ನೋಡದೆ ಸಿಳ್ಳನಿಗೆ ಕೊಟ್ಟುಬಿಟ್ಟರು. ನಾಳೆ ನಾಡಿದ್ದರಲ್ಲಿ ಯಾರಿಂದಲಾದರೂ ಈಸಿಕೊಡೆಂದರು. ಸಿಳ್ಳ ಒಪ್ಪಿಕೊಂಡ. ಔಷಧಿಗಾಗಿ ಅಷ್ಟನ್ನೂ ವೆಚ್ಚಮಾಡಿದ. ವೆಂಕಟ ತಕ್ಕಮಟ್ಟಿಗೆ ಗುಣಮುಖ ನಾಗುತ್ತಾ ಬಂದ.

'ನಾಳೆ ನಾಡಿದ್ದ'ರಲ್ಲಿ ಲಿಂಗಯ್ಯನವರು ಸಿಳ್ಳನಿದ್ದ ಮರದ ಬಳಿ ಬಂದರು. ಆದರೆ . . . ಹಣವಿರಲಿಲ್ಲ. ಅವರಿವರನ್ನು ಕೇಳುವುದಾಗಿ ಹೇಳಿದ . . . ಕೇಳಿಯೂ ಕೇಳಿದ . . . ಅಂತಹ ದಾನಶೂರರು ಯಾರೂ ಇರಲಿಲ್ಲ. ಆದಷ್ಟು ಶ್ರಮಪಟ್ಟು ತನ್ನ ಹೆಣಿಗೆಯಿಂದಲೇ ಅವರ ಸಾಲವನ್ನು ತೀರಿಸುವುದಾಗಿ ಹೇಳಿದ. ಅದಕ್ಕಾಗಿಯೇ, ಕುಕ್ಕೆಗಳು, ಮೊರಗಳು, ಹೆಡಿಗೆಗಳು, ಪಂಜರಗಳು ಮುಂತಾದುವನ್ನು ಮಾಡಬೇಕೆಂದು ಅಚಲ ನಿರ್ಧಾರಮಾಡಿಬಿಟ್ಟ. ಹೊಟ್ಟೆಬಟ್ಟೆಗಳನ್ನು ಲೆಕ್ಕಿಸದೆ ಹಿಪ್ಪೆಯ ಮರದಡಿ ಇದೊಂದು ವೃದ್ಧಜೀವ ಬತ್ತಿದ ಜಲದ ಕೆಸರಿನಲ್ಲಿ ಹೊರಳುವ ಮೀನಿನಂತೆ ಅತೀವ ಶ್ರಮದಿಂದ ದುಡಿಯುತ್ತಿರುವುದನ್ನು ನೋಡಿ ಆ ಹಿರಿಯ ಮರವೂ ಕೂಡ ಆಗಾಗ ನಿಡುಸುಯ್ಯುತ್ತಿತ್ತು. ಬಹಳ ದಿನಗಳಿಂದಲೂ ಅವನ ದಿನ ಚರಿಯನ್ನರಿತು ಅದು ಮರುಗಿತ್ತು. ಅವನ ದುಡಿಮೆಯಲ್ಲಿ ಕಂಡುಬರುತ್ತಿದ್ದ ಉತ್ಸಾಹ—ಆದರೆ ಅದಕ್ಕೆ ಸರಿದೂಗಲಾಗದ ನಿಶ್ಶಕ್ತಿ ಎಲ್ಲವನ್ನೂ ಹಿಪ್ಪೆಯ ಮರ ಕಣ್ಣಿಟ್ಟು ನೋಡುತ್ತಿತ್ತು. ಹೌದು, ಸಿಳ್ಳ ಸಾಕಷ್ಟು ಕೆಲಸಮಾಡಿದ. ಲಿಂಗಯ್ಯನವರ ಹಣವನ್ನು ಕೊಡುವ ಧೈರ್ಯ ಅವನಿಗುಂಟಾಯಿತು. ಆದರೆ ಕೊಳ್ಳುವವರು ಬೇಗ ದೊರೆಯಲಿಲ್ಲ. ಲಿಂಗಯ್ಯನವರು ಮೇಲಿಂದ ಮೇಲೆ ಬಂದು ಕೇಳುತ್ತಿದ್ದರೂ—ಅವನ ಶ್ರಮಕ್ಕೆ ಹೃದಯ ಕರಗಿ ಹಿಂದಿರುಗುತ್ತಿದ್ದರು. ಆದರೆ ಸಿಳ್ಳ, ಆಡಿದ ಮಾತಿಗೆ ತಪ್ಪಲು ಹಿಂಜರಿದ. ಸಮಯದಲ್ಲಾದ ದಾನಿಯನ್ನು ಮರೆಯಲು ಅವನಿಂದ ಸಾಧ್ಯವಾಗಲಿಲ್ಲ. ಹಣವನ್ನು ಎಂತಾದರೂ ಮಾಡಿ ಆದಷ್ಟು ಕೊಡಬೇಕೆನಿಸಿತವನಿಗೆ . . . ಆದರೆ . . .? ಎಂಬ ಸಮಸ್ಯೆ ಮೂಡುತ್ತಿತ್ತು.

ಕಂದಾಯದ ಗಡು ಮುಗಿಯುತ್ತ ಬಂದದ್ದರಿಂದ ಲಿಂಗಯ್ಯನವರು ಮೊನ್ನೆ ಸ್ವಲ್ಪ ಚುಚ್ಚುಮಾತಿನಿಂದ ಕೇಳಬೇಕಾಯಿತು. ಸಿಳ್ಳನಿಗೆ ದಿಕ್ಕುತೋರಲು—ಕೊನೆಗೆ ತೋರಿದುದು ಒಂದೇ ದಾರಿ—

ಮೂರು ದಿನದಲ್ಲಿ ಮಗ ಊರಿಗೆ ಬರುವನೆಂಬ ವಾರ್ತೆ ಬಂತು. ಅವನನ್ನು ಕೇಳಬಾರದೆನಿಸಿದರೂ ಕೇಳದಿರಲು ಸಾಧ್ಯವಾಗಲಿಲ್ಲ. 'ಅವನ ಮಗನಿಗಾಗಿ ಪಡೆದ ಸಾಲ ಈಗೇನು ಕೊಡಲಿ' ಎಂದು ಸಿಳ್ಳ ತನ್ನ ಮಗನನ್ನೇ ಹಣಕ್ಕಾಗಿ ಕೇಳಲು ನಿರ್ಧರಿಸಿದ. ಮನಸ್ಸಿನಲ್ಲಿಯೇ ಧೈರ್ಯ ತಂದುಕೊಂಡು ನಾಡದ್ದು ಖಂಡಿತ ಕೊಡುವುದಾಗಿ ಲಿಂಗಯ್ಯನವರಿಗೆ ಭರವಸೆಯಿತ್ತ. ಹೇಗೆಂದು ಮಾತ್ರ ಹೇಳಲಿಲ್ಲ.

ಅವನ ಹೇಳಿಕೆಯಂತೆ ಲಿಂಗಯ್ಯನವರು ಇಂದು ಅವನನ್ನು ಕಾಣಲು ಬಂದರು. ಆದರೆ ಮರದಡಿ ಅವನು ಕಾಣಲಿಲ್ಲ. ಗುಡಿಸಿಲಲ್ಲಿರಬಹುದೆಂದು ಕೂಗಿದರು. ಮಾತಾಡಲಿಲ್ಲ. ಮಲಗಿರಬಹುದೆಂದು ಅಲ್ಲಿಗೇ ಹೋಗಿ ನೋಡಿದರು. ಇರಲಿಲ್ಲ. 'ಬರಲಿ' ಎಂದು ಕಲ್ಲೊಂದರ ಮೇಲೆ ಕಾಯತೊಡಗಿದರು.

ಸುಮಾರು ಅರ್ಧ ಗಂಟೆಯ ವರೆಗೂ ಅವರು ಹಾಗೆಯೇ ಕುಳಿತಿದ್ದರು. ಸಿಳ್ಳನ ಮಗನ ಮನೆಯ ಮುಂದೆ ಎರಡು ಮೂರು ಗಾಡಿಗಳ ತುಂಬ ಬಿದಿರು ನಿಂತಿತ್ತು. ಸಿಳ್ಳ ಅಲ್ಲಿಗೆ ಹೋಗಿರಬಹುದೆ—ಎನಿಸಿತವರಿಗೆ. ಮತ್ತೆ ಅವನೇಕೆ ಅಲ್ಲಿ ಹೋದಾನು! ಎಂದು ಬೇರೆ ದಾರಿಗಳನ್ನು ನೋಡತೊಡಗಿದರು. ಆದರೂ ಏನೋ ಕೂಗಾಟದ ಸದ್ದನ್ನು ಕೇಳಿ ಆ ಮನೆಯ ಕಡೆಯೇ ತಿರುಗಿದರು. ಜೋರಾಗಿಯೇ ಕೇಳಿಬಂದಿತು—ಅದೊಂದು ಮಾತು.

"ನನ್ನ ಮಗುಂಗೆ ಏನೂ ಆಗಿಲ್ಲ . . . ನೀ ಬೂರಿಬುಡಬೇಡ . . . ನೀ ದುಡ್ಡೂ ಕೊಟ್ಟಿಲ್ಲ . . . ಏನೂ ಇಲ್ಲ . . . ಹೊಂಡು ಇಲ್ಲಿಂದ . . ." ಲಿಂಗಯ್ಯ ಕುಳಿತಿದ್ದೆಡೆಯಿಂದ ಮೇಲೆದ್ದರು. ಆ ಮಾತಿನ ಅರ್ಥವನ್ನು ಗ್ರಹಿಸಿ ಬೇಗಬೇಗ ಅತ್ತ ಬಂದರು. ಮಾತುಗಳು ತೀಕ್ಷ್ಣವಾಗುತ್ತಿದ್ದುವು.

"ನಾ ಕೊಡಾಕಿಲ್ಲ ಅಂದರೆ ಕೊಡಾಕಿಲ್ಲ . . . ಹೊಂಟೋಗು ಆಚೇ . . ."

"ನಾ ಕೊಡೋವರ್ಗು ಹೋಗಾಕಿಲ್ಲ . . . ಕೊಂದಾಕಿಬುಡು. ನಾನು ಜನದ ಮುಂದೆ ಮಾನ ಕಳ್ಕೊ ಅಂತೀಯ . . . ಸಾಯೋಕಾಲದಲ್ಲಿ ಗೋಳುಯ್ಕೋಬ್ಯಾಡ . . . ನನ್ನ ಕೈಲಿ ದುಡಿಯಾಕಾಗಕಿಲ್ಲ . . . ಕೊಟ್ಟುಬುಡು . . . ನನ್ನ ಕಣ್ಣಾಗೆ ನೀರು ತರಿಸಬ್ಯಾಡ. ಹಾಳಾಗಿ ಹೋಯ್ತೀಯ. . . ."

"ಯಾರು . . . ಹಾಳಾಗಾದು . . . ಯಾರು ? . . . ಯಾರು. . ."

"ಅಯ್ಯೊ ! . . . ನಾರಾಯಣ. . . ."

ಲಿಂಗಯ್ಯನವರು ಓಡಿಬಂದರು. ಉದ್ವೇಗದಿಂದ ಅವರ ಮನಸ್ಸು ಕುದಿಯು ತ್ತಿತ್ತು. ಮುಖ ಕೆಂಪೇರಿತ್ತು. ಅರ್ಧ ಮುಚ್ಚಿದ್ದ ಬಾಗಿಲನ್ನು ಧಡಾರನೆ ಹಿಂದೆ ನೂಕಿದರು. ಪ್ರಳಯರುದ್ರರಂತೆ ಒಳಗೆ ನುಗ್ಗಿಬಿಟ್ಟರು . . . ಹಾ ! ಆ ನೋಟವನ್ನು ಅವರು ನೋಡದಾದರು. . . . ಸಿಳ್ಳ ಕೆಳಗುರುಳಿದ್ದ. ಮಗ ಮೇಲೆ ಕುಳಿತು ಕುತ್ತಿಗೆಗೆ ಕೈಹಾಕಿದ್ದ. ವೆಂಕಟ ಬಿದ್ದು ಬಿದ್ದು ಅಳುತ್ತಿದ್ದ. . . .

ವೃದ್ಧರಾದರೂ ಲಿಂಗಯ್ಯನವರು ಸಿಳ್ಳನ ಮಗನನ್ನು ಎಳೆಯುವ ಸಾಮರ್ಥ್ಯ ಅವರಲ್ಲಿ ಮೂಡಿಬಂತು . . . ಎಳೆದು ಗೋಡೆಗೆ ಅಪ್ಪಳಿಸಿದರು . . . ಹೊರಗಿನಿಂದ ಜನ ಓಡಿಬಂದರು . . . ಮನೆ ರುದ್ರಭೂಮಿಯಾಯಿತು.

ಸಿಳ್ಳನ ಮೂರ್ಛಿತ ಶರೀರವನ್ನು ಹಿಪ್ಪೆಯ ಮರದಡಿಗೆ ಕೊಂಡೊಯ್ದರು . . . ಬಾಯಲ್ಲಿ ರಕ್ತ ಸುರಿದಿತ್ತು . . . ಎಚ್ಚರವಾದಾಗ ಸಿಳ್ಳ "ಯಂಕ್ಟಾ" ಎಂದು ಮಾತ್ರ ಹೇಳಿ ಪಕ್ಕಕ್ಕೆ ಹೊರಳಿದ. ತನ್ನ ಮಗನ 'ವ್ಯಾಘ್ರನಖ'ದಿಂದಲೇ ವೃದ್ಧ ಮೃತ್ಯುವನ್ನಪ್ಪಿದ. . . .

ಜೀ. ಶಂ. ಪರಮಶಿವಯ್ಯ

ಸಂಸ್ಕೃತಿ ಮತ್ತು ಅದರ ಪುನರುದ್ಧಾರ

೩

ಸಂಸ್ಕೃತಿ ಶಬ್ದವನ್ನು ವ್ಯಕ್ತಿಗಳು ಹೊಂದಿರಬೇಕಾದ ಆದರ್ಶಗುಣಗಳನ್ನು ವರ್ಣಿಸುವ ಅರ್ಥದಲ್ಲಿ ಪ್ರಯೋಗಮಾಡುವುದಾದರೆ ಶಬ್ದದ ಅರ್ಥ ಸಂಕುಚಿತವಾಗುತ್ತದೆ. ಸಂಸ್ಕೃತಿ ಶಬ್ದದ ಪದಶಃ ಅರ್ಥ ಚೆನ್ನಾಗಿ ಮಾಡಲ್ಪಟ್ಟಿರುವುದು ಎಂದಾಗುತ್ತದೆ. ವ್ಯಕ್ತಿಗಳಲ್ಲಿ ನಾವು ಅಪೇಕ್ಷಿಸುವ ಗುಣ ನಿರ್ದೇಶನದ ಅರ್ಥ ಬರುವುದಾದರೂ ಪ್ರಯೋಗದಲ್ಲಿ ಇದು ತೊಡರುಗಳನ್ನು ತರುತ್ತದೆ. ಒಂದು ಪಕ್ಷ ಆದರ್ಶ ಗುಣಗಳನ್ನು ನಿರ್ದೇಶಿಸುವುದಕ್ಕೆ ಸಂಸ್ಕೃತಿ ಎಂಬ ಶಬ್ದಪ್ರಯೋಗ ಸರಿ ಎಂದು ಭಾವಿಸುವುದಾದರೂ, ಯಾವುದು ಆದರ್ಶ, ಯಾವುದು ಧರ್ಮಬುದ್ಧಿ ಎಂದು ಹೇಳುವುದು ಕಷ್ಟವಾಗುತ್ತದೆ. ಅಲ್ಲದೆ ಆದರ್ಶ, ಧರ್ಮಬುದ್ಧಿಗಳು ಸಮಾಜವಿಕಾಸದಲ್ಲಿ ಮತ್ತು ಅದೇ ಸಮಾಜದ ಚರಿತ್ರೆಯಲ್ಲಿ ಬದಲಾವಣೆ ಹೊಂದುತ್ತಿರುತ್ತವೆ. ಸಮಾಜ ಸಮಾಜಗಳಿಗೆ ವ್ಯತ್ಯಾಸವೂ ಇದೆ. ಆದ್ದರಿಂದ ಈ ಅರ್ಥದಲ್ಲಿ ಸುಸಂಸ್ಕೃತ ವ್ಯಕ್ತಿಗಳು ಇರುವ ಹಾಗೆ ಸುಸಂಸ್ಕೃತ ಸಮಾಜಗಳು ಇವೆ ಎಂಬ ಅರ್ಥ ಬರುವುದಿಲ್ಲ. ಸುಸಂಸ್ಕೃತನಾದ ವ್ಯಕ್ತಿ ಅಸಂಸ್ಕೃತ ಸಮಾಜದಲ್ಲಿ ಇರುವುದಾಗಿ ಭಾವಿಸುವುದಾದರೂ ಸುಸಂಸ್ಕೃತ ಸಮಾಜವಾವುದು, ಅಸಂಸ್ಕೃತ ಸಮಾಜವಾವುದು ಎಂಬ ತೊಡಕು ಒರುತ್ತದೆ. ಸಮಾಜಗಳನ್ನು ಸುಸಂಸ್ಕೃತ ಸಮಾಜ, ಅಸಂಸ್ಕೃತ ಸಮಾಜ ಎಂದು ವಿಂಗಡಿಸುವುದಕ್ಕೆ ಒರೆಗಲ್ಲು ಇಲ್ಲವಾಗಿ ವಿಂಗಡನೆ ವಿಂಗಡಕಾರನ ಮೇಲೆ ಅವಲಂಬಿಸಿರುತ್ತದೆ. ಎಲ್ಲರೂ ಒಪ್ಪದ ವಿಂಗಡನೆಯಾಗುತ್ತದೆ. ಅವರವರ ಸಂಸ್ಕೃತಿ ಅವರವರಿಗೆ ಹೆಚ್ಚು. ಒಂದು ಸಮಾಜದ ಸುಸಂಸ್ಕೃತ ವ್ಯಕ್ತಿ ಇನ್ನೊಂದು ಸಮಾಜದ ಅಸಂಸ್ಕೃತ ವ್ಯಕ್ತಿಯಾಗಬಹುದು.

ವ್ಯಕ್ತಿಯಲ್ಲಿರಬೇಕಾದ ಗುಣಗಳು, ನಡತೆ, ಜ್ಞಾನ ಇವುಗಳನ್ನು ಸಂಸ್ಕೃತಿ ಎಂದು ಕರೆಯುವುದಾದರೆ ಕೇವಲ ವ್ಯಕ್ತಿಗೆ ಸಂಬಂಧಿಸಿರುವ ಹಾಗೆ ನೀತಿಬೋಧೆಯಾಗಿ ಉಳಿಯುತ್ತದೆ. ಅಂತಹ ವ್ಯಕ್ತಿ ಇರುವ ಸಮಾಜದ ಸಾಮಾಜಿಕ ಆರ್ಥಿಕ ರಾಜಕೀಯ ವ್ಯವಸ್ಥೆ, ಮತ್ತು ಸಂಬಂಧಗಳು, ವ್ಯವಹಾರ, ರೀತಿನೀತಿಗಳು ಜ್ಞಾನ, ಭಾವನೆಗಳು, ಉಪಕರಣಗಳು ವ್ಯಕ್ತಿಗೆ ಸಂಬಂಧಿಸಿ ವ್ಯಕ್ತಿಗಳ ಸುಸಂಸ್ಕೃತ ಲಕ್ಷಣಗಳನ್ನು ನಿರ್ಧಾರಮಾಡುತ್ತದೆ ಎಂಬ ಅರ್ಥ ಬರುವುದಿಲ್ಲ. ವ್ಯಕ್ತಿಗಳ ಗುಣ, ನಡತೆ, ಧರ್ಮಬುದ್ಧಿ, ಜ್ಞಾನಸಮಾಜಕ್ಕೆ ಸಂಬಂಧಿಸಿರುವ ಹಾಗೆ ಪ್ರಾಶಸ್ತ್ಯ

ಹೊಂದಲು ಮಾತ್ರ ಸಾಧ್ಯ. ಸಮಾಜದ ವ್ಯವಸ್ಥೆ, ಸಂಬಂಧಗಳು, ವ್ಯವಹಾರಗಳು, ಪ್ರತಿಕೂಲವಾಗಿದ್ದರೆ ವ್ಯಕ್ತಿಯಲ್ಲಿ ಅಪೇಕ್ಷಿಸುವ ಆದರ್ಶಗುಣಗಳು, ನಡತೆ ಎಲ್ಲವೂ ನಿಷ್ಪ್ರಯೋಜಕವಾಗುತ್ತವೆ. ಆದುದರಿಂದ ಸಂಸ್ಕೃತಿ ಶಬ್ದವನ್ನು ವ್ಯಕ್ತಿಗೆ ಸಂಬಂಧಿಸುವ ಹಾಗೆ ಗುಣನಡತೆಗಳ ನಿರ್ದೇಶನದಲ್ಲಿ ಸಂಕುಚಿತಗೊಳಿಸಿದರೆ ಸಮಾಜದಿಂದ ಬೇರ್ಪಡಿಸಿದ ಒಬ್ಬ ಕಲ್ಪನಾವ್ಯಕ್ತಿಗೆ ಕಲ್ಪನಾಗುಣಗಳನ್ನು ತುಂಬಿದಂತಾಗುತ್ತದೆ. ವ್ಯಕ್ತಿ ಇರುವ ಸಮಾಜದ ಸ್ವರೂಪವನ್ನು ತಿಳಿಯಪಡಿಸುವುದಿಲ್ಲ. ಆದುದರಿಂದ, ಇಲ್ಲಿ ವ್ಯಕ್ತಿಗಳಲ್ಲಿರಬೇಕಾದ ಗುಣನಡತೆಗಳ ನಿರ್ದೇಶನದ ಬಗ್ಗೆ ಸಂಸ್ಕೃತಿ ಶಬ್ದ ಪ್ರಯೋಗ ಅನುಚಿತವಾಗಿ ನೀತಿನಿಯಮಗಳ ಆದರ್ಶವನ್ನು ವಿವರಿಸುವ, ವ್ಯಕ್ತಿಗೆ ಶ್ರೇಯಸ್ಸನ್ನು ತರಬಲ್ಲ (The Good), ಪರಿಪಕ್ವತೆ ತರಬಲ್ಲ (Perfection) ವ್ಯಕ್ತಿ ನೀತಿ ವಿವರಣೆಯಲ್ಲಿ ಮಾತ್ರವಾಗುತ್ತದೆ.

ಹಾಗಾದರೆ ಸಂಸ್ಕೃತಿ ಶಬ್ದದ ಅರ್ಥವೇನು? ಇತಿಹಾಸಜ್ಞರು, ಮಾನವ ಶಾಸ್ತ್ರಜ್ಞರು, ಪ್ರಾಚೀನ ಸಂಶೋಧಕರು ಮೃಗವರ್ಗದಿಂದ ಮಾನವರನ್ನು ಪ್ರತ್ಯೇಕಿಸುವ ಮನುಷ್ಯನಿರ್ಮಿತ ವಿಶೇಷಣಗಳನ್ನು ನಿರ್ದೇಶಿಸುವುದಕ್ಕೆ 'ಕಲ್ಚರ್' (Culture) ಎಂದು ಕರೆದಿದ್ದಾರೆ. ಈ ವಿಶೇಷಣಗಳೆಂದರೆ ಆರ್ಥಿಕ, ಸಾಮಾಜಿಕ, ರಾಜಕೀಯ, ನೈತಿಕವ್ಯವಸ್ಥೆ ಮತ್ತು ಸಂಬಂಧಗಳು, ಭಾವನೆಗಳು, ಉಪಕರಣಗಳು, ಸಾಹಿತ್ಯ, ಉಡಿಗೆತೊಡಿಗೆ, ಕಲೆ, ಮತ್ತು ಇವುಗಳನ್ನು ಪ್ರತಿಬಿಂಬಿಸುವ ಜನಜೀವನ, ಮೃಗವರ್ಗದಿಂದ ಪ್ರತ್ಯೇಕಿಸುವ ವಿಶೇಷಣಗಳನ್ನು ಮಾನವರು ಬೆಳೆಸುವುದರ ಮೂಲಕ ಅಭಿವರ್ಧನೆ, ಕೃಷಿ ಮಾಡುವುದರ ಮೂಲಕ ಮೃಗವರ್ಗದಂತೆ ಪ್ರಕೃತಿಗೆ ಸಂಪೂರ್ಣ ಅಧೀನವಾಗದೆ ಅದರ ಮೇಲೆ ಹತೋಟಿಯನ್ನು ಗಳಿಸಿ ತಾವೂ ಸಹ ಮಾರ್ಪಾಡು ಹೊಂದುವುದು. ಮಾನವಸಮಾಜಗಳು ಇರುವ ಕಡೆಯಲ್ಲೆಲ್ಲಾ ಈ ಚಿತ್ರ ಕಂಡು ಬರುತ್ತದೆ. ಇತಿಹಾಸದ, ಮಾನವಶಾಸ್ತ್ರದ ಪ್ರಾಚೀನ ಸಂಶೋಧನೆಯ ಕೆಲಸವೆಂದರೆ ವಿಶೇಷಣಗಳು ಮತ್ತು ಜನಜೀವನದ ಉದಯ, ಅಭಿವೃದ್ಧಿ ಮತ್ತು ಬೆಳವಣಿಗೆ ಮತ್ತು ಇವು ಮಾನವರ ಮೇಲೆ ಮಾಡುವ ಪರಿಣಾಮಗಳನ್ನು ಪರೀಕ್ಷಿಸುವುದಾಗಿದೆ. ಇದರಿಂದ ಮಾನವಸಮಾಜಗಳ ಸ್ವರೂಪ, ಸಮಾಜಸಮಾಜಗಳಿಗಿರುವ ವ್ಯತ್ಯಾಸ, ಸಾಮ್ಯ, ಮತ್ತು ಮುಂದೋಟ ತಿಳಿಯುತ್ತದೆ.

ಮಾನವಸಮಾಜಗಳು ಮಾಡಿರುವ ಅಭಿವೃದ್ಧಿ, ಕೃಷಿ, ಬೆಳವಣಿಗೆ ಎಂದರೆ ಮಾನವಸಮಾಜಗಳಲ್ಲಿರುವ ವ್ಯಕ್ತಿಗಳು ತಮ್ಮ ಜೀವನದಲ್ಲಿ ಬೆಳೆಸಿರುವ ಅಭಿವರ್ಧನೆ ಮಾಡಿರುವ ವಿಶೇಷಣಗಳು. ಈ ವಿಶೇಷಣಗಳು ಯಾವುದೇ ಆಗಿರಬಹುದು. ಈ ಅಭಿವರ್ಧನೆ (ಸರ್ವತೋಮುಖವಾದ ಬೆಳವಣಿಗೆ) ಸಂಸ್ಕೃತಿಯಾಗಿದೆ; ಇಲ್ಲದಿ

ದ್ದನ್ನು ವೃದ್ಧಿಮಾಡಿ ಚೆನ್ನಾಗಿ (ಮಾನವರ ಅನುಕೂಲಕ್ಕಾಗಿ) ಮಾಡಿಕೊಂಡಿದ್ದಾಗಿದೆ. 'ಕಲ್ಚರ್' ಎಂಬ ಆಂಗ್ಲಶಬ್ದಕ್ಕೆ ಸಮವಾಗುತ್ತದೆ. ಈ ಅರ್ಥದಲ್ಲಿ ಮಾನವಸಮಾಜಗಳ ಸಂಸ್ಕೃತಿ ಎಂದರೆ ಸಮಾಜಗಳು ಮತ್ತು ದೇಶಗಳು ಅಭಿವೃದ್ಧಿ ಮಾಡಿದ್ದು, ಬೆಳಸಿದ್ದು, ಉತ್ಕೃಷ್ಟವಾಗಿ ಮಾಡಿಕೊಂಡಿದ್ದು—ಮಾನವಸಮಾಜಗಳು ಬೆಳಸಿರುವ, ಅಭಿವೃದ್ಧಿಮಾಡಿಕೊಂಡಿರುವ ವ್ಯವಸ್ಥೆಗಳು, ಸಂಬಂಧಗಳು, ಜ್ಞಾನ, ವಿಜ್ಞಾನ, ಭಾವನೆಗಳು, ಸಾಹಿತ್ಯ, ಕಲೆ, ಸಂಗೀತ, ಭಾಷೆ, ಉಪಕರಣಗಳು, ರೀತಿನೀತಿಗಳು ಮತ್ತು ಇವುಗಳನ್ನು ಪ್ರತಿಬಿಂಬಿಸುವ ಜನಜೀವನ, ಇದೇ ಸಂಸ್ಕೃತಿ. ಇಂತಹ ಸಂಸ್ಕೃತಿಯನ್ನು ಮಾನವರು ಪ್ರಪಂಚದ ಯಾವ ಭಾಗದಲ್ಲಿರಲಿ ಆ ಮಾನವ ಸಮಾಜಗಳಲ್ಲಿ ಕಾಣಬಹುದು.

ಈಗ ಸಂಸ್ಕೃತಿ ಶಬ್ದಪ್ರಯೋಗ ಕೇವಲ ಕಲ್ಪನಾವ್ಯಕ್ತಿಗಳ ಆದರ್ಶಗುಣ ನಿರ್ದೇಶನವಾಗದೆ ಸಮಾಜದಲ್ಲಿರುವ, ಸಮಾಜವ್ಯಕ್ತಿಗಳಾಗಿ ಹೊಂದಿರುವ ಸಂಸ್ಕೃತಿ ಸೂಚಕವಾಗುತ್ತದೆ. ವ್ಯಕ್ತಿಗೂ ಸಮಾಜಕ್ಕೂ ಇರುವ ಬಾಂಧವ್ಯ ಹೊರಬೀಳುತ್ತದೆ. ಸಮಾಜದ, ಸಮಾಜದಲ್ಲಿರುವ ವ್ಯಕ್ತಿಗಳ ಮತ್ತು ವಿಶೇಷಣಗಳನ್ನು ಹೊಂದಿ ಪ್ರತಿಬಿಂಬಿಸುವ ಜನಜೀವನಗಳ ಸ್ವರೂಪವನ್ನು ತಿಳಿಯಲು ಸಾಧ್ಯವಾಗುತ್ತದೆ.

ಮಾನವನಿಗೆ ವ್ಯವಸ್ಥೆಗಳು, ಸಂಬಂಧಗಳು, ಜ್ಞಾನ, ಉಪಕರಣಗಳು, ಸಾಹಿತ್ಯ, ಭಾಷೆ ಇವುಗಳು ಅವಶ್ಯಕವೇ? ಇವುಗಳನ್ನು ಮಾನವರು ಅಭಿವರ್ಧನೆ ಮಾಡದಿದ್ದರೆ ಬದುಕಲು ದುಸ್ಸಾಧ್ಯವಾಗುತ್ತಿತ್ತೇ? ಮಾನವರು ಇವುಗಳನ್ನು ಅಭಿವೃದ್ಧಿ ಮಾಡಿಕೊಳ್ಳದೆ ಬದುಕಿದ್ದರೂ ಬದುಕಿರಬಹುದಾಗಿತ್ತು, ಆದರೆ ಮಾನವನ ಬದುಕು ಮೃಗವರ್ಗದ ಬದುಕಿಗಿಂತ ಬೇರೆಯಾಗುತ್ತಿರಲಿಲ್ಲ. ಮಾನವನಿಗೂ ಮೃಗಕ್ಕೂ ಇರುವ ವ್ಯತ್ಯಾಸ ಇಲ್ಲಿ. ಈ ವ್ಯತ್ಯಾಸವೇ ಮಾನವನ ವೈಶಿಷ್ಟ್ಯ, ಇದರ ವಿಕಾಸವೇ ಮಾನವಸಂಸ್ಕೃತಿಯ ಬೆಳವಣಿಗೆ. ಸಂಸ್ಕೃತಿಯನ್ನು ಬೆಳಸದಿದ್ದರೆ ಮಾನವನು ಪ್ರಕೃತಿಯ ಕ್ರೂರದವಡೆಗಳಿಗೆ ಸಿಕ್ಕಿ ಎಂದೋ ಅನೇಕ ಮೃಗವರ್ಗಗಳು ನಾಶ ಹೊಂದಿದಹಾಗೆ ನಾಶಹೊಂದುತ್ತಿದ್ದನೋ ಏನೋ. ಮಾನವನು ತನ್ನ ಜೀವ ಸಂರಕ್ಷಣೆಯನ್ನು ಮೊದಲು ಮಾಡಿಕೊಳ್ಳಬೇಕಾಗಿತ್ತು, ಈಗಲೂ ಸಹ ಇದು ತಪ್ಪಿದ್ದಲ್ಲ. ಆದರೆ ಪ್ರಕೃತಿಗೆ ಹೊಂದಿಕೊಳ್ಳುವುದರ ಮೂಲಕ ಜೀವಸಂರಕ್ಷಣೆ ಮಾಡಿಕೊಳ್ಳದೆ, ಪ್ರಕೃತಿಯ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸುವುದರ ಮೂಲಕ ತನ್ನ ಬುದ್ಧಿವಿಶೇಷಣದಿಂದ ಉಪಕರಣಗಳನ್ನು ನಿರ್ಮಿಸುವುದರ ಮೂಲಕ, ಪ್ರಕೃತಿಜನ್ಯ ನ್ಯೂನತೆಗಳನ್ನು ಬಗೆಹರಿಸಿಕೊಳ್ಳುವುದರ ಮೂಲಕ ಮೃಗವರ್ಗದಿಂದ ಬೇರ್ಪಟ್ಟು ತನ್ನ ಇತಿಹಾಸವನ್ನು ಆರಂಭಿಸಿದನು.

ಮಾನವಸಂಸ್ಕೃತಿಯ ಪ್ರಾರಂಭವನ್ನು ನೋಡಿದೆವು, ಮಾನವರು ಇರುವ ಕಡೆಯಲ್ಲೆಲ್ಲಾ ಒಂದಲ್ಲ ಒಂದು ಬಗೆಯಾದ ಸಂಸ್ಕೃತಿ ಇದೆ ಎಂಬ ಅಭಿಪ್ರಾಯಕ್ಕೆ ಬಂದೆವು. ಆದರೆ ಈ ಮಾನವರು ಹಲವು ಕಡೆಯಲ್ಲಿ ಬೆಳಸಿದ ಸಂಸ್ಕೃತಿ ಒಂದೇ ತೆರನಾಗಿರದೆ, ವೈವಿಧ್ಯತೆಯಿಂದ ಕೂಡಿದೆ. ಚೀಣೀಯರ ಸಂಸ್ಕೃತಿ ಲಕ್ಷಣಗಳು ಇರುವ ಹಾಗೆ ಆಸ್ಟ್ರೇಲಿಯಾ ಕಾಡುಜನರದು ಇಲ್ಲ, ಇವರಿಬ್ಬರಿಂದಲೂ ಬೇರೆ ರೂಪದಲ್ಲಿ ಆಂಗ್ಲರಲ್ಲಿ ಕಂಡುಬರುತ್ತದೆ. ಸಂಸ್ಕೃತಿಗಳು ಹೀಗೆ ವೈವಿಧ್ಯತೆಯಿಂದ ಕೂಡಿದ್ದರೆ ಅವು ಹಾಗೆ ವ್ಯತ್ಯಾಸಹೊಂದಲು ಕಾರಣಗಳಾವುವು ? ಸಮಾನಲಕ್ಷಣ ಮತ್ತು ಸ್ವರೂಪವನ್ನು ಸ್ವಲ್ಪವೂ ಒಳಗೊಂಡಿರದ ರೀತಿಯಲ್ಲಿ ಈ ಮಾನವ ಸಂಸ್ಕೃತಿಗಳಲ್ಲಿ ವ್ಯತ್ಯಾಸಗಳಿವೆಯೇ ? ಈ ಅಂಶಗಳನ್ನೂ ಪರಿಶೀಲಿಸಬೇಕಾಗುತ್ತದೆ.

ವೈವಿಧ್ಯತೆಯಿಂದ ಕೂಡಿರುವ ಮಾನವಸಂಸ್ಕೃತಿಗಳನ್ನು ದೀರ್ಘವಾಗಿ ಪರಿಶೀಲಿಸುವುದಾದರೆ ವ್ಯತ್ಯಾಸಗಳಿಗಿಂತ ಸಮಾನ ಅಂಶಗಳೇ ಹೆಚ್ಚಾಗಿ ಕಾಣುತ್ತವೆ. ಪ್ರಕೃತಿ, ಆವರಣ, ಹಿಂದಿನಿಂದ ಬಂದಿರುವ ಸಂಪ್ರದಾಯ, ಹೊರಗಿನ ಸಂಪರ್ಕ, ಒಂದು ಸಮಾಜದಲ್ಲಿ ನಡೆದ ಘಟನೆಗಳು, ಒಂದು ಸಮಾಜದಲ್ಲಿ ಕೆಲವು ಅಂಶಗಳು ಪ್ರಾಧಾನ್ಯತೆ ಹೊಂದಿ ಅವುಗಳು ಅತ್ಯಧಿಕವಾಗಿ ಅಭಿವೃದ್ಧಿಹೊಂದಲು ಸಮಯ ಸನ್ನಿವೇಶ, ಇತ್ಯಾದಿಗಳು ಸಾಮಾನ್ಯ ಅಂಶಗಳನ್ನು ಮಾರ್ಪಾಡುಮಾಡಿರುವುದರಿಂದ ಸಮಾಜಸಂಸ್ಕೃತಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತಿವೆ.

ಆರ್ಥಿಕ, ಸಾಮಾಜಿಕ, ರಾಜಕೀಯ, ನೈತಿಕ ವ್ಯವಸ್ಥೆಗಳಲ್ಲಿ ಸಂಬಂಧಗಳಲ್ಲಿ, ಉಪಕರಣಗಳಲ್ಲಿ, ಭಾವನೆಗಳಲ್ಲಿ ಮತ್ತು ಇತರ ವಿಷಯಗಳಲ್ಲಿ ಕಾಣಬರುವ ಸಮಾನ ಅಂಶಗಳು ಯಾವುವು ? ಆರ್ಥಿಕಕ್ಷೇತ್ರವನ್ನು ತೆಗೆದುಕೊಂಡರೆ ವಿವಿಧ ಸಮಾಜದ ಜನರು ಅವರು ತಮ್ಮ ಆಹಾರವನ್ನು ವೃದ್ಧಿಮಾಡಲು ಉಪಯೋಗಿಸಿದ ಉಪಕರಣಗಳು, ಅವನ್ನು ಉಪಯೋಗಿಸುತ್ತಿರುವ ರೀತಿ, ಭೂಮಿಯ ಸ್ವಾಮ್ಯವನ್ನು ಹೊಂದಿರುವ ರೀತಿ, ಬೆಳೆದ ಆಹಾರವನ್ನು ವಿಭಜನೆಮಾಡಿಕೊಳ್ಳುವ ರೀತಿ, ಈ ಉತ್ಪಾದನಾ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ರಚಿಸಿಕೊಂಡಿರುವ ಕಾನೂನುಗಳು, ವಿಧಿಗಳು, ಮತ್ತು ಸಂಪ್ರದಾಯಗಳು—ಉತ್ಪಾದನಾಕ್ರಮ (The Mode of Production) ಇವುಗಳನ್ನು ಪರೀಕ್ಷಿಸಿದರೆ ವಿವಿಧ ಸಮಾಜದ ಜನರು ವಿವಿಧಮಟ್ಟದಲ್ಲಿ ಒಂದೇ ಬಗೆಯ, ರೀತಿಯ ಉತ್ಪಾದನಾಕ್ರಮವನ್ನು ಅನುಸರಿಸುತ್ತಿರುವುದು ಕಂಡುಬಂದರೆ ವಿವಿಧ ಸಮಾಜಗಳಿಗೆ ಸಮಾನತೆ ಬರುತ್ತದೆ. ಕ್ಷೇತ್ರಗಳನ್ನು ತೆಗೆದುಕೊಂಡರೆ ಸಾಮಾಜಿಕ ಸಂಬಂಧಗಳು, ವ್ಯಕ್ತಿವ್ಯಕ್ತಿಗೆ, ವರ್ಗವರ್ಗಕ್ಕೆ ಇರುವ ಸಂಬಂಧ, ಅವರ ವ್ಯವಹಾರ,

ಆಚಾರ, ರಾಜಕೀಯವಾಗಿ ಆಡಳಿತವ್ಯವಸ್ಥೆ, ಅಧಿಕಾರವರ್ಗ, ರಾಜಕೀಯ ಸಮಸ್ಯೆಗಳು, ಆಳುವವರಿಗೂ ಆಳಿಸಿಕೊಳ್ಳುವವರಿಗೂ ಇರುವ ಸಂಬಂಧ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಬಾಧ್ಯತೆಗಳು ವಿವಿಧ ಸಮಾಜಗಳ ಸಂಸ್ಕೃತಿಗಳಲ್ಲಿ ಒಂದೇ ತೆರನಾಗಿದ್ದರೆ ಸಮಾನತೆ ಬರುತ್ತದೆ. ವಿವಿಧ ಸಮಾಜಗಳ ಭಾವನಾಕ್ಷೇತ್ರದಲ್ಲಿ ಅವರು ಪ್ರಕೃತಿಯ ಬಗ್ಗೆ ಹೊಂದಿದ್ದ ಜ್ಞಾನ, ಅದರ ಚಲನವಲನೆಗಳನ್ನು ಅವರು ವಿವರಿಸುತ್ತಿದ್ದ ರೀತಿ, ಪ್ರಕೃತಿಗೂ ಮಾನವನಿಗೂ ಇರುವ ಸಂಬಂಧ, ಅವರ ಸಾಹಿತ್ಯ, ನೃತ್ಯ, ಶಿಲ್ಪ ವ್ಯಕ್ತಪಡಿಸುವ ಭಾವಗಳು, ಸುಖದುಃಖ, ಆಸೆ ಆಕಾಂಕ್ಷೆಗಳು, ಒಂದೇ ತೆರನಾಗಿದ್ದರೆ ಸಮಾನತೆ ಬರುತ್ತದೆ.

ಚೀಣೀ ಸಮಾಜವನ್ನು ಮತ್ತು ಆಂಗ್ಲ ಸಮಾಜವನ್ನು ೧೬ ನೇ ಶತಮಾನದ ವರೆಗೆ[1] ಹೋಲಿಸುವುದಾದರೆ ಈ ಎರಡು ಸಮಾಜಗಳಲ್ಲಿ ಸಮಾನತೆಯ ಲಕ್ಷಣಗಳು ಅವರ ಆರ್ಥಿಕ ಸಾಮಾಜಿಕ ರಾಜಕೀಯ ಮತ್ತು ನೈತಿಕ ವ್ಯವಸ್ಥೆಗಳಲ್ಲಿ ಮತ್ತು ಸಂಬಂಧಗಳಲ್ಲಿ ಬಹುಮಟ್ಟಿಗೆ ಕಂಡುಬರುತ್ತದೆ. ಅವರ ಆರ್ಥಿಕಕ್ಷೇತ್ರವನ್ನು ತೆಗೆದುಕೊಂಡರೆ ವ್ಯವಸಾಯವೇ ಮುಖ್ಯವೃತ್ತಿಯಾಗಿ ಸ್ವಾಮ್ಯ, ಉಪಕರಣಗಳು, ಸ್ವಾಮ್ಯವನ್ನು ಹೊಂದಿ ಬೇಸಾಯ ಮಾಡುವವರು, ಸ್ವಾಮ್ಯವಿಲ್ಲದವರು, ಗುತ್ತಿಗೆಗೆ ಮಾಡುವವರು, ಕೂಲಿಮಾಡುವವರು, ಜೀತ (ದಾಸ್ಯ)ಮಾಡುವ ಆರ್ಥಿಕ ಸಂಬಂಧಗಳನ್ನು ಒಳಗೊಂಡ ಒಂದೇ ಬಗೆಯ ಉತ್ಪಾದನಾಕ್ರಮದ ಆರ್ಥಿಕ ವ್ಯವಸ್ಥೆ ಕಾಣುತ್ತದೆ. ಈ ವ್ಯವಸ್ಥೆಗೆ ಸೇರಿದ ಹಾಗೆ ಬೆಳದದ್ದನ್ನು ಅದಲುಬದಲು ಮಾಡಿಕೊಳ್ಳುವ ರೀತಿ, ಅಥವಾ ಅದನ್ನು ಮಾಡುವ ಪ್ರತ್ಯೇಕ ವ್ಯಾಪಾರವರ್ಗ ಕಂಡುಬರುತ್ತದೆ. ಈ ವ್ಯವಸ್ಥೆ ಮತ್ತು ಸಂಬಂಧಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಭೂಮಿಯ ಕಾನೂನು, ಆರ್ಥಿಕ ಸಂಬಂಧಗಳ ಕಾನೂನು, ವೃತ್ತಿ ವಿಭಜನೆಯ ಕಾನೂನುಗಳು, ಪದ್ಧತಿಗಳು, ಇವುಗಳಲ್ಲಿಯೂ ಸಾಮ್ಯ ಕಂಡುಬರುತ್ತದೆ.

ಸಾಮಾಜಿಕ, ರಾಜಕೀಯ ಮತ್ತು ನೈತಿಕಕ್ಷೇತ್ರಗಳನ್ನು ಪರಿಶೀಲಿಸುವುದಾದರೆ ಇಲ್ಲಿಯೂ ಸಾಮ್ಯದ ಲಕ್ಷಣಗಳು ಕಂಡುಬರುತ್ತವೆ. ಎರಡು ಸಮಾಜದಲ್ಲೂ ರಾಜ್ಯವ್ಯವಸ್ಥೆಯಲ್ಲಿ ರಾಜನ ಬಗ್ಗೆ ಇದ್ದ ಭಾವನೆಗಳು, ರಾಜನಿಗೂ ಪ್ರಜೆಗಳಿಗೂ ಇದ್ದ ಸಂಬಂಧ, ರಾಜನ ಅಧಿಕಾರವ್ಯವಸ್ಥೆಯ ಅಂಗಗಳಾದ ದರ್ಬಾರು, ಕಪ್ಪಕಾಣಿಕೆಗಳು, ಸಾಮಂತರು, ಮಂತ್ರಿ, ವಂದಿಮಾಗಧರು, ರಾಜಪುರೋಹಿತ; ಇತ್ಯಾದಿಗಳು ಕಂಡುಬರುತ್ತವೆ. ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಗಳಲ್ಲಿ ಜನರಲ್ಲಿ, ಸಾಮಂತ

[1] ಈ ಎರಡು ಸಮಾಜಗಳ ಅನಾಗರಿಕ ಕಾಲದಲ್ಲಿ (Primitive Period) ಸಾಮ್ಯಗಳು ಬೇರೊಂದು ರೂಪದಲ್ಲಿ ತೋರಿವೆ.

ರಾದವರಲ್ಲಿ, ರೈತರಲ್ಲಿ, ವ್ಯಾಪಾರಿಗಳಲ್ಲಿ, ಪುರೋಹಿತರಲ್ಲಿ, ಇತ್ಯಾದಿ ಜನರಿಂದ ಅಪೇಕ್ಷಿಸುವ ಗುಣ, ನಡತೆ, ಆದರ್ಶ ಇವುಗಳಲ್ಲಿ ಸಾಮ್ಯ ಕಂಡುಬರುತ್ತದೆ.

ಈ ಎರಡು ಸಮಾಜಗಳ ಭಾವನೆಗಳನ್ನು ವೀಕ್ಷಿಸುವುದಾದರೆ ಈ ಸಮಾಜಗಳ ಜನರು ಪ್ರಕೃತಿಯ ಬಗ್ಗೆ ಹೊಂದಿದ್ದ ಜ್ಞಾನ, ಅದರ ಚಲನವಲನಗಳ ಬಗ್ಗೆ ಕೊಡುತ್ತಿದ್ದ ವಿವರಗಳು, ಅವರ ಸಾಹಿತ್ಯ, ನೃತ್ಯ ಇವುಗಳು ವ್ಯಕ್ತಪಡಿಸುತ್ತಿದ್ದ ಆಸೆ ಆಕಾಂಕ್ಷೆಗಳು ಒಂದೇ ಸ್ವರೂಪವನ್ನು ವ್ಯಕ್ತಪಡಿಸುವುದು ಕಾಣಿಸುತ್ತದೆ.

ಚೀಣೀ ಸಮಾಜಕ್ಕೂ ಆಂಗ್ಲ ಸಮಾಜಕ್ಕೂ ಸಾಮ್ಯಲಕ್ಷಣಗಳಿರುವ ಅಂಶಗಳು ಕಂಡುಬಂದರೆ, ಇದೇ ತೆರನಾದ ಸಾಮ್ಯಲಕ್ಷಣಗಳು ಭಾರತ, ಜರ್ಮನ್, ಫ್ರೆಂಚ್ ಸಮಾಜಗಳಲ್ಲೂ ಕಂಡುಬರುತ್ತವೆ.

ವಿವಿಧ ದೇಶಗಳ ಮತ್ತು ಸಮಾಜಗಳ ಚರಿತ್ರೆಯಲ್ಲಿ ಮೇಲ್ಕಂಡ ಸಾದೃಶ್ಯ ಲಕ್ಷಣಗಳು ಕಂಡುಬಂದರೆ, ವೈದೃಶ್ಯ ಲಕ್ಷಣಗಳನ್ನು ವಿವಿಧ ದೇಶ ಮತ್ತು ಸಮಾಜಗಳಲ್ಲಿ ಎರಡು ರೂಪದಲ್ಲಿ ಕಾಣಬಹುದು. ಒಂದು: ಆಸ್ಟ್ರೇಲಿಯಾ ದೇಶದ ಕಾಡುಕುರುಬರ ಸಮಾಜವನ್ನು ಅಥವಾ ಅಸ್ಸಾಮಿನ ಬೆಟ್ಟಗುಡ್ಡದ ಸಮಾಜಗಳನ್ನು ವೀಕ್ಷಿಸುವುದಾದರೆ ಈ ಸಮಾಜಗಳು ಆಂಗ್ಲ ಮತ್ತು ಚೀಣೀ ಸಮಾಜಗಳ ಸಂಸ್ಕೃತಿ ಮಟ್ಟವನ್ನು ಹೊಂದದೆ ಈಗಲೂ ಬಹು ಶತಮಾನಗಳ ಹಿಂದಿನ ಲಕ್ಷಣಗಳನ್ನು ಪ್ರದರ್ಶಿಸುತ್ತಿರುವ ಸಮಾಜವಾಗಿವೆ. ಎರಡು: ಆಂಗ್ಲ ಮತ್ತು ಚೀಣೀ ಸಮಾಜಗಳು ೧೬ ನೇ ಶತಮಾನದ ವರೆಗೆ ಒಂದೇ ಸಾಮ್ಯಲಕ್ಷಣಗಳನ್ನು ಹೊಂದಿರುವ ಸಮಾಜಗಳಂತೆ ಇದ್ದರೆ, ೧೬ ನೇ ಶತಮಾನದ ನಂತರ ಆಂಗ್ಲ ಸಮಾಜವು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಮತ್ತು ಸಂಬಂಧಗಳಲ್ಲಿ, ಜ್ಞಾನದಲ್ಲಿ, ಉಪಕರಣಗಳಲ್ಲಿ, ಇತ್ಯಾದಿಗಳಲ್ಲಿ ಬೇರೊಂದುವಿಧವಾದ ಲಕ್ಷಣಗಳನ್ನು ಪ್ರದರ್ಶಿಸುತ್ತಾ ಬೇರೆಯಾಗುವುದು ಗೋಚರವಾಗುತ್ತದೆ. ಆದರೆ ಚೀಣೀ ಸಮಾಜ ಮಾತ್ರ ೧೬ ನೇ ಶತಮಾನದ ಸಂಸ್ಕೃತಿ ಲಕ್ಷಣಗಳನ್ನೇ ಪ್ರದರ್ಶಿಸುತ್ತಿದೆ[1] ಆಂಗ್ಲ ಸಮಾಜದ ಚರಿತ್ರೆಯನ್ನು ೧೬ ನೇ ಶತಮಾನಾನಂತರ ನೋಡುವುದಾದರೆ ಉತ್ಪಾದನಾಕ್ರಮದಲ್ಲಿ ಮಾರ್ಪಾಡು, ಬಂಡವಾಳ ಆರ್ಥಿಕವ್ಯವಸ್ಥೆ ಮತ್ತು ಸಂಬಂಧಗಳು, ಹೊಸಹೊಸ ಉತ್ಪಾದನಾಸಾಧನಗಳು, ಹೊಸ ಕಾನೂನುಗಳು, ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಮಾರ್ಪಾಡು ನಿರಂಕುಶ ರಾಜಪ್ರಭುತ್ವ ಹೋಗಿ ಸಾಂಕುಶ ರಾಜಪ್ರಭುತ್ವ,

---

[1] ಈ ಲಕ್ಷಣಗಳು ಈಗ ಮಹತ್ತರವಾದ ಮಾರ್ಪಾಡುಗಳನ್ನು ಹೊಂದುತ್ತಲಿವೆ. ೧೯ ನೇ ಶತಮಾನದಲ್ಲಿ ಬಂಡವಾಳ ಸಂಸ್ಕೃತಿ ಕಾಲಿಟ್ಟಮೇಲೆ ಅಲ್ಪಸ್ವಲ್ಪ ಹೊಸ ವಿಧದ ಮಾರ್ಪಾಡುಗಳು ಪ್ರಾರಂಭವಾಯಿತು.

ಪ್ರಜಾಪ್ರತಿನಿಧಿಗಳು, ಚುನಾವಣೆಗಳು, ಇತ್ಯಾದಿ ಬರುವುವು. ಜನಜೀವನದಲ್ಲಿ ರೀತಿನೀತಿಗಳಲ್ಲಿ, ಆಚಾರವ್ಯವಹಾರಗಳಲ್ಲಿ, ಉಡುಗೆತೊಡಿಗೆಗಳಲ್ಲಿ, ಭಾವನೆಗಳಲ್ಲಿ, ಅತಿಯಾದ ಮಾರ್ಪಾಡುಗಳು ಕಂಡುಬರುತ್ತವೆ. ಒಂದು ಹೊಸ ಮಟ್ಟಕ್ಕೆ ಪ್ರವೇಶಿಸಿದೆ. ಈ ತೆರನಾದ ಮಾರ್ಪಾಡುಗಳು ಆಂಗ್ಲಸಮಾಜದಲ್ಲಿ ಮಾತ್ರ ಉಂಟಾಗದೆ ೧೮ ನೇ ಶತಮಾನದಿಂದ ಫ್ರೆಂಚ್ ಸಮಾಜದಲ್ಲಿ, ೧೯ ನೇ ಶತಮಾನದಿಂದ ಜರ್ಮನ್ ಸಮಾಜದಲ್ಲಿ, ಇಟಾಲಿಯನ್ ಸಮಾಜದಲ್ಲಿ, ಜಾಪನೀಸ್ ಸಮಾಜದಲ್ಲಿ, ರಷ್ಯನ್ ಸಮಾಜದಲ್ಲಿ, ಕಂಡುಬರುತ್ತವೆ.

ಈಗ ಸಾಮ್ಯಲಕ್ಷಣಗಳನ್ನು ಪ್ರದರ್ಶಿಸುವ ಸಮಾಜಗಳನ್ನು ಸಮತಲವಾಗಿ (Horizontally) ಒಂದು ಸಮಾಜದ ವಿಕಾಸದಲ್ಲಿ ಅಸಾಮ್ಯ ಅವಸ್ಥೆಗಳನ್ನು ಲಂಬವಾಗಿ (Vertically) ಚಿತ್ರಿಸಿದರೆ ಸಮಾಜಗಳ ಸಂಸ್ಕೃತಿ ಮಟ್ಟ ವ್ಯಕ್ತವಾಗುತ್ತದೆ (Cultural Level).

	೧	೨	೩	೪	೫	೬
	ಅಸ್ಸಾಮಿನ ಗುಡ್ಡಗಾಡಿನ ಜನರ ಮತ್ತು ನೀಗ್ರೋ ಜನರ ಸಮಾಜ	ಆಂಗ್ಲ	ಫ್ರಾನ್ಸ್	ಚೀಣೀ	ರಷ್ಯ	ಭಾರತ
ಅನಾಗರಿಕ	P/d	P/d	P/d	P/d	P/d	P/d
ಪ್ರಾಚೀನ	A/d	A/d	A/d	A/d	A/d	A/d
ಊಳಿಗಮಾನ್ಯ	A/d	F/d	$^{a}F/d$	$^{a}F/d$	$^{a}F/d$	$^{a}F/d$
ಶತಮಾನ : ೧೬						
,, ೧೭	A/d	fC/d	$^{a}F/d$	$^{a}F/d$	$^{a}F/d$	$^{a}F/d$
,, ೧೮	A/d	C/d	fC/d	$_{a}F/d$	$^{a}F/d$	$^{a}F/d$
,, ೧೯	A/d	C/d	C/d	$^{ac}F/d$	$^{c}F/d$	$^{c}F/d$
,, ೨೦	A/d	C/d	C/d	S/d	S/d	fC/d

ವಿವರಣೆ :—

P/d = ಅನಾಗರಿಕ ಕಾಲದಲ್ಲಿ ಸಾಮ್ಯಲಕ್ಷಣಗಳು ಕಂಡುಬರುವ ದೇಶಗಳು. (d) = ಪ್ರತಿಯೊಂದು ದೇಶ ಅಥವ ಸಮಾಜದ ಮೇಲೆ ಪ್ರಕೃತಿ, ಆವರಣ, ಸಂಪರ್ಕ, ಹಿಂದಿನ ಪದ್ಧತಿಗಳು, ಸಮಾಜದಲ್ಲಿ ನಡೆದ ಘಟನೆಗಳು, ಒಂದು ಅಂಶ ಪ್ರಾಧಾ

ನ್ಯತೆ ಹೊಂದಿ ಅಭಿವೃದ್ಧಿಹೊಂದಿದ ಅಂಶಗಳು ಸಾಮ್ಯಲಕ್ಷಣಗಳನ್ನು ಮಾರ್ಪಾಡು ಮಾಡಿರುವುದು.

A/d = ಪ್ರಾಚೀನಕಾಲದಲ್ಲಿ ಸಾಮ್ಯಲಕ್ಷಣಗಳು ಕಂಡುಬರುವ ದೇಶಗಳು.

A/d = ಊಳಿಗ ಮಾನ್ಯದ ಕಾಲದಲ್ಲಿ ಸಾಮ್ಯಲಕ್ಷಣ ಕಂಡುಬರುವ ದೇಶಗಳು.

C/d = ಬಂಡವಾಳವ್ಯವಸ್ಥೆಯ ಕಾಲದಲ್ಲಿ ಸಾಮ್ಯಲಕ್ಷಣ ಕಂಡುಬರುವ ದೇಶಗಳು.

S/d = ಸಮಾಜವಾದೀ ವ್ಯವಸ್ಥೆಯ ಕಾಲದಲ್ಲಿ ಸಾಮ್ಯಲಕ್ಷಣ ಕಂಡುಬರುವ ದೇಶಗಳು.

a = ಪ್ರಾಚೀನ ಲಕ್ಷಣಗಳು ಪೂರ್ಣ ಮರೆಯಾಗದೆ ಹೊಸಮಟ್ಟದಲ್ಲಿ ಉಳಿದಿರುವುದು.

f = ಊಳಿಗ ಮಾನ್ಯದ ಲಕ್ಷಣಗಳು ಉಳಿದಿರುವುದು.

c = ಬಂಡವಾಳವ್ಯವಸ್ಥೆಯ ಲಕ್ಷಣಗಳ ಪ್ರವೇಶ.

೧: A/d ಲಕ್ಷಣಗಳು ೨೦ ನೇ ಶತಮಾನದ ವರೆಗೂ ಕಂಡುಬರುತ್ತಿರುವುದು.

೨: A/d ಲಕ್ಷಣಗಳು ಮರೆಯಾಗಿ F/d ಲಕ್ಷಣಗಳು ಬಂದು, ಅವೂ ಮರೆಯಾಗಿ C/d ಲಕ್ಷಣಗಳು. ೧೬ ನೇ ಶತಮಾನದ ನಂತರ ಕಂಡುಬರುತ್ತದೆ.

೩: A/d ಲಕ್ಷಣಗಳು ಮರೆಯಾಗಿ F/d ಲಕ್ಷಣಗಳು ೧೭ ನೇ ಶತಮಾನದ ವರೆಗೂ ಇದ್ದು C/d ಲಕ್ಷಣಗಳು ಬರುತ್ತದೆ-

೪: A/d ಲಕ್ಷಣಗಳು ಪೂರ್ಣವಾಗಿ ಹೋಗದೆ F/d ಲಕ್ಷಣಗಳ ಜೊತೆಯಲ್ಲಿ ೧೯ ನೇ ಶತಮಾನದ ವರೆಗೂ ಇರುತ್ತವೆ. ೧೯ ನೇ ಶತಮಾನದಲ್ಲಿ ಬಂಡವಾಳ ವ್ಯವಸ್ಥೆ ಬರುತ್ತದೆ. ೨೦ ನೇ ಶತಮಾನದಲ್ಲಿ ಸಮಾಜವಾದಿ S/d ಲಕ್ಷಣಗಳು ಬಂದಿವೆ.

ಮುಖ್ಯವಾಗಿ ೨ ರಲ್ಲಿ ಲಕ್ಷಣಗಳು ಬೇಗ ಮರೆಯಾಗಿ ಸಮಾಜದಲ್ಲಿ ವಿಕಾಸ ಕಂಡುಬಂದರೆ, ೪ ರಲ್ಲಿ ೧೯ ನೇ ಶತಮಾನದ ವರೆಗೂ ಮಾರ್ಪಾಡುಗಳೇ ಇರದೆ ಲಕ್ಷಣಗಳು ಒಂದೇ ಮಟ್ಟದಲ್ಲಿ ನಿಂತಿವೆ; ೧ ರಲ್ಲಿ ಪ್ರಾಚೀನಕಾಲದ ಲಕ್ಷಣಗಳು ೨೦ ನೇ ಶತಮಾನದ ವರೆಗೂ ಇವೆ.

ಸಂಸ್ಕೃತಿಗಳ ಮಟ್ಟವನ್ನು ಯಾವ ಹೆಸರಿನಿಂದ ಕರೆಯಬೇಕೆಂಬ ಮತ್ತು ಈ ಮಟ್ಟಗಳನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕೆಂಬ ಸಮಸ್ಯೆ ಬರುತ್ತದೆ. ರೂಢಿಯಲ್ಲಿರುವ ಹಾಗೆ ಈ ಮಟ್ಟಗಳನ್ನು ಪ್ರಾಚೀನ, ಮಧ್ಯಮ ಮತ್ತು ಆಧುನಿಕವೆಂದು ವಿಂಗಡಿಸುವುದಾದರೆ, ಆಧುನಿಕಕಾಲದಲ್ಲಿರುವ ದೇಶಗಳು ಮತ್ತು ಸಮಾಜಗಳೆಲ್ಲವೂ ಆಧುನಿಕಕಾಲದ ಲಕ್ಷಣಗಳನ್ನು ಪ್ರದರ್ಶಿಸದೆ ಪ್ರಾಚೀನಕಾಲದ ಲಕ್ಷಣಗಳನ್ನು ಪ್ರದರ್ಶಿಸುತ್ತಿರುವುದರಿಂದ ಮತ್ತು ಮಧ್ಯಮಕಾಲದಲ್ಲಿ ಕೆಲವು ಸಮಾಜಗಳು ಪ್ರಾಚೀನಕಾಲದ ಲಕ್ಷಣಗಳನ್ನು ಪ್ರದರ್ಶಿಸುವುದರಿಂದ, ಕಾಲದ ಮೇಲೆ ವಿಂಗಡನೆ ಸಂಸ್ಕೃತಿಗಳ ಮಟ್ಟದ ಸ್ವರೂಪವನ್ನು ತೋರಿಸುವುದಿಲ್ಲ. ಆಧುನಿಕಕಾಲದಲ್ಲಿ ಪ್ರಾಚೀನಕಾಲದ ಲಕ್ಷಣಗಳ್ನು ಪ್ರದರ್ಶಿಸುತ್ತಿರುವ ಅಸ್ಸಾಮಿನ ಗುಡ್ಡಗಾಡಿನ ಜನರು ಆಧುನಿಕಕಾಲಕ್ಕೆ ಸೇರಿದವರಾಗುತ್ತಾರೆ, ಆದರೆ ಅವರ ಸಂಸ್ಕೃತಿ ಮಾತ್ರ

ಆಧುನಿಕಕಾಲದ ಸಂಸ್ಕೃತಿಯಾಗಿರುವುದಿಲ್ಲ. ಸಂಸ್ಕೃತಿಗಳ ಮಟ್ಟವನ್ನು ಸಮಾಜಗಳಲ್ಲಿರುವ ಸಾಮಾಜಿಕ ಮತ್ತು ರಾಜಕೀಯ ನೈತಿಕ ವ್ಯವಸ್ಥೆ ಮತ್ತು ಸಂಬಂಧಗಳ ಮೇಲೆ, ಅವುಗಳಲ್ಲಿರುವ ಭಾವನೆಗಳು, ಉಡುಪು ತೊಡಿಗೆಗಳು, ಸಾಹಿತ್ಯ, ಶಿಲ್ಪ, ಇತ್ಯಾದಿಗಳ ಮೇಲೆ ವಿಂಗಡನೆ ಮಾಡುವುದಾದರೆ ಹಲವು ದೇಶಗಳಲ್ಲಿ, ಹಲವು ಸಮಾಜಗಳಲ್ಲಿ ಒಂದು ಕಾಲದಲ್ಲಿ ಯಾವ ಕಾರಣಗಳಿಂದ ಒಂದು ವಿಧವಾದ ಲಕ್ಷಣಗಳು ಉದ್ಭವಿಸಿ ಬೇರೊಂದು ವಿಧವಾದ ಅಥವಾ ತರುವಾಯ ಬಂದ ಲಕ್ಷಣಗಳು ಆ ಕಾಲದಲ್ಲೇ ಅಥವಾ ಹಿಂದೆಯೇ ಏಕೆ ಬರಲಿಲ್ಲ (ದೃಷ್ಟಾಂತಕ್ಕೆ ಆಂಗ್ಲದೇಶದಲ್ಲಿ ಆದ ಕೈಗಾರಿಕಾ ಆಂದೋಳನವು ೧೦ ನೇ ಶತಮಾನದಲ್ಲೇ ಏಕೆ ಆಗಲಿಲ್ಲ?) ಎಂಬುದಕ್ಕೆ ವಿವರಣೆ ಸಿಗುವುದಿಲ್ಲ. ಸ್ವಲ್ಪಕಾಲದಲ್ಲಿಯೇ ಹಲವು ರೂಪಾಂತರಗಳನ್ನು ಹೊಂದುವುದರಿಂದ ಈ ಲಕ್ಷಣಗಳು ವಿಂಗಡನೆಗೆ ಸಹಕಾರಿಯಾಗುವುದಿಲ್ಲ. ಮಾನವನ ಬದುಕಿನಲ್ಲಿ ಕಾಣಬರುವ ಅತಿ ಮೂಲಭೂತ ಮತ್ತು ಸ್ಥೂಲ ಅಂಶವೆಂದರೆ ಮಾನವನು ಯಾವ ವ್ಯವಸ್ಥೆಯನ್ನಾಗಲೀ ಸಂಬಂಧವನ್ನಾಗಲೀ ನೀತಿಯನ್ನಾಗಲೀ ವಿಜ್ಞಾನವನ್ನಾಗಲೀ ಹೊಂದುವುದರ ಮುನ್ನ ಆತನು ಜೀವಿಸಬೇಕು. ಮಾನವನು, ಪ್ರಾಣವನ್ನು ಉಳಿಸಿಕೊಂಡಿರುವುದೇ ದುಸ್ತರವಾದರೆ ಆತ ಏನನ್ನು ಮಾಡಲೂ ಸಾಧ್ಯವಿಲ್ಲ. ಪ್ರಕೃತಿಯಿಂದ ಹೊರಬಿದ್ದ ಮಾನವನಲ್ಲಿ ಕಾಣಬರುವುದು ಇದೇ ಆಗಿದೆ. ಆತನು ಜೀವಿಸಲು ಪ್ರಕೃತಿಯನ್ನು ಸಂದರ್ಶಿಸಿ ತನ್ನ ಜೀವಿತವನ್ನು ಇತರರೊಡನೆ ಸೇರಿ ಬದುಕಿದ ರೀತಿ ಆತನು ನಿರ್ಮಿಸಿಕೊಂಡ ಆರ್ಥಿಕವ್ಯವಸ್ಥೆಯಾಗುತ್ತದೆ. ಇತರರೊಡನೆ ಕೆಲಸಮಾಡುವ ಕ್ರಮ ಆರ್ಥಿಕ ಸಂಬಂಧವಾಗುತ್ತದೆ. ಹೀಗೆ ಮಾನವರು ಒಟ್ಟಿಗೆ ಸೇರಿ ಸಂಘಶಕ್ತಿಯನ್ನು ಬೆಳಸಿಕೊಂಡು, ಕ್ರಮೇಣ ಉಪಕರಣಗಳನ್ನು ನಿರ್ಮಿಸಿಕೊಂಡು ಅನ್ನ ಆಹಾರಾದಿಗಳನ್ನು ಗಳಿಸಿದ ಕ್ರಮ ಮಾನವಸಮಾಜಗಳ ಉತ್ಪಾದನಾಕ್ರಮವಾಗುತ್ತದೆ (Mode of Production). ಮಾನವರು ನಿರ್ಮಿಸಿದ ಉಪಕರಣಗಳು ಮತ್ತು ಅವುಗಳ ಉಪಯೋಗದ ಬಗ್ಗೆ ಮಾನವರು ಸಾಧಿಸಿರುವ ಜ್ಞಾನ ಮತ್ತು ಅನುಭವ ಅವರ ಉತ್ಪಾದನಾಸಾಧನಗಳಾಗುತ್ತವೆ (Forces of Production).

ಈ ಉತ್ಪಾದನಾಸಾಧನಗಳು, ಮತ್ತು ಕ್ರಮ ಮಾನವ ಸಮಾಜಗಳು ಪ್ರಕೃತಿಯಿಂದ ಆಹಾರವನ್ನು ಗಳಿಸಿ ಬದುಕಬೇಕಾಗಿರುವ ವರೆಗೂ ಅತಿ ಮೂಲಭೂತ ಆಧಾರದ ವ್ಯವಸ್ಥೆ ಮತ್ತು ಸಾಧನಗಳಾಗಿ ಒಂದಲ್ಲ ಒಂದು ರೂಪದಲ್ಲಿ ಇದ್ದೇ ಇರಬೇಕಾಗುತ್ತದೆ. ಉತ್ಪಾದನಾಸಾಧನಗಳು ಮತ್ತು ಕ್ರಮದ ಆಧಾರದ ಮೇಲೆ ಮಾನವ ಸಮಾಜಗಳ ಸಂಸ್ಕೃತಿ ಮಟ್ಟವನ್ನು ವಿಂಗಡಿಸಿದರೆ ಸಂಸ್ಕೃತಿಗಳ ಮಟ್ಟದ ಸ್ವರೂಪ

ಸ್ಪಷ್ಟವಾಗಿ ಕಾಣುತ್ತದೆ. ಈ ಆಧಾರದ ಮೇಲೆ ಮಾನವಸಮಾಜಗಳ ಸಂಸ್ಕೃತಿ (೧) ಅನಾಗರಿಕ (Primitive), (೨) ಪ್ರಾಚೀನ (Ancient), (೩) ಊಳಿಗಮಾನ್ಯ (Fudal), (೪) ಬಂಡವಾಳಶಾಹಿ (Capitalist), (೫) ಸಮಾಜವಾದಿ (Socialist) ವ್ಯವಸ್ಥೆಗಳ ಸಂಸ್ಕೃತಿಗಳೆಂದು ವಿಂಗಡಿಸಬಹುದು. ಉತ್ಪಾದನಾಕ್ರಮ ಮತ್ತು ಆರ್ಥಿಕವ್ಯವಸ್ಥೆ ಹಾಗೆ ವಿಂಗಡನೆಯಾಗುವುದಕ್ಕೆ ಈ ಪ್ರತಿಯೊಂದು ಆರ್ಥಿಕ ಅವಸ್ಥೆಯಲ್ಲಿ ಕಾಣಬರುವ ಮೂಲಭೂತ ವ್ಯತ್ಯಾಸಗಳು (ಉತ್ಪಾದನಾ ರೀತಿ, ಹಂಚಿಕೊಳ್ಳುವ ರೀತಿ, ಅದಲುಬದಲು ಮಾಡಿಕೊಳ್ಳುವ ರೀತಿ, ದುಡಿಮೆಯ ವಿಭಜನೆ, ಉತ್ಪಾದನಾ ಸಾಧನಗಳನ್ನು ಹೊಂದಿರುವ ರೀತಿ, ವ್ಯಕ್ತಿವ್ಯಕ್ತಿಗಳಿಗೂ ಉತ್ಪಾದನಾಸಾಧನಗಳನ್ನು ಹೊಂದಿರುವವರಿಗೂ ಹೊಂದಿಲ್ಲದವರಿಗೂ ಇರುವ ಸಂಬಂಧಗಳು, ಉತ್ಪಾದನೆಗಾಗಿ ಉಪಯೋಗಿಸುವ ಉಪಕರಣಗಳು, ಇತ್ಯಾದಿ). ಉತ್ಪಾದನಾಸಾಧನೆಗಳು ಪ್ರತಿ ಸಂಸ್ಕೃತಿಮಟ್ಟದಲ್ಲೂ ಮೂಲಭೂತವಾಗಿ ಆಧಾರವಾಗಿರುವುದರಿಂದ, ಉಳಿದ ಸಾಮಾಜಿಕ, ರಾಜಕೀಯ, ನೈತಿಕ, ಭಾವನೆಗಳು ಸಾಹಿತ್ಯ, ಆಚಾರ, ವ್ಯವಹಾರಗಳು ಈ ಆಧಾರಕ್ಕೆ ಅನುಗುಣವಾಗಿಯೇ ಇರಬೇಕು, ಇಲ್ಲವಾದರೆ ಅವು ನಾಶಹೊಂದುವುವು, ಇಲ್ಲವೆ ಮಾರ್ಪಾಡುಹೊಂದಿ ಮೂಲಭೂತ ಆಧಾರಕ್ಕೆ ಧಕ್ಕೆ ತರದ ರೀತಿಯಲ್ಲಿ ಇರುತ್ತವೆ. ಇವುಗಳು ಹಾಗಿರದಿದ್ದ ಪಕ್ಷದಲ್ಲಿ ಜನರು ಒಂದು ಆರ್ಥಿಕವ್ಯವಸ್ಥೆಯಲ್ಲಿ ಬದುಕುವುದು ದುಸ್ತರವಾಗುತ್ತದೆ.

ಈ ದೃಷ್ಟಿಯಿಂದ ನೋಡಿದರೆ ಅನಾಗರಿಕ ಕಾಲದ ಸಂಸ್ಕೃತಿಯನ್ನು ಬಿಟ್ಟರೆ, ೧೭ ನೇ ಶತಮಾನದ ವರೆಗೆ ಮಾನವ ಸಮಾಜಗಳ ಸಂಸ್ಕೃತಿ ಮಟ್ಟವೆಂದರೆ ಪ್ರಾಚೀನ ಮತ್ತು ಊಳಿಗ ಮಾನ್ಯಪದ್ಧತಿಯ ಸಂಸ್ಕೃತಿಗಳ ಮಟ್ಟ. ೧೭ ನೇ ಶತಮಾನದ ವರೆಗೆ ಆಂಗ್ಲ ಮತ್ತು ಚೀಣೀ ಸಮಾಜಗಳು ಒಂದು ಲಕ್ಷಣಗಳನ್ನು ಹೊಂದಿದ್ದವೆಂದು ಹೇಳುವುದಾದರೆ ಅವುಗಳ ಸಂಸ್ಕೃತಿಯ ಮಟ್ಟ ಪ್ರಾಚೀನ ಮತ್ತು ಊಳಿಗ ಮಾನ್ಯದ ಸಂಸ್ಕೃತಿಗಳ ಮಟ್ಟ. ೧೭ ನೇ ಶತಮಾನಾನಂತರ ಆಂಗ್ಲ ಸಮಾಜ ಮಾರ್ಪಾಡು ಹೊಂದಿದ್ದೆಂದರೆ ಆಂಗ್ಲ ಸಮಾಜ ಊಳಿಗ ಮಾನ್ಯದ ಸಂಸ್ಕೃತಿ ಮಟ್ಟವನ್ನು ದಾಟಿ ಬಂಡವಾಳಶಾಹಿ ಸಂಸ್ಕೃತಿ ಮಟ್ಟಕ್ಕೆ ಮಾರ್ಪಾಡುಹೊಂದಿತು. ೧೭ ನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ೧೯ ನೇ ಶತಮಾನದಲ್ಲಿ ಜರ್ಮನಿಯಲ್ಲಿ ರಷ್ಯದಲ್ಲಿ ಈ ಬಗೆಯ ಮಾರ್ಪಾಡು ಆರಂಭವಾಯಿತು.

ಮಾನವಸಮಾಜಗಳ ಸಾಮ್ಯ ಮತ್ತು ಅಸಾಮ್ಯ ಲಕ್ಷಣಗಳನ್ನು ವೀಕ್ಷಿಸುವಾಗ ಆಂಗ್ಲಸಮಾಜದಂತೆ ಕೆಲವು ಸಮಾಜಗಳು ಪ್ರಾಚೀನಾವಸ್ಥೆಯಿಂದ ಬಂಡವಾಳದ ಅವಸ್ಥೆಯ ವರೆಗೆ ವಿಕಾಸ ಹೊಂದಿದ್ದರೆ ಅಸ್ಸಾಮಿನ ಗುಡ್ಡಗಾಡಿನ

ಸಮಾಜಗಳು ಪ್ರಾಚೀನಾವಸ್ಥೆಯಲ್ಲಿಯೇ ಇರುವುವು. ಕೆಲವು ಸಮಾಜಗಳು ಒಂದು ಅವಸ್ಥೆಯಲ್ಲಿ ಆಂಗ್ಲ ಸಮಾಜದಂತೆ ಅದೇ ಲಕ್ಷಣಗಳನ್ನು ಹೊಂದಿದ್ದು ಆಂಗ್ಲ ಸಮಾಜ ಪರಿವರ್ತನೆ ಹೊಂದಿ ಮಾರ್ಪಾಡು ಹೊಂದಿರುವಾಗಲೂ ಚೀಣೀ ಸಮಾಜ ಮಾತ್ರ ಪರಿವರ್ತನೆಹೊಂದದೆ ಅದೇ ಸಂಸ್ಕೃತಿ ಮಟ್ಟದಲ್ಲೇ ೨೦ ನೇ ಶತಮಾನದ ವರೆಗೂ ಇರುವುದನ್ನು ಕಾಣುತ್ತೇವೆ. ಹೀಗೆ ಕೆಲವು ಸಮಾಜಗಳು ವಿಕಾಸ ಹೊಂದುವುದಕ್ಕೂ ಇನ್ನು ಕೆಲವು ಸಮಾಜಗಳು ವಿಕಾಸ ಹೊಂದದೇ ಇರುವುದಕ್ಕೂ ಕಾರಣವೇನು ?

ಒಂದು ಸಮಾಜಕ್ಕೆ ಹೊಳೆದ ಭಾವ, ಸಿಕ್ಕಿದ ದೈವಪ್ರೇರಣೆ, ಇನ್ನೊಂದು ಸಮಾಜಕ್ಕೆ ಬರಲಿಲ್ಲವೆ ? ಅಥವಾ ರೂಪಾಂತರ ಹೊಂದುವುದಕ್ಕೆ ಕೆಲವು ಸಮಾಜದ ಜನರು ಇಷ್ಟಪಡಲಿಲ್ಲವೆ? ರೂಪಾಂತರ ಹೊಂದುವುದಕ್ಕೆ ಇವೇ ಮುಖ್ಯಕಾರಣ ವೆಂದು ಹೇಳಿ ಇತಿಹಾಸದಲ್ಲಿ ಮಾರ್ಪಾಡುಗಳು (Historical Change) ಇದೇ ರೀತಿ ಆಗಿರುವುದೆಂದು ಹೇಳುವ ಇತಿಹಾಸವಾದಿಗಳಿದ್ದಾರೆ. ಈ ವಾದಗಳು ಸಮಂಜಸವಾಗಿ ತೋರುವುದಿಲ್ಲ. ಅವಕಾಶಗಳಿದ್ದರೆ, ಸಮಯ ಸಂದರ್ಭಗಳು ಬಂದರೆ, ಸಂಪರ್ಕಕ್ಕೆ, ವಿಷಯ ವಿನಿಮಯಕ್ಕೆ ಅವಕಾಶಗಳಿದ್ದರೆ, ಅವರವರ ಬಾಳಿ ನಲ್ಲಿ ಸಮಸ್ಯೆಗಳ ಪರಿಹಾರ ಒದಗಿಬಂದರೆ, ಸಮಾಜಗಳಲ್ಲಿ ಅನಿರೀಕ್ಷಿತ ರೂಪಾಂತರ ಗಳನ್ನು ಕಾಣುತ್ತೇವೆ. ಗತಿಸಿದ ನಾಗರಿಕತೆಗಳು ಅಥವಾ ಇರುವ ಸ್ಥಿತಿಯಲ್ಲೇ ಇರುವ ದೇಶಗಳು, ಸಮಾಜಗಳು ಒಂದು ಪಕ್ಷ ಭಾವಸಂದರ್ಶನ, ದೈವಪ್ರೇರಣೆ ಗಳಿಂದ ರೂಪಾಂತರ ಹೊಂದಿದ್ದರೆ ಅವು ಏಕೆ ಕಾಲಕ್ರಮದಲ್ಲಿ ಭಾವಸಂದರ್ಶನವನ್ನು ಕಳೆದುಕೊಂಡವು ಅಥವಾ ದೈವಪ್ರೇರಣೆ ಹೊರಟುಹೋಗಿ ನಶಿಸಿದವು ಅಥವ ಇರುವ ಸ್ಥಿತಿಯಲ್ಲಿಯೇ ಇವೆ ಎನ್ನುವುದಕ್ಕೆ ಕಾರಣಗಳು ಸಿಗುವುದಿಲ್ಲ. ದೈವಭಕ್ತಿ, ಆಧ್ಯಾತ್ಮಿಕ ಚಿಂತನೆಗೇ ಹೆಚ್ಚು ಗಮನಕೊಟ್ಟ ದೇಶಗಳು ದಾಸ್ಯಕ್ಕೆ ಸಿಕ್ಕಿ ನರಳಿರುವುದನ್ನು ಕಂಡಿದ್ದೇವೆ. ಎಲ್ಲವೂ ಚಂಚಲವಾದ, ಅನಿಶ್ಚಿತವಾದ ಪ್ರದೇಶಕ್ಕೆ ನಮ್ಮನ್ನು ಕರೆದೊಯ್ಯುತ್ತನೆ. ಮಾನವರು ವಿಧಿವಿಲಾಸದ ಗೊಂಬೆಗಳಾಗು ತ್ತಾರೆ. ಇತಿಹಾಸದ ಸ್ವರೂಪವನ್ನಾಗಲೀ ಅಥವಾ ಸಂಸ್ಕೃತಿಯ ಸ್ವರೂಪ ವನ್ನಾಗಲೀ ತಿಳಿಯಲು ಅಸಾಧ್ಯವಾಗುತ್ತದೆ. ಸಮಾಜವಿಜ್ಞಾನ ದುಸ್ಸಾಧ್ಯ ವಾಗುತ್ತದೆ.

ಕಂಡುಬರುವ ಸಮಾಜಗಳಲ್ಲಿ, ಅವುಗಳ ಸ್ವರೂಪ, ಆಗುಹೋಗುಗಳು, ವ್ಯವಸ್ಥೆ, ಸಂಬಂಧಗಳು ಇತ್ಯಾದಿಗಳನ್ನು ಕೂಲಂಕಷವಾಗಿ ನೋಡುವುದಾದರೆ, ಒಂದು ಸಮಾಜ ಒಂದು ರೂಪದಲ್ಲಿದ್ದರೆ ಅದು ಇರುವ ರೂಪ ನಮಗೆ ವಿಚಿತ್ರವಾಗಿ

ಕಾಣದೆ ಅಂತಹ ರೂಪವನ್ನು ಹೊಂದುವುದಕ್ಕೆ ಆ ಸಮಾಜದಲ್ಲಿಯೇ ಅಡಗಿರುವ ವಸ್ತುವಿಶೇಷಗಳು ಕಾರಣವನ್ನು ತಿಳಿಸುತ್ತವೆ.

ಜೀವಿಸಲು ಉಪಕ್ರಮಿಸಿದ ಮಾನವನು ಉಪಕರಣಗಳನ್ನು ನಿರ್ಮಿಸಿಕೊಂಡು ಪ್ರಕೃತಿಯನ್ನೇ ತನ್ನ ಅಧೀನಕ್ಕೆ ತೆಗೆದುಕೊಂಡು ಆರ್ಥಿಕ ವ್ಯವಸ್ಥೆ, ಸಂಬಂಧಗಳನ್ನು ನಿರ್ಮಿಸಿದ್ದಾನೆ ಇದೇ ಆತನ ಸಾಮಾಜಿಕ ವ್ಯವಸ್ಥೆ. ಇದರ ಯೋಗಕ್ಷೇಮವನ್ನು ನೋಡಿಕೊಳ್ಳುವ ವ್ಯವಸ್ಥೆಯೇ ರಾಜಕೀಯ ವ್ಯವಸ್ಥೆ, ನೈತಿಕ ವ್ಯವಸ್ಥೆ. ಒಟ್ಟಿನಲ್ಲಿ ಇದು ಒಂದು ಸಮಾಜದ ಜನರು ಅಭಿವರ್ಧನೆ ಮಾಡಿರುವ ಸಂಸ್ಕೃತಿ ಕ್ರಮೇಣ ಬಗೆಬಗೆಯ ವಿಧವಿಧದ ಹೆಚ್ಚು ಶಕ್ತಿಯನ್ನು ಪಡೆದಿರುವ ಉಪಕರಣಗಳ ನಿರ್ಮಾಣ ಮತ್ತು ಉತ್ಪಾದನಾಕ್ರಮದಲ್ಲಿ ಪ್ರಯೋಗಕ್ಕೆ ತಂದ ಉತ್ಪಾದನಾಸಾಧನಗಳು ಕಂಡು ಬರುವುವು. ಇವುಗಳು ಬೆಳೆದ ಹಾಗೆ, ಮತ್ತು ಇವುಗಳನ್ನು ನಿರ್ಮಿಸುವುದಕ್ಕೆ ಮಾನವನು ಸಾಧಿಸಿದ ಜ್ಞಾನ, ವಿಜ್ಞಾನ, ಅನುಭವಗಳು ಪ್ರಕೃತಿಜನ್ಯ ನ್ಯೂನತೆಗಳನ್ನು ಪರಿಹರಿಸಿಕೊಂಡು ಸುಖ, ಶಾಂತಿ, ಸಂಪತ್ತುಗಳನ್ನು ಕಾಣಲು ಸಾಧ್ಯವಾಗಿದೆ. ಈ ಹೊಸ ಹೊಸ ಉತ್ಪಾದನಾಸಾಧನಗಳ ಬೆಳವಣಿಗೆ ಮತ್ತು ಉತ್ಪಾದನಾ ವ್ಯವಸ್ಥೆಯಲ್ಲಿ ಅವುಗಳ ಪ್ರಯೋಗವೆಂದರೆ, ಉತ್ಪಾದನಾಕ್ರಮದ ಮಾರ್ಪಾಡು, ಆರ್ಥಿಕ ಸಂಬಂಧಗಳಲ್ಲಿ ಮಾರ್ಪಾಡು. ಉತ್ಪಾದನಾಕ್ರಮದಲ್ಲಿ ಆರ್ಥಿಕ ಸಂಬಂಧಗಳಲ್ಲಿ ಬದಲಾವಣೆಗಳೆಂದರೆ ಆತನ ಸಾಮಾಜಿಕ, ರಾಜಕೀಯ, ನೈತಿಕ, ನ್ಯಾಯ ಇತ್ಯಾದಿ ವ್ಯವಸ್ಥೆಗಳಲ್ಲಿ ಮಾರ್ಪಾಡು. ಆದರೆ ಮೂಲಭೂತ, ಆಧಾರಭೂತ ರೂಪದಲ್ಲಿರುವ ಆರ್ಥಿಕವ್ಯವಸ್ಥೆ ಮತ್ತು ಸಂಬಂಧಗಳು ಮಾರ್ಪಾಡು ಹೊಂದಿದ್ದರೂ, ಇತರ ಕ್ಷೇತ್ರಗಳಲ್ಲಿ ಮಾರ್ಪಾಡು ಅಷ್ಟು ಸುಲಭವಾಗಿ ಆಗುವುದಿಲ್ಲ. ಯಾವುದೋ ಒಂದು ವ್ಯವಸ್ಥೆ ಇರುವುದೆಂದು ಭಾವಿಸುವುದಾದರೆ ಆ ವ್ಯವಸ್ಥೆಯು ಸಂಬಂಧಗಳನ್ನು ಪ್ರತಿಬಿಂಬಿಸುವ ಹಾಗೆ ವ್ಯಕ್ತಿಗಳು, ಹಿತಗಳು ಇರುತ್ತವೆ. ಇವುಗಳನ್ನು ಎತ್ತಿ ಹಿಡಿಯುವ ರಕ್ಷಣಾಕವಚದಂತಿರುವ ಭಾವನಾಸಮುಚ್ಚಯವಿರುತ್ತದೆ. ಬೆಳೆಯುತ್ತಿರುವ ಉತ್ಪಾದನಾಸಾಧನಗಳ ಉಪಯೋಗವನ್ನು ಹೊಂದಲು, ಮಾರ್ಪಾಡು ಹೊಂದುತ್ತಿರುವ ಉತ್ಪಾದನಾಕ್ರಮದ ಪ್ರಯೋಜನ ಹೊಂದಲು ಹೊಸ ವ್ಯವಸ್ಥೆ ಮತ್ತು ಸಂಬಂಧಗಳು ಅವಶ್ಯಕವಾಗುತ್ತದೆ. ಆದರೆ ಹಳೆಯದು ಅಡ್ಡಿಬರುತ್ತದೆ. ಇಂತಹ ಸಂದರ್ಭದಲ್ಲಿ ಸಮಾಜ ಬದಲಾವಣೆ ಹೊಂದಬೇಕು, ಇಲ್ಲವೇ ನಿಂತಕಡೆಯೇ ನಿಂತು, ಕೊಳೆಯಬೇಕು. ಇಲ್ಲವೆ ಕುಳಿತವನಿಗೆ ಕೂಡಿಟ್ಟ ಆಸ್ತಿಯನ್ನು ಖರ್ಚುಮಾಡಿದ ಹಾಗೆ ನಶಿಸಬೇಕು, ಉತ್ಪಾದನಾಸಾಧನಗಳ ಬೆಳವಣಿಗೆ. ಆರ್ಥಿಕ ಬದಲಾವಣೆ ಅತಿ ಬಲವಾಗಿದ್ದು, ಹಳೆಯ ವ್ಯವಸ್ಥೆ ಮತ್ತು ಅದರ ಭಾವನಾಸಮುಚ್ಚಯ ಅಷ್ಟು ಬಲಯುತ

ವಾಗಿಲ್ಲದಿದ್ದರೆ ಹಳೆಯದು ಕ್ರಾಂತಿಯ ಮೂಲಕವೋ ಬಲಪ್ರಯೋಗದ ಮೂಲಕವೋ ನಾಶವಾಡಲ್ಪಡುತ್ತವೆ. ಇಲ್ಲವೇ ಮಾರ್ಪಾಡುಹೊಂದುತ್ತದೆ.

ಈಗ ಪ್ರಗತಿಗೆ ಮತ್ತು ಸಂಸ್ಕೃತಿಗೆ ಇರುವ ನಿಕಟಸಂಬಂಧವನ್ನು ತಿಳಿಯಲು ಮತ್ತು ಸಂಸ್ಕೃತಿ ವಿಷಯವಾಗಿ ಕೆಲವು ತೀರ್ಮಾನಗಳಿಗೆ ಬರಲು ಸಾಧ್ಯವಿದೆ. ಮಾನವನಿಗೆ ಬಂದೊದಗಿರುವ ನ್ಯೂನತೆಗಳನ್ನು ಪರಿಹರಿಸಿಕೊಳ್ಳುವುದೇ ಪ್ರಗತಿ ಎಂದು ಕರೆದೆವು. ಮಾನವಸಮಾಜಗಳು ಪ್ರಕೃತಿಜನ್ಯ ನ್ಯೂನತೆಗಳನ್ನು ಉಪಕರಣಗಳನ್ನು ನಿರ್ಮಿಸಿಕೊಳ್ಳುವುದರ ಮೂಲಕ ಒಂದು ವಿಧವಾದ ಉತ್ಪಾದನಾಕ್ರಮಕ್ಕೆ ಒಳಗಾಗಿ ನ್ಯೂನತೆಗಳನ್ನು ಪರಿಹರಿಸಿಕೊಂಡರು. ಕ್ರಮೇಣ ಉಪಕರಣಗಳನ್ನು ಬೆಳಸಿಕೊಂಡು ಪ್ರಕೃತಿಜ್ಞಾನವನ್ನು ಹೆಚ್ಚಿಸಿಕೊಂಡು, ವಿಜ್ಞಾನವನ್ನು ಬೆಳಸಿಕೊಂಡು, ಉತ್ಪಾದನಾ ಕ್ರಮಗಳ ಮಾರ್ಪಾಡಿನಿಂದ ಅನೇಕ ನ್ಯೂನತೆಗಳನ್ನು ಪರಿಹರಿಸಿಕೊಂಡು ಸುಖ, ಶಾಂತಿ, ಸಂಪತ್ತನ್ನು ಗಳಿಸಿದ ಮಾನವ ಪ್ರಗತಿಯ ಚಿತ್ರ ಗೋಚರವಾಗುತ್ತದೆ. ಸಂಸ್ಕೃತಿ ಮಾನವರು ಅಭಿವರ್ಧನೆಮಾಡಿದ ಆರ್ಥಿಕ, ಸಾಮಾಜಿಕ, ರಾಜಕೀಯ, ಸ್ಮೃತಿಕವ್ಯವಸ್ಥೆ ಮತ್ತು ಸಂಬಂಧಗಳು, ಉಪಕರಣಗಳು, ಭಾವನೆಗಳು, ಮತ್ತು ಇವುಗಳನ್ನು ಪ್ರತಿಬಿಂಬಿಸುವ ಜನಜೀವನ, ಇವುಗಳ ಅಭಿವೃದ್ಧಿ ಮತ್ತು ವಿಕಾಸವೇ ಮಾನವ ಸಂಸ್ಕೃತಿಯ ಬೆಳವಣಿಗೆ. ಈ ಸಂಸ್ಕೃತಿ ವಿಕಾಸಹೊಂದುವುದಕ್ಕೂ, ಒಂದು ಮಟ್ಟದಿಂದ ಇನ್ನೊಂದು ಮಟ್ಟಕ್ಕೆ ಹೋಗುವುದಕ್ಕೂ ಉತ್ಪಾದನಾ ಸಾಧನಗಳ ಮತ್ತು ಕ್ರಮಗಳ ಬೆಳವಣಿಗೆ ಮತ್ತು ಮಾರ್ಪಾಡು ಕಾರಣವಾಯಿತು. ಆದ್ದರಿಂದ ಮೂಲವಾಗಿ ಉತ್ಪಾದನಾಸಾಧನಗಳ ಬೆಳವಣಿಗೆ ಸಂಸ್ಕೃತಿಯಲ್ಲಿ ಬೆಳವಣಿಗೆ ಮತ್ತು ಮಾರ್ಪಾಡುಗಳನ್ನು ತಂದಿದೆ.

ಪ್ರತಿ ಸಮಾಜದಲ್ಲೂ, ಪ್ರತಿ ದೇಶದಲ್ಲೂ ಒಂದಲ್ಲ ಒಂದು ತೆರನಾದ ಸಂಸ್ಕೃತಿ ಇದೆ. ಒಂದು ಸಮಾಜಕ್ಕೆ ಒಂದು ನಿಗದಿಯಾದ ಕಾಲದಲ್ಲಿ ಕಂಡುಬರುವ ಸಂಸ್ಕೃತಿ ಎಂದರೆ ಅವರ ಜನಜೀವನ ಮತ್ತು ಅವರು ಮಾನಸಿಕವಾಗಿ ಭೌತಿಕವಾಗಿ ಬಾಳಲು ಮಾಡಿಕೊಂಡಿರುವ ವ್ಯವಸ್ಥೆ, ಜ್ಞಾನ, ಉಪಕರಣಗಳು, ಭಾವನೆಗಳು, ಸಾಹಿತ್ಯ, ನೃತ್ಯ ಇತ್ಯಾದಿ. ಇವುಗಳಿಂದ ಆವೃತವಾದ ಬದುಕು, ಅವರ ಜೀವನಕ್ರಮ. ಈ ಬದುಕಿನಲ್ಲಿ ಅವರ ಉತ್ಪಾದನಾಕ್ರಮ ಆಧಾರಭೂತವಾಗಿ ಇದಕ್ಕೆ ಹೆಚ್ಚುಕಡಿಮೆ ಅನುಗುಣವಾಗಿ ಹೊಂದಿಕೊಂಡಿರುವ ಇತರ ಕ್ಷೇತ್ರಗಳು ಈ ಒಟ್ಟು ಅವರ ಸಂಸ್ಕೃತಿಯ ಮಟ್ಟ. ಪ್ರತಿಯೊಂದು ಸಮಾಜ ತನ್ನ ಹಿಂದಿನ ಸಮಾಜಗಳು ಅಭಿವರ್ಧನೆ ಮಾಡಿಕೊಟ್ಟಿರುವ ಅನುಭವ, ಜ್ಞಾನ, ವ್ಯವಸ್ಥೆ, ಉಪಕರಣಗಳು, ಇತ್ಯಾದಿಗಳಿಂದ ಪ್ರಯೋಜನಹೊಂದಿ ಹೊಸದಾಗಿ ಸಮಯ ಸನ್ನಿವೇಶಗಳಿಂದ ಪ್ರಚೋದನೆ

ಹೊಂದಿ ಅಭಿವೃದ್ಧಿಮಾಡಿರುವ ಉಪಕರಣಗಳು, ಭಾವನೆಗಳು, ಜ್ಞಾನ, ವ್ಯವಸ್ಥೆ, ಸಾಹಿತ್ಯ ಇತ್ಯಾದಿ. ಈ ಮಾನವಕೋಟಿಯ ಸಂಸ್ಕೃತಿ ಎಂದರೆ ಹಲವು ದೇಶಗಳು, ಹಲವು ಸಮಾಜಗಳು, ಒಂದಕ್ಕೊಂದು ಪರಸ್ಪರ ಜ್ಞಾನ ಅನುಭವ ಇತ್ಯಾದಿಗಳ ವಿನಿಮಯದ ಮೂಲಕ ಇದೇ ಮಾನವಕುಲ ಅಭಿವರ್ಧನೆ ಮಾಡಿಕೊಂಡಿರುವ ಸಂಸ್ಕೃತಿ ಅಥವ ಮಾನಸಿಕ ಮತ್ತು ಭೌತಿಕಜ್ಞಾನ, ವಸ್ತುವಿಶೇಷಗಳು.

ಸಂಸ್ಕೃತಿಗಳಲ್ಲಿ ಒಂದು ಉತ್ತಮವಾದದ್ದು, ಒಂದು ವಿಶಿಷ್ಟತೆಯಿಂದ ಕೂಡಿರುವುದು ಇನ್ನೊಂದು ಕೀಳಾದ್ದು ಎಂಬ ಭಾವನೆಗೆ ಅವಕಾಶವಿಲ್ಲ. ಎಲ್ಲವೂ ಅದರದರ ಅಳತೆಯಲ್ಲಿ ಸಂಸ್ಕೃತಿಯೆ. ಆದುದರಿಂದ ಮಾನವಸಮಾಜಗಳ ಇತಿಹಾಸ ದಲ್ಲಿ ಕೆಲವು ಸಂಸ್ಕೃತಿಗಳು ಒಂದೇ ಮಟ್ಟದಲ್ಲಿ ಇರುವುದು ಕಂಡುಬಂದರೆ ಇನ್ನು ಕೆಲವು ಮುಂದುವರಿದಿದ್ದರೆ ಅದಕ್ಕೆ ಕಾರಣವೇನು ಎಂಬುದನ್ನು ತಿಳಿಯಬೇಕೇ ವಿನಃ, ಸಂಸ್ಕೃತಿಗಳನ್ನು ಉಚ್ಚ, ಕೀಳು, ಪ್ರಗತಿಹೊಂದುವುದಕ್ಕೆ ಯೋಗ್ಯ ವಾದವು ಅಥವಾ ಅಯೋಗ್ಯವಾದವು ಎಂಬ ವಿಂಗಡನೆಗೆ ಅವಕಾಶವಿಲ್ಲ. ಸಾಮ್ಯ ಲಕ್ಷಣಗಳನ್ನು ಆಂಗ್ಲ ಮತ್ತು ಚೀಣೀ ಸಮಾಜಗಳು ಪ್ರದರ್ಶಿಸಿ ಒಂದೇ ಸಂಸ್ಕೃತಿಯ ಮಟ್ಟದಲ್ಲಿದ್ದರೂ, ಆಂಗ್ಲಸಮಾಜ ಬೇರೆ ಬಂಡವಾಳಮಟ್ಟದ ಸಂಸ್ಕೃತಿಗೆ ಪರಿವರ್ತನೆ ಹೊಂದಿರುವುದು, ಉತ್ಪಾದನಾಸಾಧನಗಳ ಕ್ರಮಗಳಲ್ಲಿ ಬೆಳವಣಿಗೆ ಮತ್ತು ಮಾರ್ಪಾಡಿನಿಂದಲೇ ಹೊರತು ಬೇರಾವ ಕಾರಣದಿಂದಲ್ಲ. ಆದುದರಿಂದ ಸಂಸ್ಕೃತಿಗಳ ವಿಂಗಡನೆ ಎಂದರೆ ಪರಿವರ್ತನೆ ಹೊಂದಿರುವುವು, ಹೊಂದು ತ್ತಿರುವುವು ಮತ್ತು ಹೊಂದಿಲ್ಲದಿರುವುವು. ಪಾಶ್ಚಿಮಾತ್ಯ ದೇಶಗಳ ಈಗಿನ ಸಂಸ್ಕೃತಿ ಎಂದರೆ ಆ ದೇಶಗಳ ಪ್ರಾಚೀನ ಮತ್ತು ಊಳಿಗ ಮಾನ್ಯದ ಪದ್ಧತಿಯ ಸಂಸ್ಕೃತಿ ಮತ್ತು ಆ ವ್ಯವಸ್ಥೆ ಮತ್ತು ಸಂಬಂಧಗಳ ಮೇಲೆ, ಭಾವನೆಗಳ ಮೇಲೆ, ಸಾಹಿತ್ಯದ ಮೇಲೆ, ರೀತಿನೀತಿಗಳ ಮೇಲೆ, ಉತ್ಪಾದನಾಸಾಧನಗಳ ಮತ್ತು ಕ್ರಮಗಳ ಬೆಳವಣಿಗೆ ಮತ್ತು ಮಾರ್ಪಾಡುಗಳು ಮಾಡಿರುವ ಪ್ರತಿಕ್ರಿಯೆ. ಈ ಕಾರಣದಿಂದ ಪರಿವರ್ತನೆ ಹೊಂದಿರುವ ಸಮಾಜದಲ್ಲಿ ಅಭಿವೃದ್ಧಿಹೊಂದಿರುವ ಜ್ಞಾನ, ಭಾವನೆಗಳು, ಇತ್ಯಾದಿ. ಅನೇಕ ವೇಳೆ ಈ ಮಾರ್ಪಾಡನ್ನು ಸೂಚಿಸುವ ಸಮಾಜಗಳನ್ನು ನಿರ್ದೇಶಿಸು ವಾಗ 'ಪಾಶ್ಚಿಮಾತ್ಯ' ಎಂಬ ಶಬ್ದವನ್ನು ಸಂಸ್ಕೃತಿಯೊಡನೆ ಸೇರಿಸಿ ಕರೆಯುವುದು ಅನುಚಿತವಾಗುತ್ತದೆ. ತಪ್ಪು ಅರ್ಥವನ್ನು ಕೊಡುತ್ತದೆ. ಈ ಬೆಳವಣಿಗೆ ಈ ಸಮಾಜ ಗಳಲ್ಲಿ ಬಂದಿರುವುದರಿಂದ ಸಮಾಜಗಳು ಇರುವ ದಿಕ್ಕನ್ನು ಗುರುತಿಸುವ ದೃಷ್ಟಿಯಿಂದ ಕರೆಯಬಹುದು. ಆದರೆ ಈ ಬೆಳವಣಿಗೆ ಪಶ್ಚಿಮದಿಕ್ಕಿನಲ್ಲಿರುವ ಸಮಾಜಗಳಿಗೇ ಮೀಸಲು ಅಥವಾ ಅವುಗಳ ವೈಶಿಷ್ಟ್ಯವೆನ್ನುವುದಾದರೆ ಆಭಾಸವಾಗುತ್ತದೆ. ಜಪಾನ್

ದೇಶ ಪಶ್ಚಿಮದಿಕ್ಕಿನಲ್ಲಿ ಇಲ್ಲ, ಚೀಣ ದೇಶ ಪಶ್ಚಿಮದಿಕ್ಕಿನಲ್ಲಿ ಇಲ್ಲ, ರಷ್ಯದೇಶ ನಡು ಮಧ್ಯದಲ್ಲಿ ಇದೆ; ಆದರೂ ಈ ದೇಶಗಳು ಉತ್ಪಾದನಾಸಾಧನ ಮತ್ತು ಉತ್ಪಾದನಾ ಕ್ರಮವನ್ನು ಬೆಳೆಸುವುದರ ಮೂಲಕ ಪ್ರಗತಿಯನ್ನು ಗಳಿಸಿವೆ, ಗಳಿಸುತ್ತಲಿವೆ, ಮತ್ತೆ ಹಾಗೆಯೇ ಅವರ ಜನಜೀವನ, ಜ್ಞಾನ, ಭಾವನೆಗಳಲ್ಲಿ ಮಾರ್ಪಾಡುಗಳನ್ನೇ ಕಾಣ ಬಹುದು. ಈ ತೆರನಾದ ಮಾರ್ಪಾಡು ಪ್ರಪಂಚದ ಯಾವ ಭಾಗದಲ್ಲಿಯಾದರೂ ಆಗ ಬಹುದು. ಇನ್ನೊಂದು ವಿಷಯ. ಅಭಿವರ್ಧನೆ ಯಾರ ಮೀಸಲೂ ಅಲ್ಲ. ಅನುಕರಣೆ, ಸಂಪರ್ಕ ಮಾನವಸಮಾಜದಲ್ಲಿ ಇದೆ. ಒಂದು ಸಮಾಜ ಅಭಿವರ್ಧನೆಮಾಡಿದ ಜ್ಞಾನ, ವಿಜ್ಞಾನ, ಉತ್ಪಾದನಾಸಾಧನೆಗಳು, ಇತ್ಯಾದಿ ಇತರ ದೇಶಗಳಿಗೆ ಹರಡುತ್ತದೆ. ಮಾನವಕೋಟಿ ಒಟ್ಟಿನಲ್ಲಿ ಸಾಧಿಸಿರುವ ಜ್ಞಾನದಿಂದ, ನ್ಯೂನತೆಗಳಿಂದ ಭಾವಿಸಲ್ಪಡು ತ್ತಿರುವ ಸಮಾಜಗಳು ಪ್ರಯೋಜನ ಹೊಂದಲು ಸಾಧ್ಯವಿದ್ದೇ ಇದೆ.

ಎಲ್. ಶ್ರೀಕಂಠಯ್ಯ.

ಸಶೇಷ

ಬಿಡುಗಡೆ

ಮನೆಯ ಸುತ್ತಲು ನೆರಳು . . .
ಯಾವುದೋ ಉರುಳು ಕೊರಳನರಸಿದೆ ಇರುಳು !
ಗೋಡೆಯ ಮೇಲೆ, ಛಾವಣಿಯ ಮೇಲೆ
ಸದ್ದು ನಿದ್ರಿಸುತಿರುವ ಮರದ ಎಲೆಗಳ ಮೇಲೆ
ಯಾವುದೋ ನೆರಳು ಸುಳಿದಾಡಿದೆ
ರೂಪವಲ್ಲದ ಭೀತಿ ಸಂಚರಿಸಿದೆ !

ಲಕ್ಷ ನಕ್ಷತ್ರಗಳ ಕಣ್ ತೆರೆದ ಕರಿಬಾನು
ಇತ್ತಲೇ ದಿಟ್ಟಿಸುತಿದೆ.
ಯುಗಯುಗದ ವೇದನೆಯ ಹೊರೆವೊತ್ತ ಭಾರಕ್ಕೆ
ತತ್ತರಿಸಿದೆ :
ಕತ್ತಲಲಿ ಕರಗಿರುವ ಮನೆಮನೆಯ ರೂಹುಗಳು
ಹಳೆಯ ನೆನಪಿನ ಗೋರಿ ಸಾಲಿನಂತಿರಲು,
ಉರಿಯುತಿದೆ ಹಣತೆಯೊಂದೇ ಒಂದು
ಭ್ರಾಂತಿಯೊಲು ನಿಂದು !

ಉಸಿರ ತಿದಿಯೊತ್ತುತಿದೆ
ಮುದಿಯೊಡಲು ನಡುಗುತಿದೆ.
ವ್ಯರ್ಥಗತ ಶತಮಾನ ಶೂನ್ಯದೊಲು
ಕಣ್ಣನೋಟ,
ಎಲ್ಲಿಗೋ ಓಟ !

ಪಟಪಟನೆ ರೆಕ್ಕೆಬಡಿದಿದೆ ಹಕ್ಕಿ
ಎಂದೋ ಏನೊ ಈ ಪಂಜರದಿ ಸಿಕ್ಕಿ
ಇಂದು ಬಿಡುಗಡೆಯ ಬಯಕೆಯುಕ್ಕಿ !
ಒಂದೇಸಮನೆ ತಾರಾಡುತಿದೆ, ಅದೋ
ಪಂಜರದ ಒಳಗೆ
ಬಲು ರಭಸದೊಳಗೆ !

ಸುತ್ತಲೂ ಕಂಬಿ, ಬರಿ ಕಂಬಿ
ಹಾರೈಸುತಿದೆ ಹಕ್ಕಿ ಬಿಡುಗಡೆಯ ನಂಬಿ !
" ಸಾಕುಮಾಡೋ ಜನ್ಮ
ಸಾಕುಮಾಡೋ . . ."

. . . .

ಕಡೆಗೆ ಕರೆಮುಟ್ಟಿತು
ಅವನೆದೆಯ ತಟ್ಟಿತು !
ಕಾಣದಿಹ ಕೈಯೊಂದು ಬಂದು ಬಾಗಿಲ ತೆರೆದು
" ಹೊರಡಿನ್ನು "—ಎಂದಿತು.
ಮುಗಿಲುದ್ದ ಚಿತ್ರಪಟ ಬಿಚ್ಚಿತು
ಮೆರವಣಿಗೆ ನಡೆಯಿತು.
ಬಲುದಿನದ ಬಯಕೆ ಕಡೆಗಿಂದು ಸಂದಿತು !

ಬರಿಯ ಪಂಜರ ಬಿತ್ತು : ಯಾರೋ ಎಸೆದ
ಮುರುಕು ಪೆಟ್ಟಿಗೆಯಂತೆ.
ಯಾರಿಗೂ ಬೇಡಾದ ಬಾಡಿಗೆಯ ಮನೆಯಂತೆ,
ಹರಿದುಟ್ಟು ಬಿಸುಟ ಚಿಂದಿಯಂತೆ !
ಹರಿಯಿತು ಚಿಂತೆ
ಇನ್ನು ನಿಶ್ಚಿಂತೆ !

ಬಲುದಿನದ ತೃಪ್ತಿ ಇಂದು ಬಂದಿತು ಕಡೆಗು.
ಬಿರುಗಾಳಿಯುಬ್ಬರದಿ ಹೊಯ್ದಾಡಿದಾ ಹಡಗು
ಮುಳುಮುಳುಗಿ ತಳಕಂಡು
ವಿಶ್ರಾಂತಿಪಡೆಯಿತು.
ಪಯಣ ಕಡೆಮುಟ್ಟಿತು !

* * * *

ಹಸಿದ ನೆಲ ' ಆ ' ಎಂದು ಬಾಯ್ದೆರೆದು ಕೇಳಿತ್ತು :
" ಬಂತೆ ಆಹಾರ ? "
ಅದರ ಋಣ ಅದಕೆ ಸಂದಾಯವಾಯಿತು.
ಹೊಂಚುಹಾಕುತ ಕಾದ ಪಂಚಭೂತಗಳೆಲ್ಲ

ತಮ್ಮ ಪಾಲುಂಡವು.
'ತೃಪ್ತೋಸ್ಮಿ'—ಎಂದವು!

* * * *

ಬಲುದಿನದ ನರಳನಾಲಿಸಿದ ಗೋಡೆಗಳು
ನಿಟ್ಟುಸಿರುಬಿಟ್ಟವು!
ಅವಳ ಬಾಳಿನ ಕತೆಯ ಪುಟವ ಪಟಪಟನೆ ಮುಗುಚಿ
ಯಾವ ಕಯ್ಯೋ ಏನೊ, ಪುಸ್ತಕವ ಮುಚ್ಚಿತು!
ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಬಾಳಿದ ಜೀವ
ನಾಟಕವ ಮುಗಿಸಿತು.
ತಾಯ್ತನದ ಅಕ್ಕರೆಯ ಸವಿಯೊಂದೆ ಉಳಿಯಿತು!

ಜಿ. ಎಸ್. ಶಿವರುದ್ರಪ್ಪ

ಶ್ರೀ ಅರವಿಂದ ಸಾಹಿತ್ಯ ಸಮೀಕ್ಷೆ

೧. ಊರ್ವಶೀ[1]

ಭಗವಂತನ ವಿಶ್ವಲೀಲೆಯನ್ನು ಅವ್ಯಾಹತವಾಗಿ ಮುಂದುವರಿಸುತ್ತಿರುವ ಸೃಷ್ಟಿಯ ಮಹಾಶಕ್ತಿಗಳಲ್ಲಿ ಪ್ರಣಯವೂ ಒಂದು. ಅದು ಚಲಿಸದ ಪರ್ವತವಿಲ್ಲ, ಹೆಪ್ಪುಗಟ್ಟಿಸದ ಕಡಲಿಲ್ಲ, ಪಾತ್ರವನ್ನೇ ಪರಿವರ್ತಿಸದ ನದಿಯಿಲ್ಲ. ಇನ್ನೇನು ದೈವತ್ವಕ್ಕೇರುತ್ತಾನೆ ಎನ್ನುವ ಮಹಾಪುರುಷನನ್ನು ಕ್ಷಣಕಾಲದಲ್ಲಿ ಅದು ದಿನದಿನದ ಜಂಜಡದ ದಾರಿಯ ಧೂಳಿಯ ಕಣವನ್ನಾಗಿ ಮಾಡಬಲ್ಲುದು. ದಿನದಿನದ ಜಂಜಡದ ದಾರಿಯ ಧೂಳಿಯ ಕಣಕ್ಕಿಂತ ಅಜ್ಞಾತನೂ ಅಲ್ಪನೂ ಆದ ಸಾಮಾನ್ಯನನ್ನು ಯಾರೂ ಕಂಡು ಕೇಳದ ಮಹಾ ಸಾಹಸಕಾರ್ಯಕ್ಕೆ ಪ್ರೇರೇಪಿಸಬಲ್ಲುದು. ಅದರ ಅದ್ಭುತ ಶಕ್ತಿ ಅಂಥದು. ಸಾಮಾನ್ಯ ಸಂಸಾರಿಗನಿಗೆ ಅದು ಅಗ್ನಿಯಂತೆ. ದೂರದಲ್ಲಿ ನಿಂತು ವಿಧಿಪೂರ್ವಕವಾಗಿ ಆರಾಧಿಸಿದನೋ ಅದು ಅವನಿಗೆ ಸ್ವರ್ಗಸೋಪಾನವಾಗುತ್ತದೆ. ಅದರೊಡನೆ ಅಲಸತೆಯಿಂದ ಸರಸವಾಡತೊಡಗಿದನೋ ಅವನನ್ನು ಸುಟ್ಟು ಬೂದಿಮಾಡಿ ಅವನ ಸರ್ವನಾಶಕ್ಕೆ ಕಾರಣವಾಗುತ್ತದೆ. ವೇದಸಾಹಿತ್ಯಕ್ಕೆ ಇಂತಹ ಪ್ರಣಯ ಹೊರಗಾಗಲಿಲ್ಲ. ನಮ್ಮಲ್ಲಿನ ಮೊತ್ತಮೊದಲ ಪ್ರಣಯ ಕಥೆ ಋಗ್ವೇದದಲ್ಲಿ ಊರ್ವಶೀ-ಪುರೂರವರ ಪ್ರಸಂಗದಲ್ಲಿ ಮೈದೋರಿದೆ[2]. ಆ ಸೌಂದರ್ಯದ ತಿರುಳಿಗೆ ಮನಸೋತು ಕಾಳಿದಾಸ ಅದನ್ನು ವಸ್ತುವಾಗಿ ಆರಿಸಿಕೊಂಡು ವಿಸ್ತರಿಸಿದ್ದಾನೆ ತನ್ನ ವಿಕ್ರಮೋರ್ವಶೀಯ ನಾಟಕದಲ್ಲಿ.

---

1 ಋಗ್ವೇದದಲ್ಲಿ ಮತ್ತು ಕಾಳಿದಾಸನ ವಿಕ್ರಮೋರ್ವಶೀಯ ನಾಟಕದಲ್ಲಿ ಈ ಕಥೆ ಹೇಗೆ ರೂಪುಗೊಂಡಿದೆ ಎಂಬುದನ್ನು ಶ್ರೀ ತೀ. ನಂ. ಶ್ರೀಕಂಠಯ್ಯನವರ 'ಕಾವ್ಯ ಸಮೀಕ್ಷೆ' ಎಂಬ ಗ್ರಂಥದಲ್ಲಿನ 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ' ಎಂಬ ಲೇಖನವನ್ನು ಓದಿ ನೋಡಿ.

2 "ಇದು ಬರಿಯ ಕಥೆಯಲ್ಲ. ಇಲ್ಲಿ ಪುರೂರವನೇ ಸೂರ್ಯ. ಊರ್ವಶಿಯೇ ಉಷಸ್ಸು. ತಮ್ಮ ಪ್ರಥಮ ಸಮಾಗಮವು ಮುರಿದ ಬಳಿಕ, ಕಣ್ಮರೆಯಾದ ಉಷೆಯನ್ನು ಹುಡುಕಿಕೊಂಡು ಸೂರ್ಯನು ಭಗ್ನಹೃದಯದಿಂದ ತೊಳಲುವನೆಂಬ ಪ್ರಾಕೃತಿಕ ದೃಶ್ಯವೇ ಈ ಕಥೆಯಾಗಿ ಪರಿಣಮಿಸಿರಬಹುದು. ಪ್ರಕೃತಿಯ ವಿಸ್ತಾರದಲ್ಲಿ ಪ್ರಾಚೀನರ ಕಣ್ಣಿಗೆ ತೋರಿಬಂದ ದುರಂತ ಭಾವವೇ ಅವರು ರಚಿಸಿದ ಮಾನವ ದುರಂತಕಥೆಗಳಿಗೆ ಜೀವನಾಧಾರವಾಗಿರಬಹುದು—ಹೀಗೆಂದು ಮ್ಯಾಕ್ಸ್‌ಮುಲರ್ ಪಂಡಿತರ ಅಭಿಪ್ರಾಯ."—ತೀ. ನಂ. ಶ್ರೀ. ಅದೇ. ಪುಟ ೫. ಅಡಿಟಿಪ್ಪಣಿ.

ಶ್ರೀ ಅರವಿಂದರ ಕವಿಪ್ರಜ್ಞೆ ವಿಕಾಸದ ತನ್ನ ಮೊದಲ ದಿನಗಳಲ್ಲೇ ತನ್ನ ಅನುಪಮಶಕ್ತಿಯನ್ನು ಪ್ರದರ್ಶಿಸಲು ಈ ವಸ್ತುವನ್ನು ಆರಿಸಿಕೊಂಡಿತು. ವೈದಿಕ-ಲೌಕಿಕ ಸಾಹಿತ್ಯಗಳೆರಡರಲ್ಲೂ ಅಪೂರ್ವವಾದ ಮನ್ನಣೆಯನ್ನು ಪಡೆದು ಭಾವುಕಲೋಕದ ಪ್ರೇಮಕ್ಕೆ ಪಾತ್ರವಾಗಿದ್ದ ಈ ವಸ್ತುವನ್ನು ತಮ್ಮ ನೂತನ ದೃಷ್ಟಿಯಿಂದ ನೋಡಿದ್ದಾರೆ ಶ್ರೀ ಅರವಿಂದರು. ಕತೆಯ ಹೊರಮೈಯಲ್ಲಿ ಮಾಡಿರುವ ಪರಿವರ್ತನೆ, ಕತೆಯ ಆತ್ಮವನ್ನು ನೋಡಲು ಅವರು ನೀಡಿರುವ ದರ್ಶನವಿಧಾನ, ಆಗ ತಾನೆ ತೆರೆಯುತ್ತಿದ್ದ ಅವರ ಕವಿತಾ ಶಿಶುವಿನ ಕಣ್ಣುಗಳಲ್ಲಿ ನಾವು ಕಾಣುವ ತೇಜಸ್ಸು ಇವುಗಳ ಸಮೀಕ್ಷೆಯೇ ನಮ್ಮ ಗುರಿ.

೧. ದರ್ಶನ

ದೇವಾಸುರ ಯುದ್ಧದಲ್ಲಿ ಭಾಗವಹಿಸಿ ಸ್ವರ್ಗದಿಂದ ಭೂಮಿಗೆ 'ನಕ್ಷತ್ರ'ದಂತೆ ಇಳಿದುಬರುತ್ತಿದ್ದಾನೆ ಪುರೂರವಸ್. ಇಳಿದು ಬಂದವನು ಉತ್ತರದ ಕಡೆಗೆ ಕಣ್ಣು ಹೊರಳಿಸಿದರೆ ದೈತ್ಯ ಹಿಮ ಗಗನಕ್ಕೇರುತ್ತಿದೆ; ಹಿಮಾಚಲದ ರೂಪದಲ್ಲಿ! ಅಲ್ಲಿನ ಭೀಮ ಮೌನದ ಅನುಭವವಾಯಿತು ಅವನಿಗೆ.[1] ಕವಿಯ ಸೃಷ್ಟಿ ಶಕ್ತಿ ಆ ಮೌನದ ಮಹತ್ತನ್ನು ಮತ್ತಷ್ಟು ಸ್ಪಷ್ಟವಾಗಿ ವಿವರಿಸುತ್ತದೆ. ರಣಭೇರಿಗಳೂ, ರಥಚಕ್ರದ ಚೀತ್ಕಾರವೂ ಸೇನೆಗಳ ತುಮುಲಧ್ವನಿಯೂ ಅವನ ಕಿವಿಯಲ್ಲಿ ಇನ್ನೂ ಅನುರಣಿಸುತ್ತಿತ್ತು; ಈಗ ತಾನೆ ಯುದ್ಧದಿಂದ ಹಿಂದಿರುಗುತ್ತಿದ್ದವನಾದ್ದರಿಂದ. ಆದುದರಿಂದ ಅವನಾತ್ಮ ಈ ಹೈಮಾಚಲ ಶಾಂತಿಯನ್ನು ಆನಂದದಿಂದ ಹೀರಿತಂತೆ; ಮತ್ತೆ ಅವನು ಅದರಲ್ಲಿ ತನ್ನ ತಾಯಿಯ ಎದೆಯನ್ನು ಗುರುತಿಸಿದನಂತೆ! ಹಾಗೆಯೇ ಪೂರ್ವದಿಕ್ಕಿನ ಕಡೆಗೆ ಕಣ್ಣು ಹೊರಳಿಸಿದರೆ ಅಲ್ಲಿ—ಪೂರ್ವದಿಶಾಕನ್ಯೆ ದಿನ ಶಿಶುವಿಗೆ ಜನ್ಮ ನೀಡುತ್ತಿದ್ದಾಳೆ! ಅರವಿಂದರ ಕಲ್ಪನೆ ಕ್ಷಣಕಾಲ ನಮ್ಮನ್ನು ಸೆರೆ ಹಿಡಿಯುತ್ತದೆ. ಅವರು ಅದಕ್ಕೆ ಉಕ್ತಿ ನೀಡಿರುವ ಬಗೆಯನ್ನು ನೋಡಿ: "ಯಾವುದೋ ಮಹಾಕಾವ್ಯದ ಒಂದು ಪಂಕ್ತಿ ಅಸ್ಪಷ್ಟತೆಯಿಂದ ಮೂಡಿ ಪರಿಪೂರ್ಣವಾದ ವಾಕ್ಕಿಗೆ ಕ್ರಮಕ್ರಮ ಕ್ರಮವಾಗಿ ಸುರುಳಿ ಬಿಚ್ಚಿಕೊಳ್ಳುವಂತೆ ಇತ್ತಂತೆ ಮೂಡಣದ ಆ ದಿವ್ಯಪ್ರಭಾತ ಕಾವ್ಯಕ್ರಿಯೆ.[2] ಈ ಪ್ರಭಾತದ ಇಂದ್ರ

---

[1] And felt the mighty silence.

[2] ಶ್ರೀ ಅರವಿಂದರ ಪಂಕ್ತಿಗಳನ್ನೇ ಉದ್ಧರಿಸದಿರುವುದು ಕವಿಗೆ ಅಪಚಾರ ಮಾಡಿದಂತಾಗುತ್ತದೆ.

But as he listened to the hush, a thought
Came to him from the spring and he turned round
And gazed into the quiet maiden East,
Watching that birth of day as if a line

ರಮಣೀಯತೆಯ ಹಿಂದೆ ಅವನಿಗೆ ದೇವಿ ಉಷೆಯ ದರ್ಶನವಾಯಿತು. ಪರಿಪೂರ್ಣ ವೈಭವಕ್ಕಿಂತಲೂ ಹೆಚ್ಚು ಶ್ರೀಮಂತವಾದ, ಜ್ಯೋತಿಯ ಭವಿಷ್ಯವಾಣಿಯಿಂದ ಸುತ್ತಲ್ಪಟ್ಟ ಆಕೆಯ ದೇಹ ಹೊಚ್ಚ ಹೊಸದಾಗಿ ರಹಸ್ಯದ ಗರ್ಭದಿಂದ ಹೊರಕ್ಕೆ ಮೂಡಿತಂತೆ. ಅವಳೇ ಸ್ವರ್ಣಕನ್ಯೆ ಉಷಾ, ಜೀವದ ತಾಯಿ, ಆದರೂ ಕನ್ಯೆ. ಬಂದಳು. ಅವಳು ಬಂದುದೋ ಅದೊಂದು ಚೆಲುವು. ಮುಖದ ತೆರೆ ತೆರೆದು, ಮಂದಹಾಸದಿಂದ ಕೂಡಿ, ಗುಲಾಬಿಗೆನ್ನೆಯ ನವವಧುವಿನಂತೆ, ಎದೆಯ ತುಂಬ ಹೂವು ತುಂಬಿ, ಪ್ರಭಾತ ಸಮೀರ ಕೇಶರಾಶಿಯನ್ನಲುಗಿಸುತ್ತಿರಲು, ಹೊನ್ನಕಾಂತಿಯ ನಡುವೆ ಬಂದಳು!

ಒಬ್ಬಳೇ ಬಂದಳೇ? ಇಲ್ಲ. ಅವಳ ಸುತ್ತ ಯುದ್ಧದಿಂದ ಬಳಲಿದ ದೇವತೆಗಳ ಆಯಾಸವನ್ನು ನೀಗುವ ದೇವಕನ್ಯೆಯರು. ಸ್ಥಿತಿಯ ಸುವರ್ಣ ಅರುಣೋದಯ ದಿಂದ ಸುವರ್ಣದಂತೆ ಮೂಡಿದವರು. ಅಮರತ್ವದ ಸಾಗರದ ಯೌವನದಿಂದ ಮೂಡಿದವರು! ಯೌವನದಿಂದ ಕೂಡಿದವರು! ಅಮರತ್ವವನ್ನೇ ಪಡೆದವರು! ಅವರ ಪಾದದಲ್ಲಿ ಅಲೆಗಳು ವಾಣಿಯಲ್ಲಿ ಸಾಗರದ ನೊರೆ, ಅವರಾತ್ಮವೋ ಪ್ರೇಮದ ಸಾಗರ. ಅವರ ಕೇಶ-ವಸನಗಳು ತೆಳುಗಾಳಿಯ ನಡುವಣ ಬಿರುಗಾಳಿಯಂತೆ ಚಲಿಸುತ್ತಿರಲು ಮೋಡಗಳ ನಡುವೆ ನಗುತ್ತಾ ಓಡಿದರು. ಪ್ರಾತಃಕಾಲದ ರವಿಕಿರಣವನ್ನು ತಳೆದ ಇಬ್ಬನಿಯಂತೆ ರಂಜಿಸಿದರು ಅವರು—ಮೇನಕೆ, ಮಿಶ್ರಕೇಶಿ, ಮಲ್ಲಿಕಾ, ರಂಭ, ನಲಭ, ಶೀಲ, ನಳಿನಿ, ಲಲಿತ, ಲಾವಣ್ಯಾ, ತಿಲೋತ್ತಮೆಯರು. ಎಷ್ಟೊಂದು ಮಧುರವಾದ ಹೆಸರುಗಳು! ಅವರ ನಡುವೆ 'ಅವಳು'!

ಅವಳು! ಅವಳನ್ನು ನೋಡಿದೊಡನೆಯೇ ಮಹಾ ಸಂತೋಷ ಭಯಪಡಿಸಿದಂತೆ ಪುರೂರವಸ್ ಒಮ್ಮೆ ನಡುಗಿದನಂತೆ. ಅವನ ವಿಶಾಲ ಹೃದಯ ಬರಲಿರುವ ಜಂಝಾ ವಾತದ ನಿರೀಕ್ಷಣೆಯಿಂದಲೇ ನಿಮಿರಿ ನಿಲ್ಲುವ ಕಡಲಿನಂತೆ ನಡುಗಿತಂತೆ. ಅವಳ ಶಕ್ತಿಯನ್ನು ಒಂದೇ ಮಾತಿನಲ್ಲಿ ವಿವರಿಸಿದ್ದಾರೆ ಕವಿ: ಸ್ವರ್ಗ ಉಸಿರಾಡುತ್ತಿದ್ದುದೇ ಅವಳ ಕೇಶ-ಕಾಯಗಳ ಮೂಲಕ. ಅವಳು ಸ್ವರ್ಗದ ಸುಗಂಧ-ಸುಂದರ ಸ್ವಪ್ನ.

ಸ್ವಲ್ಪಕಾಲ ಸ್ತಬ್ಧನಾಗಿ, ವಾಕ್‌ಶೂನ್ಯನಾಗಿ, ಕೋಟಲೆಗೊಂಡವನಾಗಿ ಪುರೂರವಸ್ ಭೂಮಿಯನ್ನೇ ಆಕ್ರಮಿಸುತ್ತಿದ್ದ ಆ ಹಾಸ ಸಂತೋಷಗಳನ್ನು ನಿಂತು ನಿಟ್ಟಿಸಿದನಂತೆ. ಕಡೆಗೆ ಅವನು ನಿಟ್ಟುಸಿರುಬಿಟ್ಟ. ಅವನ ಹೃದಯುದ ಅಸ್ಪಷ್ಟರಾಗ

Of some great poem out of dimness grew
Slowly unfolding into a perfect, speech·

ಇದರೊಡನೆ ಮಹಾಕವಿ ಕುವೆಂಪುರವರ 'ಬಂಧುರ ದಿನೋದಯದ ದಿವ್ಯಪ್ರಭಾತ ಕಾವ್ಯಂ' ಎಂಬ ಚಿತ್ರಾಂಗದದ ಪಂಕ್ತಿಯನ್ನು ಹೋಲಿಸಿ ನೋಡಿ: ಪರ್ವ ೧. ಪಂಕ್ತಿ ೨೦೮.

ಆ ಏಕಾಂತಕ್ಕೆ ಮಾತ್ರ ಕೇಳುವಂತೆ ಈ ರೀತಿ ಹೊರಹೊಮ್ಮಿತು. "ಓ, ನೀನಾರು ಶಕ್ತಿಮಾನದೇವ? ಅಗ್ನಿಹಸ್ತಗಳಿಂದ ನನ್ನನ್ನು ಒತ್ತಿಹಿಡಿದಿರುವ ನೀನಾರು? ಪರ್ವತ ನೀಹಾರಿಕೆಗಳಾದರೂ ಚಲಿಸಿಯಾವು ಆದರೆ ಪುರೂರವನು ಮಾತ್ರ ಎಂದೂ ಚಲಿತನಾಗುವುದಿಲ್ಲ ಎಂದು ಭಾವಿಸಿದ್ದೆನಲ್ಲ. ಆದರಯ್ಯೋ ಪತನ ಹೊಂದುತ್ತಿದ್ದೇನೆ. ನನ್ನ ಆತ್ಮ ಎಲ್ಲೋ ಪರಿಚಯವಿಲ್ಲದೆಡೆಯಲ್ಲಿ ಗಿರಗಿರನೆ ಸುತ್ತುತ್ತಿದೆ. ದಮನ ಗೊಳಿಸಲಾರದ ಅಶ್ವಗಳ ನಾಗಾಲೋಟದ ಖುರಪುಟಧ್ವನಿಯನ್ನು ಬೆರಗಾಗಿ ಕೇಳುತ್ತಿದ್ದೇನೆ[1]. ಓ ಜನ ನನ್ನನ್ನು ಕುರಿತು ಏನೆಲ್ಲ ಹೇಳಿದರು—ರಾಜ ಪುರೂರವಸ್ ಮಾನವತೆಯನ್ನೇ ಮೀರಿ ಬೆಳೆಯುತ್ತಾನೆ. ಅವನ ಆತ್ಮವನ್ನು ನೀಲಸ್ವರ್ಗದೆತ್ತರಕ್ಕೆ ಎತ್ತುತ್ತಾನೆ. ಈಗೇಕೆ ಈ ಭೂಮಿಯ ಸೆಳೆತ? ನೀನಾರು ಓ ರಹಸ್ಯವೆ? ಹೊನ್ನ ಅಚ್ಚರಿಯೆ! ಚಲಿಸುವ ಮಾಯಕಾರ್ತಿ! ನಾನು ಪ್ರೀತಿಸಿದ ಮಂಗಳ ಸಂಧ್ಯೆಯ ಭಾಗವಲ್ಲವೆ ನೀನು? ಮೋಡಗಳ ಚೆಲುವಿನಲ್ಲಿ ನಿನ್ನನ್ನು ಕಂಡಿಲ್ಲವೆ ನಾನು? ಬೆಳುದಿಂಗಳಲ್ಲಿ, ತಾರೆಗಳ ಬೆಳಕಿನಲ್ಲಿ, ಅಗ್ನಿಯಲ್ಲಿ ನಿನ್ನನ್ನು ಕಂಡಿಲ್ಲವೆ ನಾನು? ಅರಳಿದ ಹೂವಿನಲ್ಲಿ? ಅಳಿ ಝೇಂಕಾರದಲ್ಲಿ? ವಸಂತನಲ್ಲಿ? ಬೆಳುದಿಂಗಳಿಗೆ ತೆರೆದ ಶಾಂತ ಸಲಿಲದಲ್ಲಿ?—ದಿಟ. ಕಳೆದ ಯಾವುದೋ ಜನ್ಮದಲ್ಲಿ ನಿನ್ನ ಹೆಸರಿಗೆ ನಾನು ಒಲಿದಿದ್ದೆ[2]. ಈಗ ಅಕ್ಷರ ಅಕ್ಷರವಾಗಿ ಅದರ ಮಾಧುರ್ಯವನ್ನು ನೆನೆಯಲು ಯತ್ನಿಸುತ್ತಿದ್ದೇನೆ . . . ಲೋಕದ ಸಕಲ ಸೌಂದರ್ಯವೂ ನಿನ್ನಲ್ಲಿದೆ. ಆತ್ಮದ ಅನುಭೂತಿಯ ಸಕಲ ವೈಭವವೂ ನಿನ್ನಲ್ಲಿದೆ . . . ಬಾ, ಬೆಳಕಿನ ಜವನಿಕೆಯನ್ನು ಸರಿಸು ಸುಂದರೀ . . . ಓ ಅನಂತ ಕರುಣೆಯೇ ಸಾಂತವಾಗಿ ನನ್ನ ಆಲಿಂಗನಕ್ಕೆ ಸಿಕ್ಕು.[3] ಬಾ, ನಮ್ಮ ಮಿಲನ ವೇದದ ಪಾದಗಳಂತೆ ಪರಸ್ಪರ ಪೂರಕ. ನನ್ನ ಹೃದಯದ ಮೇಲೆ ನಿನ್ನ ಪಾದವನ್ನು ಇಡು ದೇವಿ. ನಾನು ಪುರೂರವಸ್, ಊರ್ವಶೀ."

ಎಂತಹ ಕಾವ್ಯಮಯವಾದ ಪ್ರೇಮಭಾಷಣ! ಒಂದು ವೇಳೆ ಊರ್ವಶಿ ಇದನ್ನು ಕೇಳಿದ್ದರೆ, ಆಕೆ ಕಾವ್ಯರಸಾಸ್ವಾದ ಪ್ರಿಯೆಯಾಗಿದ್ದರೆ, ಇದರ ರಸಮಾಧುರ್ಯಕ್ಕೆ ಮರುಳಾಗಿ ಪುರೂರವನ ತೋಳತೆಕ್ಕೆಯ ಬಂದಿಯಾಗುತಿದ್ದಳೇನೋ! ಇದಕ್ಕೆ

---

[1] ಸಹೃದಯನ ಧ್ವನಿ ಗ್ರಹಣಶಕ್ತಿ ಇದು ಸಂಯಮವನ್ನು ಮೀರಿದ ಇಂದ್ರಿಯಾಶ್ವಗಳ ಧ್ವನಿ ಎಂಬುದನ್ನು ಗುರುತಿಸುತ್ತದೆ.

[2] ಋಗ್ವೇದದ ಋಷಿ ಯಾವ ಪ್ರಕೃತಿ ಸತ್ಯಕ್ಕೆ ಪ್ರತಿಮೆಯನ್ನೊದಗಿಸಿದನೋ ಆ ಉಷಾ-ಸೂರ್ಯರ ಪ್ರಣಯಕ್ಕೆ ಇದು ಅತಿ ಸೂಕ್ಷ್ಮವಾಗಿ ಸೂಚನೆ ನೀಡುತ್ತದೆ ಎನಿಸುತ್ತದೆ.

[3] ತನ್ನ ಪ್ರೇಮದ ವಸ್ತುವಿಗೂ ಭಗವಂತನಿಗೂ ಯಾವ ವ್ಯತ್ಯಾಸವೂ ಇರುವಂತಿಲ್ಲ ಈ ಉನ್ಮತ್ತ ಪ್ರೇಮಿಗೆ!

ಸಹಾಯಕವಾಗಿ ಮುಂದೆ ನಾವು ಕಾಣುವ ಭರತ ಋಷಿಯ ಶಾಪದ ಆವಶ್ಯಕತೆಯೇ ಇರುತ್ತಿರಲಿಲ್ಲವೇನೋ !

ಕಟ್ಟಕಡೆಗೆ 'ಊರ್ವಶೀ' ಎಂಬ ಹೆಸರು ಹೇಗೆ ನೆನಪಿಗೆ ಬಂತು ಎಂಬುದಕ್ಕೆ ಒಂದು ಮಿಶ್ರೋಪಮೆಯನ್ನು ನೀಡುತ್ತಾರೆ ಶ್ರೀ ಅರವಿಂದರು. 'ನಿದ್ದೆಯಿಂದ ಎಚ್ಚತ್ತ ವ್ಯಕ್ತಿಯೊಬ್ಬ ಮರೆತ ಕನಸನ್ನು ನೆನೆಯಲು ಹೆಣಗುತ್ತಾನೆ, ವಾಸ್ತವ ಜಗತ್ತಿನ ಸುಖ-ದುಃಖಗಳನ್ನು ಒದ್ದು ಹೆಣಗುತ್ತಾನೆ. ಬಹುಕಾಲ ಅದೇ ನಿಷ್ಫಲ ಸ್ಥಿತಿಯಲ್ಲಿದ್ದು ಆ ಸುಂದರ ಸ್ವಪ್ನದ ಸುಖವನ್ನು ಮತ್ತೆ ನೆನಪಿಗೆ ತರಲು ನಾನಾ ದಾರಿಗಳನ್ನು ಹುಡುಕುತ್ತಾನೆ. ಇದ್ದಕ್ಕಿದ್ದಂತೆಯೇ ದರ್ಶನ ಜ್ವಲಿಸುತ್ತದೆ, ಬುದ್ಧಿಯಲ್ಲಿ ಮಿಂಚುತ್ತದೆ. ಹಾಗೆ ಉಕ್ಕಿತು ಅವನ ಬಾಯಿಂದ 'ಊರ್ವಶೀ' ಎಂಬ ನಾಮ.

ಇಷ್ಟರಲ್ಲಿಯೇ ಆ ಸ್ತ್ರೀಯರ ಆಕ್ರಂದನ ಕೇಳಿಸುತ್ತದೆ. ದೈತ್ಯಕೇಶಿ ಅವರನ್ನು ಆಕ್ರಮಿಸಿ ಅವರ ನಡುವಣ ತಾರೆಯಾದ ಊರ್ವಶಿಯನ್ನು ಹೊತ್ತು ಓಡುತ್ತಾನೆ. ಪರಿಸ್ಥಿತಿಯನ್ನು ಗಳಿಗೆಯಲ್ಲೇ ಅರಿತ ರಾಜ ಅವನನ್ನು ಅಟ್ಟಿಕೊಂಡು ಹೋಗುತ್ತಾನೆ. ರಣಭಯಂಕರನಾದ ಪುರೂರವನನ್ನು ಕಂಡೇ ಕೇಶಿ ತನ್ನ ಸೆರೆಯನ್ನು ಧರೆಗೆ ಚೆಲ್ಲಿ ಪಲಾಯನ ಸೂತ್ರವನ್ನು ಪಠಿಸುತ್ತಾನೆ.

ರಾಜ ಬಾಡಿದ ಕಮಲದಂತೆ ನೆಲದ ಮೇಲೆ ಬಿದ್ದಿದ್ದ ಅವಳನ್ನೆತ್ತಿಕೊಂಡು ರಥದಲ್ಲಿ ಮಲಗಿಸಿ ರಥವನ್ನು ನಡೆಸಿಕೊಂಡು ಹೊರಡುತ್ತಾನೆ. ಅವನ ಒಂದು ಕೈ ರಥವನ್ನು ನಡೆಸುತ್ತಿದೆ. ಮತ್ತೊಂದು ಕೈ ಆ ಸುಂದರಿಗೆ ಅವಲಂಬನವಾಗಿದೆ. ಕಣ್ಣೆರಡೂ ಅವಳಲ್ಲಿಯೇ ನಾಟಿವೆ. ಅವಳ ಎದೆಯ ಏರಿಳಿತದಿಂದಲೇ ಅವಳ ಆತ್ಮದ ಮಾಧುರ್ಯವನ್ನು ಅರಿತನಂತೆ! ಆದರೆ ಆ ನಿದ್ರಾಮುದ್ರಿತ ಲಲನೆಯ ಸೌಂದರ್ಯವನ್ನು ಬಹುಕಾಲ ಆಸ್ವಾದಿಸುವ ಪುಣ್ಯ ಅವನದಾಗಿರಲಿಲ್ಲ. ಉಳಿದ ಹೆಂಗಳೆಯರ ಕೇಕೆ ಕೇಳಿಸಿತು. ಪ್ರೇಮನಿದ್ರಿತ ರಾಜನನ್ನು ಮೇನಕೆ ಎಚ್ಚರಿಸಿದಳು.

"ಅವಳ ಕಣ್ಣುಗಳಲ್ಲಿ ನಿನ್ನ ವಿಜಯವನ್ನು ಬಹಳವಾಗಿ ಓದಬೇಡ, ರಾಜನ್! ನಮ್ಮ ಸೋದರಿಯನ್ನು ನಮಗೆ ನೀಡು. ಇದಕ್ಕೆ ಪ್ರತಿಫಲವಾಗಿ ನಿನ್ನನ್ನು ನೀನು ಸಂಪೂರ್ಣವಾಗಿ ಹಿಂದಕ್ಕೆ ತೆಗೆದುಕೊಂಡು ಹೋದರೆ ಸಾಕು!"

ರಾಜ ಇನ್ನೇನು ತಾನೆ ಮಾಡಿಯಾನು? ಮೆಲ್ಲಗೆ ಆಕೆಯನ್ನು ಕೆಳಕ್ಕಿಳಿಸಿ ಮೃದುವಾಗಿ ಕಂಪಿಸುತ್ತಾ ನಿಂತ. ಆಗ ದೇವಿ ತಿಲೋತ್ತಮೆ ನುಡಿದಳು.

"ರಾಜನ್, ದೇವತೆಗಳಿಗಿಂತ ಬಲದಲ್ಲಿ ಮಿಗಿಲಾದ ರಾಜನ್! ಹೌದು, ದೇವತೆಗಳಿಗಿಂತ ಮಿಗಿಲು. ಏಕೆಂದರೆ ದೇವತೆಗಳು ಹಳಬರಾಗಿಯೇ ಇರುತ್ತಾರೆ. ಅವರ ಶಕ್ತಿಯಲ್ಲಿ ಏರಿಳಿತಗಳಿಲ್ಲ. ಮಾನವರು ಇವರಿಗಿಂತ ಕಡಮೆಯಾದರೂ

ಅವರ ಆತ್ಮವಿಕಾಸಕ್ಕೆ ಅವಕಾಶವಿದೆ. ದೇವತೆಗಳಿಗಿಂತ ದೊಡ್ಡವರಾಗಬಹುದು. ಮಾನವ, ರಾಗವಿಸರ್ಜನೆಯ ಅನುಭವದಿಂದ ಅವನ ಅನಂತ ಸಾಮರ್ಥ್ಯಗಳನ್ನು ಪರಿಪೂರ್ಣಗೊಳಿಸಿಕೊಂಡು ಗುಣದಲ್ಲಿ ಬೆಳೆದು ಬೆಳೆದು ದೇವನಾಗಬಹುದು. ಇಂದ್ರಿಯವನ್ನು ನಿಗ್ರಹಿಸಿ, ತನ್ನ ಸುತ್ತ ಸೌಖ್ಯಶಾಂತಿಗಳ ವಾತಾವರಣವನ್ನು ಅನುಭವಿಸಬಲ್ಲವನು ತಾನು ಯತ್ನಿಸುವ ದೈವತ್ವವನ್ನು ಸಾಧಿಸಬಹುದು. ಅದರ ಪಡಿಯಚ್ಚಾಗಬಹುದು."

ಶ್ರೀ ಅರವಿಂದರ ತತ್ವಸಂದೇಶ ಬೀಜರೂಪವಾಗಿ ಇದರಲ್ಲಿ ಅಡಗಿದೆ. ಮುಂದೆ ಅವರು ಅನೇಕ ಮಾತುಗಳಲ್ಲಿ ಅನೇಕ ವಿಧಾನಗಳಲ್ಲಿ ವಿಸ್ತರಿಸಿದುದು ಸಾರರೂಪವಾಗಿ ಇಲ್ಲಿ ಹುದುಗಿದೆ. ತಿಲೋತ್ತಮೆ ಪುರೂರವನಿಗೆ ಕೊಟ್ಟ ಈ ದೃಢವಾಣಿಯ ಎಚ್ಚರಿಕೆ ಇನ್ನೇನು ಕಾಮಪಂಕವನ್ನು ಪ್ರವೇಶಿಸುತ್ತಾನೆ ಎನ್ನುವ ಪ್ರತಿಯೊಬ್ಬನಿಗೆ ಅಗತ್ಯವಾದದ್ದೇ. ಪುರೂರವಸ್ ಉತ್ತರ ಕೊಡಲಿಲ್ಲ. ಅದಕ್ಕೆ ಬದಲು ನಿಧಾನವಾಗಿ ಹಿಂದಿರುಗಿದ. ಆಕೆ ಹಾರಾಡುತ್ತಿರುವ ಸೆರಗು ತುರುಬುಗಳಿಂದ ಕೂಡಿ, ಗಂಭೀರತೆ, ಅಚ್ಚರಿ, ಬೆಳಕುಗಳು ತುಂಬಿದ್ದ ಕಣ್ಣಿನಿಂದ ದೂರದ ಗಿರಿಶಿರದ ಮೇಲೆ ನಿಂತು ಈತ ಹಿಂತಿರುಗುವುದನ್ನೇ ನೋಡುತ್ತಿದ್ದಳು. ಆದರೇನು ಆತ ಇದಾವುದರ ಪರಿವೆಯೂ ಇಲ್ಲದೆ ನಿಧಾನವಾಗಿ ಹೆಜ್ಜೆಯಿಡುತ್ತಾ ನಡೆದ.

೨. ಮಿಲನ

ಅಪ್ಸರೆಯರ ಲೋಕದಲ್ಲಿ ಊರ್ವಶಿಯ ಸ್ಥಿತಿ ವಿಚಿತ್ರವಾಯಿತು. ದಿನದಿನದ ಪರಿಚಿತ ವಸ್ತುಗಳು ಅಪರಿಚಿತ ವಸ್ತುಗಳಂತೆ ಕಂಡುವು. ಆಕೆಯಲ್ಲಿ ಪ್ರೇಮ ಮೂಡಿತು! ಚಂಚಲೆಯಾದ ಹೆಣ್ಣಿನ ಹೃದಯದಲ್ಲಿ ಪ್ರೇಮ ಮೂಡುವುದೆಂದರೇ ಅಚ್ಚರಿ—ಇನ್ನು ಅಚ್ಚರಸಿಯ ಹೃದಯದಲ್ಲಿ ಪ್ರೇಮ ಮೂಡುವುದೆಂದರೆ! ಆದರೆ ಮೂಡಿತು. ಅದು ತಾನೆ ವಿಧಿ! ದೇವಸಭೆಯಲ್ಲಿ ಕಡಲಿನ ತೆರೆಯಂತೆ ನರ್ತಿಸುತ್ತಿರಲಿ, ಸೂರ್ಯಕಿರಣ ಸದೃಶವಾದ ಅವಳ ಅಂಗುಳಿಗಳು ಸ್ವರ್ಗವೀಣೆಯನ್ನು ಮಿಡಿಯುತ್ತಿರಲಿ, ಅರುಣೋದಯದೊಡನೆ ದೇವಗಂಗೆಯಲ್ಲಿ ಮೀಯುತ್ತಿರಲಿ, ಇಂದ್ರನಂದನದಲ್ಲಿ ಸಂಚರಿಸುತ್ತಿರಲಿ, ಸ್ವರ್ಣಸಂಧ್ಯೆಯಲ್ಲಿ ಶಾಂತಶಾಖೆಗಳ ತಳದಲ್ಲಿ ಕುಳಿತಿರಲಿ ಏನು ಮಾಡುತ್ತಿರಲಿ ಆ ಮರ್ತ್ಯನದೇ ನೆನಪು ಅವಳಿಗೆ.

ಒಮ್ಮೆ ಇಂದ್ರನ ಸಭೆಯಲ್ಲಿ ಸ್ವರ್ಗದ ನಾಟಕಕಾರನಾದ ಭರತಮುನಿಯ ನೇತೃತ್ವದಲ್ಲಿ ಲಕ್ಷ್ಮೀಸ್ವಯಂವರ ನಾಟಕ ನಡೆಯಿತು. ಊರ್ವಶಿಯದೇ ಲಕ್ಷ್ಮಿಯ ಪಾತ್ರ. ಗೆಳತಿ ಈಕೆಯನ್ನು ಕೇಳುತ್ತಾಳೆ: "ಹೇಳು ಸಖಿ, ಎಲ್ಲ ದೇವತೆಗಳಿಗಿಂತ

ಹೆಚ್ಚಾಗಿ ಸ್ವರ್ಗ ಭೂಮಿಗಳ ಸೊಗದ ಹೊನಲಿಗಿಂತ ಹೆಚ್ಚಾಗಿ ನೀನು ಪ್ರೀತಿಸುವ ಪ್ರಿಯನಾರು? ಹೇಳು." ಅದು ನಾಟಕ, ತಾನು ಹೇಳಬೇಕಾದ ಪದ 'ಪುರುಷೋತ್ತಮ' ಎಂಬುದನ್ನೆಲ್ಲ ಮರೆತು ತನ್ನ ಪ್ರಿಯನಲ್ಲೇ ನಟ್ಟ ಮನಸ್ಸನ್ನುಳ್ಳ ಆಕೆ 'ಪುರೂರವಸ್' ಎನ್ನುತ್ತಾಳೆ. ರಸಭಂಗವಾಯಿತು. ಸಭೆಯಲ್ಲಿ ನಗೆ ಉಕ್ಕಿ ಹರಿಯಿತು. ಭರತ ಋಷಿ ಆವಳಿಗೆ ಶಾಪಕೊಟ್ಟ: "ಭೂಮಿಯಲ್ಲಿ ಎಲ್ಲಾದರೂ ನಿನ್ನ ಪ್ರಿಯನೊಡನೆ ಇರು. ಮತ್ತೆ ಸ್ವರ್ಗದಲ್ಲಿ ಉಸಿರಾಡುವ ಆಸೆಯನ್ನು ಮಾತ್ರ ಮರೆ." ಉಳಿದವರ ದೃಷ್ಟಿಯಿಂದ ಶಾಪವಾದುದು ಆ ಪ್ರೇಮಗ್ರಸ್ತಳಿಗೆ ವರವಾಯಿತು. ತನ್ನ ಸುಖದ ಕಡೆಗೂ ಗಮನವುಳ್ಳ ಇಂದ್ರನ ಮಧ್ಯಸ್ಥಿಕೆಯಿಂದ ಅವಳು ಮತ್ತೆ ಸ್ವರ್ಗಕ್ಕೆ ಹಿಂದಿರುಗಬಹುದು ಎಂಬ ವಿಶಾಪವೂ ದೊರೆಯಿತು.

ಉರ್ವಶಿ ಭೂಮಿಗೆ ಇಳಿದುಬಂದಳು. ನಗರಜೀವನ ಬೇಸರವಾಗಿ ಹಿಮಾಚಲದ ಶಾಂತಶಿಖರಗಳಲ್ಲಿ ಸುತ್ತುತ್ತಿದ್ದ ಪುರೂರವನಿಗೆ ಒಂದು ದಿನ ಒಮ್ಮೆಲೇ "ನೀನು ವಿಜಯಿಯಾದೆ ರಾಜನ್. ಇಗೋ, ನಿನ್ನ ಬದುಕಿಗೆ ಉರ್ವಶಿಯನ್ನು—ಸ್ವಪ್ನವನ್ನಲ್ಲ—ನೀಡುತ್ತಿದ್ದೇನೆ" ಎಂಬ ತಿಲೋತ್ತಮೆಯ ವಾಣಿ ಕೇಳಿತು. 'ಮಹಾಭಾವವೊಂದು ಹೊಳೆದೊಡನೆಯೇ ಧಿಗ್ಗನೆದ್ದು ಸಾರಿಹೇಳುವ ಮಹಾಕವಿಯಂತೆ' ಪುರೂರವಸ್ ಎದ್ದು ನೋಡಿದ. ತಿಲೋತ್ತಮೆ ಮತ್ತೆ ಹೇಳಿದಳು—ಮತ್ತೆ ಹಿಂದಿನ ಎಚ್ಚರಿಕೆಯ ವಾಣಿಯನ್ನು ಸಾರಿಹೇಳಿದಳು—

"ಪುರೂರವಸ್ ನಿಮ್ಮಿಬ್ಬರಲ್ಲಿ ಒಬ್ಬ ಮರ್ತ್ಯ, ಮತ್ತೊಬ್ಬಳು ಅಪ್ಸರಸಿ. ನಾವೋ ಸಾಗರ ಸುತೆಯರು—ಅನಂತಜೀವಿಗಳು, ಸಾಗರದಂಥವರು. ಒಬ್ಬನದೇ ಒಡೆತನವನ್ನು ಒಪ್ಪುವವರಲ್ಲ, ಒಬ್ಬನದೇ ಮುಖದಲ್ಲಿ ವಿಶ್ವವೆಲ್ಲವನ್ನೂ ಅಡಕುವುದಿಲ್ಲ. ಆದರೆ ದಿವ್ಯಮಾರುತನಂತೆ, ಸ್ವಚ್ಛಂದಸಾಗರದಂತೆ, ಸುಂದರಬೆಳಕಿನಂತೆ ಸ್ವಚ್ಛಂದ ಸಮರ್ಪಣೆಯಿಂದ ಮಾತ್ರ ಪರಿಶುದ್ಧರು. ದಿವ್ಯ ದಿವಿಜೀವರನ್ನು, ಮಾನವಾತ್ಮಗಳನ್ನು, ಸ್ವಚ್ಛಂದತೆಯಿಂದ ಅಪ್ಪುತ್ತೇವೆ. ಹೂವು ಗಾಳಿಗಳೊಡನೆ ಮಾತ್ರ ಸ್ವಾತಂತ್ರ್ಯ ವಹಿಸುತ್ತೇವೆ. ಆದರೆ ಇವುಗಳಲ್ಲಿ ನೀನು ಯಾರು ಹೇಳು? ಓ ಶುದ್ಧ ಧವಳಜೀವಿ, ನಿನ್ನ ಪರಿಶುದ್ಧತೆಯನ್ನು ಕಾಪಾಡಿಕೋ. ತಾರೆ ಪ್ರಭಾತದತ್ತ ನಡೆಯುವಂತೆ ನೀನು ನಿನ್ನ ಗುರಿಯತ್ತ ನಡೆ. ನೋಡು, ಹರಿವ ಗಂಗೆಯಂತೆ, ನೂರಾರು ಜನಗಳನ್ನು ಮುಟ್ಟಿದರೂ, ನೂರಾರು ಹಡಗುಗಳನ್ನು ತೇಲಲು ಬಿಟ್ಟರೂ ಅವುಗಳೆಲ್ಲದರಿಂದ ಅಲಿಪ್ತಳಾಗಿ, ಸಾಗರ ಮಾತ್ರ ಗುರಿಯಾಗಿ ಹರಿಯುವ ದೇವಿ ಗಂಗೆಯಂತೆ ರಾಜ್ಯದ ಕಾರ್ಯಗಳ ನಡುವೆ ಇದ್ದರೂ ಕರ್ಮದಿಂದ ಅಲಿಪ್ತನಾಗಿ ಅಮರತ್ವದ ಗುರಿಯನ್ನು ಮುಟ್ಟು."

ಆದರೆ ಆತ ಇದನ್ನು ಕಿವುಡುಗೇಳಿದ. ಯಾವುದು ಅವನ ಜೀವನ ಸರ್ವಸ್ವವೋ ಅದು ಇದಿರಿಗಿರುವಾಗ ಧರ್ಮೋಪದೇಶವನ್ನು ಕೇಳುವುದಕ್ಕಿಂತ ಹೆಚ್ಚಿನ ಹಿಂಸೆ ಮತ್ತಾವುದಿದೆ. ಅವನು ಸ್ವಪ್ನದಿಂದಲೋ ಎಂಬಂತೆ ಹೀಗೆ ಉತ್ತರ ಕೊಡುತ್ತಾನೆ.

"ಒಮ್ಮೆ ನನ್ನ ಗುರಿ ಅದಾಗಿತ್ತು ದೇವಿ. ಈಗಲೋ ಸಕಲ ಸೌಂದರ್ಯವೂ ನನ್ನೆಡೆಗೆ ಹರಿದುಬರುತ್ತಿದೆ. ಹೆಣ್ಣಿನ ವೈಭವಪೂರ್ಣವಾದ ವಕ್ಷದ ಮೇಲೆ ನಾನಿನ್ನು ಸುಂದರ ಸ್ವಪ್ನಗಳನ್ನು ಕಾಣುತ್ತೇನೆ. ಅಲ್ಲಿಂದ ಇಬ್ಬನಿಯ ಹನಿಗಳ ಚೆಲುವನ್ನು ಕಾಣುತ್ತೇನೆ. ಹಕ್ಕಿಗಳೊಡನೆ ಸುಖಿಸುತ್ತೇನೆ, ಸರ್ಪದ ಸುಂದರ ವರ್ತುಲತೆಗೆ ಒಲಿಯುತ್ತೇನೆ, ಉರಿಯುವ ಮರದ ಅಗ್ನಿಯೊಡನೆ ಕೂಗುತ್ತೇನೆ. ಬಯಕೆಯ ದಡದತ್ತ ಸುಳಿಯುವ ಅಲೆ ನಾನು. ಅವಳ ಸ್ತನದತ್ತ, ಎಲ್ಲಿ ಈ ಎಲ್ಲವೂ ಒಂದು ಕನಸೋ ಆ ಅವಳ ಅನುಭಾವಪೂರ್ಣ ಲೋಚನದತ್ತ ನಾನು ಸರಿಯುತ್ತೇನೆ. ಓ, ಒಂದು ಸುಂದರ ಮುಖವನ್ನೇ ಎಲ್ಲ ಭುವನಗಳಿಗಿಂತ ಹೆಚ್ಚಾಗಿ ಪ್ರೀತಿಸುವ ನನಗೆ ದೇವರಾಗಲಿ ಅವನ ವೈಭವವಾಗಲಿ ಏನು ಪ್ರಯೋಜನ ನೀಡಬಲ್ಲುದು?"

ಹೆಣ್ಣಿನ ಮನೋಹರವಾದ ಮುಖದ ನದಿಯಲ್ಲಿ ಉದ್ಧಾರಪರವಾದ ಅವನ ಚೇತನದ ಹೋಮಾಗ್ನಿ ಮುಳುಗಿತು, ನಂದಿತು. ಆದರೆ ಅದರ ಪರಿವೆ ಅವನಿಗಿಲ್ಲ. ಅಲೆಯಂತೆ ಅವಳ ಬಳಿಗೆ ಸರಿದ. ಭೂಮಿ ಮಳೆಯನ್ನು ಸ್ವಾಗತಿಸುವಂತೆ ಅವಳ ಕಣ್ಣು ಅವನನ್ನು ಸ್ವೀಕರಿಸಿತು. ತಿಲೋತ್ತಮೆ ಈ ಧನ್ಯದಂಪತಿಗಳನ್ನು ಹರಸಿದಳು. ಎಚ್ಚರಿಕೆಯ ನುಡಿಯನ್ನು ನುಡಿದು ಹರಸಿದಳು.

"ಮರೆಯದಿರು ರಾಜನ್, ಮನುಜ-ಅಪ್ಸರೆಯರ ನಡುವಣ ಸಂಬಂಧ ಉಳಿದುದಿಲ್ಲ. ಅವಳು ಆನಂದವಾಗಿ ಪರಿವರ್ತಿತವಾಗಬೇಕು, ಅಥವಾ ನೀನು ದಿವ್ಯದೇಹ ದಿವ್ಯಾತ್ಮಗಳನ್ನು ತಳೆಯಬೇಕು. ಎಂದೆಂದೂ ಅವಳಿಗೆ ವಸನವುಳಿದು ಗೋಚರನಾಗದೆ ಈ ನಿನ್ನ ನಿಧಿಯನ್ನು ರಕ್ಷಿಸಿಕೊ?"

ಅವಳು ಮರೆಯಾದಳು. ಇಬ್ಬರೂ ಆಲಿಂಗನದ ಬಂಧದಲ್ಲಿ ಒಂದಾದರು. ಅವಳ ಅದ್ಭುತ ಕೇಶರಾಶಿ ಪುರೂರವನ ಭುಜವನ್ನು ಸುತ್ತಿತು, ಅವನ ಕೆನ್ನೆಗೆ ಮೃದುತ್ವದ ಪರಿಚಯ ಮಾಡಿಸಿತು. ಅವನ ಮೇಲೊರಗಿದ ಅವಳ ದೇಹ ಸುರಿಯುತ್ತಿರುವ ಆಲಿಕಲ್ಲಿನ ನಡುವೆ ಅರ್ಧಮಾತ್ರ ಗೋಚರವಾದ ಕೃಶವಾದ ವೃಕ್ಷದಂತೆ ಇತ್ತಂತೆ. ಆತ ಹೇಳಿದ "ಓ, ನನ್ನ ನಲ್ಲೆ, ಶ್ರೀಮಂತ ಸುಖಪ್ರದ ನುಡಿಯ ಕೃಪಣೆ, ಒಮ್ಮೆ ನುಡಿ, ನಿನ್ನೊಲವು ನನಗೆಂದು ಒಮ್ಮೆ ನುಡಿ" ಅವನ ರಾಗದಲ್ಲಿ ತನ್ನ ದೈವತ್ವವನ್ನು ತೇಲಿಬಿಟ್ಟ ಹೆಣ್ಣು ಒಮ್ಮೆ ನರಳಿತು—"ಎನ್ನೊಡೆಯ, ಎನ್ನೊಲುಮೆ!"

೩. ವಿರಹ

ಮೂರು ವರ್ಷಗಳ ಕಾಲ ಹಿಮಾಚಲದ ಸುಂದರಪ್ರದೇಶದಲ್ಲಿ ಅವ್ಯಾಹತ ಪ್ರಣಯದ ಈ ಸುರ-ನರಪ್ರೇಮಿಗಳು ಸ್ವೇಚ್ಛೆಯಿಂದ ಸಂಚರಿಸಿದರು. ಇವಳ ಸಾನ್ನಿಧ್ಯದಿಂದ ಪೃಥಿವಿಯ ಮೌನದ ಈ ಭವ್ಯದೇಶವೆಲ್ಲ "ಅವನ ರಕ್ತಕ್ಕೆ ಹರಿದು ಅವನ ಆಲೋಚನೆಯ ಅಂಶವಾಯಿತು[1]." ಅವರ ಪ್ರೇಮದ ಮೂರನೆಯ ವಸಂತದಲ್ಲಿ ತಾಯ್ತನದ ನೋವಿನಿಂದ ತೆರೆದ ಉರ್ವಶಿಯ ಕಣ್ಣು ಸುಂದರವಾದ ಶಿಶುವಿನ ಮುಖವನ್ನು ಕಂಡಿತು. ಮಗುವಿನ ತಡಕಾಟ ತನ್ನ ಎದೆಯನ್ನು ಸ್ಪರ್ಶಿಸಲು ಅವಳಿಗೆ ಹಿಂದೆ ಕಂಡರಿಯದ ಆನಂದದ ಅನುಭವವಾಯಿತು. ನಗರಕ್ಕೆ ಹೋಗಬೇಕು ಎಂಬ ಬಯಕೆಯನ್ನು ವ್ಯಕ್ತಪಡಿಸಿದಳು. ಇಬ್ಬರೂ ಅರಮನೆಗೆ ಹಿಂದಿರುಗಿದರು, ದೇಶಕ್ಕೆ ದೇಶವೇ ಸ್ವಾಗತ ನೀಡಿತು, ಕಾಲ ಉರುಳಿತು, ಒಂದೊಂದೂ ಹೊಳೆಯುವ ದೇವತೆಯಂತಿದ್ದ ಮಕ್ಕಳ ಸಂತತಿಯನ್ನು ಆಕೆ ಪುರೂರವನಿಗೆ ಅರ್ಪಿಸಿದಳು. ಅನಂತ ಸುಖದ ನಡುವೆ ಏಳು ವಸಂತಗಳು ಉರುಳಿದುವು.

ಇತ್ತ ಸ್ವರ್ಗದವರಿಗೆ ಉರ್ವಶಿಯ ಚಿಂತೆಯಾಯಿತು. ಅವರು ಒಂದು ವ್ಯೂಹವನ್ನು ರಚಿಸಿದರು. ಗಂಧರ್ವರು ಕೊಟ್ಟಿದ್ದ ಎರಡು ಮುದ್ದಿನ ಟಗರುಮರಿಗಳನ್ನು ಉರ್ವಶಿ ತನ್ನ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಒಂದು ರಾತ್ರಿ ಭಾರಿ ಮಳೆ ಬರುತ್ತಿರಲು ಗಂಧರ್ವರು ಅದನ್ನು ಕದ್ದರು. ಉರ್ವಶಿ ಆಕ್ರಂದಿಸಿದಳು— "ಕಾಪಾಡು ಪುರೂರವಸ್, ಅವನ್ನು ಕಾಪಾಡು." ಅವಸರದಲ್ಲಿ ಎದ್ದ ಪುರೂರವ ಉಡುಗೆಯನ್ನು ಮರೆತ. ಮಿಂಚಿದ ಮಿಂಚಿನ ಬೆಳಕಿನಲ್ಲಿ ಅವನ ಮರ್ತ್ಯದೇಹ ಅವಳಿಗೆ ಕಾಣಿಸಿತು. ಈ ಎರಡೇ ಗಳಿಗೆಯಲ್ಲಿ ಅವಳನ್ನು ಕಳೆದುಕೊಂಡು ಅವನು ದರಿದ್ರನಾದ.

ಕ್ರಮಕ್ರಮವಾಗಿ ಅವನು ಕೃಶನಾದ. ಅಲಭ್ಯವಸ್ತುವೊಂದು ಕ್ಷಣಕಾಲ ಲಭಿಸಿ ಮತ್ತೆ ದೂರವಾದುದರಿಂದ ಆ ಧೀರಾತ್ಮನೂ ಅದರ ಚಿಂತೆಯಿಂದ ದೀನದರಿದ್ರನಾದ. ಸ್ವರ್ಗದ ಶಿಖರದ ತುದಿಗೆ ಅವನನ್ನು ಕೊಂಡೊಯ್ದಿದ್ದ ಪ್ರಣಯ ಅವನನ್ನು ನೋವಿನ ನರಕದ ಆಳಕ್ಕೆ ನೂಕಿತು. ಮೌನವಾಗಿ, ಶೋಕಮೂಕನಾಗಿ ಅನೇಕ ದಿನಗಳನ್ನು ತಳ್ಳಿದ. ಒಮ್ಮೆ ಹೀಗೆ ಹೇಳಿದ: "ನನ್ನನ್ನು ಳಿದು ಗೋಳಗಳ ನಡುವೆ ಬೆಳಕಿನೊಡನೆ ಐಕ್ಯವಾದೆಯಾ ಓ ಕ್ರೂರೆ? ಆದರೂ ನಿನ್ನ ಸುಖವನ್ನು ಅರಸುತ್ತೇನೆ. ಅಸೂಯೆಯಿಂದ ಕೂಡಿದ ಅಮರರೆಲ್ಲ ನಿನ್ನ ಸುತ್ತ ಸುತ್ತಿ ನಿನ್ನ

[1] And all earth's silent sublime space into his blood and grew a part of thought.

ಸ್ವರ್ಣದೇಹವನ್ನು ರಕ್ಷಿಸಲು ನಿಂತರೂ ಸರಿ, ಅದರ ನಡುವೆ ನುಗ್ಗಿ ಬರಬಲ್ಲೆನೇನೋ ಅಥವಾ ನನ್ನ ಈ ಸಶಕ್ತ ತಾಳ್ಮೆ ತಾರೆಗಳ ನಡುವಣಿಂದ ನಿನ್ನನ್ನು ಎಳೆದು ತಂದೀತೇನೋ. ರಾಗರಹಿತವಾದ ಆ ಶುದ್ಧ ಶಕ್ತಿ ಚ್ಯುತವಾಗಿದ್ದರೂ, ಆತ್ಮಶುದ್ಧಿಯು ದಿವ್ಯರಕ್ಷೆ ಈಗ ನನಗಿಲ್ಲದಿದ್ದರೂ ನಾನಿನ್ನೂ ಇಳೆಯ ಪುತ್ರನೇ, ಪುರೂರವನೇ!" ಹೀಗೆ ಹೇಳಿ ತನ್ನ ಮತ್ತು ಊರ್ವಶಿಯರಲ್ಲಿ ಜನಿಸಿದ 'ಆಯುಸ್' ಎಂಬ ಮಗನಿಗೆ ಪಟ್ಟಕಟ್ಟಿ ಹೊರಟ.

೪. ಶಾಶ್ವತ ಸಮಾಗಮ

ಮತ್ತೆ ಹಿಮಾಚಲದ ಪ್ರದೇಶಕ್ಕೆ ಬಂದ, ಒಂದೊಂದೂ ಪರಿಚಿತ ವಸ್ತುವೇ, ಪ್ರತಿಯೊಂದೂ ಅವಳನ್ನೇ ಕುರಿತು ನುಡಿಯುವಂತಿದೆ. "ಓ, ತರುವೇ, ಮಧುರ ನಯನಗಳನ್ನು ತೆರೆದು ಅವಳು ನಿಂತಿದ್ದುದು ಇಲ್ಲೇ. ಓ ತಣ್ಣೆಳಲೇ ಅವಳ ಚರಣ ನಿನಗೆ ಕಾಂತಿ ನೀಡಿತ್ತು. ಒಮ್ಮೆ ನನ್ನೆಡೆಗೆ ನೋಡುತ್ತಾ ಇಲ್ಲಿ ಮಲಗಿದ್ದಳು. ತೋಳುಗಳನ್ನು ಹಿಂದಕ್ಕೆಸೆದು, ನನ್ನನ್ನು ನೋಡಿ ಮುಗುಳುನಗುತ್ತಿದ್ದ ಅವಳ ತುಟಿ, ಕಣ್ಣು, ತೆರೆದೆದೆಗಳ ಮೇಲೆ ಹೂವುಮಳೆಗರೆಯಿತು. ಅವಳ ಸುತ್ತ ಎಲ್ಲ ಹಸುರು, ಎಲ್ಲ ಇಬ್ಬನಿ, ವೈಢೂರ್ಯಲೋಕಕ್ಕೆ ಅರ್ಘಸ್ವಾಗತ ನೀಡುವಂತೆ. ಓ ನದಿಯೇ ನಿನ್ನಲ್ಲಿ ಮಿಂದು ಮಳೆಯಲ್ಲಿ ತೊಯ್ದ ಪುಷ್ಪದಂತೆ ಹೊಚ್ಚ ಹೊಸತಾಗಿ ಅವಳು ಹೊರಗೆ ನಡೆದಳು. ಓ ಬಯಲೇ ಇಲ್ಲೇ ನೀನವಳ ಮಾತೃವದನವನ್ನು ಕಂಡುದು." ಎಂದು ಅವಳನ್ನು ನೆನೆನೆನೆದು ಹಲುಬುವನು. ಅವಳು ಬರುವಳೇನೋ ಎಂದು ಅತಿ ನಿರೀಕ್ಷಣೆಯಿಂದ ಕಾದು ಆಲಿಸುವನು ಆದರೆ ಎಲ್ಲ ಮೌನ. ಒಂದು ಹಕ್ಕಿ ಹಾರಿತೋ, ಒಂದು ಹಾವು ಎಲೆಯಿಂದ ಜಾರಿತೋ ಅದರದಷ್ಟೇ ಶಬ್ದ. ಕಡೆಗವನು "ಇಲ್ಲಿ ಅವಳಿಲ್ಲ. ಒಮ್ಮೆ ಅವಳು ಇದೆಲ್ಲದರ ಆತ್ಮವಾಗಿ ಇಲ್ಲಿದ್ದಳು. ಅವಳ ದೇಹದಲ್ಲಿ ಬೇಸಗೆ ವಸಂತರು ಜೀವಿಸಿದ್ದರು. ಎಲ್ಲ ಸೊಬಗಿನ ರಾಣಿಯಾಗಿ ಅವಳು ಇಲ್ಲಿದ್ದಳು. ಅವಳಿಲ್ಲದ ಇವೋ ಅವಳೆಸದ ಉಡುಪಿನಂತೆ ಮಾತ್ರ ಇವೆ" ಎನ್ನುತ್ತಾ ಆ ಪರಿಚಿತ ವಸ್ತುಗಳು ಉಂಟುಮಾಡುತ್ತಿದ್ದ ಹೊಸ ಯಾತನೆಯನ್ನು ಸಹಿಸಲಾರದೆ ಮುಂದೆ ಮುಂದೆ ನಡೆಯುತ್ತಾನೆ. ಅವನ ಪ್ರೇಮದಂತೆ ಮಹತ್ತಾದುದೂ, ಅದರಂತೆಯೇ ಏಕಾಕಿಯಾಗಿದ್ದುದೂ, ಆದ ಹಿಮಾಚಲದ ಶಿಖರಕ್ಕೆ ಬರುತ್ತಾನೆ. ಪರ್ವತಶ್ರೇಣಿಯನ್ನುದ್ದೇಶಿಸಿ ನುಡಿಯುತ್ತಾನೆ. "ಓ ಶಕ್ತಿಮಾನ್, ನಿನ್ನ ಶಿಖರಗಳು ಸ್ವರ್ಗಭೂಮವಾಗಿವೆ; ಭಯಂಕರವಾದ ನಿನ್ನ ಈ 'ಹುಶ್' ಶಬ್ದದಲ್ಲಿ ಸಕಲ ಜಗತ್ತಿನ ಆತ್ಮವೂ ಸೃಷ್ಟಿಯನ್ನು ಧ್ಯಾನಿಸುತ್ತಿರುವಂತಿದೆ! ನೀನೆನ್ನ ಮಂಗಳದ ಒಸಗೆಯಂಗಳ. . . .

ಅವಳು ನಿನ್ನ ಮೌನದಲ್ಲಿ ಹುದುಗಿರಬೇಕು. ಅವಳನ್ನು ಹಿಂದಕ್ಕೆ ನೀಡಿ ಪರ್ವತಗಳೇ ಅವಳನ್ನು ಹಿಂದಕ್ಕೆ ನೀಡಿ.''

ಸಹೃದಯನ ಉತ್ತಮ ಪ್ರತಿಭೆಯೂ ತತ್ತರಿಸುವ ಎತ್ತರಕ್ಕೆ ಕವಿ ಅರವಿಂದರ ಪ್ರತಿಭೆ ಇಲ್ಲಿ ಏರಿದೆ. ಧವಳ ಹಿಮಾಚಲ ಅವನೆಡೆಗೆ ಬಾಗಿತಂತೆ. ತಮ್ಮಂತೆಯೇ ಗಗನವನ್ನು ಮುಟ್ಟಬಲ್ಲ, ಅನಂತ ಏಕಾಂತವನ್ನು ಸಹಿಸಬಲ್ಲ ಒಂದು ಮಹಾ ಆತ್ಮವನ್ನು ಅವು ಗುರುತಿಸಿದುವಂತೆ. ಆತ ಅಲ್ಲಿ ದೀರ್ಘಕಾಲ ಧ್ಯಾನಮಗ್ನನಾಗಿ ಆ ಪರ್ವತಗಳ ನಡುವೆ ಊರ್ವಶಿಯ ನೆನಪಿನಲ್ಲಿ ತನ್ನ ಆತ್ಮವನ್ನು ಕರಗಿಸಲು ಯತ್ನಿಸಿದನಂತೆ,[1] ಪ್ರೇಮ ತಪಸ್ವಿ ! ಗಗನದಿಂದಿಳಿದ ಹಿಮ ಅವನನ್ನು ತೋಯಿಸಿತು, ಬಿರುಗಾಳಿ ಬೀಸಿತು, ಆದರೆ ವ್ಯರ್ಥ, ಎಲ್ಲವೂ ವ್ಯರ್ಥ. ಏಕೆಂದರೆ ಯಾವುದೂ ಅವನನ್ನು ಕದಲಿಸಲು ಶಕ್ಯವಾಗಲಿಲ್ಲ. ಪ್ರೇಮ ತಪಸ್ವಿ ! ಪ್ರೇಮ ಧ್ಯಾನಮಗ್ನ !

ಇಲ್ಲಿಂದ ಮುಂದೆ ಅರವಿಂದ ಪಂಥದವರು ಅನುಭಾವಿಕ ಎಂದು ಕರೆಯುವ, ಕಾವ್ಯದೃಷ್ಟಿಯಿಂದ ಪ್ರತಿಮಾನ್ವಿತ ಎನ್ನುವ ಕೆಲವು ಲೋಕಗಳೂ, ಅನುಭವಗಳೂ, ಬರುತ್ತವೆ.

ತನ್ನ ಪ್ರೇಮಸಮಾಧಿ ಮುಗಿದು ಮೇಲೆದ್ದ ರಾಜ ಇನ್ನೂ ಇನ್ನೂ ಉತ್ತರಕ್ಕೆ ಮುಂಬರಿಯುತ್ತಾನೆ. ಮುಸುಕುಮುಸುಕಾದ ಅದ್ಭುತ ಪ್ರಪಂಚವೊಂದಕ್ಕೆ ಕಾಲಿಡುತ್ತಾನೆ. ಅದು ವಿಸ್ಮೃತಿಯ ಮಂಜಿನಲ್ಲಿ ಹುದುಗಿದ ಜಗದಾದಿಯ ಉತ್ತರ ಕುರುಗಳ ದೇಶ. ಮಂಜಿನ ನಡುವೆಯೇ ಆತ ನಡೆದ. ಕಾಣದ ನಗರಗಳ ಇರುವಿಕೆಯನ್ನು ಅನುಭವಿಸುತ್ತಾ, ಯಾವ ಧ್ವನಿ ಕೇಳದಿದ್ದರೂ, ಯಾವ ಮುಖ ಕಾಣದಿದ್ದರೂ ತನ್ನ ಸುತ್ತ ಯಾವುದೋ ಪರಂಪರೆಯ ಜೀವನ ನಡೆದಿದೆ ಎಂಬುದರ ಪ್ರಜ್ಞೆಯುಳ್ಳವನಾಗಿ, ಚಾರಿತ್ರಿಕ ಕನಸುಗಳನ್ನು ಕಾಣುತ್ತಾ ನಡೆದ. ಮುಂದೆ ಸಿಂಹಾಸನದ ಮೇಲೆ ಎಲ್ಲ ವೈಭವಗಳಿಗೆ ಒಡತಿಯಾದ, ಕೀರ್ತಿ, ಶ್ರೀ ಶಕ್ತಿಗಳನ್ನು ನೀಡುವ ಸಾಗರಕನ್ಯೆಯಾದ ದೇವಿ ಇಂದಿರಾ ಮಂಡಿಸಿದ್ದಾಳೆ. "ನೀನು ಬಂದುದೇಕೆ ರಾಜ, ಕೀರ್ತಿ, ಶ್ರೀ, ವಿಭವಗಳ ಬಯಕೆಯೆ ? ನಿನಗೆ ?" ಎಂದು ಪ್ರಶ್ನಿಸಿದಳು ಆಕೆ. ರಾಜ ಉತ್ತರ ಕೊಟ್ಟ : "ಓ, ಕಮಲಪ್ರಿಯೆ, ನರಕಭಯವಾಗಲಿ, ಸ್ವರ್ಗಪ್ರೇಮವಾಗಲಿ ನನ್ನ

---

[1] He ceased and Himalaya bent towards him,
The mountains seemed to recognise a soul which was as
Immense as they, reaching as they to Heaven
And capable of infinite solitude.
Long he, in meditation deep immersed,
Strove to dissolve his soul among the hills
Into the thought of Urvasie.

ಸ್ನಿಲ್ಲಿಗೆ ತರಲಿಲ್ಲ. ಆಳುವಾಗ ನನ್ನಾತ್ಮವನ್ನು ಆಳಿದೆ. ಈಗ ಯಾವುದೋ ಹಿರಿಯ ಬಯಕೆಯಿಂದ ಹಿಮದ ಮೇಲೆ, ಅಸ್ಪಷ್ಟ ದೇಶಗಳಲ್ಲಿ ಸುತ್ತುತ್ತಿದ್ದೇನೆ."

ಅರಿಯದ ಶಕ್ತಿ ಮುನ್ನಡೆಸುತ್ತಿರಲು ಪುರೂರವಸ್ ನಿದ್ದೆಯಲ್ಲೇ ಎದ್ದು ನಡೆಯುತ್ತಿರುವವನಂತೆ ಮುಂದೆ ಮುಂದೆ ನಡೆದು ಕೈಲಾಸವನ್ನು ಕಂಡು ನಡುಗುತ್ತಾನೆ. ಅಲ್ಲಿ ಆರ್ಯಮಾತೆ ಕುಳಿತಿದ್ದಾಳೆ, ಆಕೆ ಕಾಲನ್ನು ಮುಳುಗಿಸಿದ್ದ ನೀರಿನಲ್ಲಿ ಸ್ವರ್ಣಹಂಸಗಳು ರಾಜಿಸುತ್ತಿವೆ. ಹತ್ತಿರ ಬಂದ ತನ್ನ ಕಂದನಿಗೆ ಆ ದೇವಿ ಕರುಣೆಯಿಂದ ಸರಸ್ಸಿನ ನೀರನ್ನು ಕೊಟ್ಟಳು. ಅದನ್ನು ಕುಡಿದ ಅವನಿಗೆ ಅನಂತತೆಯ ಅರಿವು ಬಂದಿತು. ಮುಂದೆ ನಡೆದು ಕೈಲಾಸವನ್ನೇರುವಂತೆ ಆಕೆ ಪ್ರೇರೇಪಿಸುತ್ತಾಳೆ. ಅಲ್ಲಿ ಮತ್ತೊಂದು ವಾಣಿ ಅವನಿಗೆ ವರವನ್ನು ನೀಡಿತು. "ಗಂಧರ್ವಲೋಕದಲ್ಲಿ ಉರ್ವಶಿಯೊಡನೆ ನಿನಗೆ ಶಾಶ್ವತ ಸಮಾಗಮ ದೊರೆಯಲಿ."

ಅವನ ಆನಂದಕ್ಕೆ ಪಾರವೇ ಇಲ್ಲ, ಎಂತಹ ಮಹತ್ತಾದ ಲಾಭ ದೊರೆಯಿತು—ಆದರೆ ಎಂತಹ ಮಹತ್ತಾದ ಬೆಲೆಗೆ—ಅನಂತಪತನವೇ ಅವನು ತೆತ್ತ ಬೆಲೆ—ಆದರೂ ಅವನಿಗಾದ ಆನಂದಕ್ಕೆ ಪಾರವೇ ಇಲ್ಲ. ಓಡಿದ ಗಂದರ್ವಲೋಕದತ್ತ. ಅಲ್ಲಿ ಅಭೂತಪೂರ್ವವಾದ ಸ್ವಾಗತ ಅವನಿಗೆ ದೊರಕಿತು. "ಪ್ರಿಯಾ ಸಮಾಗಮವಾಯಿತು. ಮೇಲೆ ಪ್ರೇಮ ಪುರುಷನಿಗೆ ತೃಪ್ತಿಯಾಯಿತು. ಆದರೆ ತ್ಯಕ್ತ ಪೃಥಿವಿ ಕೆಳಗೆ ಸುತ್ತುತ್ತಿತ್ತು." ಈ ಮಾತುಗಳೊಂದಿಗೆ ಕಾವ್ಯ ಮುಗಿಯುತ್ತದೆ.

ಶ್ರೀ ಅರವಿಂದರ ಕಾವ್ಯ ಭಾಷೆ ಉದ್ದಕ್ಕೂ ಜೇನ ಹೊಳೆಯಂತೆ, ಅಚ್ಚರಿಗೊಳಿಸುವಷ್ಟು ಸರಳವಾಗಿ ಹರಿದಿದೆ. ಮುಂದಿನ ಅವರ ಕಾವ್ಯಗಳಲ್ಲಿ ಕಾಣುವಂತಹ ಭಾಷೆ—ಭಾವಗಳ ಜಟಿಲತೆಯಿಲ್ಲ ಇಲ್ಲಿ. ಇಲ್ಲಿ ಮೂಲಕೃತಿಯನ್ನು ಅಕ್ಷರಶಃ ಅನುಸರಿಸುವ ಪ್ರಯತ್ನ ನಡೆದಿದೆಯಾಗಿ ಈ ಕೃತಿಯ ಕಾವ್ಯ ಸೌಂದರ್ಯ ಸ್ಪಷ್ಟ ಗೋಚರವಾಗಿದೆ.

ತಮ್ಮ ಈ ಕಾವ್ಯದ ಕಥಾಭಿತ್ತಿಗೆ ಶ್ರೀ ಅರವಿಂದರು ಋಗ್ವೇದ ಮತ್ತು ಶತಪಥ ಬ್ರಾಹ್ಮಣಗಳಿಗೆ ಬಹುಮಟ್ಟಿಗೆ, ಮತ್ತು ಕಾಳಿದಾಸನ ವಿಕ್ರಮೋರ್ವಶೀಯಕ್ಕೆ ಕೊಂಚಮಟ್ಟಿಗೆ[1] ಋಣಿಯಾಗಿದ್ದಾರೆ. ಇವೆರಡರ ಸುಂದರಸಮನ್ವಯದ ಪ್ರಯತ್ನದಲ್ಲಿರುವ ಶ್ರೀ ಅರವಿಂದರು ಕಾಳಿದಾಸನ ನಾಟಕದ ಅಪಕ್ವತೆಯನ್ನು ದಾಟುವುದರಲ್ಲಿ ಬಹುಮಟ್ಟಿಗೆ ವಿಜಯವನ್ನು ಗಳಿಸಿರುವುದರ ಜೊತೆಗೆ ಋಗ್ವೇದದ ದಾರ್ಶನಿಕ ಋಷಿಯ ಪೂರ್ಣಪಕ್ವತೆಯಿಂದ ಭಿನ್ನವಾದ ಬೇರೊಂದು ಪಕ್ವತೆಯ ಪಥದಲ್ಲಿ ನಡೆದಿದ್ದಾರೆ.

---

[1] ದೈತ್ಯಕೇಶಿಯ ಕೃಪೆಯಿಂದ ಉರ್ವಶೀ-ಪುರೂರವರಿಗೆ ಮೊದಲ ಸಮಾಗಮ ಘಟಿಸಿತು ಎಂಬುದೂ, ಲಕ್ಷ್ಮೀಸ್ವಯಂವರ ನಾಟಕ ಉರ್ವಶಿ ಪುರೂರವನಿಗೆ ದೊರಕುವುದಕ್ಕೆ ಕಾರಣವಾಯಿತು ಎಂಬುದೂ ಕಾಳಿದಾಸನ ಸೃಷ್ಟಿಯಾಗಿರುವಂತೆ ತೋರುತ್ತದೆ.

ಋಗ್ವೇದದಲ್ಲಿ ಊರ್ವಶೀ ಪುರೂರವರ ವಿಯೋಗವಾದ ಅನಂತರ ಪುರೂರವ ಒಮ್ಮೆ ಮಾತ್ರ ಊರ್ವಶಿಯನ್ನು ಕಾಣುತ್ತಾನೆ. ತನ್ನ ವಿರಹಯಾತನೆಯನ್ನು ಅವಳ ಮುಂದೆ ತೋಡಿಕೊಳ್ಳುತ್ತಾನೆ. ಅವಳು ತನ್ನನ್ನು ಮುನ್ನಿನಂತೆ ಕೂಡದಿದ್ದರೆ ತಾನು ಆತ್ಮಹತ್ಯ ಮಾಡಿಕೊಳ್ಳುವುದಾಗಿ ಹೇಳುತ್ತಾನೆ. ದಾರ್ಶನಿಕನಾದ ವೇದರ್ಷಿ ಆಗ ದೇವಗಣಿಕೆಯಾದ ಊರ್ವಶಿಯ ಬಾಯಲ್ಲಿ ಈ ಮಂತ್ರವನ್ನು ನುಡಿಸುತ್ತಾನೆ.

ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ
ಸಾಲಾ ವೃಕಾಣಾಂ ಹೃದಯಾನ್ಯೇತಾ[1]

"ಹೆಂಗಸರೊಂದಿಗೆ ಕೆಳೆ ಇಲ್ಲ; ಅವರದು ತೋಳದ ಹೃದಯ."

ಪುರೂರವನಂತೆ ನಾವೂ ಈ ಮಾತು ಕೇಳಿ ಚಕಿತರಾಗಿ ನಿಲ್ಲುತ್ತೇವೆ. ಇದರ ಅನುಭವವಾದ ಪುರೂರವನಿಗೆ ಇದಕ್ಕೆ ವ್ಯಾಖ್ಯಾನವೇ ಬೇಡ. ಮೂಲದ ವೇದ ಕಥೆಯ ಉದ್ದೇಶ ಮರ್ತ್ಯಮಾನವನಿಗೆ ಇದರ ಸಾರವನ್ನು ಸಾರುವುದು—ಇಂದ್ರಿಯಾಶ್ವಗಳನ್ನು ಕಡಿವಾಣ ಸಡಿಲಿಸಿಬಿಡುವುದು ಬೇಡ. ಅದರಿಂದ ಆತ್ಮಪತನ ಸಿದ್ಧವಾದುದು ಎಂಬ ತತ್ವಕ್ಕೆ ಕಾವ್ಯಮಯವಾದ ಪ್ರತಿಮೆಯನ್ನು ಸೃಷ್ಟಿಸಿದ್ದಾರೆ, ವೇದದ ಋಷಿಗಳು.

ಶ್ರೀ ಕವಿ ಅರವಿಂದರಿಗೆ ಇದರ ಅರಿವು ಸಂಪೂರ್ಣವಾಗಿದೆ. ಅವರೇ ಹೇಳಿರುವಂತೆ ಅವನು ಊರ್ವಶಿಯನ್ನು ಪಡೆದುದು ಆತ್ಮಪತನದ ಅನಿವಾರ್ಯವಾದ ಬೆಲೆಯನ್ನು ತೆತ್ತು. ಆದರೂ ಪಡೆಯುತ್ತಾನೆ. ಇದು ಉಚಿತವೇ? ಇದಕ್ಕೆ ಅಂತಹ ತ್ಯಾಗ ಅಗತ್ಯವೆ? ಅದು ಇಂತಹ ಬೆಲೆಗೆ ಅರ್ಹವಾದುದೇ ಎಂಬುದು ವಿಚಾರಣೀಯವಾದ ಅಂಶ.

ಅರವಿಂದರ ಈ ಕಾವ್ಯ ಗಾಢವಾದ ಪ್ರೇಮದ ಸರ್ವೋತ್ಕೃಷ್ಟತೆಯ ಸಂದೇಶದಂತಿದೆ. ಅವರ ಕಾವ್ಯನಾಯಕ ಸಂಪೂರ್ಣವಾಗಿ ತನ್ನ ಪ್ರೇಮದ ವಸ್ತುವಿನೊಡನೆ ಕರಗಿಹೋಗಿದ್ದಾನೆ. ಅವಳಿಗಾಗಿ ಅವನ ಬದುಕು. ಅವಳಿಲ್ಲದೆ ಅದು ಶೂನ್ಯ. ತನ್ನ ಸಾಹಸ, ಸಂಪತ್ತು, ಅಧ್ಯಾತ್ಮ ಸಕಲವನ್ನೂ ಅವಳ ಪದತಲದಲ್ಲಿ ಸಮರ್ಪಿಸಿದ್ದಾನೆ. ಮಿಂಚಿನಂತೆ ಮಿಂಚಿದ ಅವಳು ಅವನನ್ನು ಸಂಪೂರ್ಣವಾಗಿ ಆಹುತಿ ತೆಗೆದುಕೊಳ್ಳುತ್ತಾಳೆ. ತನ್ನಲ್ಲಿ ಅವನು ಕರಗುವಂತೆ ಮಾಡುತ್ತಾಳೆ. ಕಾವ್ಯ ಅವಳಿಗಾಗಿ, ಅವಳೇ ಸರ್ವಶಕ್ತವಾದ ಪಾತ್ರ ಇದರಲ್ಲಿ.

ಊರ್ವಶೀ ಪಾತ್ರದ ಉದ್ಧಾರ ರಮಣೀಯವಾದ ರೀತಿಯಲ್ಲಿ ನಡೆದಿದೆ ಇಲ್ಲಿ.

---

[1] ಉದ್ಧೃತ—ಶ್ರೀ ತೀ. ನಂ. ಶ್ರೀ ಯವರ ಕಾವ್ಯಸಮೀಕ್ಷೆ. ಪು. .. ಅನುವಾದವೂ ಅವರದೇ.

ಮೊದಲ ದರ್ಶನದಲ್ಲಿ ಜನಿಸಿದ ಅನುರಾಗ ಬಲಿಯುವಂತೆ ನೋಡಿಕೊಂಡಳು ಅವಳು. ಸ್ವರ್ಗವೈಭವದ ನಡುವೆ ಇದ್ದರೂ ಈ ಮರ್ತ್ಯನನ್ನೇ ಸಂತತವಾಗಿ ನೆನೆದಳು. ಸ್ವರ್ಗ ಚ್ಯುತಿಯು ಬೆಲೆಯನ್ನಾದರೂ ತೆತ್ತು ಅವನೊಡನೆ ಬಾಳಿದಳು. ಗಂಧರ್ವರ ಮಾಯ ಯಿಂದ ತನ್ನ ದಿಟದ ಮನೆಗೆ ನಡೆದರೂ ಅವಳೆದೆ ಈತನಿಗಾಗಿ ಸದಾ ತೆರೆದೇ ಇತ್ತು.[1] ಮತ್ತೆ ಆತ ಸ್ವರ್ಗಕ್ಕೆ ನಡೆದಾಗ ಎರಡೂ ತೋಳನ್ನು ಚಾಚಿ ಅವನನ್ನು ಸ್ವಾಗತಿಸಿ ದಳು. ಅವಳ ಹೃದಯದ ಒಡೆತನ ಕಡೆಯತನಕ ಅವನದಾಗಿಯೇ ಇತ್ತು. ಇಲ್ಲಿ ಆಕೆ ಚಂಚಲತೆಯನ್ನು ದಾಟಿದ್ದಾಳೆ. ಬರಿಯ ದೇವಗಣಿಕೆ ಎಂಬ ತಿರಸ್ಕಾರವನ್ನು ತಪ್ಪಿಸಿ ಕೊಂಡಿದ್ದಾಳೆ. ಪ್ರೇಮದ ಶಾಶ್ವತ ಭಂಡಾರವಾಗಿದ್ದಾಳೆ.

ನಾವು ಕನಿಕರಿಸುವುದು ಪುರೂರವನನ್ನು. ವೇದಋಷಿ ಅವಿಚಾರಪೂರ್ವಕ ಪ್ರಣಯಕ್ಕೆ ಶಾಶ್ವತ ವಿರಹದ ಶಿಕ್ಷೆಯನ್ನು ವಿಧಿಸಿದ. ಇಲ್ಲಿಯೇ ಈತ ಪ್ರೇಮತಪಸ್ಸಿ ನಿಂದ ಮತ್ತೆ ಅವಳನ್ನು ಪಡೆದ. ಒಂದು ಕಡೆ ಆತ್ಮಲಾಭದ ಮಹಾಸ್ವರ್ಣದ್ವಾರ ಮತ್ತೊಂದು ಕಡೆ ಪ್ರೇಮಪೂರ್ಣವೇ ಆದರೂ ಇಂದ್ರಿಯ ನಂದನವಿಹಾರ. ಇವೆರಡರ ನಡುವೆ ಪುರೂರವ ಆರಿಸಿಕೊಳ್ಳುವುದು ಎರಡನೆಯದನ್ನು. ಅಂತಹ ಮಹಾ ಆತ್ಮ ಗಳಿಗೆಗಳಿಗೆಗೂ ನಮ್ಮ ಕಣ್ಣಮುಂದೆ ಇಳಿಯುತ್ತಾ ಹೋಗುತ್ತದೆ. ಪ್ರೇಮ, ಆತ್ಮವೈಭವವನ್ನೇ ನುಂಗಿ ನೊಣೆದ ಪ್ರೇಮ ಅವನಿಗೆ ಸ್ವರ್ಗವಾಸವನ್ನೂ ಸ್ವರ್ಗ ವಿಭವವನ್ನೂ ನೀಡಿತೇ ಹೊರತಾಗಿ ಆತ್ಮಸಾಕ್ಷಾತ್ಕಾರದ ಅಮೃತತ್ವವನ್ನು ನೀಡ ಲಾರದಾಯಿತು. ಅದಕ್ಕೆಲ್ಲಿ ಆಶಕ್ತಿ? ಕಾವ್ಯವೆಲ್ಲ ಓದಿ ಮುಗಿದ ಮೇಲೆ ಪ್ರೇಮದ ಮಹಾ ಪತಾಕೆ ಹಾರಾಡುವುದನ್ನು ಕಂಡು ಚೆಲುವು ಎನಿಸಿದರೂ ಅವನ ಆತ್ಮಪತನದ ಕನಿಕರವೇ ಕೊನೆಯಲ್ಲಿ ಉಳಿಯುವ ಏಕೈಕ ಭಾವ. ಶ್ರೀ ಅರವಿಂದರು ಪುರೂರವನನ್ನು ಕುರಿತು ಆಡಿದ ಮಾತು ನಮ್ಮ ಕಿವಿಯಲ್ಲಿಯೂ ಮತ್ತೆ ಮತ್ತೆ ಮೊಳಗುತ್ತದೆ.

". . . And strong Pururavas Glad of his high reward, however dearly purchased, purchased with "infinite downfall . . ."

"ಧೀರ ಪುರೂರವನಿಗೆ ಆದ ಆನಂದಕ್ಕೆ ಪಾರವೇ ಇಲ್ಲ. ಎಂತಹ ಮಹತ್ತಾದ ಲಾಭ ದೊರೆಯಿತು. ಆದರೆ ಎಂತಹ ಮಹತ್ತಾದ ಬೆಲೆಗೆ! ಅನಂತ ಪತನವೇ ಅವನು ತೆತ್ತ ಬೆಲೆ, ಆದರೂ ಅವನಿಗಾದ ಆನಂದಕ್ಕೆ ಪಾರವೇ ಇಲ್ಲ!"

—ಪ್ರಭುಶಂಕರ.

[1] ಅವಳು ನಡೆದು ಪುರೂರವನಿಗೆ ಮತ್ತೊಂದು ದೀರ್ಘತಪಸ್ಸಿಗೆ ಅವಕಾಶವನ್ನು ಕಲ್ಪಿಸಿದಳು. ಈ ವಿರಹದ ಅಗ್ನಿಯಲ್ಲಿ ಬೆಂದು, ಆ ತಪದಲ್ಲಿಯೇ ನಾಂದು ಕಡೆಗೆ ರಾಜ ಭೂಮಿಯ ಒಂದೊ ದೇ ಕೋಶಗಳನ್ನು ಕಳಚಿ ಬಿಸುಡುತ್ತಾ ಗಂಧರ್ವಲೋಕಕ್ಕೆ ನಡೆಯುತ್ತಾನೆ. ಬಹುಶಃ ಗಂಧರ್ವನಾಗು ತ್ತಾನೆ.

ಸಿದ್ಧನಂಜೇಶನ ಕಾಲ

ವೀರಶೈವ ಕವಿಗಳು ಹರನನ್ನೂ ಹರಗಣಗಳನ್ನೂ ಹರಕವಿಗಳನ್ನೂ ಸ್ತುತಿಸಿ 'ಕೈವಲ್ಯ ಲಕ್ಷ್ಮೀವರ'ರಾದವರು. ಮಹಾಕವಿ ಹರಿಹರದೇವನಿಂದ ಮೊದಲಾದ ಈ ಸತ್ ಸಂಪ್ರದಾಯವು ಇಂದಿನ ವರೆಗೂ ನಡೆದುಬಂದಿದೆ. ತಮಗಿಂತ ಹಿಂದಿನ ಮತ್ತು ತಮ್ಮ ಕಾಲದಲ್ಲಿಯೇ ಬಾಳಿ ಬೆಳಗಿ ಶಿವೈಕ್ಯರಾದ ಮಹಾಮಹಿಮರ ಪುಣ್ಯಚರಿತ್ರೆಯನ್ನು ರಚಿಸುವುದರಲ್ಲಿ ಇವರಿಗೆ ಹೆಚ್ಚು ಆಸಕ್ತಿ. ಇಂತಹ ಕೃತಿಗಳಿಂದ ಕವಿಚರಿತ್ರಕಾರರಿಗೆ ವಿಪುಲಸಾಮಗ್ರಿ ದೊರೆತು ಸಾಹಿತ್ಯಚರಿತ್ರೆಯನ್ನು ರಚಿಸುವುದಕ್ಕೆ ತುಂಬಾ ಸಹಾಯವಾಯಿತು. ಈ ಕೃತಿಗಳನ್ನೆಲ್ಲ ಪೌರಾಣಿಕ ಶೈಲಿಯಲ್ಲಿಯೇ ಬರೆದಿರುವುದರಿಂದ ಪುರಾಣದ ಗವಸಣಿಗೆಯನ್ನು ಬಿಡಿಸಿ ತೆಗೆದು ಐತಿಹಾಸಿಕ ವಾಸ್ತವಾಂಶಗಳನ್ನು ಕಂಡುಹಿಡಿಯುವುದು ಮಾತ್ರ ಕಷ್ಟಸಾಧ್ಯ. ಅದರಲ್ಲಿಯೂ ಆ ಪುರಾಣಕಾರರಿಗೆ ಕಾಲವೇ ನಿಷ್ಕೃಷ್ಟವಾಗಿ ಗೊತ್ತಿಲ್ಲದಿರುವಾಗ ಅವರ ಕೃತಿಗಳಲ್ಲಿ ಉಕ್ತವಾಗಿರುವ ಕವಿ, ಶರಣರಕಾಲನಿರ್ಣಯ ಮಾಡುವುದು ಕಷ್ಟಸಾಧ್ಯವಾಗುತ್ತದೆ. ಇಂತಹ ತೊಡಕನ್ನು ತಂದೊಡ್ಡುವವರಲ್ಲಿ ಹೊಲಿಯ ಪಂಚವಣ್ಣಿಗೆ ಮಠದ ಸಿದ್ಧನಂಜೇಶನೊಬ್ಬ.

ಕವಿಚರಿತೆಕಾರರು ಈ ಕವಿ ಸು. ಕ್ರಿ.ಶ. ೧೬೫೦ ರಲ್ಲಿ ಇದ್ದಿರಬಹುದೆಂದು ಊಹಿಸಿದ್ದಾರೆ. ಇವರು ಕೊಡುವ ಆಧಾರಗಳು:—ವೀರಶೈವಾಮೃತ ಪುರಾಣ (ಕ್ರಿ.ಶ. ೧೫೩೦)ದಿಂದ ಕೆಲವು ವಿಷಯಗಳನ್ನು ಈ ಕವಿ ಸಂಗ್ರಹಿಸಿದ್ದಾನೆ; ಸುಮಾರು ಕ್ರಿ.ಶ. ೧೬೦೦ ರಲ್ಲಿದ್ದ ಸಂಪಾದನೆಯ ಸಿದ್ಧವೀರಾಚಾರ್ಯನ ಹೆಸರನ್ನು ರಾಘವಾಂಕ ಚಾರಿತ್ರದ ಅಂತ್ಯಭಾಗದಲ್ಲಿ ಹೇಳಿದೆ. ಆದುದರಿಂದ ಈ ಕವಿಯ ಕಾಲ ಸುಮಾರು ಕ್ರಿ.ಶ. ೧೬೫೦.

ಇತ್ತೀಚೆಗೆ ಸಿದ್ಧನಂಜೇಶನ ಗುರುರಾಜ ಚಾರಿತ್ರವನ್ನು ಸಂಪ್ರತಿಸಿ ಪ್ರಕಟಿಸಿರುವ ಶ್ರೀ. ಸಂ. ಶಿ. ಭೂಸನೂರುಮಠ ಅವರು, ಅವನ ಕಾಲ ನಿರ್ಧಾರಮಾಡುವುದಕ್ಕೆ ಪ್ರಯತ್ನಿಸಿದ್ದಾರೆ. ಕ್ರಿ.ಶ. ೧೬೭೪ ರಲ್ಲಿ ಕೊಟ್ಟೂರು ಬಸವೇಶ್ವರ ಪುರಾಣವನ್ನು ಬರೆದು ಮುಗಿಸಿದ ಕವಿ ಬಸವಲಿಂಗನು ಸಿದ್ಧನಂಜೇಶ ಗುರುವನ್ನು ಸ್ಮರಿಸಿರುವನಲ್ಲದೆ ಅವನ ಕೃತಿಯಿಂದ ಉಪಕೃತನಾಗಿದ್ದೇನೆಂದೂ ಹೇಳಿಕೊಂಡಿರುವುದರಿಂದ ಸಿದ್ಧನಂಜೇಶನು ಕ್ರಿ.ಶ. ೧೬೭೪ ಕ್ಕಿಂತ ಮುಂಚೆ ಇದ್ದನು. ಕ್ರಿ.ಶ. ೧೫೩೦ ರಲ್ಲಿ

ಬರೆದು ಮುಗಿಸಿದ ವೀರಶೈವಾಮೃತ ಮಹಾಪುರಾಣದಿಂದ ವಿಷಯ ಸಂಗ್ರಹಮಾಡಿ ಕೊಂಡಿರುವೆನೆಂದು ಹೇಳಿರುವ ಕವಿ ಸಿದ್ಧನಂಜೇಶ ಆ ಕಾಲಕ್ಕಿಂತ ಈಚೆಯವನೆಂಬುದು ತಾನೇ ಗೊತ್ತಾಗುತ್ತದೆ. ಕ್ರಿ.ಶ. ೧೫೩೦ ಕ್ಕೂ ೧೬೭೯ ಕ್ಕೂ ಮಧ್ಯೆ ಇವನು ಬಾಳಿದವನು. ಕ್ರಿ.ಶ. ೧೫೮೪ ರಲ್ಲಿದ್ದ ವಿರೂಪಾಕ್ಷ ಪಂಡಿತನ ಹೆಸರನ್ನು ಹೇಳಿಲ್ಲ ವಾದ್ದರಿಂದ ಸಿದ್ಧನಂಜೇಶನು ವಿರೂಪಾಕ್ಷಪಂಡಿತನ ಸಮಕಾಲೀನನೋ, ಅವನಿ ಗಿಂತ ಹಿರಿಯನೋ ಆಗಿರಬಹುದು. ಅಂತೂ ಸಿದ್ಧನಂಜೇಶ ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿರಬೇಕು—ಇದು ಶ್ರೀ ಭೂಸನೂರುಮಠ ಅವರ ಅಭಿಪ್ರಾಯ.

'ಕನ್ನಡ ಸಾಹಿತ್ಯಚರಿತ್ರೆ' ಎಂಬ ಉದ್‌ಗ್ರಂಥವನ್ನು ರಚಿಸಿರುವ ಶ್ರೀ ಮುಗಳಿಯವರ ಗಮನಕ್ಕೆ ಈ ಪುಸ್ತಕ ಬಿದ್ದಿಲ್ಲವೆಂದು ತೋರುತ್ತದೆ. ಅವರು ಎಂದಿನಂತೆ ಕವಿಚರಿತ್ರೆಯನ್ನೇ ಪರಮಾಧಾರವಾಗಿ ಇಟ್ಟುಕೊಂಡಿದ್ದಾರೆ. ಕನ್ನಡ ಸಾಹಿತ್ಯವೃಕ್ಷದ ಸ್ಥೂಲಚಿತ್ರವನ್ನು ಕೊಡುವುದಕ್ಕೆ ಹೊರಟವರಿಗೆ ಪ್ರತಿಯೊಬ್ಬ ಸಣ್ಣ ದೊಡ್ಡ ಕವಿಯ ಕಾಲನಿರ್ಣಯ ಮಾಡುವುದಕ್ಕೆ ವ್ಯವಧಾನವಿರು ವುದಿಲ್ಲ.

ಸಿದ್ಧನಂಜೇಶಕವಿಯ ಕಾಲವನ್ನು ಹೊಸದಾಗಿ ದೊರೆತಿರುವ ಕೆಲವು ಆಧಾರ ಗಳ ನೆರವಿನಿಂದ ಖಚಿತವಾಗಿ ನಿರ್ಧರಿಸಬಹುದು. ಇವನ ಗುರು ಸಿದ್ಧನಂಜೇಶನಲ್ಲಿ ಪುರಾಣದ ರಾಚವಟ್ಟಿಯ ದೇವ, ಮುಖಬೋಳು ಸಿದ್ಧರಾಮ ಮುಂತಾದ ಮಹನೀಯರಿದ್ದರೆಂಬುದು ಇದೇ ಕವಿಯ ಗುರುರಾಜ ಚಾರಿತ್ರದಿಂದ ಗೊತ್ತಾಗು ತ್ತದೆ[1]. ತೀರ್ಥಹಳ್ಳಿಯ ತೊಂಬತ್ತೈದನೆಯ ಶಾಸನವೊಂದರಲ್ಲಿ ಪುರಾಣದ ರಾಚ ವಟ್ಟಿಯ ದೇವನ ಹೆಸರು ಉಕ್ತವಾಗಿದೆ. ಆ ಶಾಸನದ ಪ್ರಕಾರ ರಾಚವಟ್ಟಿಯ ದೇವನು ಕ್ರಿ.ಶ. ೧೬೧೧ ಕ್ಕಿಂತ ಮುಂಚೆ ಇದ್ದವನು ಎಂಬುದಷ್ಟೇ ಸ್ಪಷ್ಟವಾಗಿ ಗೊತ್ತಾಗುವುದು.[2] ಕೊಟ್ಟೂರು ಬಸವೇಶ್ವರ ಪುರಾಣವನ್ನು ಕ್ರಿ.ಶ. ೧೬೭೯ ರಲ್ಲಿ ಬರೆದು ಮುಗಿಸಿರುವ ಕವಿ ಬಸವಲಿಂಗನು ಸಿದ್ಧನಂಜೇಶನನ್ನು ಹೆಸರಿಸಿರುವುದರಿಂದ ಪುರಾಣದ ರಾಚವಟ್ಟಿಯ ದೇವನೂ ಕ್ರಿ.ಶ. ೧೬೭೯ ಕ್ಕಿಂತ ಮುಂಚೆ ಇದ್ದನೆಂದು ನಿರ್ಧರಿಸಬಹುದು.

---

[1] ಗುರುರಾಜ ಚಾರಿತ್ರದ ಒಂದನೆಯ ಸಂಧಿಯ ೪೨, ೪೩, ೪೪ ನೇ ಪದ್ಯಗಳನ್ನು ನೋಡಿ.

[2] ಈ ಶಾಸನದ ಕಾಲ ಕ್ರಿ.ಶ. ೧೬೦೯. ಇಲ್ಲಿ ಪುರಾಣದ ರಾಚವಟ್ಟಿಯ ದೇವನ ಹೆಸರು ಆ ಹಿಂದೆ ಕೊಟ್ಟ ದಾನಶಾಸನದ ಬಗ್ಗೆ ಹೇಳುವಾಗ ಬಂದಿದೆ. ಆದುದರಿಂದ ಇವನ ಕಾಲವನ್ನು ಈ ಶಾಸನ ಒಂದರ ಆಧಾರದಮೇಲೆಯೇ ನಿರ್ಣಯಿಸುವುದಕ್ಕಾಗುವುದಿಲ್ಲ.

ಸಿದ್ಧನಂಜೇಶನು, ಬಹುಶಃ ಅವನ ಸಮಕಾಲೀನನಾದ ಹೋಳಿನ ಹಿರಿಯ ಹಂಪಯ್ಯನನ್ನು ನೂತನ ಶರಣರ ಪಂಙ್ತಿಯಲ್ಲಿ ಸೇರಿಸಿ ಹೊಗಳಿರುತ್ತಾನೆ[1].

ತೀರ್ಥಹಳ್ಳಿಯ ಐವತ್ತಾರನೆಯ ಶಾಸನವು ಈ ಶರಣನ ಕಾಲನಿರ್ಣಯ ಮಾಡುವುದಕ್ಕೆ ಅನುವಾಗುತ್ತದೆ. ಸದಾಶಿವಸಾಗರದಲ್ಲಿ ಶ್ರೀರಂಗಪಟ್ಟಣದ ಹೋಳಿನ ಹಿರಿಯ ಹಂಪಯ್ಯನು ಕಟ್ಟಿಸಿದ ಮಹಾಮಹತ್ತಿನ ಮಠಕ್ಕೆ ಕೆಳದಿಯ ವೆಂಕಟಪ್ಪನಾಯಕನು ಉಂಬಳಿ ಹಾಕಿಕೊಟ್ಟಿರುತ್ತಾನೆ. ಈ ಶಾಸನದ ಕಾಲ ಕ್ರಿ.ಶ. ೧೬೧೬ಕ್ಕೆ ಸರಿಹೊಂದುತ್ತದೆ. ಆದುದರಿಂದ ಸಿದ್ಧನಂಜೇಶನು ಹೋಳಿನ ಹಿರಿಯ ಹಂಪಯ್ಯನನ್ನು ಹೊಗಳಿರುವುದರಿಂದ ಕ್ರಿ.ಶ. ೧೬೧೬ಕ್ಕಿಂತ ಈಚೆಗೆ ಇದ್ದವನೆಂಬುದು ಸ್ಪಷ್ಟವಾಗುತ್ತದೆ[2]. ಶ್ರೀ ಭೂಸನೂರು ಮಠರು ಅಂದಿರುವಂತೆ ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿದವನಲ್ಲ.

ಷಟ್ಸ್ಥಲತಿಲಕವನ್ನು ರಚಿಸಿರುವ ಮುಖಬೋಳು ಸಿದ್ಧರಾಮನೂ ಸಿದ್ಧನಂಜೇಶನ ಸಹಪಾಠಿಯಾಗಿದ್ದವನು. ಹಿರಿಯ ಸಿದ್ಧನಂಜೇಶ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿದವನು. ಇವನು ತನ್ನ ಕೃತಿಯನ್ನು 'ದುರುಳಪನಿವತ್ಸರದ ಮಾರ್ಗ ಮಸ್ತಕಮಾಸ| ವರಶುದ್ಧ ಪೌರ್ಣಮೀ ಸೌಮ್ಯವಾರದಿ' ಬರೆದು ಮುಗಿಸಿದನು[3]. ಸ್ವಾಮಿ ಕಣ್ಣುಪಿಳ್ಳೆಯವರ ಪಂಚಾಂಗದಂತೆ ಈ ಮುಹೂರ್ತ ಕ್ರಿ.ಶ. ೧೫೯೬ ನೆಯ ನವೆಂಬರ್ ಇಪ್ಪತ್ತೈದನೆಯ ಬುಧವಾರಕ್ಕೆ ಬೀಳುತ್ತದೆ.

ಮುಖಬೋಳು ಸಿದ್ಧರಾಮನು ಕವಿ ಸಿದ್ಧನಂಜೇಶನ ಹಿರಿಯ ಸಮಕಾಲೀನನಾಗಿರಬಹುದು. "ಜಂಗಮಕೆ ದಾಸೋಹಮಂ ಮಾಡ| ಲೋತು ರಚಿಸಿದ

---

[1] ಮಹಾ ಮಠಗಳೊಳಗೆಡೆವಿಡದೆ ಸಕಲರಂ ತೃಪ್ತಿಬಡಿಸಿ| ಭೂತಳದೊಳೊಪ್ಪುವಾ ಶ್ರೀರಂಗ ಪಟ್ಟಣಾ| ಖ್ಯಾತಹೋಳಿನ ದೊಡ್ಡಹಂಪಯ್ಯನೆಂಬನಘ| ಭೂತೇಶನೊಲವ ಪಡೆದಂ ಸರ್ವಜನರೆಲ್ಲ ಹೊಡೆಗೆಡೆದು ನಮೊ ಎನುತಿರೆ. ಸಂಧಿ ೧೬, ಪದ್ಯ ೩೮.

[2] 'ಶಾಲಿವಾಹನ ಶಕ ವರ್ಷ ೧೫೩೮ ನೆಯ ನಳಸಂವತ್ಸರದ ನಿಜ ಆಶ್ವೀಜ ಬಹುಳ ಏಳರಲ್ಲು ಶ್ರೀಮತ್ಸಜ್ಜನ ಶುದ್ಧಶಿವಾಚಾರಸಂಪನ್ನ ಗುರುಲಿಂಗ ಜಂಗಮಾಪ್ರೇಮಿಗಳಾದ ದ್ಯಾವಾ ಪೃಥ್ವೀ ಮಹಾಮಹತ್ತಿನೊಳಗಾದ ಶ್ರೀರಂಗಪಟ್ಟಣದ ಹೋಳಿನ ಹಿರಿಯ ಹಂಪಯ್ಯನವರು ಸದಾಶಿವ ಸಾಗರದಲ್ಲು ಕಟ್ಟಿಸಿದ ಮಹತ್ತಿನ ಮಠ ಧರ್ಮಕೆ . . . (ಕ್ರಿ.ಶ. ೧೬೧೬ ನೆಯ ಅಕ್ಟೋಬರ್ ೨೧ ನೆಯ ಸೋಮವಾರ).

[3] 'ಷಟ್ಸ್ಥಲ ತಿಲಕ'ವನ್ನು ಬರೆದವನು ಸಿದ್ಧರಾಮ ಎಂಬುದಷ್ಟೇ ನಮಗೆ ದೊರೆತಿರುವ ಪ್ರತಿಯಿಂದ ಹೊರಪಡುತ್ತದೆ; ಮುಖಬೋಳು ಸಿದ್ಧರಾಮ ಎಂದು ಕವಿಚರಿತೆಕಾರರು ಹೇಳುತ್ತಾರೆ. ಕ. ಚ. ಸಂ. III, ಪುಟ ೪೫೦.

ಮಹಾಮಠಗಳೊಳಗೆಡೆವಿಡದೆ ಸಕಲರಂ ತೃಪ್ತಿಪಡಿಸಿ ‖ ಭೂತಳದೊಳೊಪ್ಪುವಾ ಶ್ರೀರಂಗಪಟ್ಟಣಾ | ಖ್ಯಾತ ಹೋಳಿನ ದೊಡ್ಡ ಹಂಪಯ್ಯನೆಂಬನಘ "ನು ಶಿವೈಕ್ಯನಾದಮೇಲೆ ಗುರುರಾಜ ಚಾರಿತ್ರವನ್ನು ರಚಿಸಿರಬಹುದು.

ಅಂತೂ ಸಿದ್ಧನಂಜೇಶನು ಕ್ರಿ.ಶ. ೧೬೩೦ ರ ಸುಮಾರು ಎಂದೂ ಮುಖಬೋಳು ಸಿದ್ಧರಾಮದೇಶಿಕನ ಕಾಲವು ೧೫೬೬ ಎಂದೂ ಧಾರಾಳವಾಗಿ ಹೇಳಬಹುದು.

ಎಚ್. ದೇವೀರಪ್ಪ

ಕಾವ್ಯಾವಲೋಕನ

ಸಾಧನಾ—ನಿರಂಜನ ; ಪ್ರಕಾಶನ : ಪುರೋಗಾಮಿ ಪ್ರಕಾಶನ, ಬೆಂಗಳೂರು ; ಬೆಲೆ, ರೂ. ೧-೮-೦.

ಐದು ನಿಮಿಷ—ನಿರಂಜನ ; ಪ್ರಕಾಶನ : ಪುರೋಗಾಮಿ ಪ್ರಕಾಶನ, ಬೆಂಗಳೂರು ; ಬೆಲೆ, ರೂ. ೧-೦-೦ ; ಮಾರಾಟದ ಒಡೆತನ : ಶಾರದಾ ಪ್ರಕಟನಾಲಯ, ಬೆಂಗಳೂರು ೨.

ನಿರಂಜನರ ಎರಡು ಪುಸ್ತಕಗಳು 'ಜನಪ್ರಗತಿ' ಮತ್ತು 'ಚಿತ್ರಗುಪ್ತ' ವಾರ ಪತ್ರಿಕೆಗಳಲ್ಲಿ 'ಸಾಧನಸಂಚಯ' ಮತ್ತು ಮಿತಭಾಷಿಯ 'ಐದು ನಿಮಿಷ' ಎಂಬ ಸ್ಥಿರ ಶೀರ್ಷಿಕೆಯಲ್ಲಿ ಬರುತ್ತಿರುವ ಲೇಖನಗಳಿಂದ ಆರಿಸಿದುವು. ಸಾಧನಾದಲ್ಲಿ ಮೂವತ್ತುಮೂರು ಲೇಖನಗಳಿವೆ. 'ಐದು ನಿಮಿಷ'ದಲ್ಲಿ ಮೂವತ್ತೇಳು ಬರಹಗಳಿವೆ. ಪ್ರಖ್ಯಾತ ರೇಖಾಚಿತ್ರಗಾರರಾದ ಆರ್. ಎಸ್. ಎಣ್. ರವರು ಹೊದಿಕೆಯ ಚಿತ್ರ ವನ್ನು ಬರೆದಿದ್ದಾರೆ.

ವಾರಪತ್ರಿಕೆಗಳಲ್ಲಿ ಜನಜೀವನಕ್ಕೆ ಸಂಬಂಧಿಸಿದ ಯಾವುದೋ ಸಮಸ್ಯೆಯನ್ನು ತೆಗೆದುಕೊಂಡು ಅದರ ಬಗ್ಗೆ ಚರ್ಚೆ ನಡೆಸುವುದು, ತಮ್ಮ ಸ್ವಂತ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಸೂಚಿಸುವುದು, ತಮ್ಮ ವಾದದಿಂದ ಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವುದು ಇವು ಹೊಸದಲ್ಲ. ಇಂಗ್ಲೆಂಡಿನಲ್ಲಿ ಟ್ಯಾಟ್ಲರ್, ಸ್ಪೆಕ್ಟೇಟರ್, ಐಡ್ಲರ್ (Tatler, Spectator, Idler) ಮುಂತಾದ ಪತ್ರಿಕೆಗಳು ಹದಿನೆಂಟನೆಯ ಶತಮಾನದಲ್ಲಿಯೇ ಇಂತಹ ಲೇಖನಗಳಿಗಾಗಿಯೇ ಹುಟ್ಟಿಕೊಂಡುವು. ರಾಜಕಾರಣ ದಲ್ಲಿ 'ಜೇನಸ್ಸನ ಪತ್ರಗಳು' [The letters of Janus] ವಾರವಾರವೂ ಬಂದು ಇಂಗ್ಲೆಂಡಿನ ರಾಜಕಾರಣಿಗಳಿಗೆ ಎದೆ ತತ್ತರಿಸುತ್ತಿತ್ತು. ಫ್ರಾನ್ಸಿನ ಹಿರಿಯ ಸಾಹಿತಿ ಗಳೆಲ್ಲರೂ ಈ ರೀತಿಯ ಸಾಹಿತ್ಯ ಸೃಷ್ಟಿ ಮಾಡಿದಾರೆ. ಅನತೋಲ್ ಫ್ರಾನ್ಸ್ ಸಾಹಿತ್ಯ, ರಾಜಕೀಯಗಳ ಬಗ್ಗೆ 'ಟೆಂಪ್' ಪತ್ರಿಕೆಗೆ (Le Teamps) ಪ್ರತಿವಾರವೂ ಬರೆಯುತ್ತಿದ್ದ ಲೇಖನಗಳನ್ನು 'on Life and Letters', 'ಜೀವನ ಮತ್ತು ಸಾಹಿತ್ಯದ ವಿಚಾರ' ಎಂಬ ಪುಸ್ತಕವಾಗಿ ಪ್ರಕಟಿಸಿದಾರೆ. ಶ್ರೀ. ನಿರಂಜನರ ಈ ಎರಡು ಪುಸ್ತಕಗಳೂ ಇದೇ ಜಾತಿಗೆ ಸೇರಿದುವು.

ಕಲೆಯೆಲ್ಲಾ ಪ್ರಚಾರವೇ ಎಂದು ಜಾರ್ಜ್ ಬರ್ನಾರ್ಡ್ ಷಾ ಹೇಳಿದ ಮಾತಿನ ಅರ್ಥವೇ ಬೇರೆ. ಅದನ್ನು ನಿರಂಜನರು ಸಾಧಿಸಿರುವ ರೀತಿಯೇ ಬೇರೆ.

ಈ ಲೇಖನಗಳೆಲ್ಲಾ ಪ್ರಚಾರ ಸಾಹಿತ್ಯವೆಂದು ಸುಲಭವಾಗಿ ಹೇಳಬಹುದು. ಪ್ರಚಾರವೂ ಒಂದು ಕಲೆಯೆಂದು ತಿಳಿದು ಅದನ್ನು ಚಮತ್ಕಾರವಾಗಿ ಬಳಸಿಕೊಂಡಿದಾರೆ ನಿರಂಜನರು. ಅಂದಂದಿನ ಘಟನೆಗಳನ್ನು, ಅಂದಂದಿನ ವಿಶಿಷ್ಟ ವ್ಯಕ್ತಿಗಳನ್ನು ತೆಗೆದುಕೊಂಡು, ಅವುಗಳ ಬಗ್ಗೆ ತಮ್ಮ ಸ್ವಂತ ಅಭಿಪ್ರಾಯಗಳನ್ನು ಸೂಚಿಸಿದಾರೆ. ಇಲ್ಲಿ ಅವರ ವೈಯಕ್ತಿಕ ಅಭಿಪ್ರಾಯವೇ ಮುಖ್ಯವಾಗಿ, ಅವರ ವಿಚಾರಸರಣಿಗೆ ಲೇಖನವೊಂದು ಪ್ರಚಾರ ಸಾಧನೆಯಾಗುತ್ತದೆ. ಆ ಸರಣಿಯನ್ನು ನಾವು ಒಪ್ಪಬಹುದು, ಒಪ್ಪದಿರಬಹುದು.

ಈ ರೀತಿಯ ವ್ಯಕ್ತಿ ವಿಚಾರವನ್ನು ಪತ್ರಿಕೆಗಳಲ್ಲಿ ಓದುವಾಗ ನಮಗೆ ಅವುಗಳು ಅಷ್ಟು ಮುಖ್ಯವೆನಿಸುವುದಿಲ್ಲ. ಆದರೆ ಅವುಗಳನ್ನು ಸಾಹಿತ್ಯವೆಂದು ಪುಸ್ತಕರೂಪದಲ್ಲಿ ಪ್ರಕಟಿಸುವಾಗ ನಾವು ಈ ಲೇಖನಗಳಲ್ಲಿ ಸಾಹಿತ್ಯದ ಅಂಶವನ್ನು ತುಂಬಬೇಕಾಗುತ್ತದೆ. ಅಪಾರಜ್ಞಾನ, ಅರಿವು, ಪಕ್ಷಾತೀತವಾದ ವಿಮರ್ಶಾಬುದ್ಧಿ, ಘಟನೆಗಳನ್ನು ಎಲ್ಲರ ಹಿತಕ್ಕಾಗಿ ಬಳಸುವ ಬುದ್ಧಿ, ತೀವ್ರವಾಗಿ ಹರಿತವಾಗಿ ಯೋಚಿಸುವ ವಿಚಾರಶೀಲತೆಗಳು, ಚೂಪಾಗಿ, ಹರಿತವಾಗಿರುವ ಶೈಲಿ, ಪದಗಳಮೇರೆ ಪೂರ್ಣ ಪ್ರಭುತ್ವ ಇವು ಲೇಖನಗಳಲ್ಲಿ ಇರಬೇಕಾಗುತ್ತದೆ. ನಿರಂಜನರಲ್ಲಿ ಶೈಲಿ ಹರಿತವಾಗಿದೆ. ಅವರು ಬೇಕಾದಂತೆ ಬೇಕಾದ ಪದಗಳನ್ನು ಪಯೋಗಿಸಬಲ್ಲರು. ಆದರೆ ಅವರ ವಿಚಾರಸರಣಿ ಆಳವಲ್ಲ, ಅವರಿವರನ್ನು ಅಂದು ಕೆಳಗಿಳಿಸುವ ಪಕ್ಷಭಾವನೆಗಳು, ಅಭ್ಯಾಸ ಅಷ್ಟೇನೂ ಆಳವಲ್ಲವೆಂದು ತೋರಿಸುತ್ತಿವೆ. ಇದರಿಂದ ಈ ಪುಸ್ತಕಗಳಿಗೆ ಅಂತಹ ಬೆಲೆಯೇನೂ ಸಿಗಲಾರದು. ಪುಸ್ತಕರೂಪವಾಗಿ ಬರಬೇಕಾದಂತಹ ಗುಣ, ವಿಚಾರಪುಷ್ಟಿ ಈ ಲೇಖನಗಳಿಗಿಲ್ಲ. ಆದರೆ ಪ್ರಚಾರವು ಒಂದು ಉತ್ತಮಕಲೆಯೆಂದು ಈ ಎರಡು ಪುಸ್ತಕಗಳೂ ಚೆನ್ನಾಗಿ ತೋರಿಸಿಕೊಡುತ್ತವೆ.

ವಸಂತ.

*
* *

ಗೀಚುಗೆರೆ—ಕಥಾಸಂಗ್ರಹ : ರಾಮಚಂದ್ರಕೊಟ್ಟಲಗಿ ; ಪ್ರಕಾಶನ : ಲಲಿತಸಾಹಿತ್ಯಮಾಲೆ, ಧಾರವಾಡ ; ೧೦೩ ಪುಟಗಳು ; ಬೆಲೆ, ಸಾದಾಪ್ರತಿ ರೂ. ೧-೪-೦ ; ಉತ್ತಮಪ್ರತಿ ರೂ. ೨-೦-೦.

ಶ್ರೀ. ರಾಮಚಂದ್ರಕೊಟ್ಟಲಗಿಯವರ ಎಂಟು ಕಥೆಗಳ ಸಂಗ್ರಹವೇ ಈ 'ಗೀಚುಗೆರೆ.' ಇದರಲ್ಲಿ 'ಜೀವನದ ಪರಿಭಾಷೆ'ಯೊಂದು ಹಿಂದಿಯ ಮೂಲವೊಂದರ ನೆನಪಿನ ಛಾಯೆಯ ಮೇಲೆ ನಿರ್ಮಿತವಾದುದು. ಜೀವನವೇನೆಂಬುದನ್ನು ಪ್ರತಿಯೊಂದು ಜೀವಿಯೂ ತನ್ನ ತನ್ನ ಅರಿವಿಗೆ ನಿಲುಕಿದಂತೆ ಅರಿತುಕೊಳ್ಳುತ್ತದೆ.

ಸಂಜೆಯ ಹೊತ್ತಿನಲ್ಲಿ 'ಜೀವನವೆಂದರೇನು?' ಎಂದು ಬುಲ್‌ಬುಲ್ ಪ್ರಶ್ನಿಸಿದಾಗ—ಬಿಳಿ ಕಮಲವೊಂದು ಅರಳುತ್ತಾ 'ವಿಕಾಸವೇ ಜೀವನ'ವೆಂದರೆ—ಈ ಕಮಲವನ್ನು ಮುತ್ತಿಡುವ ಬಂಡುಣಿ 'ಜೀವನವೆಂದರೆ ಆನಂದ'ವೆನ್ನುತ್ತದೆ. ಒಂದೊಂದು ವಸ್ತುವಿಗೆ ಅದರದರ ಸಾಮರ್ಥ್ಯ, ದೃಷ್ಟಿಯಂತೆ ಜೀವನ ಅಶ್ರುಕಣವಾಗಿಯೋ, ಸುಂದರಸ್ವಪ್ನವಾಗಿಯೋ, ಕಠಿಣಶ್ರಮವಾಗಿಯೋ, ಶಾಲೆಯಾಗಿಯೋ, ಅತೃಪ್ತ ಅಭಿಲಾಷೆಯಾಗಿಯೋ ತೋರುತ್ತದೆ. ಹೀಗೆ ಜೀವನವನ್ನು ಅಳೆಯಹೋದವರ ಅಳತೆಯ ಸಣ್ಣತನ ಮಾತ್ರ ನಮಗೆ ತೋರುತ್ತದೆ. ಈ ಕಥೆಯ ಸರಳ, ಸಹಜಸೌಂದರ್ಯ ಮನ ಮುಟ್ಟುತ್ತದೆ. ರವೀಂದ್ರರ ಕಾವ್ಯಕಥೆಯನ್ನು ನೆನಪಿಗೆ ತರುತ್ತದೆ. ಗದ್ಯಕಾವ್ಯಕ್ಕೆ ಒಳ್ಳೆಯ ಉದಾಹರಣೆ ಈ ಪುಟ್ಟ ರೂಪಕಚಿತ್ರ.

ತಮಣಾಚಾರಿ ಬೇಕಾದಷ್ಟು ಉಳ್ಳವನು. ಮನೆತುಂಬಾ ತುಂಬಿದ್ದಮನೆ. ಇದ್ದಕ್ಕಿದ್ದಂತೆ ಗಂಟುಬೇನೆ ಬಂದು ತಮಣಾಚಾರಿ ತೀರಿಕೊಂಡ. ಹತ್ತು ದಿನ ಹಾಯುವುದರಲ್ಲೇ ಅವನ ಇಬ್ಬರು ಗಂಡುಮಕ್ಕಳು, ಸೊಸೆಯರು, ಮೊಮ್ಮಕ್ಕಳೆಲ್ಲಾ ಅವನ ಜತೆ ಸೇರುವರು. ತುಂಬಿದ್ದಮನೆ ಈಗ ತೆರವೋ ತೆರವು. ಉಳಿದವರೆಂದರೆ ಆಚಾರಿಯ ಹೆಂಡತಿ ಕೃಷ್ಣವ್ವ—ಗಂಡನನ್ನು ಕಳೆದುಕೊಂಡು ವಿಧವೆಯಾಗಿ, ವಿಧವೆ ತಾಯಿಯ ಜತೆಗೆ ಬಂದ ರಾಧವ್ವ. ಮನೆ ಈಗೊಂದು ಶ್ಮಶಾನ. ರಾಧವ್ವ ಕೃಷ್ಣವ್ವಗಳೇ ಭೂತಗಳು. ಬಯಸಿದ ಆಕಾಂಕ್ಷೆಗಳು, ತೀರಿಸಿಕೊಳ್ಳಲಾಗದೆ ಅದುಮಿಟ್ಟ ಆಸೆಗಳು ಆಂತರಿಕ ತಡೆಗಟ್ಟಾಗಿ ಮನಸ್ಸಿನಲ್ಲಿ ಭೂತಪ್ರವೇಶವಾಗುವುದು ಇಬ್ಬರಿಗೂ. ಅತೃಪ್ತವಿಲಾಸ ಮನಸ್ಸಿನ ಏಕನಾದವಾಗುತ್ತದೆ. ಅವರು ಹೊರಗೆ ಸಜ್ಜನಿಕೆ ತೋರಿ, ಎಲ್ಲ ಕಳೆದುಕೊಂಡವರಂತೆ ಸಪ್ಪೆಮುಖ ಹಾಕುತ್ತಾರೆ. ಆದರೆ ಒಳಗಿನ ಭಯಾನಕ ಸತ್ಯ ಇರುಳಾಯಿತೆಂದರೆ ಎಡರು ತೊಡರುಗಳನ್ನು ತಡೆಗಟ್ಟನ್ನು ಕೊಚ್ಚಿಕೊಂಡು ಹೊರಬೀಳುತ್ತದೆ. ತಾವು ಉಡಲಾರದ ಪೀತಾಂಬರಗಳು, ತೊಡಕೊಡದಂತಹ ಜವಾಹಿರಿ, ಬಂಗಾರ, ಇಡಬಾರದಂತಹ ಕುಂಕುಮಗಳೆಲ್ಲಾ ರಾತ್ರಿಯಾದೊಡನೆ ಇವರಿಬ್ಬರ ಮೈಯಲಂಕರಿಸುತ್ತವೆ. ಶೃಂಗಾರಗೊಂಡ ವಿಕಾರ ಪಿಶಾಚಗಳಂತೆ ಇಬ್ಬರೂ ಅತೃಪ್ತವಿಲಾಸವನ್ನು ತೃಪ್ತಿಗೊಳಿಸಿದೆವೆಂಬ ಭ್ರಾಂತಿಯಲ್ಲಿ ಭೂತಗುಣಿತವಾಡುತ್ತಾರೆ. ಈ ವಿಕಾರ ಚಿತ್ರ—ಮನೋವಿಶ್ಲೇಷಣ, ಮನಸ್ಸಿನ ವಿಕೃತಿ (Abnormality) ಯೇ 'ಅತೃಪ್ತವಿಲಾಸ'ದ ವಸ್ತು. ಇಲ್ಲಿಯ ಭಯಾನಕ ಚಿತ್ರಣ ರುದ್ರಸುಂದರವಾಗಿದೆ. ಭಯ ಹುಟ್ಟಿಸಿದರೂ ಸೆಳೆಮಿಂಚಾದ ಹುಲಿಯರೂಪದಂತಿದೆ ಈ ಕತೆ.

'ಬಯಲ ಬಂಗಾರ'ದಲ್ಲಿ ಬಡತನದ ಸಂಸಾರದಲ್ಲಿ ಸಿನಿಮಾಕ್ಕೆ ಹೋಗಲು ಕಾಸಿಲ್ಲದೆ, ಬಂದ ವೇತನದಲ್ಲಿ 'ಸಂತ ಜ್ಞಾನೇಶ್ವರ' ಚಿತ್ರದರ್ಶನಕ್ಕೆ ಹೋಗಬೇಕೆಂದಿದ್ದ

ಹುಡುಗರು, ಮನೆಯ ಹೀನಾವಸ್ಥೆಗಾಗಿ ತಮ್ಮ ಹಣವನ್ನು ಮನೆಗೇ ವೆಚ್ಚಕ್ಕಾಗಿ ಉಪಯೋಗಿಸುವ ಚಿತ್ರಣವಿದೆ. ಈ ಕತೆ ಕರುಣೆ ಕೆದಕುವಂತಹುದು. ಬಡತನದ ಚಿತ್ರಣ—ಮಕ್ಕಳ ಮುಗ್ಧ ಮನಸ್ಸಿಗೂ ಹೊರೆಯಾಗಿ ಬರುವ ಬಾಳಿನ ಬವಣೆ—ಇವುಗಳು ಮರ್ಮವುಟ್ಟುತ್ತವೆ.

'ಶೇಷಪ್ರಶ್ನೆ'ಯೆಂಬುದೊಂದು ಅರ್ಥವಿಲ್ಲದ, ಇದ್ದರೂ ಅರ್ಥವಾಗದ ಕತೆ.

'ಹೆಬ್ಬೆರಳು-ಕಿರುಬೆರಳು'—ದಾಯಾದಿಗಳು ಒಬ್ಬರನ್ನೊಬ್ಬರು 'ಹತ್ತು ದಿನದ ಸಂಬಂಧಿಕರೆಂದು' ಹೇಳಿ ಕೊಂಡಾಡುವ ದ್ವೇಷದ ಸ್ಥಿತಿಯಲ್ಲಿದ್ದರೂ ಕೂಡ ತಮ್ಮಲ್ಲಿ ಎಲ್ಲಿಯೋ ಹುದುಗಿದ್ದ ಒಳ್ಳೆಯತನದಲ್ಲಿ ಒಬ್ಬರಿಗೊಬ್ಬರು ನೆರವಾಗಿ ನಿಲ್ಲುವ ಭವ್ಯ ಚಿತ್ರ. ಮನೆಯ ಲಕ್ಷ್ಮಿಯನ್ನು ಕಳೆದುಕೊಂಡು ರಾಜಭೋಗದಿಂದ ದರಿದ್ರಯೋಗಕ್ಕಿಳಿದ ಶೀನಪ್ಪ. ಎಲ್ಲವನ್ನೂ ಆಳುತ್ತಿದ್ದು ಈಗ ದಟ್ಟದರಿದ್ರಿಯಾಗಿ, ಗೋಡೆಯಲ್ಲಿ ಹುದುಗಿದ್ದ ಹೊನ್ನು ಕರೆದು "ತೆಗೆದುಕೋ, ಹೆಬ್ಬೆರಳನ್ನು ಇಲ್ಲವೇ ಕಿರುಬೆರಳನ್ನು ಬಲಿಕೊಡು" ಎಂದು ಆಜ್ಞಾಪಿಸಿದಾಗ, ತನ್ನ ಗಂಡನನ್ನೋ, ಮಗನನ್ನೋ ಬಲಿ ಕೊಡುವ ಸಂದಿಗ್ಧ ಒದಗಿ ಸೊರಗಿದಳು ಭೀಮಕ್ಕ. ಕೊನೆಗೆ ಆ ಮನೆಯನ್ನು ತಾನು ತೆಗೆದುಕೊಂಡು ತನ್ನ ತೋಟ, ಮನೆಗಳನ್ನು ವಿಶ್ವಾಸದಿಂದ ಬಿಟ್ಟುಕೊಟ್ಟ ರಾಮಣ್ಣನು ಕೂಡ ಆ ಬಂಗಾರವನ್ನು ಶಾಮಣ್ಣ ಒಲ್ಲದುದು ತನಗೆ ಬೇಡವೆಂದು ನಿಷ್ಠುರವಾಗಿ ನಿರಾಕರಿಸಿದ. ಶಾಮಣ್ಣ ಕೂಡ ಹೊಲ, ಮನೆ ಎಲ್ಲವನ್ನೂ ರಾಮಣ್ಣನಿಗೇ ಹಿಂತಿರುಗಿಸಿ ತೀರಿಕೊಂಡ. ರಾಮಣ್ಣ ಶಾಮಣ್ಣನ ಮಕ್ಕಳನ್ನು ಹುಡುಕಿ, ಕೊನೆಗೆ ತನಗೆ ತಿಳಿಯದೆಯೇ ಶಾಮಣ್ಣನ ಹಿರಿಯಮಗ ರಂಗಣ್ಣನೊಂದಿಗೆ ಈ ಕತೆಯನ್ನೆಲ್ಲಾ ಹೇಳಿಕೊಳ್ಳುತ್ತಾನೆ.

'ಒಂದೇ ತೋಟದ ಕಾಯಿಗಳು' ಒಂದು ಮನೆತನ ಮನೆಯ ಯಜಮಾನನ ವಿಲಾಸಜೀವನದಿಂದ ಹಾಳಾದರೂ, ಅವನ ವಿಧವೆ ತಂಗಿಯೊಬ್ಬಳು ಕೊನೆತನಕ ಆ ಮನೆಗಾಗಿ ಜೀವತೇದು, ಕೊನೆಗೆ ತೆತ್ತುದರ ದುರಂತಚಿತ್ರ. 'ಆರಿದ ದೀಪ'ವೊಂದು ಸುಂದರವಾದ ಕತೆ. ಅಪಾದನೆಗೆ ಸಿಕ್ಕಿದ್ದವನನ್ನು ಉಳಿಸಿಕೊಂಡು ಊಳಿಗದವನನ್ನಾಗಿ ಮಾಡಿಕೊಂಡ ಮ್ಯಾಜಿಸ್ಟ್ರೇಟರು ಕರುಣೆಯ ಸೋಗಿನಲ್ಲಿ ಸ್ವಾರ್ಥನಡೆಸಿಕೊಂಡರು. ಅವನ ಹೊಲವೆಲ್ಲ ಈಗ ಅವರದು. ಅವನು ಬರಿಯ ಸೇವಕ, ಕಾಲು ತಿಕ್ಕುವ ಗುಲಾಮ. ಹೊರಗೆ ಜಡಿಮಳೆ ಹೊಡೆಯುತ್ತಿರುವಾಗ ನಾಯಿಮರಿ ಸಾಹೇಬರ ಮನೆಯ ಮುಂದಿನ ಆಸರೆಯಲ್ಲಿ ಜೀವನಿಲ್ಲಿಸಿಕೊಳ್ಳಲು ಯತ್ನಿಸಿದಾಗ ಸಾಹೇಬರ ಅಣತಿಯಂತೆ ಅದನ್ನೋಡಿಸುತ್ತಾನೆ. ಅದರ ಕಣ್ಣಿನ ಕೋರಿಕೆಗೆ ಅವನ ಮನಸ್ಸು ಕದಡುತ್ತದೆ. ಏನೇ ಆಗಲಿ, ನಾಯಿಮರಿಯನ್ನು ಉಳಿಸಬೇಕೆಂದು ಮತ್ತೆ ಹೋಗಿ

ನೋಡುವಲ್ಲಿ, ಮರದಬುಡದಲ್ಲಿ ಅದಾಗಲೇ ಜೀವತೆತ್ತಿದೆ. ಸುಬ್ಬಣ್ಣನು ಮುಗಿಲಿಗೆ ಮೋರೆಯೆತ್ತಿ (ನಾಯಿಯಂತೆಯೇ ?)—'ಕಾಯುವ ಶಕ್ತಿಯಿಲ್ಲದೆ, ನನ್ನನ್ನೂ ಇದನ್ನೂ ಯಾಕೆ ಹುಟ್ಟಿಸಿದೆ. ಇದು ನಿನಗೆ ಕಲಂಕ'—ಎಂದು ದೇವರಿಗೆ ಕಲಂಕ ಹೊರಿಸುತ್ತಾನೆ. ಈ ಕತೆಯೂ ಸಣ್ಣದಾದರೂ ಸುಂದರವಾಗಿದೆ, ಸ್ವಾರಸ್ಯವಾಗಿದೆ.

ಋಣಮುಕ್ತಿ—ಕತೆ ಚೆನ್ನಾಗಿದೆ. ಆದರೆ ಇಲ್ಲಿ ವಸ್ತು ಕತೆಗೆ ಮೀರಿದಂತಾಯಿತೆನಿಸುತ್ತದೆ. ಅಡಕವಿಲ್ಲದೆ ಕತೆ ಬಿಗಿತಪ್ಪಿದೆ.

ಸ್ವಾರಸ್ಯವೇ ಕತೆಯ ಜೀವಾಳ. ವಸ್ತು ಅಡಕವಾಗಿರಬೇಕು. ಹೇಳುವ ರೀತಿ ಸೊಗಯಿಸಬೇಕು. ಮುಗಿವು ಸಹಜವಾಗಿರಬೇಕು. ಬೇಕಾದುದನ್ನು ಮಾತ್ರ ಆರಿಸಿಕೊಂಡು ಅನವಶ್ಯಕವಾದುದನ್ನು ಕಿತ್ತೆಸೆಯುವ, ಬದಿಗೊತ್ತುವ ಕಲೆಗಾರಿಕೆಯಿರಬೇಕು. ಅವಶ್ಯಕವೆನಿಸದ ಘಟನೆ, ಪಾತ್ರ, ವರ್ಣನೆಗಳು ಎಷ್ಟೇ ಚೆನ್ನಾಗಿದ್ದರೂ ವರ್ಜಿತವಾಗಬೇಕು. ಕತೆಯಲ್ಲಿ ಮೊದಲಿನಿಂದ ಕೊನೆತನಕ ಓದುಗನ ಆಸಕ್ತಿ ಉಳಿಸಿ, ಕುತೂಹಲ ಕೆರಳಿಸುವ ರೀತಿಯಿರಬೇಕು. ಅದೀಗ ಕತೆಗಾರಿಕೆಯ ಲಕ್ಷಣ. ಈ ಲಕ್ಷಣ, ಮಾತಿನ ಓಟ, ಸಹಜ ವರ್ಣನೆ, ಆಯಿಕೆ, ಮುಗಿವಿನ ಸಹಜತೆಗಳನ್ನು—ಕತೆಗಾರಿಕೆಯನ್ನು—ಈ ಸಂಗ್ರಹದ ಕತೆಗಳಲ್ಲಿ ನಾವು ಕಾಣುತ್ತೇವೆ. ಕನ್ನಡ ಕತೆಗಾರರ ಗುಂಪಿಗೆ ಶ್ರೀ. ರಾಮಚಂದ್ರ ಕೊಟ್ಟಲಗಿಯವರಂತಹ ಕತೆಗಾರರು ಬಂದಿರುವುದು ಬಹಳ ಸಂತೋಷದ ವಿಷಯ. ಇವರಿಂದ ಇಂತಹುದೇ ಒಳ್ಳೆಯ ಕತೆಗಳು ಇನ್ನೂ ಬರಲಿ.

—ವಸಂತ.

*
* *

ಉದಯಾಸ್ತ—ಲೇಖಕರು : ತಿರುಕ ; ಪ್ರಕಾಶಕರು : ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲ್ಕೆರೆ ತಾಲ್ಲೋಕು ; ಪುಟಗಳು ೧೫೮ ; ಬೆಲೆ, ೨-೦-೦.

ಭಿಕ್ಷುಕರ ಸಮಸ್ಯೆಯನ್ನು ವಿವೇಚಿಸುವ ಸಾಮಾಜಿಕ ಕಾದಂಬರಿ ಇದು. ಇದರ ಕಥೆ ಹೀಗಿದೆ.

ಚಿಕ್ಕಮಗಳೂರಿನ ತಾಲ್ಲೋಕು ಬೆಳವಾಡಿಯ ದೊಡ್ಡ ರೈತಕುಟುಂಬಕ್ಕೆ ಸೇರಿದವನು ಸಂಜೀವಯ್ಯ. ಕಾಲಕರ್ಮಸಂಯೋಗದಿಂದ ಅವನಿಗೆ ಬಡತನ ಬಂದು ಬೀದಿಯ ಭಿಕಾರಿಯಾದ ಆತ. ತಾನೊಬ್ಬನೇ ಅಲ್ಲ ಜೀವನ ನಡೆಸಬೇಕಾದವನು ಈಗ. ಜೊತೆಗೆ ಸುಂದರಿಯಾದ ಅವನ ಮಗಳು ಚಂಪೆ ಇದ್ದಾಳೆ. ಸಂಜೀವಯ್ಯ ತನ್ನ ಸ್ವಗ್ರಾಮವನ್ನು ಬಿಟ್ಟು ಭಿಕ್ಷೆ ಬೇಡುತ್ತ ಕೆಲವು ಕಾಲ ಕಡೂರಿನಲ್ಲಿ ನಿಂತನು. ಕಡೂರಿಗೆ ಬಂದ ದಾಸರೊಬ್ಬರ ಕರುಣೆಯಿಂದ ಚಂಪೆಗೆ ನೂರಾರು ಪದಗಳು

ಕಂಠಸ್ಥವಾದವು. ಜೀವನಕ್ಕೆ ತಂದೆ ಮಕ್ಕಳಿಗೆ ಇದೊಂದು ಸಾಧನವಾಯಿತು. ತನ್ನಿಂದ ಕಲಿತ ಹಾಡುಗಳನ್ನು ಈ ಹೆಣ್ಣು ಜೀವನೋಪಾಯಕ್ಕೆ ಉಪಯೋಗಿಸಿತಲ್ಲ ಎಂದು ದಾಸರು ಕುದಿದು ಆ ಊರನ್ನು ಬಿಟ್ಟು ಪಂಡರಾಪುರಕ್ಕೆ ಹೊರಟರು. ಗುರುಗಳನ್ನು ಹುಡುಕುತ್ತ ತಂದೆ ಮಕ್ಕಳು ಚಿಕ್ಕಜಾಜೂರು ನಿಲ್ದಾಣದಲ್ಲಿ ತಂಗ ಬೇಕಾಯಿತು. ಅಲ್ಲಿನ ಸ್ಟೇಷನ್ ಮಾಸ್ಟರ್ ಗೋಪಾಲಯ್ಯ ಗಾರ್ಡ್ ಎಡ್ವಿನ್ ಇವರಿಂದ ಸಂಜೀವಯ್ಯ ಚಂಪೆಯರಿಗೆ ನೆಲೆ ದೊರಕಿ ಅವರ ಬದುಕು ಸುಮುಖ ವಾಯಿತು.

ತಂದೆ ಮಕ್ಕಳ ಆಗಮನ ಭಿಕ್ಷುಕರ ಒಡೆಯನಾದ ದುಂಡಪ್ಪನಿಗೆ ಸರಿಬೀಳಲಿಲ್ಲ. ಭಿಕ್ಷುಕರನ್ನು ಹೀರಿ ಜೀವಿಸುತ್ತಿದ್ದ ದುಷ್ಟ ಅವನು. ಸುಂದರಿಯಾದ ಚಂಪೆ ತನ್ನವಳಾಗುವಳೆಂದು ಆ ಕಾಮುಕ ಪ್ರಯತ್ನಿಸಿದ. ಅದು ಸಾಧ್ಯವಾಗದೆ ಹೋಗಲು, ಅವನಿಂದ ಗೋಪಾಲಯ್ಯನಿಗೂ ತಂದೆ ಮಕ್ಕಳಿಗೂ ಸಹಿಸಲಾರದಷ್ಟು ತೊಂದರೆ ಯುಂಟಾಯಿತು. ತಮ್ಮಿಂದ ಇನ್ನೊಬ್ಬರಿಗೇಕೆ ತೊಂದರೆಯೆಂದು ತಂದೆಮಕ್ಕಳು ಊರೂರು ಸುತ್ತುತ್ತ ಹರಿಹರದ ಬಳಿ ಇರುವ ಕುಮಾರನ ಹಳ್ಳಿಗೆ ಬಂದರು. ಅಲ್ಲಿಗೂ ದುಂಡಪ್ಪನ ಕಾಟ ತಪ್ಪಲಿಲ್ಲ. ಇತ್ತ ಗೋಪಾಲಯ್ಯನಿಗೆ ಹರಿಹರಕ್ಕೆ ವರ್ಗವಾಯಿತು. ಕಾಲಕರ್ಮಸಂಯೋಗದಿಂದ ಗೋಪಾಲಯ್ಯ ಎಡ್ವಿನ್ನರಿಗೆ ಮಲೆಯ ಬೆನ್ನೂರಿನಲ್ಲಿ ತಂದೆಮಕ್ಕಳು ಸಿಕ್ಕಿದರು. ಕಳೆದುಹೋಗಿದ್ದ ನಿಧಿಯೇ ದಕ್ಕಿದಂತಾಯಿತು ಅವರಿಗೆ. ಈ ವೇಳೆಗೆ ಎಡ್ವಿನ್ ಕೆಲಸ ಬಿಟ್ಟು ಹುಬ್ಬಳ್ಳಿಯಲ್ಲಿಯೇ ನೆಲಸಿದ್ದ. ಹುಟ್ಟಿನಿಂದ ಶ್ರೀಮಂತನಾದ ಅವನು ಈ ಭಿಕ್ಷುಕರಿಗೆ ನೆಲೆಕೊಟ್ಟನು. ಅಲ್ಲಿಯೂ ಸಮಾಜ ಅವರನ್ನು ಸುಖವಾಗಿ ಇರಗೊಡಲಿಲ್ಲ. ಈ ಕಾರಣದಿಂದಲೂ ಸಂಜೀವಯ್ಯ ಚಂಪೆ ಯವರಿಗೆ ಸುಖವನ್ನುಂಟುಮಾಡುವ ಉದ್ದೇಶದಿಂದಲೂ ಪ್ರಾರ್ಥನಾಮಂದಿರ ವೊಂದು ನಿರ್ಮಿತವಾಯಿತು. ಈ ನಡುವೆ ಎರಡು ಸಂಗತಿಗಳು ನಡೆದವು. ಮೊದಲನೆ ಯದಾಗಿ ಎಡ್ವಿನ್ನನ ಮನಸ್ಸು ಚಂಪೆಯ ವಿಷಯದಲ್ಲಿ ಕಲುಷಿತವಾಗಿ ಮತ್ತೆ ಸ್ತಿಮಿತಕ್ಕೆ ಬಂದಿತು. ಎರಡನೆಯದಾಗಿ ಅವಳು ಎಡ್ವಿನ್ನನೊಡನೆ ಬೆಂಗಳೂರಿನ ವರೆಗೂ ಹೋಗಿ ಬಂದಳು. ಆ ಸಂದರ್ಭದಲ್ಲಿಯೇ ಅವಳು ದುಂಡಪ್ಪನ ಕಣ್ಣಿಗೆ ಬಿದ್ದು ಅವನ ದ್ವೇಷವನ್ನು ಕೆರಳಿಸಿದಳು. ಒಮ್ಮೆ ಹುಬ್ಬಳ್ಳಿಯ ಪ್ರಾರ್ಥನಾಮಂದಿರದಲ್ಲಿ ಗಾಯನ ನಡೆಯುತ್ತಿದ್ದಾಗ ದುಂಡಪ್ಪ ಅವಳನ್ನು ಇರಿದು ಕೊಂದುಬಿಟ್ಟನು.

ಈ ಕಾದಂಬರಿಯಲ್ಲಿ ಹೇಳಿಕೊಳ್ಳುವ ಕಲೆಗಾರಿಕೆಯಾಗಲೀ, ಪಾತ್ರಪರಿಪೋಷಣೆ ಯಾಗಲೀ ಕಂಡುಬರುವುದಿಲ್ಲ. ಮೊದಲನೆಯದಾಗಿ ಕಾದಂಬರಿಯ ಹರವು ಸಾಲದು. ಸಂಭಾಷಣೆಗಳೂ ಸ್ವಾರಸ್ಯವಾಗಿಲ್ಲ. ಕಾದಂಬರಿಯ ಜೀವಾಳ ಸಂಭಾಷಣೆ ಮತ್ತು

ಪಾತ್ರ ಪರಿಶೀಲನೆ. ತತ್ವವೊಂದನ್ನು ಪ್ರತಿಪಾದಿಸಲು ಹೊರಟಿರುವುದರಿಂದ ಪಾತ್ರಗಳು ಆದರ್ಶದ ಎಲ್ಲೆಯಲ್ಲೇ ನಿಂತಿವೆ. ಗೋಪಾಲಯ್ಯ, ಎಡ್ವಿನ್, ಕ್ಯಾತರೀನ್ (ಎಡ್ವಿನ್ನನ ಹೆಂಡತಿ), ಅವಳ ಅತ್ತೆ ಇವರೆಲ್ಲ ತುಂಬ ಸೌಮ್ಯಜೀವಿಗಳಾಗಿದ್ದು ಇಂತಹವರು ಇರಲು ಸಾಧ್ಯವೇ ಎಂಬ ಸಂಶಯವನ್ನು ನಮ್ಮಲ್ಲುಂಟುಮಾಡುತ್ತದೆ. ಮೇಲಾಗಿ ಕ್ರಿಶ್ಚಿಯನ್ನರಿಗೂ ಹಿಂದೂಗಳಿಗೂ ಇಲ್ಲಿ ತೋರಿರುವ ಬಾಂಧವ್ಯ ನಂಬಲಾಗದಂಥದ್ದು. ದೇವರು ಒಬ್ಬ, ಎಲ್ಲ ಮತಗಳ ಮೂಲ ಒಂದೇ ಎಂಬ ಗ್ರಂಥಕರ್ತರ ಭಾವನೆ ಲೋಕೋತ್ತರವಾದುದು. ಆದರೆ ಕಾದಂಬರಿಯಲ್ಲಿ ಅದರ ಪ್ರತಿಪಾದನೆ ಕಲಾಮಯವಾಗಿ ಬಂದಿಲ್ಲ. ಇಲ್ಲಿನ ಪಾತ್ರಗಳಲ್ಲಿ ಆಕರ್ಷಕವಾದ ಪಾತ್ರವೆಂದರೆ ಧುಂಡಪ್ಪನದೇ. ಏಕೆಂದರೆ ಸಾಮಾನ್ಯವಾಗಿ ಭಿಕ್ಷುಕರಲ್ಲಿ ಮನೆ ಮಾಡಿಕೊಂಡಿರುವ ಎಲ್ಲ ದುರ್ಗುಣಗಳೂ ಅವನಲ್ಲಿ ಮನೆಮಾಡಿಕೊಂಡಿವೆ. ಪರ ಮತಕ್ಕೆ ಸೇರಿದವನೊಬ್ಬ ತನ್ನ ಕೈಗೆ ಬಂದ ತುತ್ತನ್ನು ಕಸಿದುಕೊಂಡನೇ ಎಂಬ ದ್ವೇಷ ಅವನಲ್ಲಿ ಕೊನೆಯಲ್ಲಿ ಉಳಿದುಕೊಂಡಿದ್ದರಿಂದಲೇ ಕಥೆ ದುರಂತದಲ್ಲಿ ಮುಗಿಯುತ್ತದೆ. ಚಿಕ್ಕಜಾಜೂರಿನ ರೈಲ್ವೆ ನಿಲ್ದಾಣದ ವರ್ಣನೆಯೊಂದು ಕಣ್ಣಿಗೆ ಕಟ್ಟಿದಂತಿದೆ. ಅಷ್ಟೇ ಹೊರತು ಇಲ್ಲಿ ವರ್ಣನೆಗಳೂ ಹೆಚ್ಚಾಗಿಲ್ಲ. ಇರುವುವೂ ಆಕರ್ಷಕವಾಗಿಲ್ಲ. ಮೇಲಾಗಿ ಗ್ರಂಥದ ಶೈಲಿ ಸುಗಮವಾಗಿರದೆ, ಅಪಪ್ರಯೋಗಗಳೂ ಅಚ್ಚಿನ ತಪ್ಪುಗಳೂ ಹೇರಳವಾಗಿವೆ. ಗ್ರಂಥಕ್ಕೆ ಇಟ್ಟಿರುವ ಬೆಲೆಯೂ ಹೆಚ್ಚು.

ಎಲ್ಲ ಮತಗಳ ಸಾರ ಒಂದು, ಪ್ರೇಮ ಪವಿತ್ರವಾದುದು, ಅದು ಜಾತಿಮತಗಳನ್ನು ನೋಡದು ಎಂಬ ತತ್ವಗಳನ್ನು ಪ್ರತಿಪಾದಿಸಬೇಕೆಂದಿರುವ ಲೇಖಕರ ಧ್ಯೇಯ ದೊಡ್ಡದು. ಅದನ್ನು ಅಲ್ಲಗಳೆಯುವಂತಿಲ್ಲ. ಈ ಸಂದರ್ಭದಲ್ಲಿ ಇಲ್ಲಿ ಒಂದು ಮಾತನ್ನು ಹೇಳಬಯಸುತ್ತೇವೆ. ಲೇಖಕರ 'ಅರಿಕೆ'ಯಿಂದ ಆಶ್ರಮದಲ್ಲಿ ಗ್ರಂಥಗಳು ಚೆನ್ನಾಗಿ ಖರ್ಚಾಗುವಂತೆ ತೋರುತ್ತದೆ. ಇಂಥ ಕಾದಂಬರಿ ಕಥೆಗಳಿಗಿಂತ ಸುಲಭ ಸಮಂಜಸವಾದ ಪೀಠಿಕೆ ಟಿಪ್ಪಣಿಗಳೊಡನೆ ಧಾರ್ಮಿಕ ಗ್ರಂಥಗಳನ್ನು—ಅವು ಯಾವ ಧರ್ಮದವೇ ಆಗಲಿ—ಕನ್ನಡಿಸಿ ಸುಲಭ ಬೆಲೆಯಲ್ಲಿ ಕೊಟ್ಟರೆ ನಮ್ಮ ಸಂಸ್ಕೃತಿಯ ಪ್ರಚಾರಕ್ಕೆ ಸಹಾಯಮಾಡಿದಂತಾಗುತ್ತದೆ. ಅದು ಜನತೆಗೆ ಆವಶ್ಯಕ, ಆಶ್ರಮಕ್ಕೆ ಭೂಷಣ.

ಸಾಹಿತ್ಯಪ್ರಿಯ.

*
* *

ನೃತ್ಯಭಾರತಿ (ತ್ರೈಮಾಸಿಕ)—ಸಂಪಾದಕರು : ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸ ಮತ್ತು ಮೇವುಂಡಿ ಮಲ್ಲಾರಿ ; ಪ್ರಕಾಶಕರು : ಭಾರತೀಯ ನೃತ್ಯಕಲಾಕೇಂದ್ರದ ಗುರುಕುಲ, ಪೋ. ಹಂಸಭಾವಿ, ಜಿಲ್ಲಾ, ಧಾರವಾಡ; ವಾರ್ಷಿಕ ಚಂದಾ : ೫ ರೂ; ಬಿಡಿಸಂಚಿಕೆ: ರೂ. ೧-೪-೦.

ನೃತ್ಯ ಸಂಗೀತಾದಿ ಲಲಿತ ಕಲೆಗಳಿಗೆ ಮೀಸಲಾದ ಈ ಪತ್ರಿಕೆಯ ಮೊದಲ ಸಂಚಿಕೆ ೧೯೫೪ರ ಸೇ ಜನವರಿಯಲ್ಲಿ ಹೊರಬಿದ್ದಿದೆ. 'ಭಾರತೀಯ ನೃತ್ಯಕಲಾ ಕೇಂದ್ರ' ಧಾರವಾಡದಲ್ಲಿ 'ಕಾಲಗತಿಯಿಂದ ಮುಗ್ಗಿಹೋದ, ಅಜ್ಞಾನದಿಂದ ಅಸಡ್ಡೆಗೀಡಾದ ನೃತ್ಯಕಲೆಯನ್ನು ಪುನರುಜ್ಜೀವನಗೊಳಿಸಿ, ಪ್ರಚುರಪಡಿಸಿ, ನಾಡಿಗೆ ಸಾಂಸ್ಕೃತಿಕ ಸೇವೆ ಸಲ್ಲಿಸುವ ಉದ್ದೇಶದಿಂದ' ೧೯೪೮ರಲ್ಲಿ ಸ್ಥಾಪನೆಯಾಯಿತು. ಅದೇ ಜಿಲ್ಲೆಯ ಹಂಸಬಾವಿಯಲ್ಲಿ ಈ ಕೇಂದ್ರದ 'ಗುರುಕುಲ'ವೊಂದು ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರ ನೇತೃತ್ವದಲ್ಲಿ ಸ್ಥಾಪಿತವಾಗಿ ೧೯೫೦ ರಿಂದ ನಡೆದುಕೊಂಡು ಬರುತ್ತಿದೆ. ನೃತ್ಯ ಹಾಗೂ ಸಂಗೀತ ಕಲೆಗಳನ್ನು ಕುರಿತಾದ ಜ್ಞಾನಪ್ರಸಾರಕ್ಕೆಂದು ಈಗ 'ನೃತ್ಯಭಾರತಿ' ಆರಂಭವಾಗಿದೆ.

ಪ್ರಸ್ತುತ ಸಂಚಿಕೆಯಲ್ಲಿ, ಉತ್ತಮ ಗಾಯಕರೂ ಸಂಗೀತತಜ್ಞರೂ ಆದ ಚಕ್ರಕೋಡಿ ನಾರಾಯಣಶಾಸ್ತ್ರಿಗಳ 'ಹಂಸಧ್ವನಿ' ರಾಗವನ್ನು ಕುರಿತಾದ ಪರಿಚಯಾತ್ಮಕ ಶಾಸ್ತ್ರೀಯ ಲೇಖನವಿದೆ; ದಿವಾಕರ ರಂಗರಾಯರ 'ನಟರಾಜ' ಎಂಬ ಲೇಖನವನ್ನು ಉದ್ಧರಿಸಿ ಕೊಡಲಾಗಿದೆ; ಬುದ್ಧ ಜಾತಕದ ಒಂದು ಕಥೆಯನ್ನವಲಂಬಿಸಿ 'ಎನ್ಕೆ'ಯವರು 'ಚಂದ್ರಕಿನ್ನರ' ಎಂಬ ಒಂದು ಗೀತರೂಪಕವನ್ನು ಕೊಟ್ಟಿದ್ದಾರೆ; 'ಜಾನಪದ ನೃತ್ಯಗಳು' 'ಭರತಮುನಿಯ ನಾಟ್ಯಶಾಸ್ತ್ರ' ಎಂಬೆರಡು ಪರಿಚಯಾತ್ಮಕ ಲೇಖನಗಳನ್ನು ಜಿ. ಆರ್. ಪಾಂಡೇಶ್ವರ್ ಅವರು ಬರೆದಿದ್ದಾರೆ; ಕುಲಕರ್ಣಿ ಶ್ರೀನಿವಾಸರು 'ಕಥಕ್ಕಳಿ ನೃತ್ಯ'ದ ಪರಿಚಯ ಮಾಡಿಕೊಟ್ಟಿದ್ದಾರೆ; 'ಕಥಕ್ ನೃತ್ಯ'ದ ಬಗೆಗೆ ಕೃಷ್ಣಕುಮಾರರು ಬರೆದಿದ್ದಾರೆ; ಕಲಾವಿದ ನಾರಾಯಣ ಸಂಗಮರ 'ಬಾದಾಮಿ—ಒಂದು ನೋಟ' ಎಂಬ ಲೇಖನವಿದೆ; ಬೆಂಗೇರಿ ಹುಚ್ಚ ರಾಯರು ತಮಗೆ ದೊರೆತಿರುವ 'ಭರತನ ನಾಟ್ಯಶಾಸ್ತ್ರ'ದ ತಾಳೆಯೋಲೆಯ ಪ್ರತಿಯೊಂದನ್ನು ಕುರಿತು ಪ್ರಸ್ತಾಪಿಸಿದ್ದಾರೆ; ತಟ್ಟಿ ಶ್ಯಾಮರಾಯರ 'ಭಾರತೀಯ ಸಂಗೀತದ ಆದರ್ಶ' ಎಂಬ ಬರೆಹವೊಂದಿದೆ; ಕುಮಟಾದಲ್ಲಿ ನಡೆದ ೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ 'ಯಕ್ಷಗಾನ ಗೋಷ್ಠಿ'ಯ ಸ್ವಾಗತ ಭಾಷಣ (ಜಿ. ಎನ್. ಸಭಾಹಿತರದು), ಅಧ್ಯಕ್ಷ ಭಾಷಣ (ಕೆ. ಪಿ. ವೆಂಕಪ್ಪಶೆಟ್ಟರು)ಗಳನ್ನು ಇಲ್ಲಿ ಎತ್ತಿ ಕೊಡಲಾಗಿದೆ.

ಈ ಎಲ್ಲ ಲೇಖನಗಳೂ ಆಯಾ ಕ್ಷೇತ್ರದಲ್ಲಿ ಹೆಚ್ಚಿನ ಪರಿಶ್ರಮವನ್ನು ಹೊಂದಿದವರಿಂದ ಬರೆಯಲಾದವು. ಅಂತೆಯೇ ಅವು ಅಧಿಕೃತವೂ ಪ್ರೌಢವೂ ಆಗಿವೆ. ಇದರಲ್ಲಿನ ಹೆಚ್ಚು ಲೇಖನಗಳು ಬೇರೆ ಬೇರೆ ಕಡೆಯಿಂದ ಆಯ್ದುಕೊಂಡವು. ಎಂದ ಮಾತ್ರಕ್ಕೆ ಅವು ಇಲ್ಲಿ ಪ್ರಕಟವಾಗಿರುವ ಔಚಿತ್ಯವನ್ನು ಶಂಕಿಸಬೇಕಾಗಿಲ್ಲ. ಇಂತಹ

ಪ್ರೌಢ ಹಾಗೂ ಶಾಸ್ತ್ರೀಯ ಲೇಖನಗಳು ನಮ್ಮ ನಾಡಿನಲ್ಲಿ ಕಡಿಮೆ. ಆದ್ದರಿಂದ ಅವು ಮತ್ತೆ ಮತ್ತೆ ಪ್ರಕಟವಾಗಿ ಹೆಚ್ಚು ಜನರ ಉಪಯೋಗಕ್ಕೆ ಬಂದರೆ ಆ ಲೇಖಕರ ಶ್ರಮ ಸಾರ್ಥಕವಾಗುತ್ತದೆ.

ಹಿಂದೆ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ 'ರಂಗಭೂಮಿ', 'ಕಲಾ' ಮುಂತಾದ ಪತ್ರಿಕೆಗಳು ಇದೇ ಮಾರ್ಗದಲ್ಲಿ ನಡೆದು ನಾಡಿನ ಕೃತಜ್ಞತೆಗೆ ಪಾತ್ರವಾಗಿದ್ದುವು. ಈ ವೇಳೆಯಲ್ಲಿ 'ನೃತ್ಯಭಾರತಿ'ಯಂತಹ ಪತ್ರಿಕೆ ನಮ್ಮ ನಾಡಿಗೆ ಎಷ್ಟು ಅಗತ್ಯವಾಗಿದೆಯೆಂಬುದನ್ನು ನಾವು ಬೇರೆ ಹೇಳಬೇಕಿಲ್ಲ. ಉನ್ನತವಾದ ಧ್ಯೇಯವನ್ನು ಮುಂದಿಟ್ಟುಕೊಂಡು ಹೊರಟ ಈ ಪತ್ರಿಕೆ, ಹಿಂದಿನವುಗಳಂತೆ ಅಲ್ಪಾಯುಗಳಾಗದೆ ದೀರ್ಘಕಾಲ ನಡೆಯಲಿ ; ಕನ್ನಡ ಜನರ ಮೆಚ್ಚಿಗೆಗೆ ಕೃತಜ್ಞತೆಗೆ, ಪೋಷಣೆಗೆ, ಪಾತ್ರವಾಗಲಿ ಎಂದು ನಾವು ಹಾರೈಸುತ್ತೇವೆ.

—ಕೆ. ವಿ. ಸುಬ್ಬಣ್ಣ.

***

ಅಂತರಗಂಗೆ (ಆರು ಅನುವಾದಿತ ಕತೆಗಳು)—ಅನುವಾದಕರು : ಶ್ರೀ. 'ಬಸವರಾಜ' ; ಪ್ರಕಾಶಕರು : ಭಾರತೀ ಪ್ರಕಾಶನಮಂದಿರ, ಮುಂಬಯಿ; ಪುಟಗಳು ೧೧೨ ; ಬೆಲೆ, ರೂ. ೧-೪-೦.

ಮುಂಬಯಿಂದ ಪ್ರಕಟವಾಗುತ್ತಿರುವ 'ಭಾರತಿ' ಕನ್ನಡಿಗರಿಗೆ ಪರಿಚಿತವಾದ, ದೇಶವಿದೇಶಗಳ ಸಣ್ಣ ಕತೆಗಳಿಗೇ ಮೀಸಲಾದ ಉತ್ತಮ ತರಗತಿಯ ಮಾಸಪತ್ರಿಕೆ. ಅದರ ವ್ಯವಸ್ಥಾಪಕರು ಆಗಾಗ ಚಿಕ್ಕ ಚಿಕ್ಕ ಪುಸ್ತಕಗಳನ್ನೂ ಪ್ರಕಟಿಸುತ್ತಿರುವುದು ಅಭಿನಂದನಾರ್ಹವಾದ ಕೆಲಸ.

ಆಸ್ಟ್ರಿಯಾ ದೇಶದ ಸ್ಟೀಫನ್ ಜ್ವೆಗ್ ವಿಶ್ವವಿಖ್ಯಾತನಾದ ಲೇಖಕ. ನಾಟಕ, ಕತೆ, ಕಾದಂಬರಿ ಹಾಗೂ ಇನ್ನಿತರ ಬಗೆಯ ಸಾಹಿತ್ಯವನ್ನು ಅವನು ವಿಪುಲವಾಗಿ ಸೃಷ್ಟಿಸಿದಾನೆ. ಜೀವನವನ್ನು ನೋಡುವ ತನ್ನದೇ ಆದ ಒಂದು ದೃಷ್ಟಿ, ಅದನ್ನು ಕಲೆಯನ್ನಾಗಿಸುವ ವಿಶಿಷ್ಟ ಶಕ್ತಿ ಅವನ ಪಾಲಿಗಿತ್ತು. ಅವನ ಆರು ಕತೆಗಳನ್ನು ಕನ್ನಡದಲ್ಲಿ ಮೊತ್ತಮೊದಲ ಬಾರಿಗೆ 'ಭಾರತೀ' ಪ್ರಕಾಶನ ಮಂದಿರದವರು ಪ್ರಕಟಿಸಿದಾರೆ.

ವಾಚಕರಿಗೆ ಹೆಚ್ಚು ಪರಿಚಿತರಲ್ಲದ ಶ್ರೀ. ಬಸವರಾಜರು ತಮ್ಮ ಪಾಲಿನ ಕೆಲಸವನ್ನು ತಕ್ಕಷ್ಟು ಚನ್ನಾಗಿಯೇ ನಿರ್ವಹಿಸಿದಾರೆ. ಆದರೆ ಅವರಿಗೆ ಭಾಷೆಯ ಮೇಲಿನ ಹಿಡಿತ ಸಾಕಷ್ಟು ಸಾಧಿಸಿಲ್ಲವೆಂಬುದು ಈ ಅನುವಾದದಿಂದ ವ್ಯಕ್ತವಾಗುತ್ತದೆ. ಇಲ್ಲಿರುವ ಕತೆಗಳು ಸರಳವಾಗಿ, ಸುಂದರವಾಗಿ ಇವೆ. ಆದರೆ ವೈವಿಧ್ಯತೆಯಿಲ್ಲ.

ಕೆಲವಾರು ಕಥಾಸಂಕಲನಗಳನ್ನು ಬರೆದಿರುವ ಸ್ಟೀಫನ್ ಜ್ವಿಗ್‌ನಿಂದ ಇನ್ನೂ ಉತ್ತಮವಾದ, ವೈವಿಧ್ಯಪೂರ್ಣವಾದ ಕತೆಗಳನ್ನು ಆರಿಸಿಕೊಳ್ಳಬಹುದಾಗಿತ್ತೆಂದು ಅವನ ಸಾಹಿತ್ಯವನ್ನು ಬಲ್ಲವರಿಗೆ ಅನ್ನಿಸದಿರದು.

ಪುಸ್ತಕದ ಕೊನೆಯಲ್ಲಿ ಶ್ರೀ. ಕೃಷ್ಣಕುಮಾರ ಕಲ್ಲೂರ ಅವರು ಜ್ವಿಗ್‌ನ ಜೀವನ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಟ್ಟು ಪುಸ್ತಕದ ಬೆಲೆಯನ್ನು ಹೆಚ್ಚಿಸಿದಾರೆ; ಇನ್ನೂ ಹೆಚ್ಚಿಸಬೇಕೆಂಬ ಕೂತೂಹಲ ಹುಟ್ಟಿಸಿದಾರೆ.

ಈ ಮಹಾಸಾಹಿತಿ ತನ್ನ ೬೧ನೇ ವಯಸ್ಸಿನಲ್ಲಿ—೧೯೪೨ರಲ್ಲಿ ಆತ್ಮಹತ್ಯೆ ಮಾಡಿಕೊಂಡು ಲೋಕಸಾಹಿತ್ಯಕ್ಕೆ ಅಪಾರ ನಷ್ಟವನ್ನುಂಟುಮಾಡಿದ. ಸಾಯುವ ಮುನ್ನ ಬರೆದ ತನ್ನ ಕೊನೆಯ ಕಾಗದದಲ್ಲಿ ಅವನು ಹೀಗೆ ಹೇಳಿಕೊಂಡಿದಾನೆ: "ಸ್ವೇಚ್ಛೆಯಿಂದ ಸಾಯುವ ಮುನ್ನ ನಾನು ಮೆಚ್ಚಿದ ನಾಡು ಬ್ರೆಜಿಲ್‌ಗೆ ತಲೆಬಾಗುತ್ತೇನೆ. ನಾನು ಅದನ್ನು ಪ್ರೀತಿಸಿದೇನೆ; ಅದೂ ನನ್ನನ್ನು ಆದರಿಸಿದೆ. ಇಲ್ಲಿ ನನ್ನ ಜೀವನ ನಿತ್ಯ ನೂತನವಾಗಿ ಪುನರುಜ್ಜೀವಿತಗೊಂಡಿದೆ. ಆದರೆ ನನ್ನ ಮಾತೃಭೂಮಿಯ ಪತನವನ್ನು ಕಂಡ ಅನಂತರ ಜೀವನ ಅಸಹ್ಯವಾಗಿದೆ. ನನ್ನ ಆಧ್ಯಾತ್ಮಿಕ ಕ್ಷೇತ್ರ ಯೂರೋಪು—ಯೂರೋಪನ್ನು 'ಸ್ವಸ್ತಿಕ'ದ ನೆರಳು ಆವರಿಸಿದ್ದ ಕಾಲ—ಇಂದು ಕರಾಳ ನೃತ್ಯದ ಕಾಲಕೆಳಗೆ ಸಿಕ್ಕಿದೆ. ಇದನ್ನೆಲ್ಲ ಕಂಡ ನಾನು ಈ ಮುದಿ ವಯಸ್ಸಿನಲ್ಲಿ ಜೀವನವನ್ನು ಹುರಿಗೊಳಿಸಿ ಬಾಳಲಾರೆ, ಮಾತೃಭೂಮಿಯ ಆಸರೆ ತಪ್ಪಿದ ನನಗೆ ಮರಣವೇ ಆಸರೆ. ಆದ್ದರಿಂದ ನನ್ನ ಜಾಗತಿಕ ಜೀವನ ಸ್ವಾತಂತ್ರ್ಯಕ್ಕೆ ಮುಡುಪಾಗಿಸಿದ ಈ ಜೀವನವನ್ನು ಇಂದು ನೀಗುತ್ತಿದೇನೆ. ನನ್ನ ಮಿತ್ರರಿಗೆಲ್ಲ ಅನಂತ ವಂದನೆಗಳು."

ಈ ಮಹಾಸಾಹಿತಿ ತೀರಿಕೊಂಡು ಹತ್ತು ವರ್ಷಗಳ ಮೇಲಾದರೂ ಆತನ ಬರಹದ ತುಣುಕುಗಳನ್ನು ಕನ್ನಡಿಗರು ಆದರದಿಂದ ಸ್ವಾಗತಿಸುತ್ತಾರೆಂದು ನಂಬಿದೇನೆ. ಜ್ವಿಗ್‌ನ ಚಿತ್ರವನ್ನು ಹೊತ್ತ ಈ ಕೃತಿಯ ಮುಖಪತ್ರ ತುಂಬ ಸುಂದರವಾಗಿದೆ.

ಹಾ. ಮಾ. ನಾಯಕ.

* * *

ಬೆಳುವಲದ ಮಡಿಲಲ್ಲಿ—ಎಚ್. ದೇವೀರಪ್ಪ ; ಪ್ರಕಾಶಕರು : 'ಕಲ್ಪನಾ', ೧೩೯೨ ಕೃಷ್ಣಮೂರ್ತಿಪುರಂ, ಮೈಸೂರು ; ಬೆಲೆ, ರೂ. ೩-೦-೦.

ಇದು ರೈತ ಜೀವನದ ಹಿರಿಮೆಯನ್ನು ಚಿತ್ರಿಸುವ ಒಂದು ರಸಪೂರ್ಣ ಕಾದಂಬರಿ. ಇದರಲ್ಲಿ ಕಾದಂಬರಿಕಾರರು ಯಥಾರ್ಥ ಗ್ರಾಮಜೀವನದ ಚಿತ್ರದ

ಮೂಲಕ ಮಹಾತ್ಮ ಗಾಂಧಿಯವರ 'ಹಳ್ಳಿಗೆ ಹಿಂದಿರುಗಿ' ಎಂಬ ಸಂದೇಶವನ್ನು ಸುಂದರವಾಗಿ ನಿರೂಪಿಸಿದ್ದಾರೆ. ಶ್ರೀ. ದೇವೀರಪ್ಪನವರು 'ಬೆಳುವಲದ ನಾಡಿನಿಂದ' ಬಂದವರಾದುದರಿಂದ, 'ಬೆಳುವಲದ ಭಾಗ್ಯಸರೋವರ'ದ ನೀರು ಕುಡಿದು ತಣಿದು ಕನ್ನಡ ಓದುಗರ ಸಲುವಾಗಿ 'ಈ ಬೆಳುವಲದ ಭಾಗ್ಯಸರೋವರದಿಂದ ಒಂದು ಬೊಗಸೆ ಸವಿನೀರು ಎತ್ತಿ ಸುರಿದಿದ್ದಾರೆ.' ಇದು ಬತ್ತದ ಒರತೆ. ಯಾರೂ ಎಷ್ಟು ಬೇಕಾದರೂ ಕುಡಿದು ತಮ್ಮ ದಾಹವಾರಿಸಿಕೊಳ್ಳಬಹುದು!

ಈ ಕಾದಂಬರಿಯ ಕಥಾನಾಯಕ 'ಕಾಣಿಮಾದ.' 'ಊರಮಗ'ನಾಗಿ ಬೆಳೆದ ಕಾಣಿ ಮಾದಪ್ಪನಾದ ಬಗೆ ಇಲ್ಲಿ ನಿರೂಪಿತವಾಗಿದೆ. ಕೆಸರೂರಿನಲ್ಲಿ ಮಾದನಿಗೆ ತನ್ನವರೆನ್ನಿಸಿಕೊಳ್ಳುವವರಾರೂ ಇದ್ದಿಲ್ಲ. ಹೆತ್ತವರ ನೆನಪು ಅವನಿಗೆ ಇಲ್ಲ. ಹೀಗೆ ದಿಕ್ಕುದೆಸೆಯಿಲ್ಲದೆ ಬೆಳೆದ ಮಾದ ಕೆಸರೂರಿನ "ಪುಕ್ಕಟೆ ಬಸವ"ನಾದ. ಎಲ್ಲರ ಎಲ್ಲಾ ಕೆಲಸವನ್ನೂ ಮಾಡಿಕೊಟ್ಟು, ಅವರಿರುವರು ಕೊಟ್ಟ ಹಿಟ್ಟಿನಿಂದ ಬೆಳೆದು ಯೌವ್ವನಕ್ಕೆ ಬಂದ. ವಯಸ್ಸಿಗೆ ಬಂದ 'ಕಾಣಿ'ಗೆ ಯಾರೂ ಒಂದು ನೆಲೆಮಾಡಿ ಕೊಡಲಿಲ್ಲ. ಕೊನೆಗೆ ಅವನು ಮಡಿವಾಳಯ್ಯನವರ ಆಶ್ರಯಕ್ಕೆ ಬಂದ. ಎಲ್ಲರಿಗೂ ಕಂಕಣ ಬಲ ಕೂಡಿಸುವ ಅಯ್ಯನವರೇ ಅವನಿಗೂ ಕಂಕಣ ಕಟ್ಟಿಸಬೇಕಾಯಿತು. ಎಲ್ಲರೂ ಕೈಬಿಟ್ಟಿದ್ದ ಗಿರಿಜೆಯ ಕೈಹಿಡಿದು ಕಾಣಿಮಾದ ಮಾದರಸನಾದ!

ಗಿರಿಜೆಯ ಕಾಲ್ಗುಣದಿಂದಲೂ ಮತ್ತು ನಾಡಿಗ ಅಹೋಬಲರಾಯರ ಔದಾರ್ಯದ ಫಲವಾಗಿಯೂ ಕೋಟೆ ಹಾಳಿನ ಭೂಮಿಗೆ ಕಾಣಿ ಒಡೆಯನಾದ. ಅಹೋಬಲರಾಯರ ಪ್ರೋತ್ಸಾಹದಿಂದಾಗಿ "ಕಾಯಕವೇ ಕೈಲಾಸ, ದುಡಿತವೆ ದುಡ್ಡಿನ ತಾಯಿ" ಎಂಬುದನ್ನು ತೋರಿಸಿಕೊಟ್ಟು ಕೆಸರೂರಿನ ಗಣ್ಯರೈತ ಮಾದಪ್ಪನಾದ. ಜೀವನದಲ್ಲಿ ಶ್ರದ್ಧೆ ವಿಶ್ವಾಸಗಳನ್ನಿಟ್ಟು ಮುನ್ನಡೆದವನಿಗೆ ಚಿನ್ನದಂತಹ ಮಡದಿ ಗಿರಿಜಾ, ಶ್ರೀಗಂಧದಂತಹ ಹಿರಿಯರು ಮಡಿವಾಳಯ್ಯ, ಅಹೋಬಲರಾಯರು ಎಲ್ಲಕ್ಕೂ ಹೆಚ್ಚಾಗಿ ಸ್ವರ್ಗಕ್ಕೆ ಸಮನಾದ ಕೋಟೆ ಹಾಳಿನ ಹೊಲ, ಇಷ್ಟೆಲ್ಲ ಸಿಕ್ಕಿತು.

ಸಾಹುಕಾರ ಸಂಕಪ್ಪನಿಂದ ತನಗೊದಗಿದ್ದ ಪಾಡನ್ನು ನೆನೆದು ತನ್ನ ಮಕ್ಕಳನ್ನು ಪದವೀಧರರನ್ನಾಗಿ ಮಾಡಿದನು. ತನ್ನ ನಂತರ ಅವರೂ ಭೂಮಿತಾಯಿಯ ಮಕ್ಕಳಾಗ ಬೇಕೆಂಬ ಹಂಬಲ ಅವನದಾಗಿತ್ತು. ಆದರೆ ಓದಿ ವಿದ್ಯಾವಂತನಾದ ಹಿರಿಯಮಗ ನಗರದ ಬೆಡಗಿನ ಜೀವನಕ್ಕೆ ಮನಮಾರಿಕೊಂಡು ಒಂದೂವರೆ ರೂಪಾಯಿಯ ಕೂಲಿಯ ಕರಣಿಕನಾಗಿ ಬೆಂಗಳೂರು ಸೇರಿಕೊಂಡ. ಎರಡನೆಯ ಮಗ ಹಣದ ಆಸೆಗೆ ಬಿದ್ದು ವ್ಯಾಪಾರಿಯಾಗಿ ಶಿವಮೊಗ್ಗೆಗೆ ಸೇರಿಕೊಂಡ. ಮಾದಪ್ಪನ ಆಸೆ ಹಂಬಲು ಮಣ್ಣುಗೂಡಿದ್ದಕ್ಕಾಗಿ ಎದೆಯೊಡೆದು ಹಾಸಿಗೆಹಿಡಿದು ಮಲಗಿದ. ಕೆಲವು ದಿನ

ಗಳಲ್ಲಿಯೇ ಮರಳಿ ಮಣ್ಣಿಗೆ ನಡೆದ. ಗಿರಿಜೆಯ ಪ್ರಾಣವೇ ಹೋದಂತಾಯಿತು. ಆದರೂ ಮಗಳು ಮಾದೇವಿಯ ಮುಖನೋಡಿಕೊಂಡು ತನ್ನ ಗರಹೊಡೆದ ಬಾಳನ್ನು ತಳ್ಳತೊಡಗಿದಳು. ಇಷ್ಟು ಕಾದಂಬರಿಯ ಕಥೆ.

ಕಾದಂಬರಿಯ ಕಥೆ ಸುಂದರವಾಗಿದೆ. ಆಂಗ್ಲರ ನವನಾಗರಿಕತೆಯ ಆಗಮನ ದಿಂದಾದ ದುಷ್ಪರಿಣಾಮದ ಒಂದು ದುರಂತ ಚಿತ್ರವನ್ನು ಈ ಕಾದಂಬರಿಯಲ್ಲಿ ಕಾಣು ತ್ತೇವೆ. ಕಾದಂಬರಿಯ ಪಾತ್ರರಚನೆಯೂ ಸುಂದರವಾಗಿದೆ. ಮೈಮನಸ್ಸನ್ನೊಂದು ಮಾಡಿ ದುಡಿಯುವ ಕಾಣಿಮಾದ, ಗಂಡನಿಗೆ ಒಪ್ಪುವ ಭಾಗ್ಯಲಕ್ಷ್ಮಿಯಂತಹ ಗಿರಿಜೆ ಉತ್ತಮ ರೈತವರ್ಗದ ಪ್ರತಿನಿಧಿಗಳು. ಖಿಲವಾಗುತ್ತಿದ್ದ ಸಾಮಂತ ಶಾಹಿಯ ಪ್ರತಿನಿಧಿಯಾಗಿ 'ಶಾಂತರಾಜೇ ಅರಸನವರ' ನಿಸ್ಸತ್ವವಾದ ವ್ಯಕ್ತಿತ್ವ ಓದುಗರ ಅನುಕಂಪೆಗೆ ಪಾತ್ರವಾಗುತ್ತದೆ. ಹಾಳುಬಿದ್ದ ಸಾಮಂತ ಶಾಹಿಯ ಭಗ್ನಾವಶೇಷದ ಮೇಲೆ ತಲೆ ಎತ್ತಿನಿಂತ ಸಾಹುಕಾರ ಸಂಕಪ್ಪ. 'ಊರಿದ್ದ ಕಡೆ ಹೊಲಗೇರಿ' ಎನ್ನು ವಂತೆ ಹಳ್ಳಿಯ ನಿಷ್ಕಪಟವಾದ ಬಾಳುವೆ ಮಧ್ಯೆ ಜಿಗಣೆಯಂತಹ ಸಾಹುಕಾರ ಸಂಕಪ್ಪನೂ, ಬಕಸನ್ಯಾಸಿ ಶಾಂತಪ್ಪ ನಾಯಿಕರೂ ಈ ಅಧಮರ ನಡುವೆ ಮಹಾ ಮಹಿಮರಾದ ಸಾಧು ಸ್ವಭಾವದ ಮಡಿವಾಳಯ್ಯನವರೂ ಇಲ್ಲಿ ಬಂದಿದ್ದಾರೆ. ನಾವು ನಿತ್ಯಜೀವನದಲ್ಲಿ ನೋಡುವ ಈ ವ್ಯಕ್ತಿಗಳ ಸ್ಪಷ್ಟಪರಿಚಯ ನಮಗೀ ಕಾದಂಬರಿಯಲ್ಲಿ ಸಿಗುತ್ತದೆ. ನಗರಜೀವನದ ಇಣುಕುನೋಟವೂ ಇಲ್ಲಿ ಕಾಣಸಿಗುತ್ತದೆ.

ಶ್ರೀ. ದೇವೀರಪ್ಪನವರ "ಸುವರ್ಣ ಸಂಪುಟ" ಓದಿದವರಿಗೆ ಅವರ ಸುಂದರ ಕಲ್ಪನೆ ಮತ್ತು ಮಧುರಭಾವನೆಗಳ ಪರಿಚಯವಿಲ್ಲದೆ ಇರದು. ಈ ಕಾದಂಬರಿಯಲ್ಲೂ ಮಧುರಭಾವನೆಯ ಸುಂದರಕಲ್ಪನೆ ಕುಡಿಯೊಡೆದು ಬಳ್ಳಿಬಳ್ಳಿಯಾಗಿ ಹಬ್ಬಿಕೊಂಡಿದೆ. ಸುಂದರ ಮತ್ತು ಸರಳಭಾಷೆ ಇವೆಲ್ಲದರ ಸಮ್ಮಿಳನದಿಂದ ಕಾದಂಬರಿ ಸುಂದರವಾಗಿದೆ.

ಯ. ಹನುಮಯ್ಯ.

* * *

ಕನ್ನಡ ಕುಲದೀಪ ಬಸವಣ್ಣನವರ ಜೀವನ—ಲೇಖಕರು: ಸಿಂಪಿ ಲಿಂಗಣ್ಣ; ಸಂಪಾದಕರು: ಬುರ್ಲಿ ಬಿಂದುಮಾಧವ, ಮಿಂಚಿನ ಬಳ್ಳಿಯ ಚಾವಡಿ, ಜವಳೀಪೇಟೆ, ಧಾರವಾಡ; ಪುಟಗಳು ೧೨೦; ಬೆಲೆ, ಸಾದಾ ಪ್ರತಿ ರೂ. ೧-೦-೦; ಉತ್ತಮ ಪ್ರತಿ ರೂ. ೧-೮-೦.

ಬಸವಣ್ಣನವರ ಜೀವನವನ್ನು ಕುರಿತ ಸಂಶೋಧನಾತ್ಮಕವೂ ಕಾವ್ಯಾತ್ಮಕವೂ ಆದ, ಬರಹ ಈಗಾಗಲೆ ಸಾಕಷ್ಟು ಬೆಳಕಿಗೆ ಬಂದಿದೆ. ಸಂಶೋಧನೆಯ ತೀಕ್ಷ್ಣ ಮತಿಗೆ ಗೋಚರವಾಗುವ ಜಟಿಲಸಮಸ್ಯೆಗಳ ಅನಿಶ್ಚಯ ವಾತಾವರಣದಿಂದ

ಬಸವಣ್ಣನವರ ಕಾವ್ಯಮಯ ಜೀವನವನ್ನು ಬೇರ್ಪಡಿಸಿ ಸರ್ವರ ರುಚಿಗೂ ಅಳವಡುವಂತೆ ಸಾಮಾನ್ಯಮತಿಗೂ ನಿಲುಕುವಂತೆ ವಿವರಿಸುವ ಪ್ರಯತ್ನ ಈ ಹೊತ್ತಗೆಯಲ್ಲಿ ನಡೆದಿದೆ. ಈ ಪ್ರಯತ್ನದಲ್ಲಿ ಲೇಖಕರು ತುಸುಮಟ್ಟಿಗೆ ಹರಿಹರನ ಮಾರ್ಗವನ್ನೂ ಅವನ ಉಕ್ತಿಸಂಪತ್ತನ್ನೂ ಆಶ್ರಯಿಸಿದ್ದಾರೆ. ಬಸವಣ್ಣನವರ ಜೀವನಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಹರಿಹರನ 'ಬಸವರಾಜದೇವ' ರಗಳೆಗೆ ಗೌರವ ಸ್ಥಾನವಿದೆ. ಆದರೂ ಅವರ ವ್ಯಕ್ತಿತ್ವದ ವಿಕಾಸವನ್ನೂ ಭಕ್ತಿಯ ಬೆಳೆವಣಿಗೆ ಯನ್ನೂ ಹಿರಿಮೆಯ ರಹಸ್ಯವನ್ನೂ ಅವರ ಬಾಳಿನ ಕಾವುನೋವುಗಳನ್ನೂ ನಲ್ಮೆ ಬಲ್ಮೆಗಳನ್ನೂ ಅವರ ವಚನಗಳಿಂದ ಗ್ರಹಿಸಲು ಸಾಧ್ಯವಾಗುವಂತೆ ಬೇರೆ ಆಕರ ಗಳಿಂದ ಸಾಧ್ಯವಾಗದು. ಪ್ರಸ್ತುತ ಲೇಖಕರು ಅವರ ವಚನಗಳನ್ನೇ ಆಧರಿಸಿ, ಅವುಗಳ ರಹಸ್ಯವನ್ನೂ ಭೇದಿಸಿ ಕಾವ್ಯದ ಕಂಪೂ ಭಕ್ತಿಯ ತಂಪೂ ತತ್ತ್ವದ ಗುಣ್ಪೂ ಜೊತೆಗೆ ಕಾಯಕದ ಪೆಂಪೂ ವ್ಯಕ್ತಗೊಳ್ಳುವಂತೆ ಈ ಜೀವನ ಕಥೆಯನ್ನು ಆಕರ್ಷಕವಾದ ಶೈಲಿಯಲ್ಲಿ ಬರೆದಿದ್ದಾರೆ. ಶ್ರೀ. ಸಿಂಪಿ ಲಿಂಗಣ್ಣನವರು ಸ್ವಯಂ ಶ್ರೀ. ಅರವಿಂದ ಪಂಥಾನುಯಾಯಿಗಳಾದುದರಿಂದ ಬಸವಣ್ಣನವರ ಜೀವನದ ನಾನಾ ಮುಖಗಳನ್ನು ಪೂರ್ಣದೃಷ್ಟಿಯಿಂದ ನೋಡಲು ಯತ್ನಿಸಿದ್ದಾರೆ. ಆತ್ಮೀಯತೆ ಯಿಂದ, ತನ್ಮಯತೆಯಿಂದ ಆ ಹಿರಿಯ ಜೀವನವನ್ನವರು ಕಾಣಲು ತೊಡಗಿರು ವುದರಿಂದ ಜೀವನ ಕಥೆಯ ಉದ್ದಕ್ಕೂ ಹೊಸ ಕಾವು ಹರಿಯುತ್ತಿದೆ. ಆದುದರಿಂದ ಈ ಗ್ರಂಥದ ಉಪಯುಕ್ತತೆಯನ್ನು ಪ್ರತ್ಯೇಕವಾಗಿ ಎಡಿ ತೋರಿಸಬೇಕಾಗಿಲ್ಲ.

*
* *

ಪಾಶ್ಚಿಮಾತ್ಯ ಮಹಾಪುರುಷರು—ಲೇಖಕರು : ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ ; ಪ್ರಕಾಶಕರು : ಮಿಂಚಿನ ಬಳ್ಳಿ, ಧಾರವಾಡ ; ಪುಟಗಳು ೪೯೧ ; ಬೆಲೆ, ರೂ. ೫-೦-೦.

ಸ್ವಾರ್ಥಸಾಧನೆ, ಸ್ವಾಭಿಮಾನ, ವರ್ಣದ್ವೇಷಗಳ ಪರಿಣಾಮವಾಗಿ ದೌರ್ಜನ್ಯ ಗಳ ಪರಂಪರೆ ನಿಲ್ಲದೆ ಜಗತ್ತಿನಲ್ಲಿ ಅಶಾಂತಿ ಭೀತಿ ಕಳವಳಗಳು ಹೆಚ್ಚುತ್ತಿದ್ದರೂ ವಿಜ್ಞಾನದ ಕೃಪೆಯಿಂದ ಪೂರ್ವ ಪಶ್ಚಿಮಗಳ ದಕ್ಷಿಣ ಉತ್ತರಗಳ ಭೇದವಳಿದು ಪ್ರಪಂಚವಿಂದು ಒಂದಾಗಿದೆ ಎಂಬ ಭಾವನೆ ಸರ್ವತ್ರ ಮೂಡಿದೆ. ವಿಶ್ವಭಾವನೆ, ವಿಶ್ವಸೌಹಾರ್ದ, ವಿಶ್ವಪ್ರಜೆ ಮೊದಲಾದ ದೊಡ್ಡ ಹೆಸರುಗಳ ಮರೆಯಲ್ಲಿ ರಾಜ ಕೀಯ ವ್ಯಕ್ತಿಗಳು ಈಚೀಚೆಗೆ ಅನೇಕ ಅನ್ಯಾಯ ಕೃತ್ಯಗಳನ್ನೆಸಗುತ್ತಿದ್ದಾರೆ. ಅವರ ನಡೆನುಡಿಗಳಲ್ಲಿ ಪರಸ್ಪರ ಸಂಬಂಧವೇ ಇಲ್ಲ. ಇದರಿಂದಾಗಿ ಜನ ಜನವನ್ನೂ ನಂಬುತ್ತಿಲ್ಲ. ಆದರೆ ಈ ನಿರಾಶೆಯ ನಿಶಾಗರ್ಭದಿಂದಲೇ ಆಗಾಗ್ಗೆ ಆಶಾಚಂದ್ರಮನ

ಉದಯವಾಗುತ್ತಿರುತ್ತದೆ. ಮಹಾಪುರುಷರು ಎಂದೋ ಒಮ್ಮೆ ಜನಿಸಿದರೂ ಅವರ ವ್ಯಕ್ತಿತ್ವದ ಪ್ರಭಾವ ಕಾಲದೇಶಗಳನ್ನು ಮೆಟ್ಟಿ ನಿಲ್ಲುವಂಥದು, ತಿರೋಗಾಮಿ ಶಕ್ತಿಗಳನ್ನು ಬಡಿದಪ್ಪಳಿಸುವಂಥದು, ಅವರ ಕ್ರಿಯಾಶೀಲ ಜೀವನ ಸದಾ ಲೋಕ ಕಲ್ಯಾಣಾಕಾಂಕ್ಷಿಯಾದುದು. ಅವರು ಎಲ್ಲಿಯೇ ಹುಟ್ಟಿರಲಿ, ಎಲ್ಲಿಯೇ ಬೆಳೆದಿರಲಿ, ವಿಶ್ವವ್ಯಕ್ತಿಗಳು. ಅಂಥವರ ಜೀವನಪರಿಚಯದಿಂದ ಎಲ್ಲ ದೇಶಗಳ ಎಲ್ಲ ಬಗೆಯ ಜನರಿಗೆ ಏಕರೀತಿಯಾಗಿ ತೃಪ್ತಿಪುಷ್ಟಿಗಳು ದೊರೆಯುತ್ತವೆ.

ಭರತಖಂಡ ಹಿಂದಿನಿಂದ ಅನ್ಯಾಕ್ರಮಣಕ್ಕೆ ಗುರಿಯಾಗಿ ಅನೂಹ್ಯವಾದ ಸಂಕಟಗಳನ್ನನುಭವಿಸಿದೆ. ಆದರೂ ವಿಭೂತಿತ್ವ ವಿದೇಶದಲ್ಲಿ ಪ್ರಕಟಗೊಳ್ಳಲಿ ಸ್ವದೇಶ ದಲ್ಲಿ ಪ್ರಕಟಗೊಳ್ಳಲಿ ತಕ್ಷಣ ಗುರುತಿಸಿ, ಅದಕ್ಕೆ ಉಚಿತ ಮರ್ಯಾದೆಯನ್ನು ಸಲ್ಲಿಸು ತ್ತದೆ, ಅದನ್ನೂ ಆರಾಧಿಸುತ್ತದೆ. ಆದುದರಿಂದಲೇ ಭಾರತೀಯ ಸಂಸ್ಕೃತಿಯನ್ನು ಸರ್ವಗ್ರಾಸಿಯಾದ ವಿಶ್ವಸಂಸ್ಕೃತಿಯೆಂದು ಕರೆಯಬಹುದು. ಹಿಂದಿಗಿಂತ ಹೆಚ್ಚಾಗಿ ಈಗ ಸ್ವತಂತ್ರ ಭಾರತೀಯರು ವಿದೇಶೀಯ ಮಹಾಪುರುಷರ ಜೀವನಪರಿಚಯವನ್ನು ಮಾಡಿಕೊಂಡು ನವಭಾರತ ನಿರ್ಮಾಣಕ್ಕೆ ಅನುವಾಗಬೇಕಾಗಿದೆ. ಈ ದೃಷ್ಟಿ ಯಿಂದ ಶ್ರೀ. ಗೌರೀಶ ಕಾಯ್ಕಿಣಿಯವರು ಬರೆದಿರುವ 'ಪಾಶ್ಚಿಮಾತ್ಯ ಮಹಾ ಪುರುಷರು' ಎಂಬ ಗ್ರಂಥ ತುಂಬ ಪ್ರಯೋಜನಕಾರಿಯಾಗುತ್ತದೆ.

ತತ್ವ, ಕಲಾ, ಕ್ರಾಂತಿ, ಕಾವ್ಯ, ವಿಜ್ಞಾನ, ಸಾಹಸ, ರಾಜಕೀಯ ಪ್ರತಿಭೆ ಗಳಿಗನುಗುಣವಾಗಿ ಈ ಗ್ರಂಥದಲ್ಲಿ ಆರು ವಿಭಾಗಗಳಿವೆ. ಒಂದೊಂದು ವಿಭಾಗ ದಲ್ಲಿಯೂ ಮೂವರು ಮಹನೀಯರ ಜೀವನ ಚಿತ್ರಣವನ್ನು ಕೊಟ್ಟಿದೆ. ಅವರ ಹೆಸರುಗಳು ಕ್ರಮವಾಗಿ ಹೀಗಿವೆ: ಸೊಕ್ರಟೀಸ್, ಅರಿಸ್ಟೋಟಲ್, ಮೆಕಿಯಾವೆಲ್ಲಿ, ಡೆಮೋಸ್ತೆನೀಜ, ಲಿಯೋನಾರ್ಡೊ ಡಾವಿನ್ಸಿ, ಮೆಕಲೆಂಜೆಲೊ, ಬುವೊನಾರ್‍ರೋತಿ, ಲುಡ್ವಿಗ್‌ವಾನ್ ಬಿದೋವಿನ್, ವೋಲ್ಫಗ್ಯಾಂಗ ಅಮೆಡಿಯಸ್ ಮೊಝಾರ್ಟ, ವಿಲ್‌ಹೆಲ್ಮ ರಿಚರ್ಡ್‌ವಾಗ್ನರ್, ರೂಸೊ, ವೋಲ್ಟಾಯರ್, ಡಾರ್ವಿನ್, ಡಾ|| ಜಾನ್ಸನ್, ಶೆಲ್ಲಿ, ಬಾಯರನ್, ಸರ್ ಐಸಾಕ್ ನ್ಯೂಟನ್, ಲುಯಿ ಪಾಶ್ಚರ್, ಥೋಮಸ್ ಎಡಿಸನ್, ಕ್ಯಾಪ್ಟನ್‌ಕುಕ್, ಕ್ಯಾಪ್ಟನ್ ಸ್ಕಾಟ್, ಲಿವ್ಹಿಂಗಸ್ಟನ್, ಅಬ್ರಾಹಮ ಲಿಂಕನ್, ಗ್ಯಾರಿಬಾಲ್ಡಿ, ಬಿಸ್ಮಾರ್ಕ. ಇಲ್ಲಿ ಅರ್ವಾಚೀನ ಮಹಾವ್ಯಕ್ತಿ ಗಳನ್ನೂ ಬಿಟ್ಟಿದೆಯೆಂದು ಲೇಖಕರೇ ಹೇಳಿದ್ದಾರೆ. ಇವರ ಆಯ್ಕೆ ಮತ್ತು ಜೋಡಣೆ ಗ್ರಂಥಪ್ರಮಾಣದ ದೃಷ್ಟಿಯಿಂದ ಬಹುಮಟ್ಟಿಗೆ ಸರಿಯೆನಿಸಬಹುದಾದರೂ ಮಿಲ್ಟನ್, ಡಾಂಟೆ, ಪ್ಲೇಟೋ ಮೊದಲಾದ ಇನ್ನು ಕೆಲವರು ಪ್ರತಿಭಾ ಶ್ರೀಮಂತರನ್ನು ಕೈಬಿಟ್ಟಿರುವುದರಿಂದ ಏನೋ ಮುಕ್ಕು ಎದ್ದು ಕಾಣುತ್ತದೆ.

ಏನೇ ಇರಲಿ ಇಂಥ ಪ್ರಯತ್ನ ತುಂಬ ಸ್ತುತ್ಯರ್ಹವಾದುದು ; ಉತ್ತೇಜನಕ್ಕೆ ಯೋಗ್ಯವಾದುದು. ಇಲ್ಲಿಯ ಜೀವನ ನಿರೂಪಣಾ ವಿಧಾನವೂ ಆಕರ್ಷಕವಾಗಿದೆ. ನೇರವಾಗಿ ವಿಷಯವಸ್ತು ಪ್ರವೇಶಿಸಿ, ಸುಂದರವೂ ಕುತೂಹಲಕಾರಿಯೂ ಆದ ಸನ್ನಿವೇಶಗಳನ್ನು ರಮ್ಯವಾಗಿ ಸರಳವಾಗಿ ಲೀಲಾಜಾಲವಾಗಿ ಚಿತ್ರಿಸಿದ್ದಾರೆ. ಎಲ್ಲಿಯೂ ನೀರಸವಾದ ಪ್ರಕರಣಗಳನ್ನು ತಂದು ತುರುಕಿಲ್ಲ. ಎಲ್ಲಿಯೂ ಆ ವ್ಯಕ್ತಿಗಳ 'ಮಾನ್ಯತೆಯನ್ನೂ ಅದರ ಹಿರಿಮೆಯನ್ನೂ ಮರೆತಿಲ್ಲ. ಒಟ್ಟಿನಲ್ಲಿ ಎಲ್ಲರೂ ಓದ ಬೇಕಾದ ಗ್ರಂಥ.

*
* *

ಆಚಾರ್ಯ ವಿನೋಬಾ ಭಾವೆ—ಲೇಖಕರು : ಸಾನೆ ಗುರೂಜಿಯವರು ; ಪ್ರಕಾಶಕರು : ಮಿಂಚಿನ ಬಳ್ಳಿ, ಧಾರವಾಡ ; ಪುಟಗಳು ೬೦ ; ಬೆಲೆ, ೮ ಆಣೆ.

ಬಾಪೂಜಿಯವರು ೧೯೪೦ ರಲ್ಲಿ ವಿನೋಬಾರವರನ್ನು ಮೊದಲನೆಯ ಸತ್ಯಾಗ್ರಹಿಯೆಂದು ಸಾರಿದಾಗ ಭಾರತೀಯರ ವಿಸ್ಮಯಾನ್ವಿತ ದೃಷ್ಟಿ ಅವರ ಕಡೆಗೆ ಹರಿಯಿತು. ಎಲೆಯ ಮರೆಯ ಆ ಕಾಯಿ ಎಷ್ಟು ಅಮೋಘವಾದುದು, ಶಕ್ತಿದಾಯಕವಾದುದು ಎಂದು ಆಗ ಗೊತ್ತಾಯಿತು. ವಿನೋಬಾರವರು ರಾಜಕೀಯ ವ್ಯಕ್ತಿಯಲ್ಲ ; ಪ್ರಥಮತಃ ಮತ್ತು ಸ್ವಭಾವತಃ ಅವರು ಸಂತರು. ಅವರು ಹುಟ್ಟಿನಿಂದ ಸಂತರೇ ಹೊರತು ಕಟ್ಟಿನಿಂದಲ್ಲವೆಂದು ಅವರ ಜೀವನವೇ ಸಾರುತ್ತದೆ. ಅವರ ಸರ್ವ ವ್ಯಾಪಾರಗಳಿಗೆ ಅಧ್ಯಾತ್ಮವೇ ಹಿನ್ನೆಲೆ ಮತ್ತು ಮುನ್ನೆಲೆ. ಅವರ 'ಭೂದಾನಯಜ್ಞ'ದ ಚಳುವಳಿ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಾಂತಿಯೆಬ್ಬಿಸಿ ರಾಜಕೀಯ ಧುರೀಣರನ್ನೂ ಸಮಾಜ ಸುಧಾರಕರನ್ನೂ ಬೆರಗುಗೊಳಿಸಿದೆ. ನಿಜವಾಗಿಯೂ 'ವಿನೋಬಾಜಿಯವರು ಗಾಂಧೀಮತದ ಮಹಂತರು, ಗಾಂಧೀಜಿಯವರ ಮಾನಸಪುತ್ರರು.' ಇಂಥ ಮಹಿಮಾವಂತರನ್ನು ಪಡೆದ ಜನ ಧನ್ಯ !

ಶ್ರೀ. ಸಾನೆ ಗುರೂಜಿಯವರು ಈ ಕಿರುಹೊತ್ತಗೆಯಲ್ಲಿ ಅವರ ಜೀವನದ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಟ್ಟಿದ್ದಾರೆ.

*
* *

ಪ್ರೇಮಚಂದರ ಜೀವನ ಹಾಗೂ ಹಿಂದೀ ಸಾಹಿತ್ಯ ದರ್ಶನ—ಪ್ರಕಾಶಕರು : ಮಿಂಚಿನ ಬಳ್ಳಿ, ಧಾರವಾಡ ; ಪುಟಗಳು ೩೮ ; ಬೆಲೆ, ೬ ಆಣೆ.

ಈ ಕಿರುಹೊತ್ತಗೆಯ ಮೊದಲನೆಯ ಭಾಗದಲ್ಲಿ ಶ್ರೀ. ಗುರುನಾಥ ಜೋಷಿಯವರು ಹಿಂದೀ ಸಾಹಿತ್ಯ ಚರಿತ್ರೆಯ ಸೂಕ್ಷ್ಮ ಪರಿಚಯವನ್ನು ಕೊಟ್ಟಿದ್ದಾರೆ ; ಎರಡನೆಯ

ಭಾಗದಲ್ಲಿ ಶ್ರೀ. ಎಸ್. ವ್ಹಿ. ಭಟ್ಟರವರು ಹಿಂದೀ ಸಾಹಿತ್ಯದಲ್ಲಿ ಪ್ರಖ್ಯಾತಿ ಪಡೆದಿರುವ ಶ್ರೀ. ಪ್ರೇಮಚಂದರ ಜೀವನ ವಿಷಯವನ್ನೂ ಅವರ ಕೃತಿಗಳ ಸೂಕ್ಷ್ಮ ಪರಿಚಯವನ್ನೂ, ಹಿಂದೀ ಸಾಹಿತ್ಯದಲ್ಲಿ ಅವರ ನಿಲುವೆಯನ್ನೂ ಕುರಿತು ಸಂಗ್ರಹವಾಗಿ ತಿಳಿಸಿದ್ದಾರೆ.

*
* *

ದೇವತಾತ್ಮಾ—ಬರೆದವರು: ಶ್ರೀಮತಿ ಮಹಾದೇವಿಯಮ್ಮ; ಪ್ರಕಾಶಕರು: ಮಿಂಚಿನ ಬಳ್ಳಿ, ಧಾರವಾಡ; ಪುಟಗಳು ೯೬; ಬೆಲೆ, ರೂ. ೧-೦-೦.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಶ್ರೀಮಂತ ಮನೆತನದಲ್ಲಿ ಹುಟ್ಟಿ, ಚಿಕ್ಕಂದಿನಲ್ಲಿಯೇ ವೈಧವ್ಯದ ದುಃಖಕ್ಕೆ ಗುರಿಯಾಗಿ, ವಿರಾಗಿಯಾಗಿ, ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಿ, ಮಹಿಳೆಯರಲ್ಲಿ ಜಾಗೃತಿಯುಂಟುಮಾಡಿ, ಕಠೋರ ಸತ್ಯಾಗ್ರಹಿಯಾಗಿ, ಕಾರಾಗೃಹವಾಸದ ಬೇನೆಯನ್ನನುಭವಿಸಿ, ಅನಾಥಾಲಯಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿ, ಮಹಾತ್ಮಾಜೀಯವರ ನೆಚ್ಚಿನ ಶಿಷ್ಯೆಯಾಗಿ ವರ್ಧಾದಲ್ಲಿ ಸೇವಾವೃತ್ತಿಯನ್ನು ಸ್ವೀಕರಿಸಿ, ಕೊನೆಗೆ ವಿನೋಬಾರವರ ಆಪ್ತಕಾರ್ಯದರ್ಶಿನಿಯಾಗಿ ಅವರ ಭೂದಾನಯಜ್ಞಯಾತ್ರೆಯಲ್ಲಿ ಶ್ರಮಿಸುತ್ತಿರುವ ಸಾಧ್ವೀಮಣಿ, ಶ್ರೀಮತಿ ಮಹಾದೇವಿಯಮ್ಮ, ತಮ್ಮ ನಾಲ್ವರು ಗೆಳತಿಯರೊಡನೆ ಕೈಗೊಂಡ ಹಿಮಾಲಯ ಯಾತ್ರೆಯ ವರ್ಣನೆಯನ್ನೂ ತಮ್ಮ ಸಾಹಸಾನುಭವವನ್ನೂ ಇಲ್ಲಿ ಬರೆದಿಟ್ಟಿದ್ದಾರೆ. ತಮ್ಮ ಪ್ರವಾಸದ ಕಷ್ಟನಿಷ್ಠುರಗಳನ್ನೂ ತಾವು ಹಾದುಹೋದ ಪ್ರದೇಶದ ಜನಜೀವನವನ್ನೂ ಹೃದಯಂಗಮವಾಗುವಂತೆ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಪರ್ವತಾರೋಹಣದಿಂದ ಶಾರೀರಕ ಶಕ್ತಿ ವರ್ಧಿಸುವುದಲ್ಲದೆ ಮನೋದಾರ್ಢ್ಯವೂ ಆತ್ಮಶಕ್ತಿಯೂ ಬಲಿಯುತ್ತವೆಂದು ಅವರು ಹೇಳುವ ಮಾತಿನಲ್ಲಿ ತುಂಬ ಸತ್ಯವಿದೆ. ಒಂದು ಹೆಣ್ಣುಜೀವದ ಭಕ್ತಿ ಶ್ರದ್ಧೆ ನಿಷ್ಠೆ ಸಾಹಸ ಮನೋದಾರ್ಢ್ಯ ಆತ್ಮಶಕ್ತಿಗಳಿಗೆ ಈ ಯಾತ್ರೆ ನಿದರ್ಶನ ಮಾತ್ರವಲ್ಲ ಒಂದು ಪ್ರತಿಮೆಯೂ ಆಗಿದೆ. ಒಟ್ಟಿನಲ್ಲಿ ಇದೊಂದು ಒಳ್ಳೆಯ ಪ್ರವಾಸ ಕಥೆ. ಶ್ರೀ ವಿನೋಬಾ ಭಾವೆಯವರು ಇದಕ್ಕೆ ಮುನ್ನುಡಿ ಬರೆದಿದ್ದಾರೆ.

*
* *

ಭಾರತದ ಜಾನಪದ ನೃತ್ಯಗಳು—ಲೇಖಕರು: ಕುಮಾರ ವೆಂಕಣ್ಣ; ಪ್ರಕಾಶಕರು: ಅರುಣೋದಯ ಲೈಬ್ರರಿ, ಅರಳೇಪೇಟೆ, ಬೆಂಗಳೂರು-೨; ಪುಟಗಳು ೧೩೬; ಬೆಲೆ, ೧-೦-೦.

ಸಾಹಿತ್ಯಕ್ಷೇತ್ರದಲ್ಲಿ ಜಾನಪದ ಗೀತೆಗಳಿಗೆ ಯಾವ ಸ್ಥಾನವಿದೆಯೋ ನಾಟಕ ಕ್ಷೇತ್ರದಲ್ಲಿ ಜಾನಪದ ನೃತ್ಯಗಳಿಗೆ ಅದೇ ಸ್ಥಾನವಿದೆಯೆಂದು ಹೇಳಬಹುದು. ಮಾನವ

ಮಾತು ಕಲಿಯುವುದಕ್ಕೆ ಮುಂಚೆ ತನ್ನ ಆಮೋದ ಪ್ರಮೋದಗಳನ್ನೂ ಆಶೆ ಆಕಾಂಕ್ಷೆಗಳನ್ನೂ ಭಾವಾನುಭವಗಳನ್ನೂ ತಲೆಯೊಲೆತ ಮಣಿತಗಳ ಮೂಲಕ, ಕೈಕಾಲುಗಳ ಚಲನವಲನಗಳ ಮೂಲಕ, ಕಣ್ಸನ್ನೆ ಬಾಯ್ಸನ್ನೆಗಳ ಮೂಲಕ ವ್ಯಕ್ತಪಡಿಸುತ್ತಿದ್ದನೆಂದು ಕಾಣುತ್ತದೆ. ಕ್ರಮೇಣ ನಾನಾ ಭಾವವಿಲಾಸಗಳ ಪ್ರದರ್ಶನ ವಿಧಾನವೇ ನೃತ್ಯಾಭಿನಯಗಳಾಗಿ ಪರಿಣಮಿಸಿರಬೇಕು. ಜಾನಪದ ನೃತ್ಯಗಳೇ ಪರಿಷ್ಕಾರಗೊಂಡು ವ್ಯವಸ್ಥೆಗೊಂಡು ಭರತನಾಟ್ಯವಾಗಿರಬೇಕು. ಕೊನೆಕೊನೆಗೆ ಭರತನಾಟ್ಯ ಜಾನಪದ ನೃತ್ಯಗಳೆರಡೂ ಪರಸ್ಪರ ಋಣಿಗಳಾಗಿ, ಪರಸ್ಪರಾವಲಂಬಿಗಳಾಗಿ, ಪರಸ್ಪರ ಪೂರಕಗಳಾಗಿ ಜೊತೆಜೊತೆಯಲ್ಲಿಯೇ ಬೆಳೆದಿರಬೇಕು. ಆದರೆ ಜಾನಪದ ನೃತ್ಯಗಳಿಗೆ ಭರತನಾಟ್ಯವೇ ಮೂಲ ಎಂದು ಊಹಿಸುವುದು ಸಾಹಸದ ಮಾತಾಗುತ್ತದೆ. ಋಷಿಮೂಲ ಗುರುಮೂಲದ ಹಾಗೆ ಭರತನಾಟ್ಯದ ಮೂಲವೂ ರಹಸ್ಯಾತ್ಮಕವಾಗಿದೆ.

ಜಾನಪದ ನೃತ್ಯಗಳಿಗೆ ಮೂಲ ಯಾವುದೇ ಇರಲಿ ನಮ್ಮ ಪ್ರಾಚೀನ ಸಂಸ್ಕೃತಿಯ ರೂಪರೇಷೆಗಳನ್ನೂ ನಮ್ಮ ಪೂರ್ವಜರ ರೀತಿನೀತಿಗಳನ್ನೂ ತಿಳಿಯಲು ಅವು ಬಹುಮಟ್ಟಿಗೆ ಸಹಾಯಕವಾಗುತ್ತವೆನ್ನುವುದು ನಿಜ. ಈಗಲೂ ದೂರದ ಹಳ್ಳಿಗಳಲ್ಲಿ ತುಂಬ ಸಂಕೋಚದಿಂದ ನಾಚಿಕೆಯಿಂದ ಹೊರಗೆ ಕಾಣಿಸಿಕೊಳ್ಳುವ ಸುಗ್ಗಿಯ ಕುಣಿತ, ಕಂಬದಕುಣಿತ, ವೀರಗುಣಿತ, ನಂದಿಕೋಲು ಕುಣಿತ ಮೊದಲಾದ ಹಲವು ಬಗೆಯ ಕುಣಿತಗಳಲ್ಲಿ ಹಿಂದಿನವರ ಧೈರ್ಯ ಶೌರ್ಯ ಪ್ರತಾಪಗಳು, ಕೆಚ್ಚು ನೆಚ್ಚುಗಳು, ಸ್ವಾತಂತ್ರ್ಯ ಪ್ರಿಯತೆ, ಆತ್ಮಾಭಿಮಾನಗಳು ಎದ್ದು ಕಾಣುತ್ತವೆ. ಆ ಕುಣಿತಗಳ ಹಿಂದಿನ ಭಾವ ವೈವಿಧ್ಯವನ್ನು ಗಮನಿಸಿದರೆ ಅವು ಏಕರೀತಿಯಾಗಿ ೯-೧೦ ನೆಯ ಶತಮಾನಗಳಿಗೆ ಹಿಂದಿನಿಂದ ರೂಢಿಯಲ್ಲಿರುವಂತೆ ಕಾಣುತ್ತದೆ. ಫರಂಗಿ ವಿದ್ಯೆಯನ್ನು ಕಲಿತು, ಅವರ ಸಂಸ್ಕೃತಿಗೆ ಮರುಳಾಗಿ ದಾಸರಾಗಿರುವ ಜನ—ನಾಟಕ, ಸಿನಿಮಾ ಮಂದಿರಗಳಲ್ಲಿ ಸಿಗರೇಟು ಎಳೆಯುತ್ತ ಎಂಥೆಂಥದೇ ನೃತ್ಯವನ್ನು ನೋಡಿ ಆನಂದಿಸುವ ಜನ—ಆ ಕುಣಿತವನ್ನು 'ಅನಾಗರಿಕ'ವೆಂದು ತೆಗಳುವುದುಂಟು ; ಈಗಿನ ವೈದ್ಯರು ಆಯುರ್ವೇದವನ್ನು ತೆಗಳುವ ಹಾಗೆ. ಆ ಕುಣಿತಗಳಲ್ಲಿ ಒರಟುತನ ಕಾಣಬಹುದು. ನಯ ಇಲ್ಲದಿರಬಹುದು. ಈಗಿನವರ ಕಣ್ಣಿಗೆ ನಾಜೋಕು ಕಾಣದಿರಬಹುದು. ಆದರೆ ವೈಜ್ಞಾನಿಕ ದೃಷ್ಟಿಯಿಂದ, ಸಂಶೋಧನಾತ್ಮಕ ದೃಷ್ಟಿಯಿಂದ ನೋಡುವವರಿಗೆ ಅವು ತುಂಬ ಉಪಯುಕ್ತವಾಗಿ, ನಮ್ಮ ಹಿಂದಿನ ಸಂಸ್ಕೃತಿಯ ಮೇಲೆ ಹೆಚ್ಚು ಬೆಳಕು ಬೀರುವುವಾಗಿ ಕಂಡಾವು ! ಬಹುಶಃ ಅಂಥ ಸ್ತುತ್ಯಪ್ರಯತ್ನಗಳಲ್ಲಿ ಒಂದು 'ಭಾರತದ ಜಾನಪದ ನೃತ್ಯಗಳು' ಎಂಬ ಗ್ರಂಥವಾಗಿ ಪರಿಣಮಿಸಿದೆ ಎಂದು ಹೇಳಬಹುದು.

ಶ್ರೀ ಕುಮಾರ ವೆಂಕಣ್ಣನವರು ಈ ಗ್ರಂಥದಲ್ಲಿ ಜಾನಪದ ನೃತ್ಯಗಳ ಉಗಮ

ವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಕನ್ನಡ ತುಳು ಕೇರಳ ತಮಿಳು ಆಂಧ್ರ ಪ್ರಾಂತಗಳಲ್ಲಿ ರೂಢಿಯಲ್ಲಿರುವ ಹಲವಾರು ಬಗೆಯ ಜಾನಪದ ನೃತ್ಯಗಳನ್ನೂ ಅವುಗಳ ಪರಸ್ಪರ ಸಂಬಂಧವನ್ನೂ, ವಿಕಾಸ ವಿಧಾನಗಳನ್ನೂ ನಿದರ್ಶನಗಳೊಡನೆ ಸಂಗ್ರಹವಾಗಿ ನಿರೂಪಿಸಿದ್ದಾರೆ. ಹಾಗೆಯೇ ಉತ್ತರ ಭಾರತದ ಅಸ್ಸಾಂ, ಬಂಗಾಳ, ಉತ್ತರ ಪ್ರದೇಶ, ಬಿಹಾರ, ಕಾಶ್ಮೀರ ಮೊದಲಾದ ಪ್ರಾಂತಗಳಲ್ಲಿಯೂ ವಾಡಿಕೆಯಲ್ಲಿರುವ ಕುಣಿತಗಳನ್ನೂ ಅವುಗಳ ಸ್ವರೂಪ ವೈವಿಧ್ಯತೆಯನ್ನೂ ಜನಜೀವನದಲ್ಲಿ ಅವುಗಳ ಸ್ಥಾನವನ್ನೂ ವಿವರಿಸಿದ್ದಾರೆ. ಅವರು ಶ್ರಮವಹಿಸಿ ಅನೇಕ ಸಂಗತಿಗಳನ್ನು ಸಂಗ್ರಹಿಸಿ ಅಧಿಕಾರಯುತವಾಗಿ ವಿವರಿಸಿದ್ದರೂ ಇನ್ನೂ ಆ ದಾರಿಯಲ್ಲಿ ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆಯೆಂದೂ, ಈಗ ಆಗಿರುವ ಕೆಲಸ ಮುಂದಿನ ಕೆಲಸಕ್ಕೆ ಪೀಠಿಕೆಯಂತಿದೆಯೆಂದೂ ಅವರ ಗ್ರಂಥದಿಂದಲೇ ವ್ಯಕ್ತವಾಗುತ್ತದೆ. ಶ್ರೀ ವೆಂಕಣ್ಣನವರ ಈ ಶ್ರಮ ಮುಂದಿನ ಕಾರ್ಯಕ್ಕೆ ಗುದ್ದಲಿ ಪೂಜೆಯಾಗಲಿ, ಇತರರಿಗೆ ಪ್ರಚೋದನೆ ನೀಡಲೆಂದು ಹಾರೈಸೋಣ.

—ದೇ. ಜ. ಗೌ.

***

ಪ್ರಾಣಪಕ್ಷಿ (ಕವನ ಸಂಗ್ರಹ)—ಲೇಖಕರು: ಶ್ರೀ. ಕೋ. ಚನ್ನಬಸಪ್ಪ; ಪುಟಗಳು ಕ್ರೌನ್ ಅ. ಪ. ೭೩; ಬೆಲೆ, ರೂ. ೧-೦-೦.

ಶ್ರೀ. ಕೋ. ಚೆನ್ನಬಸಪ್ಪನವರು ಕಳೆದ ಹತ್ತು ಹದಿನೈದು ವರುಷಗಳ ಅವಧಿಯಲ್ಲಿ ತಾವು ರಚಿಸಿದ ಕವನಗಳಲ್ಲಿ ಕೆಲವನ್ನು ಆಯ್ದು ಈ 'ಪ್ರಾಣಪಕ್ಷಿ'ಯಲ್ಲಿ ಇದೀಗ ಪ್ರಕಟಿಸಿದ್ದಾರೆ. ಇಲ್ಲಿ ಒಟ್ಟು ४೫ ಕವನಗಳಿವೆ. ಈ ಎಲ್ಲ ಕವನಗಳನ್ನೂ ಮೇಲಿಂದಮೇಲೆ ಓದಿದಾಗ, ಈ ಕವಿಯ ಮನೋಧರ್ಮವೆಂತಹುದು? ಆಶೋತ್ತರಗಳು ಯಾವುವು? ಯಾವ ಸಿದ್ಧಿಗಾಗಿ ಯಾವ ಸಾಧನೆಯಲ್ಲಿ ಈ ಕವಿ ಚೇತನ ನಿರತವಾಗಿದೆ ಎಂಬ ಅಂಶಗಳನ್ನು ಕುರಿತ ವಿವರಗಳ ಅರಿವು ಸ್ಪಷ್ಟವಾಗಿ ವಾಚಕರಿಗೆ ವೇದ್ಯವಾಗುತ್ತದೆ.

ಈ ಕವಿ ರಚಿಸಿದ ಕವನಗಳು ಎಂದು ನಾನು ಹೇಳಿದೆ. ಆದರೆ ಕವಿ ತಮ್ಮ ರಚನೆಯನ್ನು ಕುರಿತು ಹೇಳಿರುವ ರೀತಿಯೇ ಬೇರೆ. 'ನನ್ನ ಸೃಷ್ಟಿಸಿದವನ ಕರ್ತೃತ್ವ ಶಕ್ತಿ ತಾಂ ಹಿಡಿದ ಲೇಖನಿಯಿಂದ ಮಸಿಯಂತೆ ಇಳಿದು ಬರೆ ಬರೆದೆನಲ್ಲದೆ ಕರ್ತೃ ನಾನೆಂತಹೆನು? . . . ಹಿಂದೆ ನಿಂತಿಹ ತಾಯಿ ಕಾವೇರಿ ನದಿಯ ನೀರ್ ಮುಂದೆ ತೋರುವ ಪ್ರತಿಮೆ ಕಾವೇರಿ ಕೈಯಿಂದ ತೀರ್ಥದೊಲು ಬೀಳ್ವಂತೆ, ನನ್ನ ಈ ಕೈಯಿಂದ ಅವನೆ ಬರೆಸಿದನಲ್ತೆ?' ಎಂದು ಈ ಕವಿ ತಮ್ಮ ಜೀವನಸೂತ್ರಧಾರಿಯಾದ

ಆ ದೇವದೇವನ, ಆ ಸೃಷ್ಟಿಕರ್ತನ ಕೃಪಾವಿಶೇಷ ಮಾತ್ರದಿಂದ ತಾವು ಕವಿಯು ಒಂದು ಪಾತ್ರವಾಗಿ ಆಡಿದುದಾಗಿಯೂ ಹಾಡಿದುದಾಗಿಯೂ ಹೇಳಿದ್ದಾರೆ. ಕವಿತಾ ಶಕ್ತಿ ನಿಜಕ್ಕೂ ದೇವದತ್ತವಾದದ್ದೇ. ಅಷ್ಟೇ ಏಕೆ? ನಮ್ಮೆಲ್ಲ ಶಕ್ತಿಗಳೂ ದೇವದತ್ತ ವಾದದ್ದೇ ತಾನೆ! ಈ ಭಾವ ಮರೆತು, ಮನುಷ್ಯನು ಅವಿವೇಕಿಯಾಗಿ, ತಾನೇ ಸರ್ವಕ್ಕೂ ಸ್ವಾಮಿ ಎಂಬ ಭಾವ ಬೆಳೆದುಬಿಡುವುದುಂಟು. ಆಗ ಅವನು ಅಹಂಕಾರ ಮಮಕಾರಗಳ ಮೊಟ್ಟೆಯಾಗುತ್ತಾನೆ. ಕವಿ ತಮ್ಮ ಅನೇಕ ಕೃತಿಗಳಲ್ಲಿ 'ನನ್ನ ಅಹಂಕಾರ ನಿರ್ಮೂಲವಾಗಲಿ' ಎಂದು ದೇವದೇವನನ್ನು ಪ್ರಾರ್ಥಿಸಿದ್ದಾರೆ. 'ಅಳಿಸಿಬಿಡು, ಕಳಿಸಿಬಿಡು ನನ್ನ ಅಹಂ ದೀಪ' 'ದುಗುಡ ದುಮ್ಮಾನಗಳ ಕೊಡತಿಯಿಂ ಕುಟ್ಟೆನ್ನ ಗರ್ವ ತುಂಬಿದ ಎದೆಯು ಹಣ್ಣಾಗುವನ್ನಂ'—ಮುಂತಾದ ಕೃತಿಗಳನ್ನು ನೋಡಬೇಕು. ಜೀವನ ಶುಚಿಯಾಗಿರಬೇಕು, ಬದುಕು ಹಸನಾಹಬೇಕು, ಮನಸ್ಸು ನಿರ್ಮಲವಾಗಬೇಕು ಎಂಬ ಸಾಧನೆಯ ಪಥವನ್ನು ಕವಿ ತಾವೂ ತುಳಿದು ಇತರರೂ ಅತ್ತ ಅಡಿಯಿಡಲು ಕರೆದಿದ್ದಾರೆ. 'ಅವನ ಮನೆ ನಿನ್ನ ಮನ' ಎಂಬ ಅಷ್ಟಷಟ್ಪದಿ ಯಲ್ಲಿ ಈ ಶುಚಿ ಸಾಧನೆಯ ಒಂದು ಮುಖ ವ್ಯಕ್ತವಾಗಿದೆ. ಪರವಸ್ತುವಿನ ಕೃಪೆ ಯಿಲ್ಲದೆ ಜೀವಕ್ಕೆ ಉಳಿಗಾಲವಿಲ್ಲವೆಂದು ಬಗೆದು ಆತನ ದಯೆಗಾಗಿ ಎದೆತೆರೆದು ಮೊರೆಯಿಡುವ ಪ್ರಾರ್ಥನಾತ್ಮಕವಾದ ನಾಲ್ಕಾರು ಸುಂದರವಾದ ಗೀತಗಳು ಇಲ್ಲಿವೆ. ಬಾ ಬಾರೊ ನನ್ನೊಡೆಯ, ಏನೆಂದು ಪ್ರಾರ್ಥಿಸಲಿ, ನಾನಿನ್ನ ಬಿಡೆನು, ಇಂದು ಸುಡುಗಾಡಾಯ್ತು ಮುಂತಾದವು ಆಧ್ಯಾತ್ಮಿಕ ಚಿತ್ತವೃತ್ತಿಯ ಭಕ್ತಿಗೀತಗಳಾಗಿ ರೂಪುಗೊಂಡಿವೆ.

ಈ ಕವಿಯು ಮನೋಧರ್ಮ ಮುಖ್ಯವಾಗಿ ಅನುಭಾವ ಪ್ರಧಾನವಾದದ್ದು ಎನ್ನುವುದು ಮೇಲೆ ಕಾಣಿಸಿದ ಒಂದೆರಡು ಮಾತುಗಳಿಂದಲೇ ಗೊತ್ತಾಗುತ್ತದೆ. ಲೋಕದ ಜಂಜಡದಲ್ಲಿ ಸಿಕ್ಕಿ ಮನಸ್ಸು ಕರಗಿ ಲೋಕದ ಕಷ್ಟದುಃಖಗಳ ನಿವಾರಣೆಗೆ ಪ್ರಯತ್ನಮಾಡದ ಆಧ್ಯಾತ್ಮಿಕ ಜೀವನ ಜನೋಪಕಾರಿಯಾಗುವುದಿಲ್ಲ. ಆತ್ಮ ಕಲ್ಯಾಣ ಲೋಕಕಲ್ಯಾಣಗಳೆರಡನ್ನೂ ಏಕ ಕಾಲದಲ್ಲಿ ಸಾಧಿಸುವುದೇ ಸಭ್ಯ ಮಾನ ವನ ಸಮನ್ವಯ ಸೂತ್ರವಾಗಬೇಕು. ಈ ವಿಷಯದಲ್ಲಿ ಕವಿಯು ಪ್ರಾಣಪಕ್ಷಿ ಹಾರಿ ವಿಹರಿಸಿದ ಸೀಮಾ ಕ್ಷೇತ್ರದ ಪರಿಚಯವೂ ಇಲ್ಲಿ ನಮಗೆ ದೊರೆಯುತ್ತದೆ. ದೇಶದ ದಾಸ್ಯ, ದಾರಿದ್ರ್ಯ ಅಜ್ಞಾನಗಳಿಗೆ ಮನಕರಗಿ ದೀನದಲಿತರ ಉದ್ಧಾರಕ್ಕಾಗಿ ಕವಿ ತಮ್ಮ ಚೇತನವನ್ನು ಮುಡಿಪುಗೈದಿದ್ದಾರೆ. 'ಕಡೆಗಾಣಲೀ ಜೀವ ದೀನರಿಗೆ ಮುಡಿ ಪಾಗಿ' ಎಂಬ ಕವಿತೆಯಲ್ಲಿ ತಮ್ಮ ಲೋಕಸೇವೆಯ ಸ್ವರೂಪವನ್ನು ವಿವರಿಸಿದ್ದಾರೆ. 'ಶ್ಮಶಾನ ಯಾತ್ರೆ', 'ಎಚ್ಚರಿಕೆ', 'ಇಕ್ಕುವಂ ನಮ್ಮೊಡಲ ಕೊಳ್ಳಿ', 'ಓ ಏಳಿ

ಎದ್ದೇಳಿ ಬನ್ನಿ ಮಾಡುವ ದಾಳಿ', 'ಸಿರಿವಂತರ ಗೋರಿಗೆ' ಮುಂತಾದ ಕೃತಿಗಳಲ್ಲಿ ಸಾಮ್ರಾಜ್ಯ ಶಾಹಿ, ಬಂಡವಾಳ ಶಾಹಿಗಳ ಹಿಡಿತದಲ್ಲಿ ಸಿಕ್ಕಿ ನರಳುವ ದೀನರ ದರಿದ್ರರ ದುಃಖಿಗಳ ಬಗ್ಗೆ ಮರುಗಿದ್ದಾರೆ. ಅವರ ಉದ್ಧಾರಕ್ಕೆ ಪ್ರಯತ್ನಗೈವ ಕೃತಿ ಶೀಲ ಯುವಜನ ಸ್ತೋಮದ ಸಾಹಸಕ್ಕೆ ವೀರ ರಣಕಹಳೆಯನ್ನು ಕವಿ ಊದಿದ್ದಾರೆ.

ಮೌನವ್ರತ, ಮುಚ್ಚದಿರು ಚೈತ್ಯಾಕ್ಷಿ, ನಮೋ ನಿನಗೆ ಭಿಕ್ಷುಕಿಯೆ, ಮುಂತಾದ ಅಷ್ಟಷಟ್ಪದಿಗಳು ಕವಿಯ ಅನುಭವ ವಿಕಾಸದ ಪಾಕಫಲವಾಗಿಯೂ ಲೋಕಜೀವನದ ಆಘಾತ ಪ್ರತ್ಯಾಘಾತಗಳ ಪರಿಣಾಮವಾಗಿಯೂ ಮೂಡಿಬಂದ ಜೀವನದ ತತ್ತ್ವವೊಂದನ್ನು ಸಾರುತ್ತದೆ. ಆ ತತ್ತ್ವ ಮನನೀಯವಾದದ್ದು. "ಮನದ ಮನೆಯ ಕಸವನ್ನು ಗುಡಿಸಿ ಕಿಟಿಕಿಬಾಗಿಲನ್ನು ತೆರೆದರೆ ಗಾಳಿ ಬೆಳಕುಗಳಿಂದ ಗೃಹವಾಸಿ ಸುಖವನ್ನು ಪಡೆಯುತ್ತಾನೆ. ಇಲ್ಲದಿದ್ದರೆ ಗುಡಿಸುವಾಗಲೇ ಮನೆಯ ಕದವನ್ನು ತೆರೆದರೆ ಗಾಳಿ ಒಳಕ್ಕೆ ನುಗ್ಗಿ ಮತ್ತಷ್ಟು ಕಸವನ್ನು ತಂದೊಟ್ಟೀತು. . . . ನೀನು ಊರ್ಧ್ವಮುಖಿಯಾಗು, ಮೊಗವೆತ್ತಿ ನೋಡು, ಕಾಣವುದು ಮಂಗಳವೇ ಮೈತಳೆದಂತೆ ಪ್ರೇಮ ಸೌಂದರ್ಯ ಸಾತ್ವಿಕತೆ ಸುರಿದುಬಿಟ್ಟಿರುವುದು. ನಿನ್ನ ಹಿರಿತನ ಬಯಸಿ ಜಗವೆಲ್ಲ ತೋಳೆತ್ತಿ ಹರಸುವಂದದಿ ಎನಿತೋ ಶ್ರೀ ಆತ್ಮಗಳು ಬೆಳಗುತ್ತಿವೆ. ಬೆಳಕಿನಲ್ಲಿ ಬೆಳಕು ಉಂಡು ಬಾಳು. ಅದಕ್ಕೆ ಬದುಕು ಎನ್ನುತ್ತಾರೆ." ಇಂತಹ ಜೀವನ ತತ್ತ್ವವನ್ನು ತನ್ನದನ್ನಾಗಿ ಮಾಡಿಕೊಂಡು ನಾಡಿಗೆ ನೀಡಿದ ಕವಿ ನಿಜವಾಗಿಯೂ ಧನ್ಯ.

ಈ ಕೃತಿಗೆ ಶ್ರೀ. ದೇ. ಜವರೇಗೌಡರು ಉತ್ತಮವಾದ 'ಹಿತವಚನ'ವನ್ನು ಪತ್ರಲೇಖನದ ರೀತಿಯಲ್ಲಿ ಬರೆದುಕೊಟ್ಟಿದ್ದಾರೆ. ಕವಿಯ 'ಪ್ರಾಣಪಕ್ಷಿ'ಗೆ ಹಾರ್ದಿಕವಾದ ಸ್ವಾಗತ ಬಯಸಿದ್ದಾರೆ. ತಮಗೆ ಮೆಚ್ಚಿಕೆಯಾದ ಗೀತಗಳನ್ನು ಸ್ಪಷ್ಟವಾಗಿ ಹೊಗಳಿದ್ದಾರೆ. ಸಾರಸ್ವತ ಪ್ರಪಂಚದಲ್ಲಿ ಒಬ್ಬರನ್ನೊಬ್ಬರು ಬೆಳಸಿ ಬೆಳೆದು ಬಾಳಬೇಕು. ಕಲ್ಯಾಣದಲ್ಲಿ ಹಿಂದೆ ಕಟ್ಟಿದ ಅನುಭವ ಮಂಟಪದ ಸೌಹಾರ್ದಗೋಷ್ಠಿ ವಿಶಾಲವಾದ ಅರ್ಥದಲ್ಲಿ ಜೀವನದ ಎಲ್ಲ ಕ್ಷೇತ್ರದಲ್ಲೂ ಮತ್ತೆ ತಲೆಯೆತ್ತಬೇಕು. ಶ್ರೀ. ದೇ. ಜವರೆಗೌಡರು ಹಿತವಚನವನ್ನು ತಮ್ಮ ಗೆಳೆಯನ ಕೃತಿಯ ಬಗ್ಗೆ ನುಡಿದು ಸ್ನೇಹಹಸ್ತದಿಂದ ಗೆಳೆಯರ ಈ ಚೊಚ್ಚಲ ಕೃತಿಯನ್ನು ಹಿಡಿದು ಹಿರಿಯವರಿಗೆ ಅದರ ಪರಿಚಯ ಮಾಡಿಕೊಟ್ಟಿರುವುದು ಆದರ್ಶಪ್ರಾಯವಾಗಿದೆ.

ಈ ಕೃತಿಯಲ್ಲಿ ಭಾವನಾಂಶ, ಚಿಂತನಾಂಶಗಳ ಜೊತೆಜೊತೆಯಾಗಿ ರೂಪಾಂಶವೂ ಸೇರಿಕೊಂಡಿದ್ದಿದ್ದರೆ. ಹೆಚ್ಚಿನ ರೀತಿಯಲ್ಲಿ ಸಹೃದಯ ಹೃದಯಾಹ್ಲಾದಕಾರಿಯಾಗಿ ಈ ಕೃತಿ ಪರಿಣಮಿಸುತ್ತಿತ್ತು ಎನ್ನುವ ಶ್ರೀ. ಕುವೆಂಪು ಅವರ ಆಶಯ ನನ್ನ ಗೆಳೆಯರ ಮುಂದಿನ ಕೃತಿಗಳಲ್ಲಿ ಸಫಲಗೊಳ್ಳಲಿ ಎಂದು ಆಶಿಸುತ್ತೇನೆ.

—ವಿದ್ಯಾರಣ್ಯ.

ವಸ್ತುಕೋಶ

ಸಂಸ್ಕೃತಿ ಮತ್ತು ಅದರ ಪ್ರಚಾರ

೧೩-೬-೫೪ ನೆಯ ದಿನ ಮೈಸೂರಿನ ಪುರಭವನದಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯದ ಅಂಗವಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಭವನದ ಒಳಗೂ ಹೊರಗೂ ಜನರು ಕಿಕ್ಕಿರಿದಿದ್ದರು. ಮೈಸೂರು ಜಿಲ್ಲಾಧಿಕಾರಿಗಳು ಅತಿಥಿಗಳಿಗೂ ಸಭಾಸದರಿಗೂ ಸ್ವಾಗತ ಬಯಸಿದರು. ಪ್ರಾರ್ಥನೆ ಭಾರತಪಠನಗಳಾದ ಮೇಲೆ ಶ್ರೀ. ಕುವೆಂಪು ಅವರೂ ಶ್ರೀ. ಎಂ. ಯಾಮುನಾಚಾರ್ಯರೂ ಭಾಷಣ ಮಾಡಿದರು. ಆ ಭಾಷಣಗಳ ಸಾರಾಂಶವನ್ನಿಲ್ಲಿ ಕೊಟ್ಟಿದೆ.

ಶ್ರೀ. ಕುವೆಂಪು ಅವರ ಭಾಷಣ—ಶ್ರೀ ರಾಮಾಯಣದಲ್ಲಿ ಮಹತ್ತರವೂ ಹೃದಯಸ್ಪಂದಿಯೂ ಆದ ಸನ್ನಿವೇಶವೊಂದು ಒರುತ್ತದೆ. ವನವಾಸಕ್ಕೆ ಹೋಗಿದ್ದ ಶ್ರೀರಾಮಚಂದ್ರನನ್ನು ಹಿಂದಿರುಗಿಸುವ ಪ್ರಯತ್ನದಲ್ಲಿ ಭರತ ವಿಫಲನಾಗಿ, ಶ್ರೀರಾಮ ಪಾದುಕೆಗಳನ್ನು ಶಿರದಲ್ಲಿ ಧರಿಸಿ ಅಯೋಧ್ಯೆಗೆ ಮರಳುತ್ತಾನೆ. ಅಯೋಧ್ಯಾನಗರ ಭೌತಿಕವಾಗಿ ಭೌಗೋಲಿಕವಾಗಿ ಹಿಂದೆ ಇದ್ದಂತೆಯೆ ಇತ್ತು. ಅದೇ ಸೌಧಗಳು, ಅದೇ ಅರಮನೆ, ಅದೇ ಉದ್ಯಾನ, ಅದೇ ಆನೆ ಕುದುರೆಗಳು, ಅದೇ ವೈಭವ, ಅದೇ ಶ್ರೀಮಂತಿಕೆ. ಆದರೆ ಅಷ್ಟೆಲ್ಲ ವೈಭವಕ್ಕೆ ಶೋಭಾಯಮಾನವಾಗಿದ್ದ ಆತ್ಮಪ್ರಾಯವಾಗಿದ್ದ ಸಂಸ್ಕೃತಿ ಇಲ್ಲವಾಗಿತ್ತು. ಶ್ರೀರಾಮಚಂದ್ರನಿಲ್ಲದ ಅಯೋಧ್ಯೆ ಸಹೃದಯರ ಸಜ್ಜನರ ಪ್ರವೇಶಕ್ಕೆ ಯೋಗ್ಯವಲ್ಲವೆಂದು ಭಾವಿಸಿದ ಭರತ ನಂದಿಗ್ರಾಮದಲ್ಲಿ ಪರ್ಣಕುಟಿಯನ್ನು ರಚಿಸಿ ತಪೋನಿರತನಾದನು :

ಹಾ ! ಭಾಗ್ಯಹೀನ ದೀನ ಅಯೋಧ್ಯೆ,
ನಿನಗುಂ ಅರಣ್ಯಗತಿಯಾಯ್ತುಲಾ ರಾಮನಾ
ವನವಾಸದಿಂ, ದಶರಥನ ನಿಧನದಿಂ ಮೇಣ್
ಭರತನಾ ಪರಿತ್ಯಾಗದಿಂ ! ಶ್ರೇಷ್ಠರಿಲ್ಲದಿರೆ,
ಏನಿರ್ದರೇನಂತೆ, ಮಸಣಮಾ ಪತ್ತನಂ
ತತ್ತ್ವವಿದ್ಯಾಕಲಾ ಸಂಗೀತ ಸಾಹಿತ್ಯ
ಸಕಲ ಸಂಸ್ಕೃತಿಗೆ. ಬಿತ್ತರದ ಬೀದಿಗಳೆರಡು
ಕೆಲದಿ ಮುಗಿಲಂ ಮುಟ್ಟಿ ಮೆರೆದೊಡೇಂ ಸ್ಪರ್ಧೆಯಾ

ಪ್ರಾಸಾದ ಪಂಕ್ತಿ ? ರಂಜಿಸಿದೊಡೇಂ ರಜನಿಯಂ
ಪಗಲುಗೈದಾಗಸದ ಚುಕ್ಕಿಗಳನೇಳಿಸುತೆ
ಕಿಕ್ಕಿರಿದು ಕಣ್ಬೆರಗುಗೊಳಿಸಿ ಗೊಂಚಲ್ಗೊಂಡು
ಉರಿವ ವಿದ್ಯುದ್ದೀಪರಾಜಿ ? ಬಣ್ಣದ ಬುಗ್ಗೆ
ಕಣ್ಗೆ ಕಾಮನ ಬಿಲ್ಗಳಂಗನೆಯರಾಟವೆನೆ
ಸಾಲ್ಗೊಂಡು ವಿವಿಧಗತಿಯಾ ಕಲಾಕೃತಿಯಿಂದೆ
ರಂಗುರಂಗಿನ ತೋಂಟರಂಗದಿ ಮನಂಗೊಳಿಸಿ
ಕುಣಿದೊಡೇಂ ? ಪ್ರಾಸಛಂದಃಪೂರ್ಣಮಪ್ಪುದೇಂ
ಪುರುಷಾರ್ಥ ಶಾಶ್ವತದ ರಾಸಲೀಲಾ ಬೃಂದೆ ?
ಜನಮನೋಮಂದಿರದ ಸುಸ್ವಪ್ನಗೋಪುರದ
ಕಲಶಂ ನಭಶ್ಚುಂಬಿಯಾಗದಿರೆ, ಋಷಿಹೃದಯ
ಮಂಗಳಾರತಿ ಬಾಳಿನಂಧತೆಯನಳಿಸದಿರೆ,
ಕವಿಕೃತಿಯ ವರ್ಣಗಾನಂ ಮಹನ್ ನಿತ್ಯತಾ
ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ
ನವರಸಾಪ್ಸರಿಯರಂ ನರ್ತನಂಗೈಸದಿರೆ, ಪೇಳ್,
ಏನಿರ್ದುಮೇನ್ ಅನಾಗರಿಕತಾ ಶ್ರೀ, ದಿಟಂ
ಮಸಣಮಾ ಪತ್ತನಮಯೋಧ್ಯೆ ತಾನಾದೊಡಂ !

'ಸಂಸಾರದ ವಿಷವೃಕ್ಷದಿ ಹಣ್ಣೆರಡಿವೆ ಅಮೃತೋಪ: ಕಾವ್ಯಾಮೃತದಾಸ್ವಾದನ ಮೇಣ್ ಸಜ್ಜನಸಲ್ಲಾಪ!' ಎಂಬ ಪ್ರಸಿದ್ಧವಾದ ಸುಭಾಷಿತದಲ್ಲಿ ಸಂಸ್ಕೃತಿಯ ಲಕ್ಷಣ ಅಡಗಿದೆ. ಸಂಸಾರದಲ್ಲಿ ದುಃಖ ದಾರಿದ್ರ್ಯ ದೌರ್ಜನ್ಯಗಳು ತುಂಬಿದ್ದರೂ ಕಾವ್ಯಾಮೃತದ ಆಸ್ವಾದನೆಯಿಂದ ಮತ್ತು ಸಜ್ಜನಸಲ್ಲಾಪದಿಂದ ಅದು ಭೋಗಯೋಗ್ಯವಾಗುತ್ತದೆ. ಸಂಸ್ಕೃತಿ ಮುಖ್ಯವಾಗಿ ಅಂತರಂಗ ವ್ಯಾಪಾರಗಳಿಗೆ ಸಂಬಂಧಿಸಿದುದು, ನಾಗರಿಕತೆ ಬಹಿರಂಗ ವ್ಯವಹಾರಗಳಿಗೆ ಸಂಬಂಧಿಸಿದುದು. ಉಡುಗೆತೊಡುಗೆಯಲ್ಲಿ, ಸೌಧನಿರ್ಮಾಣದಲ್ಲಿ, ಊಟ ತಿಂಡಿಗಳಲ್ಲಿ ಕಾಣುವ ನಯ ನಾಗರಿಕತೆಗೆ ಸಂಬಂಧಿಸಿದುದು, ಅಂತರಂಗ ವಿನಯ ಸಂಸ್ಕೃತಿಗೆ ಸಂಬಂಧಿಸಿದುದು. ಆದರೆ ಇವೆರಡೂ ಪರಸ್ಪರ ವಿರೋಧಿಗಳೆಂದು ಭಾವಿಸಬಾರದು ; ಎರಡೂ ಪರಸ್ಪರಾವಲಂಬಿಗಳು. ಒಂದರ ಪ್ರಭಾವ ಮತ್ತೊಂದರ ಮೇಲೆ ಇದ್ದೇ ಇರುತ್ತದೆ. ಎರಡೂ ಸಮಪ್ರಮಾಣದಲ್ಲಿ ಸಮರಸವಾಗಿ ಬೆರೆತಾಗ ಉತ್ತಮ ಸಂಸ್ಕೃತಿ ಸಿದ್ಧಿಸುತ್ತದೆ. ಭರತ ಹಿಂದಿರುಗಿದಾಗ ಅಯೋಧ್ಯೆಯಲ್ಲಿ ನಾಗರಿಕತೆ ಇತ್ತು ; ಸಂಸ್ಕೃತಿ ಹೋಗಿತ್ತು ಎನ್ನುವ ಮಾತಿನ ಅರ್ಥ ಈಗ ಸ್ಪಷ್ಟವಾಗದಿರಲಾರದು.

ಒಂದೊಂದು ಆತ್ಮವೂ ಸ್ವರೂಪತಃ ಸಚ್ಚಿದಾನಂದಾತ್ಮಕವಾದುದು, ಅದನ್ನು

ಸಂಪೂರ್ಣ ಅಭಿವ್ಯಕ್ತಿಗೊಳಿಸುವ ಪ್ರಯತ್ನವೇ ವಿದ್ಯೆಯೆಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಹೀಗೆಯೆ ಪ್ರತಿಯೊಬ್ಬನಲ್ಲಿಯೂ ಅಂತರ್ನಿಹಿತವಾಗಿರುವ ಪರಿಪೂರ್ಣತೆಯ ಪೂರ್ಣವಿಕಾಸಕ್ಕೆ ದೊರೆಯುವ ಅವಕಾಶವೇ ಸಂಸ್ಕೃತಿಯೆಂದು ಕರೆಯಬಹುದು. ಇದನ್ನೇ ಕಾರ್ಲೈಲ್ ಮಹಾಶಯನು 'The great law of culture is, let each become all that he was created capable of being ; expand, if possible, to his full growth " ಎಂದು ಹೇಳಿದ್ದಾನೆ. ಆದರೆ ಸಂಸ್ಕೃತಿಯ ಲಕ್ಷಣವನ್ನು ಸೂತ್ರಬದ್ಧಮಾಡುವ ಪ್ರಯತ್ನ ವಿಫಲವೆನ್ನುವುದನ್ನು ಮರೆಯಬಾರದು. ರಾಮಾಯಣ ಮಹಾಭಾರತಗಳೇ ಮೊದಲಾದ ಮಹಾಕೃತಿಗಳಲ್ಲಿ ಬರುವ ಶ್ರೀರಾಮ ಶ್ರೀಕೃಷ್ಣರಂಥ ಮಹಾಪುರುಷರಲ್ಲಿ, ಭಗವದ್ಗೀತೆ ಹೇಳುವ ಸ್ಥಿತಪ್ರಜ್ಞ, ಭಕ್ತ, ಕರ್ಮಯೋಗಿಗಳಲ್ಲಿ ಸಂಸ್ಕೃತಿಗೆ ವಿಪುಲನಿದರ್ಶನಗಳು ದೊರೆಯುತ್ತವೆ.

ಮನುಷ್ಯನಲ್ಲಿ ಐದು ಕೋಶಗಳಿವೆಯೆಂದು ತಿಳಿದವರು ಹೇಳುತ್ತಾರೆ. ಅವುಗಳಲ್ಲಿ ಅನ್ನಮಯಕೋಶ ಮೊದಲನೆಯದು ಮತ್ತು ಸ್ಥೂಲದೃಷ್ಟಿಗೆ ಸಿಲುಕುವಂಥದು. ಅದು ಮೊದಲನೆಯದಾದರೂ ಅದೇ ಅಂತಿಮ ಗುರಿಯಲ್ಲ. ಪ್ರಾಣಮಯ ಮನೋಮಯ ಕೋಶಗಳ ಮೂಲಕ ವಿಜ್ಞಾನಮಯ ಆನಂದಮಯ ಕೋಶಗಳನ್ನು ಸಾಧಿಸುವುದೇ ಮಾನವನ ಪರಮಗಂತವ್ಯ. ಅನ್ನಮಯ ಭೂಮಿಕೆಯಲ್ಲಿಯೆ ತೊಳಲುತ್ತಿರುವ ಮಾನವಸಹೋದರರಿಗೆ ಪ್ರಾಣಶಕ್ತಿ ಮನಶ್ಶಕ್ತಿಗಳನ್ನು ಹಂಚಬೇಕು. ಅನ್ನಮಯ ಕೋಶಕ್ಕೆ ಅನ್ನ ಹೇಗೆ ಆವಶ್ಯಕವೋ ಉಳಿದ ಕೋಶಗಳ ವಿಕಾಸಕ್ಕೆ ಬೇರೆ ವಿಧವಾದ ಆಹಾರ ಅತ್ಯಾವಶ್ಯಕ. ಆದರೆ ಅನ್ನಮಯ ಕೋಶದ ಶ್ರೀಮಂತಿಕೆಯ ಹಂಚಿಕೆಯಲ್ಲಿ ಜನರಿಗೆ ಆಸಕ್ತಿ ಇರುವಂತೆ, ಕುತೂಹಲ ಇರುವಂತೆ ಬೇರೆ ಬೇರೆ ಕೋಶಗಳಿಗೆ ಸಂಬಂಧಿಸಿದ ಶ್ರೀಮಂತಿಕೆಯ ಹಂಚಿಕೆಯಲ್ಲಿ ಆಸಕ್ತಿ ಕುತೂಹಲಗಳು ಕಂಡುಬರುವುದಿಲ್ಲ. ಬಜೆಟ್ ಅಧಿವೇಶನಗಳಲ್ಲಿ ನಡೆಯುವ ವಾದವಿವಾದಗಳಿಂದ ಖಂಡನೆಮಂಡನೆಗಳಿಂದ ಈ ಅಂಶ ವ್ಯಕ್ತಗೊಳ್ಳುತ್ತದೆ. ಪ್ರಾಣಮಯ ಮನೋಮಯ ಕೋಶಗಳಿಗೆ ಸಂಬಂಧಿಸಿದ ಆಹಾರಶಕ್ತಿ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಯಥೇಷ್ಟವಾಗಿ ಸಿಕ್ಕುತ್ತದೆ. ದುರ್ಬಲದೇಹಿಗಳಿಗೆ ಇಂಜಕ್ಷನ್ ಮೂಲಕ ಪುಷ್ಟಿಯನ್ನೊದಗಿಸುವಂತೆ ಆ ಪ್ರಾಚೀನ ನಿಧಿಗಳಿಂದ ಮಾನಸಿಕಾನ್ನರೂಪದ ಆಹಾರವನ್ನು ಪಡೆದು ಜನರಿಗೆ ಹಂಚಬೇಕು. ಒಮ್ಮೆ ಕಾವ್ಯಗಳನ್ನು ಓದಿಸಿ ಕೇಳಿದ ಮನುಷ್ಯ ಭೌತಿಕವಾಗಿ ಹಿಂದಿನಂತೆಯೆ ಇದ್ದರೂ ಮಾನಸಿಕವಾಗಿ ಆಧ್ಯಾತ್ಮಿಕವಾಗಿ ಅವನ ಚೇತನ ತುಂಬ ವಿಕಾಸಗೊಂಡಿರುತ್ತದೆ. ಆ ವಿಕಾಸ ನಮ್ಮ ಹೊರಗಣ್ಣಿಗೆ ಸುಲಭವಾಗಿ ಕಾಣುವಂಥದಲ್ಲ.

ಈಗ ಜನರಿಗೆ ಅನ್ನಮಯ ಸ್ವಾತಂತ್ರ್ಯ ಲಭಿಸಿದೆ. ಇಷ್ಟರಿಂದಲೆ ಪ್ರಾಣಮಯ ಮನೋಮಯ ಸ್ವಾತಂತ್ರ್ಯಗಳು ಲಭಿಸಿದಂತಾಗಲಿಲ್ಲ. ಅವುಗಳನ್ನು ಪಡೆಯಲು ಅವನೇ ಪ್ರಯತ್ನಿಸಬೇಕು. ಪ್ರಜಾಸರ್ಕಾರ ಯಶಸ್ವಿಯಾಗಿ ಸಾಗಲು ಈ ಸ್ವಾತಂತ್ರ್ಯ ಅವಶ್ಯಕ. ಮೊದಲು ಅನ್ನ ಸಿಕ್ಕಲಿ, ಅನಂತರ ಉಳಿದುದನ್ನು ಪಡೆಯೋಣ ಎಂದು ಕೆಲವರು ಹೇಳುವುದುಂಟು. ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೇಕೆ ಮಲ್ಲಿಗೆ ಹೂ ಎನ್ನುವವರೂ ಉಂಟು. ಅನ್ನ ಸಂಪಾದನೆಯ ಜೊತೆ ಜೊತೆಗೇ ಮಾನಸಾನ್ನ ಸಂಪಾದನೆಯ ಕಾರ್ಯವೂ ಸಾಗಬೇಕು. ಹೊಟ್ಟೆತುಂಬುವ ತನಕ ಕಾಯುವುದು ಅಪಾಯಕರ. ಈ ಗಳಿಗೆಯಲ್ಲಿ ಹೊಟ್ಟೆತುಂಬಿದರೆ ಮರುಗಳಿಗೆಯಲ್ಲಿಯೆ ಹಸಿವುಂಟಾಗುತ್ತದೆ. ತುಪ್ಪ ಹೊಯ್ದಷ್ಟು ಬೆಂಕಿ ಪ್ರಜ್ವಲಿಸುವಂತೆ ತುಂಬಿದಷ್ಟೂ ಹಸಿವು ಅಧಿಕವಾಗುತ್ತದೆ. ಹಡಗು ತುಂಬಿಕೊಂಡು ಬರಲು ಹೋದವನು ಒಡನೆಯೆ ಹಿಂದಿರುಗಿದನಂತೆ; ಹೊಟ್ಟೆ ತುಂಬಿಕೊಂಡು ಬರಲು ಹೋದವನು ಬರಲೇ ಇಲ್ಲವಂತೆ. ಹೊಟ್ಟೆಗೆ ಕೂಳಿಲ್ಲದವರ ಮಾತು ಹಾಗಿರಲಿ. ಹೊಟ್ಟೆತುಂಬಿದ ಅಥವಾ ಅರೆಹೊಟ್ಟೆತುಂಬಿದ ಮಂದಿಗಾದರೂ ಮಾನಸಾನ್ನವನ್ನು ಒದಗಿಸಬಾರದೆ? ಆದುದರಿಂದ ಅನ್ನಸಂಪಾದನೆಯ ಜೊತೆ ಜೊತೆಗೇ ಮಾನಸಾನ್ನ ಸಂಪಾದನೆಯ ಜರೂರು ಆವಶ್ಯಕತೆಯನ್ನು ಮನಗಂಡಂತಾಯಿತು.

ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯ ಮಾತೂ ಆವಶ್ಯಕವೆಂದು ತೋರುತ್ತದೆ. ಅನ್ನಮಯ ಕ್ಷೇತ್ರದಲ್ಲಿರುವಂತೆ ಪ್ರಾಣಮಯ ಮನೋಮಯ ಕ್ಷೇತ್ರಗಳಲ್ಲಿಯೂ ಕಳ್ಳಕಾಕರ, ಸೂರೆಗಾರರ, ಕಾಳಸಂತೆಕೋರರ ಹಾವಳಿ ತಪ್ಪಿದ್ದಲ್ಲ. ನಮ್ಮ ಸಾಹಿತ್ಯ ಸಾಮಾನ್ಯವಾಗಿ ಮತಪ್ರಧಾನವಾದುದು. ತಂತಮ್ಮ ಮತಪ್ರಸಾರಕ್ಕೆ ಕವಿಗಳು ಸಾಹಿತ್ಯವನ್ನು ವಾಹಕವನ್ನಾಗಿ ಮಾಡಿಕೊಂಡರು. ಅವರೆಲ್ಲರೂ ಪುರುಷೋತ್ತಮರಲ್ಲ. ತಮ್ಮ ಸುತ್ತಮುತ್ತಣ ಸೃಷ್ಟಿ ಸಾಹಿತ್ಯದಲ್ಲಿ ಹೇಗೆ ಗರ್ಭೀಕೃತವಾಗಿದೆಯೋ ಅವರ ಅಜ್ಞತೆ ಅಲ್ಪತೆ ಅಂಧಕಾರಗಳೂ ಅವರ ಕೃತಿಗಳಲ್ಲಿ ಹಾಗೆ ಹುದುಗಿಕೊಂಡಿರುತ್ತದೆ. ಅವರ ಕೃತಿಗಳಲ್ಲಿ ಸ್ವಮತಭ್ರಾಂತಿಯೂ ಪರಮತನಿಂದೆಯೂ ಎದ್ದುಕಾಣುತ್ತದೆ. ವರ್ಗ, ವರ್ಣ, ಜಾತಿ ಇತ್ಯಾದಿಗಳಿಂದ ಅವು ಕಲುಷಿತವಾಗಿವೆ. ಸಾವಿರ ವರ್ಷಗಳ ಹಿಂದೆ ಅಂಥ ಭಾವನೆಗಳು ಸಮಾಜದ ಅಥವಾ ಸಮಾಜಭಾಗದ ಗೌರವಕ್ಕೆ ಭಾಜನವಾಗಿದ್ದಿರಬಹುದು. ಈ ಯುಗದ ದೃಷ್ಟಿಗೆ ಅವು ವಿದೇಶೀಯವಾಗಿ ಕಾಣುತ್ತವೆಂದು ಬೇರೆ ಹೇಳಬೇಕಾಗಿಲ್ಲ. ಉತ್ತಮ ಸಾಹಿತ್ಯ ಪ್ರಧಾನವಾಗಿ ರಸರೂಪಿ. ಅದು ಮೊದಲು ಹೃದಯವನ್ನು ಪ್ರವೇಶಿಸುತ್ತದೆ; ಆ ಮೇಲೆ ಮಾತ್ರ ವಿಚಾರ ಕ್ಷೇತ್ರಾಭಿಮುಖವಾಗುತ್ತದೆ. ಮೊದಲು ಹೃದಯವನ್ನು ಪ್ರವೇಶಿಸುವುದರಿಂದಲೇ ಮೌಢ್ಯ ಭಾವನೆಗಳ ಪ್ರಸಾರದ ಅಪಾಯ ಹೆಚ್ಚೆಂಬುದನ್ನು ಗಮನಿಸಬೇಕಾಗಿದೆ.

ನಿದರ್ಶನಾರ್ಥವಾಗಿ ಗೀತೆಯಲ್ಲಿ ಬರುವ 'ಸ್ವಧರ್ಮೇ ನಿಧನಂ ಶ್ರೇಯಃ,' 'ಚಾತುರ್‌ವರ್ಣ್ಯಂ ಮಯಾ ಸೃಷ್ಟಂ' ಎಂಬೆರಡು ಶ್ಲೋಕಖಂಡಗಳನ್ನು ಪರಿಶೀಲಿಸ ಬಹುದು. ಇಲ್ಲಿ 'ಸ್ವಧರ್ಮ'ವೆಂದರೆ ಕೇವಲ ಹುಟ್ಟೇ ಕಾರಣವಾಗಿ ಲಬ್ಧವಾಗುವ ವಂಶಪರಂಪರೆಯ ಕಸಬಲ್ಲ. ಜನ್ಮಜನ್ಮಾಂತರಗಳ ಸಂಸ್ಕಾರದ ಪರಿಣಾಮವಾಗಿ ವಿಕಾಸಗೊಂಡಿರುವ ಸ್ವಭಾವವೇ ಸ್ವಧರ್ಮ. ಈ ದೃಷ್ಟಿಯಿಂದ ಕುಂಬಾರನ ಮಗ ಜಗದ್ವಿಖ್ಯಾತ ಶಿಲ್ಪಿಯಾಗಬಹುದು, ಚಮ್ಮಾರನ ಮಗ ರಾಷ್ಟ್ರನಿರ್ಮಾಪಕನಾಗ ಬಹುದು. ಚಿತ್ರಕಲೆಯಲ್ಲಿ ಅಭಿರುಚಿ ಮತ್ತು ಕುಶಲತೆಗಳನ್ನುಳ್ಳವರು ಶ್ರೀ ವಿಶ್ವೇಶ್ವರಯ್ಯ ನವರಂತೆ ಸೇತುವೆ ನಿರ್ಮಾಣಕ್ಕೆ ಕೈಹಾಕುವುದೂ, ನರಪೇತಲಮಂದಿ ಯೋಧ ರಾಗಲು ಬಯಸುವುದೂ ಅಪಾಯಕರವಲ್ಲವೆ? 'ಸ್ವಧರ್ಮ' ಎಂಬುದು ವಾಸ್ತವ ವಾಗಿ ದೈವದತ್ತವಾದ ಆತ್ಮಶಕ್ತಿಗೆ ಸಂಬಂಧಿಸಿದುದು. ಅದನ್ನು ನಿರ್ಣಯಿಸುವುದು ಹುಟ್ಟಲ್ಲ, ಬೆಳೆವಣಿಗೆಯೆಂಬುದನ್ನು ಮರೆಯಬಾರದು. ಹೀಗೆಯೇ 'ನಾಲ್ಕು ವರ್ಣ ಗಳನ್ನು ನಾನು ಸೃಷ್ಟಿಸಿದ್ದೇನೆಂ'ದು ಶ್ರೀ ಕೃಷ್ಣ ಹೇಳಿದ್ದಾನೆ. ಈ ಸೃಷ್ಟಿ ಕೇವಲ ಭರತಖಂಡಕ್ಕೆ ಅನ್ವಯವಾಗುತಕ್ಕದ್ದಲ್ಲ; ಇಡೀ ಮಾನವಕೋಟಿಗೆ ಅನ್ವಯವಾಗ ತಕ್ಕದ್ದೆಂದು ತಿಳಿಯಬೇಕು. ಆಯಾಯ ಜನರ ಗುಣಕರ್ಮಗಳಿಗನುಗುಣವಾಗಿ ವರ್ಣ ಗಳು ಏರ್ಪಡುತ್ತವೆಯೆಂದೂ ಕೇವಲ ಜನ್ಮಾಧಾರದಿಂದ ಅವುಗಳನ್ನು ನಿರ್ಣಯಿಸು ವುದು ತಪ್ಪೆಂದೂ ಆ ಶ್ಲೋಕಕ್ಕೆ ವ್ಯಾಖ್ಯಾನ ಮಾಡಬೇಕಾಗುತ್ತದೆ. ಜಾತಿಗಳು ಮಾನವ ಕಲ್ಪಿತವೇ ಹೊರತು ಭಗವತ್ಸೃಷ್ಟಿಯಲ್ಲ. ಅವು ಭಗವತ್ಸೃಷ್ಟಿಯೆಂದು ಭಾವಿಸುವುದೂ, 'ಚಾತುರ್ ವರ್ಣ್ಯಂ ಮಯಾಸೃಷ್ಟಂ' ಎಂಬುದು ಭರತಖಂಡಕ್ಕೆ ಮಾತ್ರ ಅನ್ವಯವಾಗುತ್ತದೆನ್ನುವುದೂ ನಾಸ್ತಿಕವಾದವಾಗುತ್ತದೆ.

ಈ ಸಂದರ್ಭದಲ್ಲಿ 'ಹರಿಶ್ಚಂದ್ರ ಕಾವ್ಯ'ದ ಹರಿಶ್ಚಂದ್ರ—ಗಾಣರಾಣಿಯರ ಪ್ರಕರಣವೂ 'ರಾಮಾಯಣ'ದ ರಾಮ-ಶೂರ್ಪನಖಿಯರ ಪ್ರಕರಣವೂ ನೆನಪಿಗೆ ಬರುತ್ತವೆ. ಗಾಣರಾಣಿಯರು ಮದುವೆಯಾಗುವಂತೆ ತನ್ನನ್ನು ಪೀಡಿಸಿದಾಗ, ಹರಿಶ್ಚಂದ್ರ ಅವರನ್ನು ತ್ಯಜಿಸಿದುದು ಹೊಲತಿಯರೆಂಬ ಕಾರಣದಿಂದಲೇ ಹೊರತು ತಾನು ಏಕಪತ್ನೀವ್ರತನಾಗಿರಬೇಕೆಂಬ ಪ್ರಚೋದನೆಯಿಂದಲ್ಲ. ಅಂಥದೇ ಸಂದರ್ಭ ದಲ್ಲಿ ರಾಮ ಶೂರ್ಪನಖಿಯನ್ನು ತಿರಸ್ಕರಿಸಿದುದು ತಾನು ಕಾಯಾ ವಾಚಾ ಮನಸಾ ಏಕಪತ್ನೀವ್ರತಸ್ಥನಾದುದರಿಂದ. ಹೊಲತಿಯರಲ್ಲದೆ ಬೇರಾರಾದರೂ ಆಗಿದ್ದರೆ ಹರಿಶ್ಚಂದ್ರ ಮದುವೆಯಾಗಲು ಹಿಂಜರಿಯುತ್ತಿರಲಿಲ್ಲವೆಂದು ಕಾಣುತ್ತದೆ. ಎಂಥ ಸುರಕನ್ಯೆಯಾದರೂ ಎಂಥ ಕಠಿಣಪ್ರಸಂಗವೊದಗಿದರೂ ರಾಮ ಸೀತಾಪತಿ ಯಾಗಿಯೇ ಉಳಿದಾನು! ಅಷ್ಟಮದಗಳಲ್ಲೊಂದಾದ ಜಾತಿಮದವೂ ಹರಿಶ್ಚಂದ್ರ

ನಲ್ಲಿ ನೆಲೆಗೊಂಡಿದ್ದುದರಿಂದ, ಆ ಅಹಂಕಾರದಿಂದ ಬಿಡುತೆಗೊಳ್ಳುವತನಕ ಅವನಿಗೆ ಈಶ್ವರಸಾಕ್ಷಾತ್ಕಾರವಾಗದು. ಕೊನೆಗೆ ಅನಾಮಿಕನಿಗೆ ಆಳಾಗಿ ಅವನ ಕಾಲ ನ್ನೊತ್ತಿದಾಗ ಹರಿಶ್ಚಂದ್ರನ ಅಹಂಕಾರ ಅಳಿಯುತ್ತದೆ. ಐಶ್ವರ್ಯಮದ, ಕುಲಮದ, ಸತೀಸುತಮೋಹಗಳು ಸಂಪೂರ್ಣವಾಗಿ ವಿನಾಶಗೊಂಡಾಗ ಮಾತ್ರವೇ ಅಹಂಕಾ ರಕ್ಕೆ ಭಗವದರ್ಪಣೆಯ ಕೊಡಲಿಪೆಟ್ಟು ಬಿದ್ದಾಗಲೇ ಅವನಿಗೆ ವಿಶ್ವನಾಥ ಸಾಕ್ಷಾ ತ್ಕಾರ ಲಭಿಸುತ್ತದೆ. 'ಹರಿಶ್ಚಂದ್ರ ಕಾವ್ಯ'ವನ್ನು ಬರಿಯ ಚರಿತ್ರೆಯೆಂದು ಪರಿಗಣಿಸದೆ ನಿತ್ಯಸತ್ಯವನ್ನು ಪ್ರತಿಮಿಸುವ ನಿತ್ಯಕಥೆಯೆಂಬ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಲ್ಲಿ ಬರುವ ಪ್ರಸಂಗಗಳನ್ನು ಪ್ರತಿಮಾವಿಧಾನದಿಂದ ವಿವರಿಸಿದರೆ ಆ ಕಾವ್ಯ ಮತ್ತಷ್ಟು ಮಹೋನ್ನತವಾಗಿ ಕಾಣುವುದಲ್ಲದೆ, ಅದಕ್ಕೆ ಸೂಕ್ತ ಗೌರವವನ್ನು ಸಲ್ಲಿಸಿದಂತಾಗುತ್ತದೆ. ವಾಸ್ತವ ದೃಷ್ಟಿಗೆ ಕೇವಲ ಕ್ಷುದ್ರವಾಗಿ ಕಾಣುವ ಚಂದ್ರ ಮತಿಯ ಶಿರಶ್ಛೇದನ ಪ್ರಕರಣ ಮೋಹಚ್ಛೇದನಕ್ಕೆ ಅಹಂಕಾರ ವಿಸರ್ಜನೆಗೆ ಪ್ರತಿಮೆ ಯೆಂದು ಧ್ವನಿಪೂರ್ವಕವಾಗಿ ಗ್ರಹಿಸಿದರೆ ಅದೆಷ್ಟು ಮನೋಹರವಾಗಿ ಕಾಣುತ್ತದೆ! ನಮ್ಮ ಮೋಹದ ಮತ್ತು ಅಹಂಕಾರದ ಕುತ್ತಿಗೆಯ ಮೇಲೆ ನಮ್ಮ ವಿವೇಕಖಡ್ಗ ಬಿದ್ದಾಗಲೆ, ಬಿದ್ದೆಡೆಯಿಂದಲೆ ಈಶ್ವರನು ಆವಿರ್ಭವಿಸಿ ನಮಗೆ ಸಾಕ್ಷಾತ್ಕಾರ ಸಿದ್ಧಿಯಾಗುತ್ತದಲ್ಲವೇ?

ಹೀಗೆಯೇ ನಮ್ಮ ಪುರಾಣಕಾವ್ಯಗಳನ್ನು ಪ್ರತಿಮಾವಿಧಾನದಿಂದ ಸದ್ಯಃ ಸ್ಥಿತಿ ಗನುಗುಣವಾಗಿ ವ್ಯಾಖ್ಯಾನ ಮಾಡಬೇಕು. ಇಲ್ಲದಿದ್ದರೆ ಹೊಲಬುತಪ್ಪಿ, ಸಂಸ್ಕೃತಿ ಪ್ರಸಾರಕ್ಕೆ ಬದಲಾಗಿ ಮೌಢ್ಯಪ್ರಚಾರವಾಗಿ, ಏನೋ ಮಾಡಲು ಹೋಗಿ ಮತ್ತೇನೋ ಆದೀತು! ಆದುದರಿಂದ ಸಂಸ್ಕೃತಿ ಪ್ರಸಾರಕಾರ್ಯವನ್ನು ಕೈಗೊಳ್ಳುವ ಮುನ್ನ ಪ್ರಸಾರಕರಿಗೆ ಒಂದೆರಡು ವಾರಗಳಾದರೂ ತರಗತಿ ತೆರೆದು ಶಿಕ್ಷಣವನ್ನು ಕೊಡಬೇಕು. ಯೋಗ್ಯರಿಂದ ಯೋಗ್ಯರೀತಿಯಲ್ಲಿ ಈ ಪ್ರಸಾರಕಾರ್ಯ ನಡೆಯಬೇಕು. ವಿಷಸಾಹಿತ್ಯ ಪ್ರಸಾರವನ್ನು ತಡೆಗಟ್ಟಿ ಅಮೃತಸಾಹಿತ್ಯದ ಪ್ರವಾಹ ನಾಡಿನಲ್ಲೆಲ್ಲ ಪ್ರವಹಿಸುವಂತೆ ಕ್ರಮ ಕೈಗೊಳ್ಳಬೇಕು.

ಮೇಲಣ ವಿವರಣೆಯಿಂದ ಅನ್ನ ಸಮಸ್ಯೆಯಷ್ಟೇ ಸಂಸ್ಕೃತಿಯ ಸಮಸ್ಯೆಯೂ ಗುರುತರವಾದುದೆಂದು ವ್ಯಕ್ತವಾಗದಿರದು. ಅದರಲ್ಲಿಯೂ ಪ್ರಜಾಪ್ರಭುತ್ವದ ಯುಗ ದಲ್ಲಿ ಸಂಸ್ಕೃತಿ ಪ್ರಸಾರ ಅತ್ಯಂತಾವಶ್ಯಕ. ಈ ಪ್ರಸಾರಕಾರ್ಯವಾದರೂ ನಮಗೆ ಅಷ್ಟೇನೂ ಹೊಸದಲ್ಲ. ಕರ್ಣಾಟಕ ಸಂಘಗಳು, ಸಾಹಿತ್ಯಪರಿಷತ್ತು ಹಿಂದಿನಿಂದ ಭಾಷಣ ವಾಚನಗಳ ಮೂಲಕ ಗ್ರಂಥಸಂಪಾದನೆ ಮತ್ತು ಪ್ರಕಟಣೆಗಳ ಮೂಲಕ ಈ ಕೆಲಸವನ್ನು ಮಾಡುತ್ತಲೇ ಇವೆ. ಸಾಹಿತಿಗಳೂ ಇದಕ್ಕೆ ನೆರವಾಗಿದ್ದಾರೆ. ಸರಕಾರವೂ

ಬೆಂಬಲವಿತ್ತರೆ ಈ ಕಾರ್ಯ ಶೀಘ್ರವಾಗಿ ವಿಸ್ಮೃತ ಪರಿಣಾಮಕಾರಿಯಾಗಿ ಸಾಗುವುದರಲ್ಲಿ ಸಂದೇಹವಿಲ್ಲ.

ಸರ್ವೋದಯವೇ ಸಂಸ್ಕೃತಿಯ ಗುರಿ. 'ಸರ್ವೋದಯ' ಎನ್ನುವ ಪದವೂ ನಮಗೆ ಹೊಸದಲ್ಲ. ಈ ಕೆಳಗೆ ಉದ್ಧರಿಸಿರುವ ಆಶೀರ್ವಾದದ ಶ್ಲೋಕಗಳಲ್ಲಿ ಈ ಭಾವವನ್ನು ಕಾಣಬಹುದು :

ಸರ್ವಸ್ತರತು ದುರ್ಗಾಣಿ, ಸರ್ವೋ ಭದ್ರಾಣಿ ಪಶ್ಯತು
ಸರ್ವಸ್ತದ್ಬುದ್ಧಿಮಾಪ್ನೋತು, ಸರ್ವಃ ಸರ್ವತ್ರ ನಂದತು
(ಕೇಡನೆಲ್ಲರ್ ದಾಂಟಲಿ ! ಒಳ್ಪನೆಲ್ಲರ್ ಈಂಟಲಿ !
ಎಲ್ಲರೊಳಿತನೆ ನೆನೆಯಲಿ ! ಎಲ್ಲರ್ ಎತ್ತಲ್ ನಲಯಲಿ !)
ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖ ಭಾಗ್ ಭವೇತ್
(ಸುಖಿಗಳಾಗಲಿ ಸರ್ವರುಂ ! ಸರ್ವರಕ್ಕೆ ನಿರಾಮಯಂ !
ಸರ್ವರೊಳ್ಪನೆ ಕಾಣಲಿ ! ದುಃಖಮಾರ್ಗುಂ ಮಾಣಲಿ !)
ದುರ್ಜನಃ ಸಜ್ಜನೋ ಭೂಯಾತ್
ಸಜ್ಜನಃ ಶಾಂತಿಮಾಪ್ನುಯಾತ್
ಶಾಂತೋ ಮುಚ್ಯೇತ ಬಂಧೇಭ್ಯೋ
ಮುಕ್ತಶ್ಚಾನ್ಯಾನ್ ವಿಮೋಚಯೇತ್ !
(ದುರ್ಜನರ್ ಸಜ್ಜನರ್ ತಾಮಕ್ಕೆ ! ಸಜ್ಜನರ್ಗಕ್ಕೆ ಶಾಂತಿ !
ಶಾಂತರ್ಗಕ್ಕೆ ಬಂಧಮುಕ್ತಿ ! ಮುಕ್ತರನ್ಯರ್ಗೆ ಮುಕ್ತಿಯಂ ಕೊಡುಗೆ !)

ಶ್ರೀರಾಮನು ಅಯೋಧ್ಯೆಯಿಂದ ಹಿಂದಿರುಗುವತನಕ ಭರತನಂತೆ ನಂದಿಗ್ರಾಮದ ಪರ್ಣಕುಟಿಯಲ್ಲಿ ತಪಸ್ವಿಗಳಾಗಿ ನಿಲ್ಲಬೇಕಾಗುತ್ತದೆ.

ಶ್ರೀ. ಯಾಮುನಾಚಾರ್ಯರ ಭಾಷಣದ ಸಾರಾಂಶ: ಸಹಜಕವಿಗಳಾದ ಶ್ರೀ. ಕುವೆಂಪು ಅವರ ಭಾಷಣವನ್ನು ಕೇಳಿದ ಮೇಲೆ ನನ್ನ ಉಪನ್ಯಾಸ ಅಷ್ಟು ರುಚಿಸಲಾರದು. ಆದರೂ ಈಗ ನಾನು ಮಾತನಾಡಲೇಬೇಕಾಗಿದೆ. ಸಂಸ್ಕೃತಿ ಮತ್ತು ನಾಗರಿಕತೆಗಳ ವ್ಯತ್ಯಾಸವನ್ನು ಶ್ರೀ. ಕುವೆಂಪು ಅವರು ಸ್ಪಷ್ಟಪಡಿಸಿದ್ದಾರೆ. ಒಳ್ಳೊಳ್ಳೆಯ ಸೌಧ ನಿರ್ಮಾಣ, ವೀಧಿವಿನ್ಯಾಸ; ಉಡುಗೆ ತೊಡುಗೆಗಳ ಸೊಬಗು; ಹಾಗೂ ವಾಹನ ಸೌಕರ್ಯ—ಇಂಥ ಇನ್ನೆಷ್ಟೋ ಅಸಂಖ್ಯಾತ ಭೋಗಸಾಧನ ಸಾಮಗ್ರಿಗಳು ಬಾಹ್ಯ ನಾಗರಿಕತೆಯ ಕುರುಹುಗಳೆಂದು ಪರಿಣಾಮವಾಗಿ ಅನುಕರಣದ ಪ್ರಭಾವದಿಂದ ನಮಗೆ ಲಭ್ಯವಾಗಿವೆ. ಆದರೆ ಇವುಗಳಿಂದಲೇ ನಮಗೆ ಸಂಸ್ಕೃತಿ ಸಿದ್ಧಿಸುವುದಿಲ್ಲ. ನಮ್ಮ ಬಾಹ್ಯಜೀವನ ಬೆಡಗಿನಿಂದ ಕೂಡಿದೆ, ನಿಜ. ಆದರೆ ಅಂತರಂಗ ವ್ಯವಸಾಯದ

ಕಡೆಗೆ ನಮ್ಮ ಗಮನ ಸುಲಭವಾಗಿ ಹರಿಯುವುದಿಲ್ಲ. ಜಮೀನನ್ನು ಕೃಷಿಮಾಡಿದಷ್ಟೂ ಫಲ ಸಮೃದ್ಧಿಯಾಗಿ ಉನ್ನತವಾಗಿ ದೊರೆಯುವಂತೆ, ಅಂತರಂಗ ಜೀವನವನ್ನು ಕೃಷಿಮಾಡಿದಷ್ಟೂ ಅದು ಹಸನಾಗುತ್ತದೆ. ಈ ಸಂದರ್ಭದಲ್ಲಿ ಒಬ್ಬ ತತ್ತ್ವಜ್ಞಾನಿ ಹೇಳಿದ ಮಾತು ನೆನಪಿಗೆ ಬರುತ್ತದೆ: "ನಾವು ಈಗ ಪಕ್ಷಿಗಳಂತೆ ಗಗನದಲ್ಲಿ ಸಂಚಾರ ಮಾಡುತ್ತಿದ್ದೇವೆ. ಮೀನಿನಂತೆ ನೀರಿನಲ್ಲಿ ಓಡಾಡುತ್ತೇವೆ. ಆದರೂ ಭೂಮಿಯ ಮೇಲೆ ಯೋಗ್ಯರಾಗಿ ಸುಸಂಸ್ಕೃತರಾಗಿ ಒಳ್ಳೆಯವರಾಗಿ ನಡೆಯುವುದನ್ನು ಕಲಿಯ ಬೇಕಾಗಿದೆ." ನಿಜವಾದ ಸಂಸ್ಕೃತಿಯೇನೆಂಬುದು ಈ ಮಾತುಗಳಲ್ಲಿ ಅಡಕವಾಗಿದೆ. ಇಂಥ ಸಂಸ್ಕೃತಿಯ ಮೇಲೆ ರಾಷ್ಟ್ರದ ಹಿರಿಮೆ ನಿಂತಿದೆ. ಅಂತರಂಗ ಸ್ವಾತಂತ್ರ್ಯ ವಿಲ್ಲದ ಬಾಹ್ಯ ಸ್ವಾತಂತ್ರ್ಯ ಎಷ್ಟಿದ್ದರೂ ಪ್ರಯೋಜನವಿಲ್ಲ. ಎಲ್ಲಿಯ ವರೆಗೆ ನಿಸ್ಸ ಹಾಯರಾದ ಜನ ನಿರ್ಭಯವಾಗಿ ತಲೆಯೆತ್ತಿ ನಿಲ್ಲಲಾರರೋ ಅಲ್ಲಿಯ ವರೆಗೆ ಮಹಾತ್ಮರ ಕನಸಿನ ರಾಮರಾಜ್ಯ ಕನಸಾಗಿಯೇ ಉಳಿದೀತು.

ಕವಿಗಳು, ಗಮಕಿಗಳು, ಕೀರ್ತನಕಾರರು, ಭಜನೆಮೇಳದವರು ಹಿಂದಿನಿಂದ ತಮ್ಮ ಕಾವ್ಯ, ಕಾವ್ಯವಾಚನ, ಕೀರ್ತನೆ ಮತ್ತು ಭಜನೆಗಳ ಮೂಲಕ ಭಾರತೀಯ ಸಂಸ್ಕೃತಿ ಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಂಸ್ಕೃತಿಯ ನಿಧಿಗಳಾದ ಈ ಕಾವ್ಯ ಕೀರ್ತನೆಗಳಲ್ಲಿರುವುದೆಲ್ಲ ಅತ್ಯುತ್ತಮವಾದುದೆಂದು ಯಾರೂ ಹೇಳುವಂತಿಲ್ಲ. ಅಲ್ಲಿ ಇಲ್ಲಿ ಜೊಂಡೂ ಬೆಳೆದಿದೆ. ಅದನ್ನು ಕಿತ್ತೊಗೆದು ಒಳ್ಳೆಯದನ್ನು ಉಳಿಸಿಕೊಳ್ಳಬೇಕು. ಭಕ್ತಿ, ಜ್ಞಾನ, ವೈರಾಗ್ಯ ನಮ್ಮ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು. ವಿರಕ್ತಿ ಎಂದ ಕೂಡಲೆ ನಮ್ಮವರ ಜೀವನದಲ್ಲಿ ಆಶೆಗೆ ಸ್ಥಾನವಿಲ್ಲವೆಂದಲ್ಲ. ಆಶೆ ಕೆಟ್ಟದಲ್ಲವೆಂದು ಶ್ರೀ ಕೃಷ್ಣನೇ ಹೇಳಿದ್ದಾನೆ. ಆದರೆ ಅದು ಧರ್ಮಕ್ಕೆ ವಿರುದ್ಧವಾಗಿರಬಾರದು. ವೈರಾಗ್ಯ ಎಂದರೆ ಪ್ರಪಂಚವನ್ನು ಬಿಟ್ಟು ಓಡಿಹೋಗುವುದಲ್ಲ. ಈಶಾವಾಸ್ಯೋಪನಿಷತ್ತಿನ ಮೊಟ್ಟಮೊದಲನೆಯ ಶ್ಲೋಕದಲ್ಲಿ ಇದನ್ನೇ ಒತ್ತಿ ಹೇಳಿದೆ. ಶ್ರೀ. ಪರಮಹಂಸರು ಒಂದೆಡೆ ಹೇಳಿದ್ದಾರೆ. ನೀನು ಪ್ರಪಂಚದಲ್ಲಿ ದಕ್ಷನಾಗಿ ಎಲ್ಲ ಕೆಲಸ ಮಾಡು. ಒಂದು ಕೈಯಲ್ಲಿ ಭಗವಂತನ ಪಾದಾರವಿಂದವನ್ನು ಹಿಡಿ. ಮತ್ತೊಂದು ಕೈಯಲ್ಲಿ ಜಗತ್ತಿನ ವ್ಯಾಪಾರಗಳನ್ನು ನಡೆಸು. ಎಲ್ಲ ಒಳ್ಳೆಯದಾಗುತ್ತದೆ. ಮಗು ಕಂಬವನ್ನು ಹಿಡಿದು ಕೊಂಡು ಸುತ್ತುವ ತನಕ ಕೆಳಗೆ ಬೀಳುವ ಭಯವಿಲ್ಲ; ಬಿಟ್ಟರೆ ಒಡನೆ ಕೆಳಗೆ ಬೀಳುತ್ತದೆ. ಈ ನಿದರ್ಶನದ ಧ್ವನಿಯನ್ನು ಗ್ರಹಿಸಿದವನು ಸದಾ ಸುಖವಾಗಿರುತ್ತಾನೆ. ಇದು ಸಂಸ್ಕೃತಿಯ ಲಕ್ಷಣ ಮತ್ತು ಆದರ್ಶ.

ಅನಂತರ ಮಾನ್ಯಮಂತ್ರಿಗಳು ಸಂಸ್ಕೃತಿ ಪ್ರಸಾರ ಯೋಜನೆಯ ಅಂಗವಾಗಿ ಸಭೆಯನ್ನು ಏರ್ಪಡಿಸಿ, ಯಶಸ್ವಿಯಾಗಿ ಕಾರ್ಯಕಲಾಪಗಳನ್ನು ನಡೆಸಿದುದಕ್ಕೆ ಕಾರ್ಯ

ಕರ್ತರನ್ನು ಅಭಿನಂದಿಸಿ, ತಾವು ಕೇಳುವುದಕ್ಕೆ ಬಂದದ್ದೇ ಹೊರತು ಹೇಳುವುದಕ್ಕೆ ಬಂದದ್ದಲ್ಲ. ವರಕವಿಗಳಾದ ಶ್ರೀ. ಕುವೆಂಪು ಅವರೂ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾದ ಶ್ರೀ. ಯಾಮುನಾಚಾರ್ಯರೂ ಇನ್ನಷ್ಟು ಹೊತ್ತು ಉಪನ್ಯಾಸ ಮಾಡಿದ್ದರೆ ಕುಳಿತು ಕೇಳಬಹುದಾಗಿತ್ತು ಎಂದು ಅಧ್ಯಕ್ಷ ಭಾಷಣವನ್ನು ಉಪಕ್ರಮಿಸಿದರು. "ಸಂಸ್ಕೃತಿ ಪ್ರಸಾರ ಯೋಜನೆ" ಒಳ್ಳೆಯದೆಂದು ಈ ಇಬ್ಬರು ಮಹನೀಯರು ಅಭಿಪ್ರಾಯಪಟ್ಟಿರುವುದು ನನಗೆ ಸಂತೋಷದ ವಿಷಯವಾಗಿದೆ. ಈ ಯೋಜನೆಯ ರೂಪರೇಷೆಗಳು ನನಗೆ ಹೊಳೆದು ಬಹಳ ದಿನಗಳಾದುವು. ಕಾರಣಾಂತರದಿಂದ ಅದನ್ನು ಕಾರ್ಯರೂಪಕ್ಕೆ ತರಲು ಸಾವಕಾಶವಾಯಿತು; ಮಹಾತ್ಮ ಗಾಂಧೀಜಿಯವರ ನಿತ್ಯ ಪ್ರಾರ್ಥನೆಯೇ ಈ ಯೋಜನೆಗೆ ಹಿನ್ನೆಲೆ ಮತ್ತು ಮೂಲ. "ಈಶ್ವರ ಅಲ್ಲಾ ತೇರೇ ನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್"—ಈ ಎರಡು ಮಾತುಗಳ ಮೇಲೆ ಎಷ್ಟು ಭಾಷ್ಯ ಬರೆದರೂ ಸಾಲದು. ಆ ಮಾತುಗಳನ್ನೇ ಜಪಿಸುತ್ತ ಮಹಾತ್ಮರು ದೈವಾಧೀನರಾದರು. ಆ ಮಾತುಗಳು ಬರಿಯ ಶಬ್ದಜಾಲವಲ್ಲ; ಶಕ್ತಿಯ ಕೇಂದ್ರಗಳು.

"ಜಾತಿದ್ವೇಷದ ಪರಿಣಾಮವಾಗಿ ಭರತಖಂಡದಲ್ಲಿ ನಡೆದ ಅನಾಹುತ ಪರಂಪರೆ ಅಷ್ಟಿಷ್ಟಲ್ಲ. ದೇಶ ಇಬ್ಭಾಗವಾಯಿತು. ೩೦-೪೦ ಲಕ್ಷ ಜನರು ಸತ್ತರು. ರಕ್ತದ ಕೋಡಿ ಹರಿಯಿತು. ಅಸಂಖ್ಯಾತ ಸ್ತ್ರೀಯರ ಮಾನಹಾನಿಯಾಯಿತು, ಪ್ರಾಣಹಾನಿಯಾಯಿತು. ಇದನ್ನು ಮೊದಲೇ ಮನಗಂಡ ಮಹಾತ್ಮರು ಇಂಥ ಮಲಿನ ಕಾರ್ಯಗಳನ್ನು ತಡೆಗಟ್ಟುವುದಕ್ಕಾಗಿ ತಮ್ಮ ನಿತ್ಯಪ್ರಾರ್ಥನೆಯಲ್ಲಿ ಆ ಮೂಲಕ ಜಾತಿಮತ ಸಮನ್ವಯತೆಯ ತತ್ತ್ವವನ್ನು ಸಾರಿದರು. ಕ್ರೈಸ್ತರು ಮಹಮ್ಮದೀಯರು ಹಿಂದೂಗಳೆಲ್ಲ ಏಕಮಾತ್ರ ಭಗವಂತನ ಪುತ್ರರೆಂದು ಬೋಧಿಸಿದರು. ಜಾತಿಮತಗಳ ಸಮನ್ವಯ ಮತ್ತು ಸಾಮರಸ್ಯಗಳ ಆಧಾರದ ಪ್ರಧಾನೋದ್ದೇಶವೇ ಇದು.

"ಎಲ್ಲರಿಗೂ ಒಳ್ಳೆಯ ಬುದ್ಧಿಯನ್ನು ಕೊಡು ಎಂದು ಅವರು ನಿತ್ಯವೂ ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಈಗ ಇಡೀ ಜಗತ್ತನ್ನೇ ಸುತ್ತಿ ಸುರುಳಿ ಮಾಡುವ, ನಕ್ಷತ್ರ ಲೋಕಗಳನ್ನು ದಾಟುವ ಶಕ್ತಿ ಸಾಮರ್ಥ್ಯ ಮಾನವನಿಗೆ ಸಿದ್ಧಿಸುತ್ತಿದೆ. ಆದರೆ ಅವನಲ್ಲಿ ಸದ್ಬುದ್ಧಿ ತಲೆದೋರದಿದ್ದರೆ ಅವನ ಶಕ್ತಿ ಸಾಮರ್ಥ್ಯಗಳು ಲಯಕಾರಿಯಾಗುತ್ತವೆ. ಅಷ್ಟೈಶ್ವರ್ಯಗಳು ಒಳ್ಳೆಯವನ ಕೈಯಲ್ಲಿದ್ದರೆ ಲೋಕಕ್ಕೆ ಉಪಕಾರವಾಗುತ್ತದೆ. ದುಷ್ಟನ ಕೃಪಣನ ಕೈಯಲ್ಲಿದ್ದರೆ ಮಾರಕವಾಗುತ್ತವೆ. ಈ ಸನ್ಮತಿಯುಳ್ಳವನೇ ಸುಸಂಸ್ಕೃತನೆನಿಸಿಕೊಳ್ಳುತ್ತಾನೆ. ಪೂರ್ವಜನ್ಮದ ಸಂಸ್ಕಾರದಿಂದ ಸಂಸ್ಕೃತಿ ಲಭಿಸುತ್ತದೆ. ಪ್ರಪಂಚದಲ್ಲಿ ರತ್ನಗಳಿಗಿಂತ ಕಲ್ಲು ರಾಶಿರಾಶಿಯಾಗಿ ಸಿಕ್ಕುತ್ತದೆ. ಹಾಗೆಯೇ ಸುಸಂಸ್ಕೃತರ ಸಂಖ್ಯೆ ಕಡಮೆ.

"ಈಗ ಸಂಸ್ಕೃತಿ ಪ್ರಸಾರ ಕಾರ್ಯ ಸರ್ವಸಮರ್ಪಕವಾಗಿ ಆಗಿದೆಯೆಂದು ನಾನು ಹೇಳುತ್ತಿಲ್ಲ. ಶ್ರೀ. ಕುವೆಂಪು ಅವರು ಹೇಳಿದಂತೆ ಯೋಗ್ಯರಿಂದ ಯೋಗ್ಯ ರೀತಿಯಲ್ಲಿ ಈ ಕೆಲಸ ನಡೆಯಬೇಕಾಗಿದೆ. ಪ್ರಸಾರಕರು ಮೊದಲು ಸಂಸ್ಕೃತರಾಗ ಬೇಕು, ಸದ್ಗ್ರಂಥಗಳ ಪ್ರಕಟನೆ ಆಗಬೇಕು. ಸಮರ್ಪಕತೆ ನಮ್ಮ ಗುರಿ. ಆ ಗುರಿ ಯನ್ನು ತಲುಪಲು ನಾವೆಲ್ಲರೂ ಪ್ರಯತ್ನಿಸೋಣ."

ಸಂಗ್ರಾಹಕ : ದೇ. ಜ. ಗೌ.

*
* *

ಕರ್ಣಾಟಕದ ಯಕ್ಷಗಾನ

ದಕ್ಷಿಣಭಾರತದ ಪ್ರತಿಯೊಂದು ಭಾಷಾಪ್ರಭೇದದಲ್ಲಿಯೂ ಜನಪದಗೀತೆಗಳು, ಪದಗಳು ಮತ್ತು ಹಾಡುಗಳು ಕಂಡುಬರುತ್ತವೆ. ಪೂರ್ವಸಂಸ್ಕೃತಿ ಇಲ್ಲಿ ಜ್ವಲಿಸು ತ್ತದೆ. ಇವು ಅಚ್ಚದೇಶೀಯವಾಗಿದ್ದು ಸಹಜ ಸುಂದರವಾಗಿ ಬೆಳೆದು ಬಂದಿದೆ. ಸಂಸ್ಕೃತ ಸಾಹಿತ್ಯದ ಪ್ರಭಾವದಿಂದ ಹೊರಟ ಮಾರ್ಗವಿಧಾನದಿಂದ ಭಿನ್ನವಾದ ದೇಶೀವಿಧಾನಕ್ಕೆ ಇವು ಸೇರಿವೆ.

ದಕ್ಷಿಣಭಾರತದಲ್ಲಿ ಜನಪ್ರಿಯವಾದ ಒಂದು ಬಗೆಯ ಸಂಪ್ರದಾಯ ಸಂಗೀತಕ್ಕೆ ಯಕ್ಷಗಾನವೆಂಬ ಪದವನ್ನು ಅನ್ವಯಿಸಬಹುದು. ಇದು ವಿಶಾಲಾರ್ಥದಲ್ಲಿ— ಔದ್ಯೋಗಿಕ ಮತ್ತು ಅಭ್ಯಾಸಿಕ ನಟವರ್ಗದಿಂದ ಗ್ರಾಮ್ಯಪ್ರೇಕ್ಷಕರ ಮುಂದೆ ಹಾಡಲು ಸರಿಹೋಗುವಂಥ ನಾಟಕವಿಧಾನವೆನ್ನಬಹುದು. ಒಟ್ಟಿನಲ್ಲಿ ಜನಪದ ನಾಟಕದ ಪ್ರದರ್ಶನಕ್ಕೆ ಈ ಮಾತನ್ನು ಹೇಳಬಹುದು. ಕೇರಳವೊಂದನ್ನು ಬಿಟ್ಟು ಮೂರು ಭಿನ್ನ ಭಾಷಾ ಪ್ರದೇಶಗಳಾದ ಕರ್ನಾಟಕ, ತಮಿಳು, ತೆಲುಗು ದೇಶಗಳಲ್ಲಿ ಒಂದೇ ಹೆಸರಿನಿಂದ ಇದು ಪ್ರಚಲಿತವಿದೆ. ಇನ್ನೂ ಸುಸಂಸ್ಕೃತವೂ ಮೇಲು ಮಟ್ಟದ್ದೂ ಆದ 'ಗಂಧರ್ವಗಾನ'ದಿಂದ ಇದು ಭಿನ್ನವಾದುದು. ಇದರ ಚರಿತ್ರೆ ಯನ್ನು ಕುರಿತು ಮಿ|| ಇ. ಪಿ. ರೈಸ್ ಅವರು ಹೀಗೆ ಹೇಳಿದ್ದಾರೆ. "೧೮ನೆಯ ಶತಮಾನದಲ್ಲಿ ಕಾವ್ಯಪುರಾಣಗಳಿಂದ ತೆಗೆದ ಕಥೆಗಳನ್ನು ಹೊಸ ಸಾಹಿತ್ಯ ಪ್ರಕಾರ ದಲ್ಲಿ ನೆಲೆಗೊಳಿಸಿದ ಒಂದು ಗುಂಪಿನ ಕೃತಿಗಳು 'ಯಕ್ಷಗಾನ' ಎಂಬ ಹೆಸರಿನಲ್ಲಿ ಕಾಣಿಸಿಕೊಂಡುವು."

ಯಕ್ಷ-ಗಾನ ಎಂಬುದು ಸಮಾಸ ಪದ. ಗಾನ ಎಂದರೆ ಸಂಗೀತ. 'ಯಕ್ಷ' ಎಂಬ ಪದ, ವೇದದಷ್ಟು ಪುರಾತನವಾದರೂ ಅದರ ವ್ಯುತ್ಪತ್ತಿವಿಚಾರ ಇನ್ನೂ ಅನಿರ್ದಿಷ್ಟ. ಡಾ|| ಎ. ಕುಮಾರಸ್ವಾಮಿಯವರು ಬರೆದಿರುವ "ಯಕ್ಷರು" (ಭಾಗ ೧-೨೨) ಎಂಬ ಪುಸ್ತಕದಲ್ಲಿ ಬೇಕಾದಷ್ಟು ವಿಷಯವನ್ನು ಅವರು ಸಂಗ್ರಹಿಸಿದ್ದಾರೆ.

ವೇದಗಳಂಥ ಪ್ರಾಚೀನ ಗ್ರಂಥಗಳಲ್ಲಿ, ಬ್ರಾಹ್ಮಣ ಮುಂತಾದವುಗಳಲ್ಲಿ 'ಯಕ್ಷ' ಎಂದರೆ ಸಾಮಾನ್ಯವಾಗಿ ಸ್ಪಷ್ಟವಾಗಿ ವಿವರಿಸಲಾಗದ "ವಿಸ್ಮಯಾತ್ಮಕ, ಅದ್ಭುತ" ಎಂಬರ್ಥದಲ್ಲಿ ಬಂದಂತೆ ತಿಳಿಯುತ್ತದೆ. ಇತ್ತೀಚೆ ಚರ್ಚೆ ನಡೆದು, ಮಿ|| ಹಿಲ್‌ಬ್ರಂಟ್ ಈ ಪದದ ಅರ್ಥವನ್ನು "ಯಕ್ಷಿಣಿಕಾರ, ವಿಚಿತ್ರವೇಷಧಾರಿ, ಅಗೋಚರನಾದ ಆತ್ಮಶತ್ರು" ಎಂದು ಮುಂತಾಗಿ ಕಲ್ಪಿಸಿದ್ದಾರೆ. ಆ ಮೇಲೆ ಬರಿಯು "ಘನವಂತನಾದ ಅಪ್ರಾಕೃತ ವ್ಯಕ್ತಿ" ಎಂದು ಕೂಡ ತಿಳಿಯುತ್ತಾರೆ. ಈ ಶಬ್ದಾರ್ಥದ ಮೂಲ ಮತ್ತು ಶಬ್ದ ಎರಡೂ ಅನಾರ್ಯವಾಗಿರಬೇಕೆಂದು ಇನ್ನೊಂದು ವಾದವಿದೆ. ಇದೇನಿತಾದರೂ ಪ್ರಾಚೀನಾಧಾರಗಳಲ್ಲಿ ಈ ಪದಕ್ಕೆ ವಿಸ್ಮಯ, ಪವಾಡ, ಅಪ್ರಾಕೃತತೆ, ಅಜ್ಞಾತತೆ, ಮಾಯಾಶಕ್ತಿ, ಅಗೋಚರತೆ, ಆತ್ಮಭಾವ—ಎಲ್ಲ ಭಾವಗಳೂ ಹೆಚ್ಚು ಕಡಿಮೆ ಸೇರಿಕೊಂಡಿವೆ.

ಆ ಕಾರಣ 'ಯಕ್ಷಗಾನ' ಎಂಬ ಸಮಾಸಪದದ ವ್ಯುತ್ಪತ್ತಿಯನ್ನು ಇಲ್ಲಿಯವರೆಗೆ ಯಾರೂ ಸರಿಯಾಗಿ ವಿವರಿಸಲಾಗಿಲ್ಲ. ಸಂಸ್ಕೃತ ವಿದ್ವಾಂಸರು ೧೬ ನೇ ಶತಕದ ಪೂರ್ವದ ಸಂಸ್ಕೃತ ಸಾಹಿತ್ಯದಲ್ಲಿ ಈ ಪದ ಕಂಡುಬರದೆಂದು ಅಭಿಪ್ರಾಯಪಡುತ್ತಾರೆ. ೧೭ ನೇ ಶತಕಾದಿಯಲ್ಲಿ ಬರೆದ ಶ್ರೀ. ಗೋವಿಂದ ದೀಕ್ಷಿತನ 'ಸಂಗೀತ ಮಾನದ ಆ ಸುಧಾ' ಎಂಬ ಕೃತಿಯಲ್ಲಿ ಇದರ ಬಹು ಪೂರ್ವ ಉಲ್ಲೇಖವಿದ್ದಂತೆ ಕಾಣುತ್ತದೆ. ಇದರಲ್ಲಿ "ಶ್ರೀ ರುಕ್ಮಿಣೀ ಕೃಷ್ಣವಿಜಯ" ಎಂಬ ಯಕ್ಷಗಾನವನ್ನು ಹೇಳಿದೆ. ಆಂಜನೇಯ ಎಂಬಾತನ ಹೆಸರಿಗೆ ಗುರುತಿಸುವ ಪ್ರಾಚೀನ ವಿಮರ್ಶಾಕೃತಿಯೊಂದನ್ನು ಹೆಸರಿಸಿದೆ. ಇಲ್ಲಿ ಯಕ್ಷರು ಹಾಡುವ ಸಂಗೀತವಿಧಾನವನ್ನು ಸೇರಿಸಿದೆ. ಕೆಲವು ಜನಪದ ನಾಟಕಗಳನ್ನು ಯಕ್ಷರು ಅಭಿನಯಿಸುತ್ತಿದ್ದರೆಂದು ತೆಲುಗು ಕವಿ ಪಾಲ್ಕುರಿಗೆ ಸೋಮನಾಥನು (೧೯ ನೇ ಶತಾಬ್ದ) ಹೆಸರಿಸುತ್ತಾನೆ. ತೆಲುಗು ಕವಿ ಶ್ರೀನಾಥ (೧೩೬೫-೧೪೫೦ ಕ್ರಿ. ಶ.) ತನ್ನ ಕೃತಿ "ಭೀಮಖಾಂಡ"ದಲ್ಲಿ ಯಕ್ಷಗಾನವನ್ನು ತಿಳಿಸುತ್ತಾನೆ. ಮುನ್ನೂರು ವರ್ಷದ ಹಿಂದೆ ಬರೆದ "ಅಪ್ಪ ಕವೀಯಮು" ಗ್ರಂಥಕರ್ತ ಶ್ರೀ. ಅಪ್ಪ ಕವಿ ಈ ಪದವನ್ನು ವಿಚಾರಿಸಲು ಯತ್ನಿಸಿದ್ದಾನೆ. ಆದರೆ ಅದು ವಿವರ ಪೂರ್ಣವಾಗಿಲ್ಲ.

ಯಕ್ಷಗಾನದ ಸಂಪ್ರದಾಯ ಮೂಲವನ್ನು 'ಕಾಮೇಶ್ವರೀ ಪಾಟ' ಎಂಬ ತೆಲುಗು ಕೃತಿಯಲ್ಲಿ ಗುರುತಿಸಲು ಸಾಧ್ಯವಾಗುವಂತೆ ಅಲ್ಲಿಯ ಸಾಕ್ಷ್ಯ ಹೀಗಿದೆ. ಶಿವನು ಅವಶ್ಯವಾದ್ಯ ಸಾಧನಾಸಮೇತರಾದ ಯಕ್ಷರಿಬ್ಬರನ್ನು ಈ ಯಕ್ಷಗಾನಗಳನ್ನು ಹಾಡಿಸಲು ಹಾಗೂ ವಂಶಗತಾನುಸಾರ ಕಾಮಪಲ್ಲಿಯ ಕಾಮವಲ್ಲಿ ದೇವತೆಯನ್ನು ಸೇವಿಸಲು ಕಳಿಸಿಕೊಟ್ಟಂತೆ ತಿಳಿಯುತ್ತದೆ. ಪ್ರಾರಂಭದೆಸೆಯಲ್ಲಿ ಈ

ಯಕ್ಷಗಾನ ಪರ್ವಸಮಯಗಳಲ್ಲಿ ದೇವತಾ ಸಮಕ್ಷದಲ್ಲಿ ಹೇಗೆ ಅಭಿನಯಿಸಲ್ಪಡುತ್ತಿತ್ತೆಂದು ತಿಳಿಯಲು ಇದೊಂದು ಸೂಚಕಾಂಶ. ಕನ್ನಡ ದೇಶದಲ್ಲಿ, ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಯಕ್ಷಗಾನ ಮೇಳವೂ ತಮ್ಮ ಆರಾಧ್ಯ ದೈವದ ಗುಡಿಯಲ್ಲಿ ದೀಪಾವಳಿ ದಿವಸದಲ್ಲಿ ಮೊದಲನೆಯ ಅಭಿನಯವನ್ನು ನಡೆಸುತ್ತದೆ. ಯಕ್ಷಗಾನ ಮೇಳದ ಕೆಲವು ದೇಗುಲಗಳನ್ನು ಮಂದಾರ್ತಿ, ಮಾರನಕಟ್ಟೆ, ಕಟಿಲ್, ಧರ್ಮಸ್ಥಳಗಳಲ್ಲಿ ನೋಡಬಹುದು. ದೀಪಾವಳಿ ದಿವಸ ಇದರ ಮೊದಲನೆಯ ಅಭಿನಯ ನಡೆಸುವ ಕಾರಣವೆಂದರೆ ದೀಪಾವಳಿ ರಾತ್ರಿಯನ್ನು 'ಯಕ್ಷರಾತ್ರಿ' ಎಂದು ಕರೆಯುವುದಾಗಿ ಶ್ರೀ ಮು. ತಿಮ್ಮಪ್ಪಯ್ಯನವರು ತಿಳಿಸುತ್ತಾರೆ. ಯಕ್ಷೇಂದ್ರನಾದ ಕುಬೇರ ತನ್ನ ಸಿರಿಯನ್ನೆಲ್ಲ ಬಲಿಯಿಂದ ಮರಳಿ ಪಡೆದುಕೊಂಡ ಆ ದಿನ, ಅವನ ಸಹಚರರು ಆನಂದೋಲ್ಲಾಸದಿಂದ ಗೀತನರ್ತನದಲ್ಲಿ ಕಾಲ ಕಳೆಯುತ್ತಾರೆ. ಬಹುಶಃ ಈ ಕಾರಣದಿಂದಲೇ ಈ ಗೀತೆ ಯಕ್ಷಗಾನವೆನಿಸಿ, ನಾಟಕ "ಯಕ್ಷಗಾನ ಆಟ"ವಾಗಿರಬೇಕು. ಇದರಿಂದ ಯಕ್ಷಗಾನ ಯಕ್ಷರ ಅಥವಾ ಯಕ್ಷರಿಗಾಗಿ ಬರೆದೊಂದು ಗೀತ ವಿಧಾನ. ಈ ಊಹೆಯನ್ನು ಸಮರ್ಥಿಸುವ ಸಂಪ್ರದಾಯದ ಕಥೆಯೊಂದುಂಟು. ಇಂದ್ರಸಭೆಯಲ್ಲಿ ಗಂಧರ್ವರು ಹಾಡಿ ಆಡುವುದು, ಯಕ್ಷರೆಲ್ಲರೂ ಅವರನ್ನು ಅನುಸರಿಸುವುದು ನಡೆಯುತ್ತಿತ್ತು. ಒಮ್ಮೆ ಯಕ್ಷರೆಲ್ಲ ಸೇರಿ ಅಸುರಗುರು ಶುಕ್ರಾಚಾರ್ಯರನ್ನು ಕಂಡು ಈ ವಿಶಿಷ್ಟ ಬಗೆಯ ಗೀತನಾಟಕಗಳನ್ನು ಕಲಿತುಕೊಂಡರು. ಆ ಕಾರಣ ಇದು ಯಕ್ಷಗಾನವೆನಿಸಿತು. ಪಾಶ್ಚಾತ್ಯ ವಿದ್ವಾಂಸರೀರ್ವರು—ಮಿ|| ಉಡ್‌ವಿಗ್, ಮಿ|| ಗೆಲ್ಡಿನರ್ 'ಯಕ್ಷ' ಎಂಬ ಪದಕ್ಕೆ "ಪರ್ವಸಂತೋಷ" ಎಂದು ಅರ್ಥ ಹೇಳುತ್ತಾರೆ. ಇದನ್ನೊಪ್ಪಿದರೆ ಇದರರ್ಥ "ಹಬ್ಬದ ವೇಳೆ ಹಾಡಲರ್ಹವಾದ ಒಂದು ಗೀತವಿಧಾನ" ಎನ್ನಬಹುದು.

ಯಕ್ಷಗಾನ ರಚನೆ ಕ್ರಿ. ಶ. ಒಂಬತ್ತನೆಯ ಶತಕದಷ್ಟು ಪೂರ್ವದಲ್ಲಿಯೇ ಇದ್ದಂತೆ ಕನ್ನಡ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನೃಪತುಂಗನ 'ಕವಿರಾಜಮಾರ್ಗ' (೮೧೮-೮೭೭)ದಲ್ಲಿ ಹೇಳಿರುವ ಚತ್ತಾಣ, ನಾಟ್ಯಗರಣ ಮುಂತಾದವು ಯಕ್ಷಗಾನ ಕೃತಿಗಳಲ್ಲದೆ ಬೇರಲ್ಲವೆಂದು ಊಹಿಸುತ್ತಾರೆ. ಈ ತೆರನಾದ ರಚನೆಯ ಯಾವೊಂದು ಕೃತಿಯೂ ನಮಗೆ ಉಪಲಬ್ಧವಿಲ್ಲದ ಕಾರಣ ಇದರ ಸಮರ್ಥನೆ ಸಾಧ್ಯವಿಲ್ಲ. ಶ್ರೀ. ಎಂ. ಗೋವಿಂದ ಪೈ—'ಕುಮಾರವ್ಯಾಸ ಭಾರತ'ದಲ್ಲಿ ಹೇಳಿರುವ "ನಾಡಾಡಿಗಳ ನಾಟಕ" ಯಕ್ಷಗಾನ ಆಟವಲ್ಲದೆ ಬೇರೆಯಲ್ಲವೆಂದು ಹೇಳುತ್ತಾರೆ. ಹದಿನೈದರ ಶತಕದ ಪೂರ್ವಾರ್ಧದ ಆದಿಭಾಗದಲ್ಲಿ ಈ ಕವಿಯಿದ್ದನು. ನಾನೋದಿರುವ ಸಾಕಷ್ಟು ಯಕ್ಷಗಾನ ಕೃತಿಗಳಲ್ಲಿ ಹದಿನೇಳರ ಶತಕದ ಅಂತ್ಯಭಾಗಕ್ಕೆ ಹಿಂದಿನ ಕೃತಿಗಳು ಕಂಡುಬಂದಿಲ್ಲ.

ಯಕ್ಷಗಾನ ನಾಟಕವನ್ನು ಬಯಲಲ್ಲಾಡುವ ಕಾರಣ "ಬಯಲಾಟ'ವೆನ್ನುತ್ತಾರೆ. ವಿಷ್ಣು ದಶಾವತಾರದ ಕಥಾಮೂಲವಿರುವ ಕಾರಣ 'ದಶಾವತಾರದ ಆಟ' ಎನ್ನುತ್ತಾರೆ. ಮೆಕಿಂಜಿ ಸಂಗ್ರಹದ ಬೇತಳ್ಳಿ ಕೈಫಿಯತ್‌ನಲ್ಲಿ 'ದಶಾವತಾರ ನಾಟಕ'ವೊಂದರ ಉಲ್ಲೇಖವಿದೆ. ಸೋದೆ ನಾಯಕ ರಾಮಚಂದ್ರನ ಆಳ್ವಿಕೆಯಲ್ಲಿ ದೇವೀಕೆರೆಗೆ ದಕ್ಷಿಣದಲ್ಲಿ ಚೆನ್ನಪಟ್ಟಣದ ಕೋಟೆ ಕಟ್ಟಿತು. ಕೆಳದಿ ಚೆನ್ನಮ್ಮಾಜಿಯ ಮಗ ಬಿದರೂರು ನಾಯಕ ವೀರಭದ್ರನು ಈ ಕೋಟೆಯನ್ನು ಮುತ್ತಿದಾಗ ಸೋದೆ ನಾಯಕ ಕುಕ್ಕಳ್ಳಿಗೆ ಓಡಿಹೋದನು. ಅಲ್ಲಿಂದ ಇವನ ತಮ್ಮ ಸದಾಶಿವನಾಯಕ ವಿಜಯಪುರಕ್ಕೆ ಹೊರಟು ದಶಾವತಾರ ನಾಟಕಾಭಿನಯವನ್ನೇರ್ಪಡಿಸಿ ಅಲ್ಲಿಯ ಬಾದಶಹನನ್ನು ಮೆಚ್ಚಿಸಿದನು. ಸಂತುಷ್ಟನಾದ ಬಾದಶಹ ನಾಯಕನ ಶತ್ರುಗಳನ್ನೋಡಿಸಲು ಅವನಿಗೆ ನೆರವಾದನು. ಸೋದೆ ಸದಾಶಿವನಾಯಕನು ಒಬ್ಬ ದೊಡ್ಡ ಗ್ರಂಥಕರ್ತನಾಗಿದ್ದಂತೆ ಕಾಣುತ್ತದೆ. ಹಾಲಾಸ್ಯಪುರಾಣದ ಕರ್ತೃ ಇಮ್ಮಡಿ ಮುರಿಗೇಯಸ್ವಾಮಿ (ಕ್ರಿ. ಶ. ೧೭೨೦) ಇವನನ್ನು ತನ್ನ ಕೃತಿಯಲ್ಲಿ ತುಂಬ ಗೌರವಿಸಿರುವುದಲ್ಲದೆ ಅವನು ಬರೆದೊಂದು ಕೃತಿಯನ್ನೂ ಉಲ್ಲೇಖಿಸುತ್ತಾನೆ. ಆದ್ದರಿಂದ ಕ್ರಿ. ಶ. ೧೭೨೦ ಕ್ಕಿಂತ ಹಿಂದೆ ಎಂದರೆ ೧೭ ನೇ ಶತಕದ ಉತ್ತರಾರ್ಧದಲ್ಲಿ ಇವನು ಜೀವಿಸಿರಬೇಕೆಂದು ತಿಳಿಯಬಹುದು.

ನಾನೋದಿರುವ ಸುಮಾರು ೭೫ ಯಕ್ಷಗಾನ ಕವಿಗಳಲ್ಲಿ ಯಾರೂ ೧೭ ನೇ ಶತಕದ ಅಂತ್ಯಭಾಗಕ್ಕೆ ಪೂರ್ವದಲ್ಲಿ ಇದ್ದಂತೆ ಕಂಡುಬರದು. ಯಕ್ಷಗಾನದ ಪ್ರಸಿದ್ಧ ಕವಿಯೊಬ್ಬ—ಪಾರ್ತಿಸುಬ್ಬ ಎಂಬ ಹೆಸರಿನವನು—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಸುಮಾರಿಗೆ ಜೀವಿಸಿದ್ದು ಯಕ್ಷಗಾನ ಪ್ರದರ್ಶನದ ಸದ್ಯಃ—ಸ್ವರೂಪಕ್ಕೆ ಕಾರಣವಾದ ಅನೇಕ ಸಂಸ್ಕಾರ ಸುಧಾರಣೆಗಳನ್ನು ಮಾಡಿದಂತೆ ತಿಳಿಯುತ್ತದೆ. ರಾಮಾಯಣದಿಂದ ವಸ್ತುಗಳನ್ನಾಯ್ದು ಅನೇಕ ಯಕ್ಷಗಾನಗಳನ್ನು ಈತ ಬರೆದನು. ಅವುಗಳಲ್ಲಿ "ಪಂಚವಟಿ", "ಚೂಡಾಮಣಿ", "ಅಂಗದ ಸಂಧಾನ" ಶ್ರೇಷ್ಠವಾದವು. ಇಬ್ಬರು ಬೇರೆ ಕವಿಗಳು 'ಪಂಚವಟಿ'ಯನ್ನು ತುಳುಭಾಷೆಗೆ ಭಾಷಾಂತರಿಸಿರುವುದರಿಂದ ಅದು ಎಷ್ಟು ಜನಪ್ರಿಯವಾದುದೆಂದು ತಿಳಿಯುತ್ತದೆ.

ಪಾರ್ತಿಸುಬ್ಬನ ಕಾಲಾನಂತರ ಪ್ರಸಿದ್ಧ ಯಕ್ಷಗಾನ ಕವಿಗಳೆಂದರೆ ಗೇರುಸೊಪ್ಪೆ ಶಾಂತಯ್ಯ, ಮುಲ್ಕಿ ವೆಂಕಣ್ಣ, ವಾಸುದೇವಪ್ರಭು, ನಂದಳಿಕೆ ಲಕ್ಷ್ಮೀನಾರಣಪ್ಪ. ವಿಶ್ರಾಂತ ನ್ಯಾಯಾಧಿಪತಿಯಾಗಿದ್ದ ಗೇರುಸೊಪ್ಪೆ ಶಾಂತಯ್ಯ ತನ್ನ ಕೈಕೆಳಗೆ ಒಬ್ಬ ಭಾಗವತ, ನಟ ಮತ್ತು ಲಿಪಿಕಾರನನ್ನು ಸಹಾಯಕ್ಕೆ ಇರಿಸಿಕೊಂಡಿದ್ದನೆಂಬುದು ಗಮನಾರ್ಹವಾಗಿದೆ. ಯಕ್ಷಗಾನ ನಾಟಕ ಕಲೆಯ ಬೆಳವಣಿಗೆ ಮತ್ತು

ಉನ್ನತಿಗೆ ತನ್ನ ಆದಾಯದ ಬಹುಪಾಲನ್ನು ವೆಚ್ಚಮಾಡುತ್ತಿದ್ದನು. ಸ್ವಂತ ಖರ್ಚಿನಲ್ಲಿಯೇ ನಟರಿಗೆ ಆವಶ್ಯಕ ಉಡುಪುತೊಡವುಗಳನ್ನು ಮಾಡಿಕೊಡುತ್ತಿದ್ದನು. ಅವನ ಶ್ರೇಷ್ಠಕೃತಿ ಕರ್ಣಪರ್ವ. ಕರ್ಣನ ರಥ ಕೆಸರಿನಲ್ಲಿ ಹೂತ ಸನ್ನಿವೇಶ ಪ್ರೇಕ್ಷಕರಲ್ಲಿ ಕಂಬನಿಯುಕ್ಕಿಸುವನಿತು ಕರುಣಾಜನಕವಾಗಿದೆ. ಮುಲ್ಕಿ ವೆಂಕಣ್ಣನ ಕೃಷ್ಣ ಸಂಧಾನ ರಾಜನೀತಿಯ ಸಾರ. ಮಟ್ಟಿವಾಸುದೇವ ಪ್ರಭುವಿನ ಬಿಲ್ಲಹಬ್ಬ, ಸಮುದ್ರ ಮಥನ, ಚಂದ್ರಹಾಸ, ರಾಧಾವಿಲಾಸಗಳು ಶೃಂಗಾರ ವೀರ ಹಾಸ್ಯ ರಸಪೂರ್ಣಗಳಾಗಿವೆ. ಸಂದಳಿಕೆಯವರ ಕುಮಾರವಿಜಯ, ರತ್ನಾವತೀ ಕಲ್ಯಾಣ ಮೇಲ್ಮಟ್ಟದ ನಾಟಕಗಳು.

ಸಾಮಾನ್ಯ ಜನರೇ ಅಲ್ಲದೆ ದೊರೆಗಳು, ನಾಯಕರು ಯಕ್ಷಗಾನ ಪ್ರದರ್ಶನಗಳಲ್ಲಿ ಆಸಕ್ತಿವಹಿಸಿದ್ದರು. ಈ ರಂಗ ನಟನಕಲೆಯನ್ನು ಪ್ರೋತ್ಸಾಹಿಸಿದ ರಾಜವಂಶಗಳಲ್ಲಿ ಸೋದೆನಾಯಕರು, ಕೆಳದಿಯವರು, ಮೈಸೂರರಸರು ಪ್ರಸಿದ್ಧರು. ೧೮೧೨ರಲ್ಲಿ ಧರ್ಮಸ್ಥಳದ ಕುಮಾರ ಹೆಗ್ಗಡೆಯವರು ಯಕ್ಷಗಾನ ನಟರ ಮೇಳವೊಂದನ್ನು ಮುಮ್ಮಡಿ ಕೃಷ್ಣ ಭೂಪಾಲನಲ್ಲಿಗೆ ಕಳಿಸಿಕೊಟ್ಟಂತೆ ತಿಳಿಯುತ್ತದೆ. ಯಕ್ಷಗಾನ ನಾಟಕ ಚರಿತ್ರೆಯಲ್ಲಿ ಇದು ಉತ್ಕರ್ಷದ ಕಾಲ.

ಕರ್ಣಾಟಕದ ಯಕ್ಷಗಾನ, ಕೇರಳದ ಕಥಕ್ಕಳಿ, ತೆಲುಗು ದೇಶದ ವೀಥಿನಾಟಕ ಒಂದೇ ಬಗೆಯ ಜನಪದ ನಾಟಕದಡಿಯಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಸೇರುವಂಥವು. ಕಥಕಳಿಯಲ್ಲಿ ನಟರು ಗೀತೆಗಳನ್ನು ಹಾಡುವುದಿಲ್ಲ. ಅಭಿನಯದ ಮೂಲಕ ಗೀತಾರ್ಥವನ್ನು ವಿವರಿಸುತ್ತಾರೆ. ಯಕ್ಷಗಾನದಲ್ಲಿ ನಡುನಡುವೆ ಗೀತವನ್ನು ಹಾಡುತ್ತಾರೆ. ಗೀತಾರ್ಥವನ್ನು ಯಾವಾಗಲೂ ಮಾತಿನಲ್ಲಿ ವಿವರಿಸುತ್ತಾರೆ. ಯಕ್ಷಗಾನದಲ್ಲಿ ಅಭಿನಯವೇಕೆ ಕಡಿಮೆಯೆಂಬುದಕ್ಕೆ ಇದೊಂದು ಕಾರಣವಿರಬಹುದು. ನಟರು ಮಾತು ನಿಲ್ಲಿಸಿದಾಗ ಭಾಗವತ ಹಾಡುತ್ತಾನೆ. ಇಲ್ಲವೇ ಭಾಗವತಾನುಚರನಾದ ಸಂಗೀತಗಾರ ಶ್ರುತಿ, ತಾಳ, ಮದ್ದಳೆ, ಚಂಡೆಗಳನ್ನು ಬಾಜಿಸಿ ಹಾಡುತ್ತಾನೆ. ಹಾಡುವಾಗ ನಟರು ಅಭಿನಯಿಸಿ ಕುಣಿಯುತ್ತಾರೆ. ಹಾರುಹೆಜ್ಜೆಗಳನ್ನು ಹಾಕುವಲ್ಲಿ ನಟರು ಶಾರೀರಕ ಚಲನ ಕೌಶಲ್ಯವನ್ನು ಮೆರೆಯುತ್ತಾರೆ. ಕೆಲವೊಮ್ಮೆ ಇಬ್ಬರು ಮೂವರು ನಟರು ರಂಗದ ಮೇಲೆ ಒಂದು ಸುಂದರ ಸಮಂಜಸತೆಯಿಂದ ಕುಣಿಯುತ್ತಾರೆ. ಕೆಲಪಾತ್ರಗಳು ರಂಗಕ್ಕೆ ಬರುವಾಗ ಪೂರ್ತಿಯಾಗಿ ಕುಣಿಯುತ್ತಲೇ ಬರುವುದನ್ನು ಇಂದಿಗೂ ನೋಡಬಹುದು.

ಬಹುಶಃ ಯಕ್ಷಗಾನ ನಾಟಕದ ಅತ್ಯುತ್ತಮವಾದ ಭಾಗವೆಂದರೆ ಪಾತ್ರಗಳ ಪ್ರಸಾಧನ ಮತ್ತು ಅಲಂಕರಣ. ಬೇರೆ ಬೇರೆ ಪಾತ್ರಗಳಿಗೆ ತಲೆದೊಡವು ಬೇರೆ ಬೇರೆ.

ಅವಕ್ಕೆ ಬೇರೆ ಬೇರೆ ಹೆಸರುಗಳು. ರಾಕ್ಷಸ ಪಾತ್ರಗಳಿಗೆ "ಬಟ್ಟಲು ಕಿರೀಟ"; ರಾಮ ಲಕ್ಷ್ಮಣ ದುರ್ಯೋಧನ ಧರ್ಮರಾಯನಂಥ ಪಾತ್ರಗಳಿಗೆ "ಪುಂಬೆ ಕಿರೀಟ"; ಕೃಷ್ಣ ಅರ್ಜುನ ಕರ್ಣ ಅಭಿಮನ್ಯುವಿನಂಥ ಪಾತ್ರಗಳಿಗೆ "ಶ್ರೀಮುಡಿ". ಈ ಪಾತ್ರಗಳು ತೊಡುವ ತೊಡಿಗೆಗಳು ಕರ್ಣಪತ್ರ, ಕೊರಳಹಾರ, ಭುಜಕೀರ್ತಿ, ಎಡೆಗಟ್ಟು, ಹಸ್ತ ಕಡಗ ಮುಂತಾದುವನ್ನು ಹೇಳಬಹುದು. ಕೆಲ ಸಂಪ್ರದಾಯಾನುಸಾರ ನಟರು ತಮ್ಮ ಮುಖಗಳಿಗೆ ಬೇರೆ ಬೇರೆ ಬಣ್ಣಗಳನ್ನು ಬಳಿದುಕೊಳ್ಳುತ್ತಾರೆ. ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಪಾತ್ರಗಳು ರಂಗಪ್ರವೇಶಮಾಡುತ್ತವೆ. ಮೊದಲು ರಂಗವೇರುವ ಪಾತ್ರ ಗಳು "ಪೀಠಿಕಾವೇಷ" ಅಥವಾ "ಮೊದಲನೆಯ ವೇಷ" ಎನಿಸುತ್ತದೆ. ಅಭಿಮನ್ಯು ಬಭ್ರುವಾಹನ, ಲವಕುಶರಂಥ ಬಾಲಪಾತ್ರಗಳು ಪುಂಡುವೇಷವೆನಿಸುತ್ತದೆ. ರಾಕ್ಷಸ ಪಾತ್ರಗಳು "ಬಣ್ಣದ ವೇಷ"ವೆನಿಸುತ್ತದೆ. ಅನಂತರ ಕಿರಾತರು, ಕಪಿಗಳು, ಋಷಿ ಗಳು, ಹೆಣ್ಣು ಪಾತ್ರಗಳು ಕೂಡ ಬರುತ್ತವೆ. ಹನುಮನಾಯಕನೆಂಬ ಹಾಸ್ಯಪಾತ್ರ ಆಟದ ಮೊದಲು ಆಟದ ಕೊನೆಯ ವರೆಗೆ ಕಾಣಿಸಿಕೊಳ್ಳುತ್ತದೆ. ತನ್ನ ಉಲ್ಲಾಸಕರ ವಾದ ಲಾವಣೀಪದ್ಯಗಳಿಂದ, ತಮಾಷೆ ಮಾತುಗಳಿಂದ ಪ್ರೇಕ್ಷರನ್ನೊಲಿಸುವುದು ಇವನ ಕೆಲಸ. ಎಲ್ಲ ಯಕ್ಷಗಾನಗಳಲ್ಲಿಯೂ ಸಾಮಾನ್ಯವಾಗಿ ಒಂದೆರಡು ರಾಕ್ಷಸ ಪಾತ್ರಗಳು ಕಾಣಿಸಿಕೊಳ್ಳುತ್ತವೆ. ರಾಕ್ಷಸರು ರಂಗಪ್ರವೇಶಮಾಡುವಾಗ ಅವರ ಅಬ್ಬರ ಉಬ್ಬಟೆಗಳಿಗೆ ಪ್ರೇಕ್ಷಕರು ವಿಸ್ಮಯ ಭಯಾಕ್ರಾಂತರಾಗುತ್ತಾರೆ.

ಯಕ್ಷಗಾನ ಪ್ರದರ್ಶನ ನೇಸರುಬೀಳುವ ಕಾಲಕ್ಕೆ ತೊಡಗಿ ಇರುಳೆಲ್ಲ ನಡೆಯು ತ್ತದೆ. ಚಂಡೆಮದ್ದಳೆಯ ಹೊಡೆತ ಆರಂಭವನ್ನು ಸಾರುತ್ತದೆ. ಇದನ್ನು 'ಅಬ್ಬರ ತಾಳ' ಎನ್ನುತ್ತಾರೆ. 'ಸಭಾಲಕ್ಷಣ'ವೆಂಬ ನಾಂದೀಪದ್ಯದ ಹಾಡಿಕೆ ಮುಗಿದು ಕೋಡಂಗಿ ಕುಣಿತ, ಬಾಲಗೋಪಾಲರ ಕುಣಿತ, ಒಂದು ಜತೆ ಹೆಣ್ಣು ಪಾತ್ರಗಳ ಕುಣಿತ ನಡೆದಿರುತ್ತದೆ. ಇವೆಲ್ಲ ಇರುಳು ಒಂಬತ್ತರ ವೇಳೆಗೆ ಮುಗಿದು ನಿಜನಾಟಕ ಕೆಲಪಾತ್ರ ಗಳ ರಂಗಪ್ರವೇಶದ ಮೂಲಕ ತೊಡಗುತ್ತದೆ. ಇದಕ್ಕೆ 'ಒಡ್ಡೋಲಗ'ವೆನ್ನುತ್ತಾರೆ. ಇದು ಕಥಕ್ಕಳಿಯ "ಪುರಪ್ಪಾಡು"ವಿಗೆ ಸದೃಶವಾಗಿದೆ. ಆ ಮೇಲೆ ನೇಸರೇಳುವ ವರೆಗೆ ಆಟ ಬೆಳೆಯುತ್ತದೆ.

ಈ ಪ್ರದರ್ಶನಗಳಲ್ಲಿ ಹಳ್ಳಿಗರು ತುಂಬ ಸಂಭ್ರಮೋತ್ಸಾಹದಿಂದ ಇರುಳೆಲ್ಲ ಕಣ್ಣವೆ ತೆರೆದು ಕುಳಿತು ನೋಡುತ್ತಾರೆ. ಇದು ಅವರಿಗೆ ಒಂದು ರೀತಿ ಸಂತೋಷ ಸಾಧನೆ ಮಾತ್ರವಲ್ಲದೆ ಸರಳ ವಿದ್ಯಾಭ್ಯಾಸದ ನಿಜವಿಧಾನವಾಗಿದೆ. ಋಷಿಗಳ ಜ್ಞಾನ ಸಾರವನ್ನು ಮುಗ್ಧರಿಗೆ ಬೋಧಿಸುತ್ತದೆ. ಈ ನಾಟಕಗಳು ಸುಂದರ ಸತ್ಯಗಳನ್ನು, ಶ್ರೇಷ್ಠ ನೀತಿಬೋಧೆಗಳನ್ನು ಒಳಕೊಂಡಿವೆ. ಹಲಬಗೆಯ ವ್ಯವಹಾರದರಿವನ್ನು

ತುಂಬ ಪರಿಣಾಮಕಾರಿಯಾಗಿ ಇವು ಸಾಧಿಸುತ್ತವೆ. ಯಕ್ಷಗಾನದ ಭಾಷೆ ಸರಳವಾದರೂ ಘನವಾದ್ದು. ಹಾಡುಗಳು ಬೇಕಾದ ರಸಗಳನ್ನು ನೋಟಕರಲ್ಲಿ ತರತಕ್ಕವು. ಈ ನಾಟಕಗಳಿಂದಾಯ್ದ ಸೂತ್ರವಾಕ್ಯಗಳನ್ನು ಗ್ರಾಮೀಣರು ಆಗಾಗ್ಗೆ ತೆಗೆದು ಬಳಸುತ್ತಾರೆ. ಒಂದೆರಡನ್ನು ಇಲ್ಲಿ ನೋಡಬಹುದು: ದಾರಿತಪ್ಪಿದ ಗಂಡನಿಗೆ ಪ್ರತಿವ್ರತೆಯ ಎಚ್ಚರ—"ನಮ್ಮ ಸಂಸಾರ ಪೂರ್ತಿ ಕೆಡುವ ಕಾಲ ಬಂದಿದೆ; ಈ ನೆಲದಲ್ಲಿನ್ನು ಬಾಳುವಾಸೆ ಹೋಯಿತು". "ಪಂಚವಟಿ"ಯಲ್ಲಿ ಒಂದೆಡೆ ಮಂಡೋದರಿ ರಾವಣನನ್ನು ಕುರಿತು ಲಂಕೆಗೆ ಸೀತೆಯನ್ನು ತರುವುದು ಬೇಡ ಎಂಬ ಮಾತು ಬರುತ್ತದೆ. "ಸಂಸಾರ ಸಾಗರವನ್ನು ಈಸಲೆಳಸುವವರು, ಮೋಕ್ಷಮಾರ್ಗವನ್ನು ಸಾಧಿಸಬಯಸುವವರು ನನ್ನೊಡನೆ ಬರಲಿ—ಎಂಬ ಸೂಕ್ತಿ 'ಅತಿಕಾಯ ಕಾಳಗ'ದಲ್ಲಿ ಬರುತ್ತದೆ. ಹಳ್ಳಿಗರಲ್ಲಿ ಇವುಗಳ ಬಳಕೆ ವಿಶೇಷ."

ಹಳ್ಳಿಗಳಲ್ಲಿ ಹರಡಿಕೊಂಡಿರುವ ಜನಪದ ನಾಟಕ ಕಲೆ ಈ ಯಕ್ಷಗಾನ. ಇದು ಅನಕ್ಷರಸ್ಥ ಕಲಾವಿದರ ಕೃಷಿಯ ಫಲ. ಜನರಲ್ಲಿ ಇದು ಅರಿವುಗಳನ್ನು ತುಂಬುತ್ತದೆ. ಇದನ್ನು ಉಳಿಸಿ ಬೆಳಸಿಕೊಂಡು ಬರಬೇಕು.

[ಮದರಾಸು ವಿಶ್ವವಿದ್ಯಾನಿಲಯದ "*Annals of Oriental Research*" ಪತ್ರಿಕೆಯಲ್ಲಿ [ಸಂ X. ಭಾಗ II] ಎಂ. ಗೋವಿಂದರಾವ್, ಎಂ.ಎ., ಬಿ.ಒ.ಎಲ್ ಅವರು ಬರೆದ ಲೇಖನದಿಂದ.]

ಟಿ. ವಿ. ವೆಂಕಟಾಚಲಶಾಸ್ತ್ರಿ.

ಸಂಪಾದಕೀಯ

ಶಿಕ್ಷಣ ಮಾಧ್ಯಮ

ಕಳೆದ ಸಂಚಿಕೆಯಲ್ಲಿ ಶಿಕ್ಷಣಮಾಧ್ಯಮದ ವಿಷಯವಾಗಿ ಕಾಂಗ್ರೆಸ್ ಕಾರ್ಯ ಸಮಿತಿ ನಿರ್ಣಯಿಸಿರುವ ನೀತಿ ಸದ್ಯದ ಪರಿಸ್ಥಿತಿಯಲ್ಲಿ ಸಾಧುವಾದುದೆಂದೂ ಸ್ವಾಗತಾರ್ಹವೆಂದೂ ಹೇಳಿತ್ತು. ಅಂಥ ತುರ್ತು ನಿರ್ಣಯಕ್ಕೆ ನೆರೆಯ ರಾಜ್ಯದಲ್ಲಿ ನಡೆದ ರಾಜಕೀಯ ದುರ್ಘಟನೆಗಳೂ ಜನತೆಯ ತೀವ್ರಾಭೀಪ್ಸೆಯೂ ಕಾರಣವೆಂದು ಮತ್ತೆ ಹೇಳಬೇಕಾಗಿಲ್ಲ. ಹಲವಾರು ರಾಜಕೀಯ ಪಕ್ಷಗಳಲ್ಲಿ ದೇಶದ ಮುಂದಿರುವ ಅನೇಕಾನೇಕ ಸಮಸ್ಯೆಗಳ ಬಗೆಗೆ ತೀವ್ರ ಭಿನ್ನಾಭಿಪ್ರಾಯಗಳಿದ್ದರೂ ಭಾಷಾ ನೀತಿಯ ವಿಷಯದಲ್ಲಿ ಅವುಗಳೆಲ್ಲ ಏಕಾಭಿಪ್ರಾಯದಿಂದಿರುವುದನ್ನು ಮರೆಯಲಾಗದು. ಸರ್ವಪಕ್ಷಗಳೂ ಒಕ್ಕೊರಲಿನಿಂದ ಸ್ವಾಗತಿಸತಕ್ಕ ದೇಶಭಾಷಾಮಾಧ್ಯಮವನ್ನು ಜಾರಿಗೆ ತರಲು ಕೆಲವು ಪ್ರಾಂತಗಳು ಹಿಂದೆಮುಂದೆ ನೋಡುತ್ತಿರುವುದರ ರಹಸ್ಯ ವಾದರೂ ಏನು? ದೇಶವಿದೇಶಗಳ ಶಿಕ್ಷಣತಜ್ಞರು ದೇಶಭಾಷಾಮಾಧ್ಯಮದ ಸರ್ವೋಪಯುಕ್ತತೆಯನ್ನು ಒತ್ತಿ ಒತ್ತಿ ಘೋಷಿಸಿರುವಾಗ ಕೆಲವು ಪ್ರಾಂತಗಳ ತಾಟಸ್ಥ್ಯನೀತಿಗೆ ಕಾರಣವೇನು? ಸಾಮಾನ್ಯ ಜನತೆಯಿಂದ ಹೊರಸಿಡಿದು, ಅವರ ಆಶೋತ್ತರಗಳನ್ನು ಲಕ್ಷಿಸದ ಅಥವಾ ಅರ್ಥಮಾಡಿಕೊಳ್ಳಲಾರದ ಸ್ವಪ್ರತಿಷ್ಠರಾದ ಹತ್ತಾರು ಮಂದಿಯ ಪ್ರಭಾವದಿಂದ ಪಾರಾಗಲಾರದ ದುರ್ದಶೆಯೇ ಈಗಿನ ಪ್ರತಿ ಗಾಮೀ ನೀತಿಗೆ ಕಾರಣವೆನ್ನಲಡ್ಡಿಯಿಲ್ಲ. ಕಾಂಗ್ರೆಸ್ ಕಾರ್ಯಸಮಿತಿಯ ನಿರ್ಣಯ ಹೊರಬಿದ್ದು ಮಹಾಪ್ರಧಾನಿ ಸ್ಪಷ್ಟವಾಗಿ ಹೇಳಿಕೆಯಿತ್ತಮೇಲೆಯೂ ತಿರೋಗಾಮಿ ಶಕ್ತಿಗಳ ಅಪಸ್ವರ ಅಲ್ಲಲ್ಲೆ ಕೇಳಿಬರುತ್ತಿರುವುದು ಶೋಚನೀಯ ಸಂಗತಿ.

೧೯೫೮ರ ಜೂನ್ ತಿಂಗಳಿಂದ ಸರಕಾರೀ ಕಾಲೇಜುಗಳಲ್ಲಿ ಶಿಕ್ಷಣಮಾಧ್ಯಮವು ಹಿಂದಿಯಾಗಿರಬೇಕೆಂದು ಬೊಂಬಾಯಿ ಸರ್ಕಾರ ಮಾಡಿರುವ ನಿರ್ಧಾರ ಕಾಂಗ್ರೆಸ್ ಕಾರ್ಯಸಮಿತಿಯ ಮೇಲೆ ಸೇಡಿನ ಸಿಡಿಮದ್ದನ್ನೆಸೆದಂತಿದೆ. ಈ ಸಂದರ್ಭದಲ್ಲಿ ಗುಜರಾತು ವಿಶ್ವವಿದ್ಯಾಲಯದ ಸೆನೆಟ್ಟಿನ ದಿಟ್ಟತನದ ವಿವೇಕಪೂರ್ಣ ಪ್ರತಿಕ್ರಿಯೆ ಯನ್ನೂ ಅದರ ಆದರ್ಶನೀತಿಯನ್ನೂ ಇತರ ವಿಶ್ವವಿದ್ಯಾನಿಲಯಗಳು ಗಮನಿಸ ಬೇಕಾಗಿದೆ. ಗುಜರಾತಿಯೆ ಶಿಕ್ಷಣಮಾಧ್ಯಮವಾಗಬೇಕೆಂದೂ, ವಿಶೇಷ ಪರಿಸ್ಥಿತಿ ಯಲ್ಲಿ ಮಾತ್ರ ಹಿಂದಿಯನ್ನು ಬಳಸಬಹುದೆಂದೂ ಹಿಂದೆ ಆ ಸೆನೆಟ್ಟು ನಿರ್ಣಯ ಮಾಡಿತ್ತು. ಬೊಂಬಾಯಿ ಸರ್ಕಾರದ ಹೊಸ ಆಜ್ಞೆ ಹೊರಬಿದ್ದಮೇಲೆ ಆ

ನಿರ್ಣಯವನ್ನು ಬದಲಾಯಿಸಿ ಗುಜರಾತಿಯನ್ನುಳಿದು ಬೇರಾವ ಭಾಷೆಯೂ ಶಿಕ್ಷಣ ಮಾಧ್ಯಮವಾಗಕೂಡದೆಂದು ತೀರ್ಮಾನಿಸಿದೆ. 'ಪ್ರಾಂತ್ಯಜನತೆಯ ಮೇಲೆ ಹಿಂದೀ ಮಾಧ್ಯಮವನ್ನು ಕೇವಲ ಬಂದೂಕದ ಬೆಂಬಲದಿಂದ ಮಾತ್ರ ಹೊರಿಸಲು ಸಾಧ್ಯ' ಎಂದು 'ಹರಿಜನ' ವಾರಪತ್ರಿಕೆಗಳ ಸಂಪಾದಕರಾದ ಶ್ರೀ ಮಗನ್‌ಭಾಯಿ ಪಿ. ದೇಶಾಯಿಯವರು ಸೆನೆಟ್ ಸಭೆಯಲ್ಲಿ ಸಾರಿದರು. ಆಡಳಿತಗಾರರು ವಿವೇಕ ಯುತರಾಗಿ ದೂರದೃಷ್ಟಿಯಿಂದ ವರ್ತಿಸಿದ್ದರೆ ಇಂತಹ ಪರಿಸ್ಥಿತಿ ಉದ್ಭವಿಸುತ್ತಿರ ಲಿಲ್ಲ. ಆದರೆ ಸರಕಾರದ ನಿರ್ಣಯ ಕೊನೆಯದಲ್ಲವೆಂದು ಅಲ್ಲಿಯ ಶಿಕ್ಷಣಶಾಖೆಯ ಮುಖ್ಯಾಧಿಕಾರಿಗಳು ಕೊಟ್ಟಿರುವ ಹೇಳಿಕೆಯಿಂದ (ನವಯುಗ ೨೭-೪-೫೪) ಕದಡಿದ ವಾತಾವರಣ ಸ್ವಲ್ಪ ತಿಳಿಗೊಂಡಂತಾಗಿದೆ.

ಆದರೆ ಶಾಂತ ವಾತಾವರಣವನ್ನು ಕ್ಷುಬ್ಧಗೊಳಿಸುವ ಸನ್ನಿವೇಶಗಳು ಮತ್ತೆ ಮತ್ತೆ ಉದ್ಭವಿಸುತ್ತಿರುವುದು ನಾಡಿನ ದುರ್ದೈವವೆಂದೇ ಹೇಳಬೇಕು. ಸಾಮ್ರಾಜ್ಯ ಷಾಹಿತ್ವ ತೊಲಗಿ ಪ್ರಜಾಪ್ರಭುತ್ವ ನೆಲೆಗೊಳ್ಳುತ್ತಿರುವಾಗ, ಪಾರತಂತ್ರ್ಯ ತೊಲಗಿ ಸ್ವಾತಂತ್ರ್ಯ ಸ್ಥಾಪನೆಗೊಳ್ಳುತ್ತಿರುವಾಗ ದೇಶನಾಯಕರ ಎಚ್ಚರಿಕೆಯ ನುಡಿಗಳನ್ನೂ ಗಮನಿಸದೆ, ಸೌಹಾರ್ದ ಸಹಾನುಭೂತಿ ಸಮಾನತೆಗಳನ್ನು ಮರೆತು, ಸ್ವಾರ್ಥ ಸ್ವಪ್ರತಿಷ್ಠೆಗಳಿಂದ, ದರ್ಪ ಮತ್ತು ಆಕ್ರಮಣ ಮನೋಭಾವದಿಂದ ಮೆರೆಯಲೆಳಸು ತ್ತಿರುವ ಹಿಂದಿಯ ಸಾಮ್ರಾಜ್ಯಷಾಹಿತ್ವನೀತಿ ನಾಡಿನ ಐಕ್ಯಕ್ಕೆ ಕೊಡಲಿ ಪೆಟ್ಟಾಗಿದೆ. ಇಂಥ ಮನೋಭಾವ ಬಲಿಯುತ್ತಿರುವುದನ್ನು ಕಂಡೇ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ಏಪ್ರಿಲ್ ತಿಂಗಳಲ್ಲಿ ನಾಗಪುರದಲ್ಲಿ ವಿದರ್ಭ ಸಾಹಿತ್ಯಸಂಘದ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸುತ್ತ "ವಿವಿಧ ಪ್ರಾಂತ್ಯಗಳ ಭಾಷೆಗಳು ಹಾಗೂ ಅಲ್ಲಿಯ ಜನರ ಜೀವನ ರೀತಿಗಳು ಅಭಿವೃದ್ಧಿ ಹೊಂದಿದಾಗಲೇ ಇಡೀ ಸಂಘಟನೆಯನ್ನು ಸಾಧಿಸಬಹುದು" ಎಂದು ಸ್ಪಷ್ಟವಾಗಿ ನುಡಿದಿದ್ದಾರೆ. ಮೇ ೬ ಮತ್ತು ೭ ನೆಯ ತಾರೀಖು ಲೋಕಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಭಾಷಾಸಮಸ್ಯೆಯ ಬಗ್ಗೆ ಚರ್ಚೆ ನಡೆದು 'ಒತ್ತಾಯದ ಭಾಷಾನೀತಿ ಬೇಡವೆಂದು' ಪ್ರಧಾನಿ ನೆಹ್ರೂ ಅವರೂ, 'ಪ್ರಾದೇಶಿಕ ಭಾಷೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಅಗತ್ಯವೆಂಬುದಾಗಿ' ಶ್ರೀ ಕಾಕಾ ಕಾಲೇಲ್ಕರ್ ಅವರೂ ಖಂಡಿತವಾಗಿ ನುಡಿದಿದ್ದಾರೆ. ಇಂಥ ಪರಿಸ್ಥಿತಿ ಯಲ್ಲಿಯೂ ಮೇ ತಿಂಗಳಲ್ಲಿ ಅಲಹಾಬಾದಿನಲ್ಲಿ ಸೇರಿದ ಹಿಂದೀ ಸಾಹಿತಿಗಳ ಮತ್ತು ಅಧ್ಯಾಪಕರ ಸಭೆ ಹಿಂದೀ ಭಾಷೆಯ ಪ್ರಚಾರಕ್ಕಾಗಿ ಪ್ರತ್ಯೇಕ ಸಚಿವಶಾಖೆಯೊಂದು ಕೇಂದ್ರದಲ್ಲಿ ಸ್ಥಾಪಿತವಾಗಬೇಕೆಂದು ಮಾಡಿರುವ ನಿರ್ಣಯ ಕ್ಷುಬ್ಧ ವಾತಾವರಣ ವನ್ನು ಪ್ರಕ್ಷುಬ್ಧಗೊಳಿಸುವಂತಿದೆ. ಹಿಂದೀ ಸಂಯುಕ್ತಭಾಷೆಯೆಂದು ನಾಡಿಗೆ

ನಾಡೇ ಒಪ್ಪಿಕೊಂಡು ರಾಜ್ಯಾಂಗದಲ್ಲಿ ಸ್ಪಷ್ಟಪಡಿಸಿರುವುದರಿಂದ ಆ ಭಾಷೆಯ ಪ್ರಚಾರಪ್ರಗತಿಗಳು ಸ್ವಾಭಾವಿಕವಾಗಿಯೇ ನಡೆಯುತ್ತವೆ. ಬಲವಂತದ ಮಾಘಸ್ನಾನ ಅನಾವಶ್ಯಕ. ಒತ್ತಾಯದ ನೀತಿಯಿಂದ ಒಳಿತಿಗಿಂತ ಕೇಡೇ ಹೆಚ್ಚಾಗಿ ಸಂಭವಿಸಬಹುದೆಂದು ದುಃಖದಿಂದ ಹೇಳಬೇಕಾಗಿದೆ. ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ನಾಡಿನ ಕ್ಷೇಮಭದ್ರತೆಗಳ ಕಡೆಗೆ ಸರ್ವರ ಗಮನವೂ ಹರಿಯಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಬೇಕಾಗಿಲ್ಲ.

ಈ ಸಂದರ್ಭದಲ್ಲಿ ೨೦-೫-೫೪ ರ ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯದಲ್ಲಿ ಉಕ್ತವಾಗಿರುವ ಒಂದೆರಡು ಮಾತುಗಳನ್ನು ಹಿಂದೀಭಾಷೆಯ ಅಂಧಾಭಿಮಾನಿಗಳಿಗಾಗಿ ಇಲ್ಲಿ ಉದ್ಧರಿಸಿದೆ: "ನಮ್ಮ ಹಿಂದಿಯ ಪಂಡಿತರೂ, ಪ್ರೇಮಿಗಳೂ, ಅಂತರರಾಷ್ಟ್ರೀಯ ವ್ಯವಹಾರದ ಏಕಮಾತ್ರ ಭಾಷೆಯಾದ ಇಂಗ್ಲಿಷನ್ನೂ ಗುಲಾಮಗಿರಿಯ ಕುರುಹೆಂಬ ವಾದದ ಮೇಲೆ ಉಚ್ಚಾಟನೆ ಮಾಡಿ ಭಾರತದಲ್ಲಿ ಅದರ ಬದಲು ಹಿಂದಿಯನ್ನು ಸ್ಥಾಪಿಸಬೇಕೆಂಬ ಹಟ ತೊಟ್ಟಿದ್ದಾರಷ್ಟೆ. . . . ಈಗ ಪ್ರತ್ಯೇಕ ಹಿಂದೀ ಸಚಿವಶಾಖೆಯನ್ನೇ ಸೃಷ್ಟಿಸಬೇಕೆಂಬ ಸೂಚನೆ ಬಂದಿರುವುದು "ಹಿಂದೀ ಷಾಹಿಗಳ" ಹಂಬಲದ ಮತ್ತೊಂದು ಮುಖ. ಆದರೆ ಹಿಂದಿಯೊಂದಕ್ಕೆ ಮಾತ್ರ ಸಚಿವಶಾಖೆಯ ಕಿರೀಟ ಕೊಂಬು ಕಟ್ಟುವುದೇನು? ಭಾರತ ನಾನಾ ಭಾಷೆಗಳ ನಾಡು. ಇತರ ಪರಿಪಕ್ವ ಭಾಷೆಗಳನ್ನು ಕೊಂದು ಪದಸಂಪತ್ತಿಗಾಗಿ ಪರದಾಡುತ್ತಿರುವ ಉತ್ತರದವರ ನುಡಿಯೊಂದೇ ಉದ್ಧಾರವಾಗಬೇಕೆಂದು ರಾಜ್ಯಾಂಗದಲ್ಲಿ ಎಲ್ಲೂ ಹೇಳಿಲ್ಲ. ದೇಶದ ಎಲ್ಲ ಭಾಷೆಗಳ ಅಭಿವೃದ್ಧಿ, ಹಿತರಕ್ಷಣೆಯ ಹೊಣೆ, ಸರಕಾರದ ಮೇಲಿದೆ. ನ್ಯಾಯವಾಗಿ ನೋಡಿದರೆ ಪ್ರಸಕ್ತ ಹಿಂದೀಶಾಹಿಯ ಅವಾಂತರದಲ್ಲಿ ಇತರ ಭಾಷೆಗಳ ಹಿತರಕ್ಷಣೆ ಅಗತ್ಯವಾಗಿದೆ . . . ಹಿಂದಿ ಬೆಳೆಯಲಿ, ಬೆಳಗಲಿ . . . ಆದರೆ ಈ ಸಾಧನೆ ಅದರ ಸ್ವಯಂಶಕ್ತಿಯಿಂದ ಆಗಲಿ. ಒಲ್ಲದ ಗಂಟಲೊಳಗೆ ಬಲವಂತದಿಂದ ತುರುಕುವ ವಿಧಾನದಿಂದಲ್ಲ ಎಂಬುದನ್ನು ಹಿಂದೀ ಉದ್ಧಾರಕರು ಸ್ವಲ್ಪಮಟ್ಟಿಗೆ ಅರಿತರೆ ಇತರ ಭಾಷೆಗಳ ಹಿತಕ್ಕೆ ಮಾತ್ರವಲ್ಲದೆ ಹಿಂದಿಗೂ ಬಹುಮಟ್ಟಿಗೆ ಉಪಕಾರ ಮಾಡಿದಂತಾದೀತು" ಹಿಂದೀ ಭಾಷೆಯ ಹಿತದೃಷ್ಟಿಯಿಂದಲೇ ಈ ಮಾತುಗಳನ್ನು ಸರ್ವರೂ ಗಮನಿಸಬೇಕಾಗಿದೆ. ಹಿಂದೀ ಅಂಧಾಭಿಮಾನಿಗಳ ಅತಿರೇಕದ ವಾದ ಕೇಳಿಸುತ್ತಿದ್ದಾಗಲೇ ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಶ್ರೀ ಬಲವಂತರಾಯ್ ಮೆಹ್ತಾರವರು 'ಪ್ರಾದೇಶಿಕ ಭಾಷೆಯೇ ವಿಶ್ವವಿದ್ಯಾನಿಲಯದ ಘಟ್ಟದಲ್ಲಿ ಶಿಕ್ಷಣಮಾಧ್ಯಮವಾಗಬೇಕೆಂದು' ಅಹಮ್ಮದಾಬಾದಿನಲ್ಲಿ ಹೇಳಿರುವ ಮಾತು ಆಶಾದಾಯಕವಾಗಿದೆ.

ನೂತನ ವೈಸ್-ಚಾನ್ಸಲರ್ ಅವರು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವೈಸ್-ಚಾನ್ಸಲರಾಗಿದ್ದು ನಿವೃತ್ತಿಹೊಂದಿ ವಿಶ್ವಸಂಸ್ಥೆಯಲ್ಲಿ ದೊಡ್ಡದೊಂದು ಹುದ್ದೆಗೆ ನೇಮಕಗೊಂಡಿರುವ ಶ್ರೀ ಬಿ. ಎಲ್. ಮಂಜುನಾಥರವರ ಸ್ಥಾನದಲ್ಲಿ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಎಲ್. ಡಿಸೌಜಾ ರವರು ನೇಮಿತರಾಗಿದ್ದಾರೆ. ಈ ಎರಡೂ ಸಂತೋಷದ ಮತ್ತು ಹೆಮ್ಮೆಯ ಸಂಗತಿಗಳು. ಈ ಇಬ್ಬರು ಮಹನೀಯರಿಗೂ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು.

ಶ್ರೀಮಾನ್ ವಿ. ಎಲ್. ಡಿಸೌಜಾರವರು ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಉಪಪ್ರಾಧ್ಯಾಪಕರಾಗಿ ನೇಮಕವಾಗಿ, ಶ್ರೀ ಎನ್. ಎಸ್. ಸುಬ್ಬರಾಯರು ಶಿಕ್ಷಣಶಾಖೆಯ ಮುಖ್ಯಾಧಿಕಾರಿಗಳಾದ ಮೇಲೆ ಅವರ ಸ್ಥಾನ ಬಿಡುವಾಗಲು, ಪ್ರಾಧ್ಯಾಪಕರಾಗಿ, ಇತ್ತೀಚೆಗೆ ಅದೇ ಕಾಲೇಜಿನ ಪ್ರಿನ್ಸಿಪಾಲರಾಗಿ ಸುಮಾರು ೨೯ ವರ್ಷಗಳು ವಿಶ್ವವಿದ್ಯಾನಿಲಯಕ್ಕೆ ಸೇವೆ ಸಲ್ಲಿಸಿ, ಖ್ಯಾತರಾಗಿದ್ದಾರೆ. ಅವರ ಶಿಷ್ಯರಲ್ಲಿ ಕೆಲವರು ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೫೦ ರಲ್ಲಿ ಅಖಿಲ ಭಾರತ ಆರ್ಥಿಕ ಸಮ್ಮೇಲನದ ಅಧ್ಯಕ್ಷಪದವಿಯ ಗೌರವಕ್ಕೆ ಭಾಜನರಾದುದೂ, ಕಳೆದ ವರ್ಷ ಬ್ಯಾಂಕುಗಳ ವ್ಯಾಜ್ಯ ಪರಿಹಾರ ಸಮಿತಿಯ ಸದಸ್ಯರಾಗಿ ಕೇಂದ್ರ ಸರ್ಕಾರದಿಂದ ನೇಮಕವಾದುದೂ, ಇತ್ತೀಚೆಗೆ ಭಾಷಾವಾರು ಪ್ರಾಂತನಿರ್ಮಾಣದ ಸಂದರ್ಭದಲ್ಲಿ ನೇಮಕವಾಗಿರುವ ಅಂಕಿ ಅಂಶಗಳ ಶೋಧನಾ ಸಮಿತಿಯ ಸದಸ್ಯತ್ವವನ್ನು ಪಡೆದಿರುವುದೂ, ಜೊತೆಗೆ ಅವರ ಸಂಶೋಧನಾತ್ಮಕವಾದ ಲೇಖನಗಳೂ, ಅವರ ಪರಿಪಕ್ವಾನುಭವಕ್ಕೂ ವಿದ್ವತ್ತಿಗೂ ಜನಪ್ರಿಯತೆಗೂ ಸಾಕ್ಷಿಯಾಗಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಅವರ ವಿನೋದಶೀಲವೂ ಸ್ನೇಹಮಾಧುರ್ಯವೂ ನಯವಿನಯಗಳೂ ನೈತಿಕಜೀವನವೂ ವಿಶ್ವವಿದ್ಯಾನಿಲಯದ ಹೊರಗೂ ಒಳಗೂ ಜನರ ಮೆಚ್ಚುಗೆಯನ್ನು ಸಂಪಾದಿಸಿವೆ.

ಕನ್ನಡ ಭಾಷೆಯ ವಿಷಯದಲ್ಲಂತು ಡಿಸೌಜಾರವರಿಗೆ ತುಂಬ ಅಭಿಮಾನವಿದೆ, ಶ್ರದ್ಧೆಯಿದೆ. ಕನ್ನಡಿಗರ ಆಶೋತ್ತರಗಳನ್ನು ಚೆನ್ನಾಗಿ ಅರಿತಿರುವ ಸೂಕ್ಷ್ಮಗ್ರಾಹಿಗಳವರು. ವಿಶ್ವವಿದ್ಯಾನಿಲಯದ ಘಟ್ಟದಲ್ಲಿಯೂ ಕನ್ನಡ ಭಾಷೆ ಶಿಕ್ಷಣಮಾಧ್ಯಮವಾದರೆ ದೇಶದ ಪ್ರಗತಿಸಾಧನೆಗೆ ಅನುಕೂಲವಾಗುತ್ತದೆಂದು ದೃಢವಾಗಿ ನಂಬಿದ್ದಾರೆ. ನಂಬಿರುವುದು ಮಾತ್ರವೇ ಅಲ್ಲ, ಈ ಬಗ್ಗೆ ಪರಿಶೀಲನೆ ನಡೆಸಲು ಎರಡು ವರ್ಷಗಳ ಹಿಂದೆ ವಿಶ್ವವಿದ್ಯಾನಿಲಯ ನೇಮಿಸಿದ ಪ್ರವೀಣರ ಸಮಿತಿಯ ಅಧ್ಯಕ್ಷರಾಗಿದ್ದು ಸಿದ್ಧಪಡಿಸಿರುವ ವರದಿ ಅವರ ಶ್ರದ್ಧೋತ್ಸಾಹಗಳಿಗೆ ಸಾಕ್ಷಿಯಾಗಿರುವುದಲ್ಲದೆ,

ಅವರೇ ಉಪಸ್ಥಾನಪತಿಗಳಾಗಿರುವ ಈ ಸುಸಮಯದಲ್ಲಿ ಆ ವರದಿ ಅವರಿಗೆ ಮಾರ್ಗ ದರ್ಶಕವಾಗಿಯೂ ಇದೆಯೆನ್ನುವುದರಲ್ಲಿ ಸಂದೇಹವಿಲ್ಲ. ವೈಸ್-ಚಾನ್ಸಲರ ಕೆಲಸವನ್ನು ವಹಿಸಿಕೊಂಡ ಮೇಲೆ ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿ ನಾವು ಅವರನ್ನು ಭೇಟಿ ಮಾಡಿದಾಗ ಈ ಪತ್ರಿಕೆಯ ಪ್ರಗತಿಯನ್ನು ಕೇಳಿ ಮೆಚ್ಚಿದರು. ವಿಶ್ವವಿದ್ಯಾನಿಲಯಕ್ಕೆ ಹೆಸರುತರುವ ಮತ್ತು ಉಳಿಸುವ ಕೃತಿಗಳೆಂದರೆ ಪ್ರಬುದ್ಧ ಕರ್ಣಾಟಕ, ಪ್ರಚಾರೋಪನ್ಯಾಸಮಾಲೆ ಮತ್ತು ಗ್ರಂಥಮಾಲೆಗಳೆಂದು ಮುಕ್ತಕಂಠದಿಂದ ಹೇಳಿದರು. ಕನ್ನಡಭಾಷೆಯ ಪ್ರಗತಿಯೇ ನನ್ನ ನೆಚ್ಚಿನ ಧ್ಯೇಯ, ಅದೇ ಹಗಲಿರುಳೂ ನನ್ನನ್ನು ಬಾಧಿಸುತ್ತಿದೆ, ಅದಕ್ಕಾಗಿ 'ನಾನು ಏನುಮಾಡಲೂ ಸಿದ್ಧ' ಎಂದು ಅಭಿಮಾನದಿಂದ ಹೇಳಿದರು. ಕನ್ನಡ ವಿಶ್ವಕೋಶರಚನೆಯ ಬಗ್ಗೆ ತೀವ್ರಕ್ರಮ ಕೈಗೊಳ್ಳುವುದಾಗಿ ನುಡಿದರು. ಇವಿಷ್ಟು ಯಾವ ವೈಸ್-ಚಾನ್ಸಲರಾದರೂ ಹೆಮ್ಮೆಯಿಂದ ಮಾಡಬಹುದಾದ, ಮಾಡಬೇಕಾಗಿರುವ ಕಾರ್ಯಗಳು. ಮನಸ್ಸಿದ್ದರೆ ಅದು ಅಸಾಧ್ಯವಲ್ಲ. ಡಿಸೌಜಾರವರಿಗೆ ಮನಸ್ಸಿದೆ, ಶ್ರದ್ಧೆಯಿದೆ; ಜೊತೆಗೆ ಅಧಿಕಾರವಿದೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಬಗ್ಗೆ ಹಿಂದಿನಿಂದ ಎಷ್ಟು ಅಸಡ್ಡೆ ಇತ್ತೆಂಬುದು ಅವರಿಗೆ ಚೆನ್ನಾಗಿ ಗೊತ್ತು. ತಮ್ಮ ಅಧಿಕಾರಾವಧಿಯಲ್ಲಿ ಆ ನ್ಯೂನತೆಗಳನ್ನೆಲ್ಲ ಸರಿಪಡಿಸುವುದರ ಜೊತೆಗೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಶಿಕ್ಷಣಮಾಧ್ಯಮವಾಗುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟು ವಿಶ್ವಕೋಶರಚನಾಕಾರ್ಯವನ್ನು ಆರಂಭಿಸಲು ತಕ್ಕ ಏರ್ಪಾಡನ್ನು ಮಾಡಿ, ದಿ|| ಎನ್. ಎಸ್. ಸುಬ್ಬರಾವ್ ಮತ್ತು ಬಿ. ಎಂ. ಶ್ರೀಕಂಠಯ್ಯನವರ ಸಾಲಿನಲ್ಲಿ ಮನ್ನಣೆ ಪಡೆಯುವರೆಂದು ಆಶಿಸಿ ಅವರಿಗೆ ಹಾರ್ದಿಕವಾದ ಸ್ವಾಗತವನ್ನು ಬಯಸುತ್ತೇವೆ.

ಸಾದರ ಸ್ವೀಕಾರ

೧. **ಚಂದ್ರಮಂಚಕೆ ಬಾ, ಚಕೋರಿ!** (ಪ್ರೇಮಗೀತೆ)—ಲೇಖಕರು : ಶ್ರೀ. ಕುವೆಂಪು ಅವರು ; ಪ್ರಕಾಶಕರು : ಉದಯರವಿ, ವಾಣೀವಿಲಾಸಪುರಂ, ಮೈಸೂರು ; ಪುಟಗಳು ೭೨ ; ಉತ್ತಮ ಪ್ರತಿ ಬೆಲೆ, ರೂ. ೨-೧೨-೦.

೨. **ಪ್ರೇಮಕಾಶ್ಮೀರ** (ಪ್ರೇಮಗೀತೆ)—ಲೇಖಕರು : ಶ್ರೀ. ಕುವೆಂಪು ಅವರು ; ಪ್ರಕಾಶಕರು : ಉದಯರವಿ, ವಾಣೀವಿಲಾಸಪುರಂ ಮೈಸೂರು ; ಪುಟಗಳು ೭೪ ; ಬೆಲೆ, ರೂ. ೨-೪-೦.

೩. **ಮಾನಸ ಸರೋವರ** (ಕತೆ)—ಲೇಖಕರು (ಮೂಲ) : ಪ್ರೇಮಚಂದ ; ಅನುವಾದಕರು : ಮೇವುಂಡಿ ಮಲ್ಲಾರಿ ; ಪ್ರಕಾಶಕರು : ಮಿಂಚಿನಬಳ್ಳಿ, ಧಾರವಾಡ ; ಪುಟಗಳು ೧೨೦ ; ಬೆಲೆ, ರೂ. ೧-೪-೦.

೪. **ನಾಯಿಯ ಕಥೆ**—ಲೇಖಕರು : ಪ್ರೇಮಚಂದ ; ಅನುವಾದಕರು : ಬಾಳಾಚಾರ್ಯ ಅವಧಾನಿ ; ಪ್ರಕಾಶಕರು : ಮಿಂಚಿನಬಳ್ಳಿ, ಧಾರವಾಡ ; ಪುಟಗಳು ೫೪ ; ಬೆಲೆ, ೫ ಆಣೆ.

೫. **ಬೆಂಡ ಹೃದಯ** (ರೂಪಕ)—ಲೇಖಕರು : 'ಆನಂದಕಂದ' ; ಪ್ರಕಾಶಕರು : ಶರತ್ ಪ್ರಕಾಶನ ಮಂದಿರ, ಧಾರವಾಡ ; ಪುಟಗಳು : ೧೧೨+೪ ; ಬೆಲೆ, ರೂ. ೧-೪-೦.

೬. **ಅನಾವರಣ** (ತತ್ತ್ವ)—ಲೇಖಕರು: ಡಾ|| ರಾಮದಾಸ ಮಹಾಬಲೇಶ್ವರ ಮಾಸೂರಕರ, ಸಿದ್ಧಾರ್ಥ ಕ್ಲಿನಿಕ್, ಕುಮಟಾ (ಉ. ಕ.) ; ಪುಟಗಳು iv+viii+೬೪ ; ಬೆಲೆ, ೧೨ ಆಣೆ.

೭. **ಕಿರಿಯರ ಕಿನ್ನರಿ** (ಮಕ್ಕಳ ಗೀತೆ)—ಲೇಖಕರು: ಶ್ರೀ. ಪ. ಸೀತಾರಾಮಭಟ್ಟ, ವಿಿತ್ತ್ಲ್ಲ್, ದ. ಕ ; ಪುಟಗಳು ೨೪ ; ಬೆಲೆ, ೪ ಆಣೆ.

೮. **ದಾರಿಯಲ್ಲಿ ದೀಪಧಾರಿ** (ಪ್ರಬಂಧಗಳು)—ಲೇಖಕರು : ಶ್ರೀ. ಸ್ವಾಮಿ ಸೋಮನಾಥಾನಂದಜಿ ; ಪ್ರಕಾಶಕರು : ಶ್ರೀ ರಾಮಕೃಷ್ಣಾಶ್ರಮ, ಮೈಸೂರು ; ಪುಟಗಳು ಕ್ರೌ. ಅ. ಪ. ೯೪ ; ಬೆಲೆ, ರೂ. ೧-೦-೦.

೯. **ಆರ್ಯಕೀರ್ತಿ** (ಪ್ರಥಮಖಂಡ)—ಲೇಖಕರು : ದಿ|| ಶ್ರೀ. ಚ. ವಾಸುದೇವಯ್ಯ, ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ಕ್ರೌ. ಅ. ಪ. ೧೪೬ ; ಬೆಲೆ, ರೂ. ೨-೪-೦.

೧೦. **ಕನ್ನಡ ಮೇಘಸಂದೇಶ** (ಖಂಡಕಾವ್ಯ)—ಲೇಖಕರು : ದಿ|| ಶ್ರೀ. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ಫೂಲ್ಸ್‌ಕ್ಯಾಪ್ ೧/೮ ಆಕಾರದಲ್ಲಿ ೪೮ ; ಬೆಲೆ, ೧೦ ಆಣೆ.

೧೧. **ಮರುಮದುವೆ** (ಸಣ್ಣ ಕಥೆ)—ಲೇಖಕರು : ಶ್ರೀಮತಿ ಎಚ್. ವಿ. ಸಾವಿತ್ರಮ್ಮ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೨೨೨ ; ಬೆಲೆ, ರೂ. ೧-೪-೦.

೧೨. ರಸಸರಸ್ವತಿ ಮತ್ತು ಇತರ ಕವನಗಳು—ಲೇಖಕರು : ಶ್ರೀ. ಪು. ತಿ. ನರಸಿಂಹಾಚಾರ್ ಅವರು ; ಪ್ರಕಾಶಕರು : ಕನ್ನಡಕವಿ ಕಾವ್ಯಮಾಲೆ, ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು ; ಪುಟಗಳು viii + ೬೩ ; ಬೆಲೆ, ಸಾದಾ ಪ್ರತಿ ರೂ. ೧.೮-೦ ; ಉತ್ತಮ ಪ್ರತಿ ರೂ. ೨-೮-೦.

೧೩. ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ (ಶ್ರೀ. ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಸರಳ ಗದ್ಯಾನುವಾದ)—ಅನುವಾದಕರು : ಶ್ರೀ. ದೇ. ಜವರೇಗೌಡ ; ಪ್ರಕಾಶಕರು : ಸಾಹಿತ್ಯ ದರ್ಶನ ಮಾಲೆ, ಗುರುಕೃಪಾ, ವಿ. ವಿ. ಮೊಹಲ್ಲ, ಮೈಸೂರು ; ಪುಟಗಳು ೫೨ + ೩೪೯ ; ಬೆಲೆ, ರೂ. ೪-೧೨-೦.

ಪ್ರಾಚ್ಯಲೇಖನಮಾಲೆ

ಶಿವಾನುಭವ—ಮಾರ್ಚ್, ಏಪ್ರಿಲ್, ೧೯೫೪.

೧. ಷ. ಬ್ರ. ಭಕ್ತಸ್ಥಲವೂ ಭಗವದ್ಗೀತೆಯೂ—ಶ್ರೀ. ಸಿ. ನಾ. ಮಹಾಂತಣ್ಣನವರು, ಹುನ್ನೂರು.

೨. ವಚನಧರ್ಮ ಅರ್ಥಾತ್ ಲಿಂಗವಂತ ಧರ್ಮವು—ಧರ್ಮಾಭಿಮಾನಿ

೩. ಚಿತ್ (ಚಿತ್ತು)—ಶ್ರೀ. ಬಸವಪ್ಪ ಚನ್ನಪ್ಪ ಪಟ್ಟೇದ.

೪. ಅಕ್ಕಮಹಾದೇವಿ—ಶ್ರೀ. ಎಸ್. ಎಮ್. ಜಾಡರ, ಧಾರವಾಡ.

ಶಿವಾನುಭವ—ಮೇ, ೧೯೫೪.

೧. ಶಿವಾನುಭವ ಮಂಟಪ—ಶ್ರೀ. ಪ್ರೊ|| ಡಿ. ಕೆ. ಭೀಮಸೇನರಾವ್, ಎಂ.ಎ.

೨. ಭಕ್ತಿಯೋಗ—ಶ್ರೀ ಬಂಥನಾಳ ಶಿವಯೋಗಿಗಳು.

೩. ಶಿವಶರಣರ ಚರಿತ್ರೆಗಳು—ಶ್ರೀ. ರಾ. ಬ. ಫ. ಗು. ಹಳಕಟ್ಟಿ ಬಿ.ಎ., ಎಲ್.ಎಲ್.ಬಿ.

ಶರಣಸಾಹಿತ್ಯ—ಏಪ್ರಿಲ್, ಮೇ, ೧೯೫೪.

೧. ಪಾಲ್ಕುರಿಕಿ ಸೋಮನಾಥ ಕವಿ—ಶ್ರೀ. ಬಂಡಾರು ತಮ್ಮಯ್ಯನವರು, ಕಾಕಿನಾಡ.

೨. ಅಲ್ಲಮ—ಶ್ರೀ. ದೇಸಾಯಿ ಪಾಂಡುರಂಗರಾಯರು, ಎಂ.ಎ.

೩. ಹಿಂದೂ ಧರ್ಮದ ಮೂಲ ಮತಸ್ವರೂಪ—ಶ್ರೀ. ಎನ್. ಎಸ್. ಅನಂತ ರಂಗಾಚಾರ್ಯ ಬಿ.ಎ. (ಆನರ್ಸ್), ಬಿ.ಟಿ.

೪. ಬಸವಣ್ಣನವರ ವಿಶ್ವಧರ್ಮ—ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳು.

೫. ಓರುಂಗಲ್ಲು ಕೋಟೆ—ಶ್ರೀ. ಪ್ರೊ|| ಡಿ. ಕೆ. ಭೀಮಸೇನರಾವ್, ಎಂ. ಎ.

ಜಯ ಕರ್ಣಾಟಕ—ಏಪ್ರಿಲ್, ೧೯೫೪.

೧. ಹಿಂದೀ ವಾಙ್ಮಯ—ಶ್ರೀ. ಕೆಬ್ಬಳ್ಳಿ ಗಣಪತಿಶರ್ಮ, ರಾಷ್ಟ್ರಭಾಷಾ ವಿಶಾರದ.

೨. ಸಂಗೀತ—ನೃತ್ಯ—ನಾಟ್ಯಗಳ ಕುರಿತು ಕೆಲವು ಮಹಾಕೃತಿಗಳು—'ನಾಟ್ಯ ರಸಿಕ'.

೩. ವಾದಭೂಮಿ 'ಯಕ್ಷಗಾನದ ಪ್ರಾಚೀನತೆ'—ಶ್ರೀ. ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

೪. ಗುರುಕುಲ ಶಿಕ್ಷಣದ ಗೊತ್ತುಗುರಿಗಳು—ಶ್ರೀ. ಡಾ. ವರದರಾಜ ಉಮರ್ಜಿ, ಎಂ.ಎ., ಪಿ.ಎಚ್.ಡಿ.

ಜಯ ಕರ್ನಾಟಕ—ಮೇ, ೧೯೫೪.

೧. ಮಾನವಕುಲದ ಕಲ್ಯಾಣಕ್ಕೆ ಭಾರತದ ಕಾಣಿಕೆ—ಮೂಲ : ಶ್ರೀ. ಆನಂದ ಕುಮಾರಸ್ವಾಮಿಯವರು, ಅನುವಾದಕರು. : ಶ್ರೀ. ತಟ್ಟಿ ಶ್ಯಾಮ ರಾಯರು, ಬಿ.ಎ.

೨. ಹೊನ್ನಮ್ಮ—ಶ್ರೀಮತಿ ಸರೋಜಿನಿ ಶಿಂತ್ರಿ, ಎಂ.ಎ.

ಜಯ ಕರ್ನಾಟಕ—ಜೂನ್, ೧೯೫೪.

೧. ವೈದಿಕ ದೇವತೆಗಳು—ಶ್ರೀ. ರಾ. ಭ. ಹಾಸಣಗಿ, ವಿದ್ವಾನ್.

ಭಾರತಿ—ಜೂನ್, ೧೯೫೪.

೧. ಆಂಧ್ರಾದಿ ಪದಾಲ ಆವಿಷ್ಕರಣ—ಶ್ರೀ. ಟೇಕುಮಳ್ಳ ಕಾಮೇಶ್ವರರಾವು.

The Adyar Library Bulletin—May, 1954.

(1) 'The Dhvani-in-Sanskrit Poetics'—Mr. LOUIS RENOU.

(2) 'Some Abhidharma Problems'—SRI N. AIYASWAMI SASTRI.

(3) 'The Tripurā Upaniṣad' (Translated with notes based on the commentary of Sri Upaniṣad Brahmayogin—SRI A. G. KRISHNA WARRIER.

(4) i. The meaning of Ganapati.
ii. Invocation (Padma Purāṇa).
iii. The Birth of Gaṇeśa (Śiva Purāṇa)—Mr. ALAIN DANIELON.

Journal of Sri Venkatesvara Oriental Institute, Tirupati—January June, 1953.

(1) Ourselves: 'Our Home, Race and Language'—SRI K. RAMA KRISHNAIYA, M.A.

(2) Mysticism—'A Critical Study'—DR. K. C. VARADACHARI, M.A., PH.D.

(3) 'Shiva-Lingum and Phallus Worship in Indus Valley Civilization'—SRI ARYA RAMACHANDRA G. TIWARI, M.A., LL.B.

(4) 'Telugu Language of the first Millennium A.D.'—SRI M. RAMAKRISHNAIYA, M.A.

(5) 'Some Peculiar Puranic Conceptions'—SRI V. VENKATAKRISHNA RAO, M.A.

(6) 'An Account of the Buddhist Remains in Andhradesa'—MISS G. S. SARASWATHI, M.A., B.T.

(7) 'Theory of Government in the Kural'—SRI R. CHANDRA-MOULISWAR, M.A.

(8) 'The Gitartha Sangraha'—SRI D. T. TATACHARYA, M.O.L.

The Quarterly Journal of the Mythic Society—April, 1954.

(1) 'The Gangas of Talkād (525 to 725 A.D.)'—DR. S. SRIKANTHA SASTRI, M.A., D.LITT.

(2) 'The Æsthetic Categories'—DR. P. S. SASTRI, M.A., M.LITT., PH.D.

Annals of Oriental Research, University of Madras—Volume X, 1952–53, Part II.

(1) 'Dakṣiṇāmūrti with Reference to Saint Sundarar'—SRI M.A. DORAI RANGASWAMY.

(2) 'The Secular Literary Works in Tamil of the Pallava Period'—SRI S. ARUMUGA MUDALIAR, M.A., B.O.L., L.T.

(3) 'Telugu Literature under Mysore Rulers, The Royal Family'—SRI N. VENKATA RAO, M.A.

(4) 'Inflexion of Nouns in Tulu'—SRI M. MARIYAPPA BHATT.

(5) 'Yakshagana in Karnataka'–SRI M. GOVINDA RAO, M.A, B.O.L.

The Indian Historical Quarterly—March, 1954.

(1) 'The Janapada and the Greek City-State'—DR. V. S. AGARWALA, M.A., PH.D.

(2) 'Some Family Letters in Kharoṣṭhī Script from Central Asia'—SRI RATNA CHANDRA AGRAWALA, M.A.

(3) 'Suśruta, Caraka and Bharta (Vyabhicāribhāvas in Nāṭya'-Śāstra and their Background in The Old Science of Physiology and Pathology of Āyurveda)—SRI RAMENDRA KUMAR SEN, M.A., LL.B.

(4) **Miscellany**

i. 'An Early Image of Kārtti Keya from Taxila'—SRI R. C. KAR, M.A.

ii. 'Subhāṣitaratnakaraṇḍakathā'—DR. ANUKUL CHANDRA BANERJEE, M.A., PH.D.

iii. 'Life of Nagarjuna'—SRI SUNITA KUMAR PATHAK, M.A.

Journal of Indian History—April, 1954.

(1) 'The Colanpurvapattaiyam Its Historical Value'—DR. M. AROKIASWAMY, M.A., PH.D.

(2) 'Neminatha, A Jain Prophet'—DR. B. C. LAW, M.A., LL.B., PH.D., D.LITT. Hony. F.R.A.S.

(3) 'On the Legend in the Nagananda'—DR. V. W. KARAMBELKAR, M.A., PH.D.

(4) 'Bubdhist Antiquities in Karnataka'—SRI P. B. DESAI, M.A.

Annals of the Bhandarkar Oriental Research Institute—Feb., 1954.

(1) 'Bṛhad-yogi Yājñavalkya-smṛti and Yoga Yājñavalkya'—SRI P. C. DIVANJI.

(2) 'Birth of Thought—II Bṛhadāraṇyaka Upaniṣad'—RONALD M. SMITH.

Journal of the Bombay Branch of the Royal Asiatic Society—June, 1953.

(1) 'A Note on Karṇa Bhara'—SRI G. C. JHALA.

(2) 'Agastya'—SRI N. G. CHAPEKAR.

The Journal of the Oriental Research, Madras—June, 1953.

(1) 'The Purpose of Sanskrit Studies Today'—Mr. H. H. INGRILLS.

The Journal of the Bihar Research Society—Dec., 1953.

(1) 'The Sentiment of Laughter in Sanskrit Poetics'—PROF. SATINDRANATH SENAGUPTA.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—(ಮೂರನೆಯ ಮುದ್ರಣ) ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಸಾದಾ ರೂ. ೧-೨-೦ ; ಕ್ಯಾಲಿಕೊ ೨-೨-೦.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕೀಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾಸ್ಯಂ ಸುಂದರಶಾಸ್ತ್ರಿ; ಬೆಲೆ, ರೂ. ೩-೪-೦.

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭.*ಗ್ರೀಕರ ತತ್ವಶಾಸ್ತ್ರಸಾರಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧.*ಆಧುನಿಕ ತತ್ವಶಾಸ್ತ್ರಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. ತಮಿಳು ಪಾಠಗಳು—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. ಅಶೋಕ—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. ಭಾರತೀಯ ಕಾವ್ಯಮೀಮಾಂಸೆ—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

೨೭. ಭಾರತೀಯ ಸಂಸ್ಕೃತಿ—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ, ಬೆಲೆ, ಸಾದಾ. ರೂ. ೩-೦-೦; ಕ್ಯಾಲಿಕೊ. ರೂ. ೪-೦-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,

ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಲ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿ., ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.

೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.

೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.

೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.

೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.

೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.

೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.

೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.

೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೪೯. ಮುದ್ದಣ—ತ. ಸು. ಶಾಮರಾವ್, ಎಂ.ಎ.

೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.

೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.

೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.

೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ.,
ಎಲ್‌ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎ.ಎಸ್.ಸಿ.
೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟಿನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬⅔ ರಂತೆ	೨೦ ಪುಸ್ತಕಗಳನ್ನು	ಕೊಳ್ಳುವವರಿಗೆ
ಶೇಕಡ ೨೦ ರಂತೆ	೨೦೦ ಪುಸ್ತಕಗಳನ್ನು	ಕೊಳ್ಳುವವರಿಗೆ
ಶೇಕಡ ೨೫ ರಂತೆ	೫೦೦ ಪುಸ್ತಕಗಳನ್ನು	ಕೊಳ್ಳುವವರಿಗೆ
ಶೇಕಡ ೩೩⅓ ರಂತೆ	೨೦೦೦ ಪುಸ್ತಕಗಳನ್ನು	ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

* ಈ ಪುಸ್ತಕಗಳು ನಮ್ಮಲ್ಲಿ ಸಿಗುವುದಿಲ್ಲ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೩೦, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಿಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. **ನಾಗಾನಂದನಾಟಕ** (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—ಬೆಲೆ, ರೂ. ೧—೦—೦ ; ಮಾರಾಟಗಾರರು: ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು.

೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ** (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦ ; ಮಾರಾಟಗಾರರು : ಶ್ರೀ ರಾಮಚಂದ್ರ ಬುಕ್ ಡಿಪೊ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.

೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ**—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ; ರೂ. ೧-೧೨-೦.

೩. **ಮೊನ್ನ ವನ್ನ** (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ ; ರೂ. ೨-೦-೦.

೪. **ನಾಗನ ಪದಗಳು**—ಶ್ರೀ ಜಿ. ಪಿ. ರಾಜರತ್ನಂ ; ರೂ. ೧-೪-೦.

೫. **ಶಕ್ತಿ** (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ ; ರೂ. ೩-೦-೦.

೬. **ಬಾಲಸರಸ್ವತಿ** (ಕತೆ, ಪ್ರಬಂಧ, ಸಂವಾದ) ; ರೂ. ೨-೮-೦.

೭. **ನಮ್ಮ ನಮ್ಮವರು** (ಚಿತ್ರಗಳು, ಪ್ರಬಂಧಗಳು) ; ರೂ. ೨-೮-೦.

೮. **ಚಿನ್ನದ ದೋಸೆ**—(ಜಾನಪದ ಕತೆಗಳು) ; ೧೨ ಆಣೆ.

೯. **ಮಕ್ಕಳ ಮಾತು**—(ಎಸ್ಸೆಗಳು) ; ರೂ. ೧-೦-೦.

೧೦. **ಪಚ್ಚೆಯ ತೆನೆ**—(ಎಸ್ಸೆಗಳು) ; ರೂ. ೧-೦-೦.

೧೧. **ಗಂಧದ ಹುಡಿ**—(ಎಸ್ಸೆಗಳು) ; ರೂ. ೧-೦-೦.

೧೨. **ದುರಾಸೆಯ ದಂಡ**—(ಐದು ಏಕಾಂಕ ನಾಟಕಗಳು) ; ರೂ. ೧-೪-೦.

(ಪ್ರಕಟನೆ ೬ ರಿಂದ ೧೨ ಕಾಲೇಜ್ ಬರವಣಿಗೆಯ ಉತ್ತಮ ಉದಾಹರಣೆಗಳು)

Edited by Sri S. V. Parameswara Bhatta, M.A. and Sri D. Javare Gowda, M.A.
Published by The University of Mysore, Mysore.
Printed by Hugh Warren at the Wesley Press and Publishing House, Mysore City